ವಿತ್ತೀಯ ಕಾರ್ಯಕಲಾಪಗಳು

1988–89ನೇ ಸಾಲಿನ ವಿವಿಧ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆಗಳ ಕ್ರ.ಸಂ. 35,36,44,50,51,52, ಮತ್ತು 53

ನೀರಾವರಿ ಯೋಜನೆ ಕಂದಾಯ ನೋಂದಣಿ ಮತ್ತು ಪುನರ್‌ವಸತಿ ಯೋಜನೆ ಇತ್ಯಾದಿ ಇಲಾಖೆಗಳು

†ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್‌ಕಲ್).—ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ತಮ್ಮಲ್ಲಿ ಒಂದು ಮನವಿ ಇದೆ. ಈಗಾಗಲೇ ಶ್ರೀಮತಿ ನಾಗರತ್ನಮ್ಮನವರು ತಮಗೆ ಒಂದು ಪತ್ರವನ್ನು ಬರೆದಿದ್ದಾರೆ. ಇರಿಗೇಷನ್ ಮತ್ತು ಮೈನರ್ ಇರಿಗೇಷನ್ ಅನ್ನು ಒಂದು ಮಾಡಿ ಮಾತನಾಡೋಣವೆಂದು ಅವರು ತಮಗೆ ತಿಳಿಸಿದ್ದಾರೆ. ತಾವು ಕೊಟ್ಟಿರತಕ್ಕ ಅಜೆಂಡಾದಲ್ಲಿ ರೆವಿನ್ಯೂ ಮತ್ತು ಪ್ಲಾನಿಂಗ್ ಕೂಡ ಸೇರಿದೆ. ಅದನ್ನು ಪ್ರತ್ಯೇಕವಾಗಿ ಮಾಡಿ. ಒಂದರಲ್ಲೇ ಎರಡನ್ನು ಮಿಕ್ಸ್ ಮಾಡಿದರೆ ಮಾತನಾಡುವವರಿಗೆ ಸಮಯ ಸಾಕಾಗುವುದಿಲ್ಲ. ಆದ್ದರಿಂದ ಇರಿಗೇಷನ್ ಅನ್ನು ಮಾತ್ರ ಇವತ್ತು ತೆಗೆದುಕೊಳ್ಳೋಣ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿ ಇದೆ, ಅವರು ಅದನ್ನು ನೋಡುತ್ತಾರೆ. ಅಜೆಂಡಾದಲ್ಲಿ ಸಣ್ಣ ನೀರಾವರಿ, ಜಲ ಸಂಚಾರ ಒಳಚರಂಡಿ ವ್ಯವಸ್ಥೆ, ಯೋಜನಾ ಇಲಾಖೆಯ ಅಭಿಯಾಚನೆಗಳು, ಭೂಕಂದಾಯ, ಮುದ್ರಣ, ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ, ಪುನರ್ವಸತಿ ಯೋಜನೆಗಳು ಹೀಗೆ ಒಟ್ಟು ೭ ಬೇಡಿಕೆಗಳು ಇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಟ್ಟಿನ ಪ್ರಶ್ನೆ ಅಲ್ಲ......

ಶ್ರೀ ಬಿ. ಬಸವಲಿಂಗಪ್ಪ.—ರೆವಿನ್ಯೂ......

ಅಧ್ಯಕ್ಷರು.—ಈಗ ಹೊಸ ಸಂಪ್ರದಾಯ ಮಾಡುವುದು ಬೇಡ, ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾದ ಪ್ರಕಾರ ಹೋಗಲಿಲ್ಲವೆಂದರೆ ಹೇಗೆ ?

ಅಧ್ಯಕ್ಷರು.—ಈಗ ಮಾತನಾಡಿ, ನೋಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಖರ್ಗೆಯವರಲ್ಲಿ ಮತ್ತು ಬಸವಲಿಂಗಪ್ಪನವರಲ್ಲಿ ವಿನಂತಿ, ಏನೆಂದರೆ ನಾವು ೮ ದಿವಸ ಹಿಂದೆ ಇದ್ದೇವೆ. ಇದನ್ನು ಅವರು ಗಮನಿಸುತ್ತಾರೆಂದು ನಾನು ಭಾವಿಸಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಏತಕ್ಕೋಸ್ಕರ ಹಿಂದಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಇವತ್ತು ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಕರೆದಿದ್ದೇವೆ. ಕಾರಣವೇನೆಂದು ಅಲ್ಲಿ ವಿವರವಾಗಿ ಹೇಳುತ್ತೇವೆ. ಮುಂದಿನ ತಿಂಗಳ ೨೦ನೇ ತಾರೀಖಿಗೆ ಎಲ್ಲಾ ಬೇಡಿಕೆಗಳ ಮೇಲೆ ಚರ್ಚೆ ಮುಗಿದು ಈ ಸಭೆಯ ಒಪ್ಪಿಗೆ ಆಗಬೇಕಾಗಿದೆ. ಇದನ್ನು ತಾವು ಕೂಡ ಒಪ್ಪಿಕೊಂಡಿದ್ದೀರಿ. ೩೦ ದಿನಗಳ ಕಾರ್ಯಕ್ರಮದಲ್ಲಿ ಕೆಲಸದ ದಿನಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈಗಾಗಲೇ ನಾವು ೮-೧೦ ದಿವಸ ಹಿಂದಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಂಡು ಖರ್ಗೆಯವರು ಸಹಕಾರ ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಾವು ಸಹಕಾರ ಮಾಡುವುದಿಲ್ಲವೆಂದು ಹೇಳಲಿಲ್ಲ. ೨೦ನೇ ತಾರೀಖಿಗೆ ಮುಗಿಸಬೇಕಲ್ಲ, ಮುಗಿಸೋಣ. ಈಗ ಯಾವ ರೀತಿ ಮಾಡಬೇಕು, ಯಾವ ಯಾವ ವಿಷಯಗಳಿಗೆ ಎಷ್ಟೆಷ್ಟು ಸಮಯ ಇಡಬೇಕೆಂದು ರೀ-ಅಲೋಕೇಷನ್ ಮಾಡಬೇಕು. ಅದನ್ನು ಮಾಡಿದರೆ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಇವತ್ತು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಇದೆ. ಅದರಲ್ಲಿ ಚರ್ಚೆ ಮಾಡುತ್ತಾರೆ. ಈಗ ನೀವು ಮಾತನಾಡಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೆವಿನ್ಯೂ, ಪ್ಲಾನಿಂಗ್ ಇವು ಒಬ್ಬರ ಪೋರ್ಟ್ ಫೋಲಿಯೋ ಕೋ-ಆಪರೇಷನ್, ಮಾರ್ಕೆಟಿಂಗ್ ಇವನ್ನು ಒಂದರಲ್ಲಿ ಸೇರಿಸಿ ಅನ್‌ಕನೆಕ್ಟೆಡ್ ಸಬ್‌ಜೆಕ್ಟ್‌ಗಳ ಮೇಲೆ ಚರ್ಚೆ ಆಗುವುದು ಬೇಡವೆಂದು ನನ್ನ ಮನವಿ.

ಅಧ್ಯಕ್ಷರು.—ನಿಮ್ಮ ಅಭಿಪ್ರಾಯ ಗೊತ್ತಾಯಿತು. ಆ ಬಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ವಿಚಾರ ಮಾಡುತ್ತಾರೆ. ಈಗ ನೀವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ನಮ್ಮ ಮುಂದಿರತಕ್ಕ ಬೇಡಿಕೆ ಏನೆಂದರೆ ಇರಿಗೇಷನ್ ಮತ್ತು ಮೈನರ್ ಇರಿಗೇಷನ್. ನೀರಾವರಿ ದೊಡ್ಡ ಹಾಗೂ ಮಧ್ಯಮ ಮತ್ತು ಸಣ್ಣ ನೀರಾವರಿ ಬೇಡಿಕೆಗಳ ಮೇಲೆ ಮಾತನಾಡುವಾಗ ಕೆಲವು ಮುಖ್ಯ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಜೊತೆಯಲ್ಲಿ ಸರ್ಕಾರದವರು ಈ ವಿಷಯದಲ್ಲಿ ಅವರ ನಿಲುವು ಏನಿದೆ ಮತ್ತು ಯಾವ ರೈತರ ಏಳಿಗೆಗಾಗಿ ಮತ್ತು ಬಡವರ ಕಲ್ಯಾಣಕ್ಕಾಗಿ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ, ಅವರ ಉದ್ಧಾರವನ್ನು ಮಾಡುತ್ತೇವೆ, ಅದಕ್ಕೆ ನಾವು ಕಂಕಣಬದ್ಧರಾಗಿದ್ದೇವೆ ಅನ್ನತಕ್ಕಂಥ ಹೇಳಿಕೆಯನ್ನು ಕೊಟ್ಟು ಅನೇಕ ವಾಗ್ದಾನಗಳನ್ನು ಮಾಡಿ ಅಧಿಕಾರಕ್ಕೆ ಬಂದಂತಹ ಸರ್ಕಾರ ಇದು.

೧-೩೦ ಪಿ.ಎಂ.

ವಿಶೇಷವಾಗಿ ರೈತರ ಬಗ್ಗೆ ನಮಗೆ ಬಹಳ ಕಳಕಳಿ ಇದೆ ಮತ್ತು ನೀರಾವರಿ ಯೋಜನೆಗೆ ಆದ್ಯತೆ ಕೊಡುತ್ತೇವೆ ಎಂಬ ಮಾತನ್ನು ಒಂದು ಸಲ ಅಲ್ಲ, ಸುಮಾರು ಐದೂವರೆ ವರ್ಷದಲ್ಲಿ ಅನೇಕ ಸಲ ಹೇಳಿದ್ದಾರೆ. ಹೇಳುವುದಷ್ಟೇ ಅಲ್ಲ, ಈ ಸದನದಲ್ಲಿ ಅನೇಕ ಸಲ ಸಮರ್ಥನೆಯನ್ನು ಕೂಡ ಈ ಸರ್ಕಾರದವರು ಮಾಡಿಕೊಂಡಿದ್ದಾರೆ. ಆದರೆ ನಾನು ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರುತ್ತೇನೆ, ಅವರು ಹೇಳಿದಂಥ ಮಾತಿನಲ್ಲಿ ಕೊಟ್ಟಂಥ ವಾಗ್ದಾನದಲ್ಲಿ ಮತ್ತು ಮಾಡಿದಂಥ ಕೆಲಸದಲ್ಲಿ ಎಷ್ಟು ಅಂತರವಿದೆ ಎಂಬುದನ್ನು ತಾವು ನೋಡಬಹುದು. ಅಧ್ಯಕ್ಷರೆ, ಕರ್ನಾಟಕ ರಾಜ್ಯ ಸುಮಾರು ೩ ಕೋಟಿ ೭೧ ಲಕ್ಷ ಜನಸಂಖ್ಯೆ ಇರತಕ್ಕ ಒಂದು ಪ್ರದೇಶ. ಇದರಲ್ಲಿ ಸುಮಾರು ೨ ಕೋಟಿ ೭೦ ಲಕ್ಷದಷ್ಟು ಜನ ಹಳ್ಳಿಯ ಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ. ಕೇವಲ ೧ ಕೋಟಿ ೭ ಲಕ್ಷ ಜನ ಮಾತ್ರ ಸಿಟಿಯಲ್ಲಿದ್ದಾರೆ. ಅಂದರೆ ಮೂರನೇ ಎರಡು ಭಾಗದಷ್ಟು ಜನಸಂಖ್ಯೆ ಹಳ್ಳಿಯಲ್ಲಿದೆ ಮತ್ತು ಅವರು ಮುಖ್ಯವಾಗಿ ಜೀವನ ಸಾಗಿಸತಕ್ಕದ್ದು ಒಕ್ಕಲುತನದ ಮೇಲೆ ಆದರೆ ಒಕ್ಕಲುತನ ಮಾಡತಕ್ಕ ಜನಾಂಗಕ್ಕೆ ಎಷ್ಟರಮಟ್ಟಿಗೆ ಈ ಸರ್ಕಾರ ಸಹಾಯ ಮಾಡಿದೆ ಎಂಬುದು ಬಹಳ ಮುಖ್ಯ. ನಮ್ಮ ಇಡೀ ಕರ್ನಾಟಕ ರಾಜ್ಯದಲ್ಲಿ net area under irrigation by all sources ಕೆನಾಲ್ ಇರಬಹುದು, ಟ್ಯಾಂಕ್ ಇರಬಹುದು, ವೆಲ್ ಇರಬಹುದು ಬೋರ್‌ವೆಲ್ ಇರಬಹುದು ಟ್ಯೂಬ್ ವೆಲ್ ಇರಬಹುದು ಅಥವಾ ಎಲ್ಲ ಸೋರ್ಸ್‌ನಿಂದ ಈಗ ಆಗತಕ್ಕ ಇರಿಗೇಷನ್ ಎಷ್ಟು ಎಂದರೆ ಸುಮಾರು ೧೬,೭೪,೯೫೬ ಹೆಕ್ಟೇರ್‌ಗಳು. ಇಷ್ಟು ಇರಿಗೇಷನ್ ಇವತ್ತಿನ ದಿವಸ ಆಗುತ್ತದೆ. ಆದರೆ ನಮ್ಮ ಎಕ್ಸ್‌ಪೆಕ್ಟೇಷನ್ ಏನು? ನಮ್ಮಲ್ಲಿ ಬಿತ್ತನೆಗೆ ಯೋಗ್ಯವಾಗಿರತಕ್ಕ ಪ್ರದೇಶ ಏನಿದೆ ಅದು ೧,೧೨,೦೨,೧೯೨ ಹೆಕ್ಟೇರ್‌ಗಳಷ್ಟು ಇದೆ. ಇದರಲ್ಲಿ ನಾನ್ ಕಲ್ಟಿವಬಲ್ ಲ್ಯಾಂಡ್ ೧೯,೭೪,೮೬೧ ಹೆಕ್ಟೇರ್‌ಗಳು. ಅಂದರೆ ಇವತ್ತು ಇರತಕ್ಕ ಬಿತ್ತನೆ ಆಗತಕ್ಕ ಭೂಮಿಯಲ್ಲಿ ಎಷ್ಟರಮಟ್ಟಿಗೆ ನಾವು ನೀರಾವರಿ ಮಾಡಬಹುದು ಎಂಬುದು ಮುಖ್ಯ ಪ್ರಶ್ನೆ. ಅದರ ಪ್ರಕಾರ ೧೦೬ ಲಕ್ಷ ಹೆಕ್ಟೇರ್ಸ್‌ನಲ್ಲಿ ಕೊನೆಗೆ ೫೫ ಲಕ್ಷ ಹೆಕ್ಟೇರ್ಸ್‌ನಲ್ಲಿ ನಾವು ನೀರಾವರಿ ಮಾಡಬಹುದು. ಈ ೫೫ ಲಕ್ಷದಲ್ಲಿ ನಮ್ಮ ಅಚೀವ್‌ಮೆಂಟ್ ಈಗ ಏನಿದೆ? ಒಟ್ಟು ಏರಿಯಾದಲ್ಲಿ ಕೇವಲ ೫೦ ಪರ್ಸೆಂಟ್ ಮಾತ್ರ ನಾವು ನೀರಾವರಿಯನ್ನು ಮಾಡಬಹುದು. ಉಳಿದ ಏರಿಯಾದಲ್ಲಿ ನೀರಾವರಿಯನ್ನು ಮಾಡತಕ್ಕ ವ್ಯವಸ್ಥೆಯಾಗಲೀ ಅಥವಾ ಸೋರ್ಸ್ ಆಗಲೀ ಇಲ್ಲ. ಆದರೆ ಇನ್ನಾದರೂ ಎಷ್ಟರಮಟ್ಟಿಗೆ ನಾವು ಸಾಧಿಸಿದ್ದೇವೆ. ಎಷ್ಟರಮಟ್ಟಿಗೆ ಸಾಧನೆ ಮಾಡಿದ್ದೇವೆ ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ಇಲ್ಲಿಯವರೆಗೆ ಅಂದರೆ ೧೯೮೮ರ ಮಾರ್ಚಿಯವರೆಗೆ ನಾವು ಸಾಧಿಸಿದ್ದೇನು? ಸುಮಾರು ೨೦೨೬ ಕೋಟಿ.

(ಉಪಾಧ್ಯಕ್ಷರು ಪೀಠದಲ್ಲಿದ್ದರು)

ರೂಪಾಯಿಗಳನ್ನು ಖರ್ಚು ಮಾಡಿ ನೀರಾವರಿ ಮಾಡಿದ್ದು ೨೮ ಲಕ್ಷದ ೨೮ ಸಾವಿರದ ೮೯೧ ಹೆಕ್ಟೇರ್ ಮಾತ್ರ. ಅಂದರೆ ೨೬.೪೫ರಷ್ಟು ನಮ್ಮ ಗುರಿ ಸಾಧನೆಯಾಗಿದೆ. ಅಂದರೆ ಇನ್ನು ಸುಮಾರು ಶೇಕಡ ೫೦ ರಷ್ಟು ಗುರಿಸಾಧನೆ ಮಾಡಬೇಕಾಗಿದೆ. ಕ್ಯುಮಿಲೇಟೀವ್ ಎಕ್ಸಪೆಂಡೀಚರನ್ನು ಹೇಳುತ್ತಿದ್ದೇನೆ. ೧೯೫೧ ರಿಂದ ಇರಿಗೇಷನ್‌ಗಾಗಿ ನಾವು ಖರ್ಚು ಮಾಡಿರತಕ್ಕದ್ದು ಮೇಜರ್ ಅಂಡ್ ಮೀಡಿಯಂ ಎರಡೂ ಸೇರಿ ೧೭೭೯ ಕೋಟಿ ರೂಪಾಯಿಗಳು. ಮೈನರ್ ಇರಿಗೇಷನ್‌ಗೆ ೩೧೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಗುರಿಸಾಧನೆಯ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ, ನಾವು ಇನ್ನೂ ೨೪ ಪರ್ಸೆಂಟ್‌ನಷ್ಟು ಗುರಿಯನ್ನು ಸಾಧಿಸಬೇಕಾಗಿದೆ ಆದರೆ ಸರ್ಕಾರ ಈ ಕಡೆಗೆ ಹೆಚ್ಚಿನ ಗಮನ ಕೊಡುವುದಕ್ಕೆ ಆಗಿಲ್ಲ. ಕಾರಣ ಏನೆಂದರೆ ರಿಸೋರ್ಸಸ್ ಇಲ್ಲವೆಂದು ಒಂದು ಕಡೆ ಹೇಳುತ್ತಾರೆ, ಇನ್ನೊಂದು ಕಡೆ ನಾವು ಮಾಡಿದಷ್ಟು ಸಾಧನೆಯನ್ನು ಹಿಂದೆ ಯಾವ ಸರ್ಕಾರವೂ ಮಾಡಿಲ್ಲವೆಂದು ಹೇಳುತ್ತಾರೆ. ತಮಗೆಲ್ಲರಿಗೂ ಗೊತ್ತಿದೆ, ಸರ್ಕಾರ ಕೊಟ್ಟ ಗುರಿಯನ್ನು ಅಥವಾ ಹೇಳಿದಂತಹ ವಾಗ್ದಾನವನ್ನು ನಡೆಸಿಕೊಟ್ಟಿಲ್ಲ ವೆನ್ನುವ ಕಾರಣಕ್ಕೆ ಶ್ರೀಮಾನ್ ದೇವೇಗೌಡರು ನಾನು ರಾಜೀನಾಮೆಯನ್ನು ಕೊಟ್ಟಿದ್ದೇನೆಂದು ಈ ಮನೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಏನು ಹೇಳಿದ್ದೇನೆ ನಾವು ಸಾಧಿಸಬೇಕೆನ್ನುವ ಗುರಿ ಏನಿತ್ತು ಅದನ್ನು ಸಾಧಿಸುವುದಕ್ಕೆ ಆಗಿಲ್ಲ, ಅದರಲ್ಲಿ ವಿಫಲನಾಗಿದ್ದೇನೆ, ಸರ್ಕಾರ ನನಗೆ ಸಹಾಯ ಮಾಡಲಿಲ್ಲ ಅಂದರೆ ಇನ್‌ಡೈರೆಕ್ಟ್ ಆಗಿ ಮುಖ್ಯಮಂತ್ರಿಗಳು ಸಹಾಯ ಮಾಡಲಿಲ್ಲ, ಗುರಿ ಸಾಧನೆ ಮಾಡಲಿಕ್ಕೆ ನನ್ನ ಕೈಯಲ್ಲಿ ಆಗಲಿಲ್ಲ ಅದಕ್ಕಾಗಿ ರಾಜೀನಾಮೆಯನ್ನು ಕೊಟ್ಟೆನೆಂದು ಅವರು ಹೇಳಿದರು. ನಾನು ಹೇಳುತ್ತೇನೆ, ಇದಕ್ಕೆ ಐದೂವರೆ ವರ್ಷಗಳು ಬೇಕಾಗಿರಲಿಲ್ಲ. ಅವರು ರಾಜೀನಾಮೆಯನ್ನು ಕೊಡ ಬೇಕಾದರೆ ಐದೂವರೆ ವರ್ಷಗಳು ಬೇಕಾಗಿರಲಿಲ್ಲ. ಒಂದು ವರ್ಷ, ಎರಡು ವರ್ಷ, ಮೂರು ವರ್ಷ, ನಾಲ್ಕು ವರ್ಷ, ಐದು ವರ್ಷ ಹೀಗೆ ಐದು ವರ್ಷ ಎಂಟು ತಿಂಗಳಾದ ಮೇಲೆ ರಾಜೀನಾಮೆಯನ್ನು ಕೊಟ್ಟರು ಇದಕ್ಕಾಗಿ ಐದು ವರ್ಷದವರೆಗೆ ಕಾಯುತ್ತಾ ಕೂಡ ಬೇಕಾಗಿತ್ತೇ? ಇಷ್ಟು ಹಣ ನಮಗೆ ಬೇಕಾಗಿತ್ತು, ಇಷ್ಟು ಅಲಾಟ್ ಮಾಡಿದ್ದಾರೆ. ಮುಖ್ಯಮಂತ್ರಿಗಳು ನಮಗೆ ಸಹಕಾರ ಕೊಡುವುದಿಲ್ಲ ವೆಂದು ಬೇಗನೆ ಮಂತ್ರಿ ಪದವಿ ಬಿಟ್ಟಿದ್ದರೆ ಬಹುಶ: ನೀರಾವರಿ ಇಲಾಖೆಗೆ ಒಳ್ಳೆಯದಾಗುತ್ತಿತ್ತೇನೋ ಎಂದು ನನ್ನ ಭಾವನೆ. ಕೊನೆಗೆ ಮುಖ್ಯಮಂತ್ರಿಗಳಿಗೆ ಬೆಳಕು ಹರಿದು, ಹೌದು ನಾನು ತಪ್ಪು ಮಾಡು ತ್ತಿದ್ದೇನೆ ನೀರಾವರಿಗಾಗಿ ಹೆಚ್ಚು ಹಣವನ್ನು ಕೊಡಬೇಕೆಂದು ಅವರು ಅಂದುಕೊಂಡು ಹೆಚ್ಚು ಆದ್ಯತೆ ಯನ್ನು ಕೊಡುತ್ತಿದ್ದರು. ಆದರೆ ನಾಳೆ ಬಜೆಟ್ ಮಂಡನೆ ಮಾಡುತ್ತಾರೆನ್ನುವಾಗ ಅದಕ್ಕೆ ಮುಂಚೆ ಇವರು ರಾಜೀನಾಮೆಯನ್ನು ಕೊಟ್ಟರು. ಮಂತ್ರಿ ಪದವಿಯನ್ನು ಬಿಟ್ಟು ಹೋದಂತವರಿಗೆ ನೀರಾವರಿಯ ಬಗ್ಗೆ ಆಸಕ್ತಿಯಿಲ್ಲ. ಈಗ ಇರುವ ಮಂತ್ರಿಗಳಿಗೆ ಮತ್ತು ಸರ್ಕಾರದಲ್ಲಿ ಕೆಲಸ ಮಾಡತಕ್ಕವರಿಗೆ ಇದರ ಬಗ್ಗೆ ಆಸಕ್ತಿ ಇಲ್ಲವೆನ್ನುವುದಕ್ಕೆ ಇದೊಂದು ಉದಾಹರಣೆ.

ಈಗ ನಾನು ಅಂಕಿಅಂಶಗಳನ್ನು ಕೊಡುತ್ತೇನೆ. ನೀವು ೪೦ ವರ್ಷದಿಂದ ಮಾಡಿದ್ದು ಏನು, ೨೦ ವರ್ಷದಿಂದ ನೀವು ಮಾಡಿದ್ದು ಏನು, ನಾವು ಮಾಡಿದ ಸಾಧನೆ ತೋರಿಸುತ್ತೇವೆ, ನೀವು ಮಾಡಿದ್ದನ್ನು ತೋರಿಸಿ ಎಂದು ಇವರು ಪದೇ ಪದೇ ನಮಗೆ ಹೇಳುತ್ತಾರೆ. ಅದಕ್ಕೆ ನಾನು ಇವತ್ತಿನ ದಿವಸ ಹೇಳುತ್ತೇನೆ. ಅಧ್ಯಕ್ಷರೇ, ಅವರು ಕೊಟ್ಟ ಅಂಕಿಅಂಶವನ್ನೇ ನಾನು ಅವರ ಮುಂದೆ ಇಡುತ್ತೇನೆ. ಅವರು ಏನು ಹೇಳಿದ್ದಾರೆ ? ಅವರು ಕೊಟ್ಟ ಪುಸ್ತಕದಲ್ಲೇ ಇದನ್ನು ಹೇಳಿದ್ದಾರೆ. ಮತ್ತು ನಾನೂ ಕೂಡಾ ಕೆಲವು ಅಂಕಿಅಂಶಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ ೧೯೭೮ರಿಂದ ೧೯೮೩ರ ವರೆಗೆ ಮೇಜರ್ ಇರಿಗೇಷನ್‌ಗೆ ಇನ್‌ವೆಸ್ಟ್‌ಮೆಂಟ್ ಎಷ್ಟು ಎಂದು ಹೇಳುತ್ತೇನೆ. ೧೯೭೮-೭೯ರಲ್ಲಿ ೮೯.೧೯ ಕೋಟಿ ೧೯೭೯-೮೦ರಲ್ಲಿ ೧೦೧.೩೩ ಕೋಟಿ, ೧೯೮೦-೮೧ರಲ್ಲಿ ೯೭.೮೬ ಕೋಟಿ, ೧೯೮೧-೮೨ರಲ್ಲಿ ೧೧೫.೩೫ ಕೋಟಿ, ೧೯೮೨-೮೩ರಲ್ಲಿ ೧೧೩.೯೫ ಕೋಟಿ ರೂಪಾಯಿಗಳು ಬಜೆಟ್ ಅಲಾಟ್‌ಮೆಂಟ್. ಆದರೆ ಮೈನರ್ ಇರಿಗೇಷನ್‌ಗೆ ಕೊಟ್ಟ ಹಣ ಎಷ್ಟು ? ಮೈನರ್ ಇರಿಗೇಷನ್‌ಗೆ ೧೯೭೮-೭೯ರಲ್ಲಿ ೧೪.೩೫ ಕೋಟಿ ೧೯೭೯-೮೦ರಲ್ಲಿ ೧೬.೩೫ ಕೋಟಿ, ೧೯೮೦-೮೧ರಲ್ಲಿ ೧೬.೮೫ ಕೋಟಿ, ೧೯೮೧-೮೨ ರಲ್ಲಿ ೧೩ ಕೋಟಿ ೧೯೮೨-೮೩ರಲ್ಲಿ ೧೨.೬೬ ಕೋಟಿ ರೂಪಾಯಿಗಳು. ಇವೆಲ್ಲಾ ಸೇರಿಸಿ ಮೇಜರ್ ಮೈನರ್ ಹಾಗೂ ಮೀಡಿಯಂ ಇರಿಗೇಷನ್‌ಗೆ ಒಟ್ಟು ಎಷ್ಟಾಯಿತು ? ೧೯೭೮-೭೯ರಲ್ಲಿ ೧೦೩.೫೪ ಕೋಟಿ, ೧೯೭೯-೮೦ರಲ್ಲಿ ೧೧೭.೬೮ ಕೋಟಿ, ೧೯೮೦-೮೧ರಲ್ಲಿ ೧೧೪.೭೧ ಕೋಟಿ, ೧೯೮೧-೮೨ರಲ್ಲಿ ೧೨೮.೩೫ ಕೋಟಿ, ೧೯೮೨-೮೩ರಲ್ಲಿ ೧೨೬.೬೧ ಕೋಟಿ ರೂಪಾಯಿಗಳು ಕೊಟ್ಟ ಹಣ. ಅದೇ ರೀತಿ ಈಗಿರತಕ್ಕ ಸರ್ಕಾರ ಕೊಟ್ಟ ಹಣವೆಷ್ಟು ? ಅದರ ಪ್ರಮಾಣ ಹೆಚ್ಚು ಇದೆ. ಮೇಜರ್ ಮತ್ತು

ಮೀಡಿಯಂ ಇರಿಗೇಷನ್‌ಗೆ ೧೯೮೩-೮೪ರಲ್ಲಿ ೧೨೯.೧೫ ಕೋಟಿ, ೧೯೮೪-೮೫ರಲ್ಲಿ ೧೩೯.೫೪ ಕೋಟಿ, ೧೯೮೫-೮೬ರಲ್ಲಿ ೧೫೬.೧೭ ಕೋಟಿ, ೧೯೮೬-೮೭ರಲ್ಲಿ ೧೮೭.೬ ಕೋಟಿ, ೧೯೮೭-೮೮ರಲ್ಲಿ ೨೦೫.೮೭ ಕೋಟಿ ರೂಪಾಯಿಗಳು. ಮೈನರ್ ಇರಿಗೇಷನ್‌ಗೆ ೧೯೮೩-೮೪ರಲ್ಲಿ ೧೭.೪೭ ಕೋಟಿ, ೧೯೮೪-೮೫ರಲ್ಲಿ ೨೧.೨೭ ಕೋಟಿ, ೧೯೮೫-೮೬ರಲ್ಲಿ ೩೨.೭೩ ಕೋಟಿ, ೧೯೮೬-೮೭ರಲ್ಲಿ ೩೬.೨೭ ಕೋಟಿ, ೧೯೮೭-೮೮ರಲ್ಲಿ ೩೫.೧೨ ಕೋಟಿ ರೂಪಾಯಿಗಳು. ಆದರೆ ಇಷ್ಟೇ ಇನ್‌ವೆಸ್ಟ್‌ಮೆಂಟ್‌ನಲ್ಲಿ ೧೯೫೩ರಿಂದ ೧೯೮೮ರ ವರೆಗೆ ಇವರ ಸಾಧನೆ ಏನು ? ಗುರಿಯನ್ನು ಮುಟ್ಟಿದ್ದಾರೆಯೋ ? ಎಷ್ಟು ಇರಿಗೇಷನ್ ಪೊಟೆನ್‌ಶಿಯಾಲಿಟಿ ಕ್ರಿಯೇಟ್ ಮಾಡಿದ್ದಾರೆಂಬುದನ್ನು ಹೇಳಬೇಕೆಂದರೆ ೧೯೮೮-೮೯ರಲ್ಲಿ ಆ ಫಿಗರ್ಸ್‌ನ್ನು ತೆಗೆದುಕೊಂಡರೆ ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ನಲ್ಲಿ ೭.೩ ಲಕ್ಷ ಹೆಕ್ಟೇರ್, ಆಮೇಲೆ ೧೯೭೯-೮೦ರಲ್ಲಿ ೯.೫೫ ಲಕ್ಷ ಹೆಕ್ಟೇರ್ ೧೯೮೦-೮೧ರಲ್ಲಿ ೯.೯೭ ಲಕ್ಷ ಹೆಕ್ಟೇರ್, ೧೯೮೧-೮೨ರಲ್ಲಿ ೧೦.೨೪ ಲಕ್ಷ ಹೆಕ್ಟೇರ್. ಕ್ಯುಮಿಲೇಟಿವ್ ಫಿಗರ್ಸ್ ಇದೆ, ನಂತರ ಮೈನರ್ ಇರಿಗೇಷನ್ ೧೯೭೮-೭೯ರಲ್ಲಿ ೧೦.೭೨ ಲಕ್ಷ ಹೆಕ್ಟೇರ್, ೧೯೭೯-೮೦ರಲ್ಲಿ ೧೨.೯ ಲಕ್ಷ ಹೆಕ್ಟೇರ್, ೧೯೮೦-೮೧ರಲ್ಲಿ ೧೨.೪೦ ಲಕ್ಷ ಹೆಕ್ಟೇರ್. ೧೯೮೧-೮೨ರಲ್ಲಿ ೧೨.೪೯ ಲಕ್ಷ ಹೆಕ್ಟೇರ್, ೧೯೮೨-೮೩ರಲ್ಲಿ ೧೨.೭೯ ಲಕ್ಷ ಹೆಕ್ಟೇರ್. ಮೈನರ್ ಇರಿಗೇಷನ್‌ನಲ್ಲಿ ಹೆಚ್ಚಿನ ನೀರಾವರಿ ಮಾಡಿದ್ದು ಎಷ್ಟು ಎಂದರೆ ೨.೫೫ ಲಕ್ಷ ಹೆಕ್ಟೇರ್. ಅದೇ ರೀತಿ ಮೇಜರ್ ಇರಿಗೇಷನ್‌ನಲ್ಲಿ ೩.೫೪ ಲಕ್ಷ ಹೆಕ್ಟೇರ್ಸ್. ಇವೆರಡನ್ನೂ ಸೇರಿಸಿದರೆ ಒಟ್ಟು ೫.೬೧ ಲಕ್ಷ ಹೆಕ್ಟೇರ್ ಭೂಮಿಯನ್ನು ೧೯೭೬ರಿಂದ ೧೯೮೩ರ ವರೆಗೆ ನೀರಾವರಿಯನ್ನಾಗಿ ಮಾಡಲಾಗಿದೆ. ಯಾವ ಸರ್ಕಾರಕ್ಕೆ ಜನತಾ ವಿರೋಧಿ ಸರ್ಕಾರವೆಂದು ಹೇಳುತ್ತಿದ್ದರೋ, ರೈತರ ಬಗ್ಗೆ ಗುಂಡು ಹಾಕುವಂತಹ ಸರ್ಕಾರ ಅಂತ ಹೇಳುವಂತಹವರು, ಯಾವ ಸರ್ಕಾರ ರೈತರ ಬಗ್ಗೆ ಅನುಕಂಪವಿಲ್ಲವೆಂದು ಹೇಳುವಂತಹವರು, ಇಂತಹ ಸರ್ಕಾರವೆಂದು ಹೇಳಿ ಬಯ್ದು ಬಯ್ದು ಅಧಿಕಾರಕ್ಕೆ ಬಂದಂತಹ ಸರ್ಕಾರ ಇದು. ಆದರೆ ಇದಕ್ಕೆ ಹಿಂದೆ ಇದ್ದಂತಹ ಸರ್ಕಾರ ಕ್ರಿಯೇಟ್ ಮಾಡಿರುವಂತಹದ್ದು ೫.೫೧ ಲಕ್ಷ ಹೆಕ್ಟೇರ್. ಈ ಸರ್ಕಾರ ಮಾಡಿದ್ದು ಎಷ್ಟು ಎಂದರೆ, ೧೯೮೩-೮೪ರಿಂದ ೧೯೮೭-೮೮ರ ವರೆಗೆ ಒಟ್ಟು ಅಂಕಿ ಅಂಶಗಳನ್ನು ಹೇಳುತ್ತೇನೆ. ಇನ್ನುಳಿದ ವಿಚಾರಗಳನ್ನು ಹೇಳಿದರೆ ನಿಮಗೆ ಬೇಜಾರಾಗಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಫಿಗರ್ಸ್ ಇಲ್ಲೇ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದನ್ನೇ ಓದಿ ಇನ್ನೊಮ್ಮೆ. ನೀವು ಆ ಬಗ್ಗೆ ಮೈಸೂರಿನಲ್ಲಿ ಭಾಷಣ ಮಾಡಿದ್ದನ್ನು ಓದಿ ಹೇಳುತ್ತೇನೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇರಿಗೇಷನ್ ಡಬ್ಬಲ್ ಆಗಿದೆ ಎನ್ನತಕ್ಕ ಭಾಷಣ ಮಾಡಿದ್ದೀರಲ್ಲಾ, ಅದೂ ನನ್ನಲ್ಲಿ ಇದೆ. ಅದನ್ನೂ ಓದುತ್ತೇನೆ. ನಿಮ್ಮ ಆತ್ಮ ಶೋಧನೆ ಮಾಡಿಕೊಳ್ಳಿ ನೀವು ಹೇಳಿರುವಂತಹದ್ದು ಸರಿಯಾಗಿದೆಯಾ ಅಂತ, ಇಂತಹ ಸ್ಟೇಟ್‌ಮೆಂಟನ್ನು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ. ನನಗನ್ನಿಸಿದ ಮಟ್ಟಿಗೆ ಮುಖ್ಯಮಂತ್ರಿಗಳಿಗೆ ಖುಷಿಪಡಿಸಿ ಏನು ಪಡೆದುಕೊಳ್ಳುವುದಕ್ಕೋಸ್ಕರ ಎಂಬುದು ಗೊತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಯಾರಿಗೂ ಖುಷಿಪಡಿಸತಕ್ಕಂತಹದ್ದು ಅಲ್ಲ. ಇರತಕ್ಕ ಅಂಕಿ ಅಂಶಗಳನ್ನು ಪ್ರಿಂಟ್ ಮಾಡಿಸಿ ಸದಸ್ಯರೆಲ್ಲರಿಗೂ ಕೊಟ್ಟಿದ್ದೇವೆ. ನಾನು ಕಾವೇರಿ ಕಣಿವೆಗೆ ಸಂಬಂಧಪಟ್ಟಂತೆ ಹೇಳಿದ್ದೇನೆ. ಕಾವೇರಿ ಕಣಿವೆಯ ಬಗ್ಗೆ ಹಿಂದಿನ ಸರ್ಕಾರ ಮಾಡಿದಂತಹ ಸಾಧನೆಗಿಂತ ಹೆಚ್ಚಿನ ಸಾಧನೆಯನ್ನು ಮಾಡಲಾಗಿದೆ ಎಂದು ಪಿರಿಯಾಪಟ್ಟಣದಲ್ಲಿ ಸಾರ್ವಜನಿಕ ಸಭೆಯಲ್ಲಿ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜನರ ಪರವಾಗಿರುವಂತಹ ಸರ್ಕಾರ, ರೈತರ ಪರವಾಗಿರತಕ್ಕ ಸರ್ಕಾರನೆಂದು ಹೇಳಿಕೊಂಡು ಅಧಿಕಾರಕ್ಕೆ ಬಂದ ಈ ಸರ್ಕಾರ ಮಾಡಿದ್ದು ಎಷ್ಟು ಎಂದರೆ, ೧೯೮೩-೮೪ರಲ್ಲಿ ೧೧.೩೧ ಲಕ್ಷ ಹೆಕ್ಟೇರ್, ೧೯೮೪-೮೫ರಲ್ಲಿ ೧೧.೯೧ ಲಕ್ಷ ಹೆಕ್ಟೇರ್, ೧೯೮೫-೮೬ರಲ್ಲಿ ೧೨.೩೩ ಲಕ್ಷ ಹೆಕ್ಟೇರ್, ೧೯೮೬-೮೭ರಲ್ಲಿ ೧೨.೮೫ ಲಕ್ಷ ಹೆಕ್ಟೇರ್ ಹಾಗೂ ೧೯೮೭-೮೮ರಲ್ಲಿ ೧೩.೩೯ ಲಕ್ಷ ಹೆಕ್ಟೇರ್ ಅಂದರೆ ಒಟ್ಟು ಮೇಜರ್ ಅಂಡ್ ಮೀಡಿಯಂ ಇರಿಗೇಷನ್‌ನಲ್ಲಿ ೨.೦೮ ಲಕ್ಷ ಹೆಕ್ಟೇರ್ ನೀರಾವರಿಯನ್ನಾಗಿ ಮಾಡಿದ್ದಾರೆ. ನಮ್ಮ ಸರ್ಕಾರ ಮಾಡಿದ್ದು ೩.೫೪ ಲಕ್ಷ ಹೆಕ್ಟೇರ್, ಅಂದರೆ ಯಾರದ್ದು ಹೆಚ್ಚಿಗೆಯಾಯಿತು? ಹಿಂದಿನ ಸರ್ಕಾರದ್ದೋ, ಅಥವಾ ಈಗಿನ

ಸರ್ಕಾರದ್ದೋ ಎಂಬುದನ್ನು ನೀವೇ ಯೋಚನೆ ಮಾಡಿ ನೋಡಿ. ಮೈನರ್ ಇರಿಗೇಷನ್‌ನಲ್ಲಿ ೧೯೮೩–೮೪ರಲ್ಲಿ ೧೨.೩೯ ಲಕ್ಷ ಹೆಕ್ಟೇರ್, ೧೯೮೪–೮೫ರಲ್ಲಿ ೧೩.೩ ಲಕ್ಷ ಹೆಕ್ಟೇರ್, ೧೯೮೫–೮೬ರಲ್ಲಿ ೧೩.೭೩ ಲಕ್ಷ ಹೆಕ್ಟೇರ್, ೧೯೮೬–೮೭ರಲ್ಲಿ ೧೩.೪೧ ಲಕ್ಷ ಹೆಕ್ಟೇರ್, ೧೯೮೭–೮೮ರಲ್ಲಿ ೧೩.೮೭ ಲಕ್ಷ ಹೆಕ್ಟೇರ್. ೦.೯೦ ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿಯನ್ನಾಗಿ ಮಾಡಿದೆ. ಈ ಹಿಂದಿನ ಸರ್ಕಾರ ಮಾಡಿದ್ದುದು ಎಷ್ಟು ಎಂದರೆ ೨.೭ ಲಕ್ಷ ಹೆಕ್ಟೇರ್ ನಿಮಗಿಂತ ಹಿಂದಿನ ಸರ್ಕಾರ ಮೈನರ್ ಇರಿಗೇಷನ್‌ನಲ್ಲಿ ೧.೨೫ ಲಕ್ಷ ಹೆಕ್ಟೇರ್ ಜಾಸ್ತಿ ಇರಿಗೇಷನ್ ಪೊಟೆನ್ಸಿಯಲ್ ಕ್ರಿಯೇಟ್ ಮಾಡಿದೆ. ಆದರೆ ತಾವು ಏನು ಹೇಳಿದ್ದೀರೆಂದರೆ. ತಮ್ಮ ಸರ್ಕಾರ ಚೆನ್ನಾಗಿ ಕೆಲಸ ಮಾಡಿದೆ. ನೀರಾವರಿಯಲ್ಲಿ ಡಬ್ಬಲ್ ಕೆಲಸ ಮಾಡಿದೆ ಎಂದು ಹೇಳಿದ್ದೀರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮೇಜರ್ ಅಂಡ್ ಮೀಡಿಯಂ ಇರಿಗೇಷನ್‌ನಲ್ಲಿ ನಿಮ್ಮ ಸಾಧನೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ — ಅದರಲ್ಲೂ ೩.೫೪ ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿಯನ್ನಾಗಿ ಮಾಡಿದ್ದೇವೆ. ಅದನ್ನು ನೋಡಿಕೊಳ್ಳಿ. ನಿಮ್ಮಲ್ಲೇ ಅಂಕಿ ಅಂಶ ಇದೆ. ಇನ್ನೊಮ್ಮೆ ನಿಮ್ಮಲ್ಲಿರುವಂತಹ ಪುಸ್ತಕವನ್ನು ನೋಡಿಕೊಳ್ಳಿ. ಆದರೆ ಶ್ರೀಮಾನ್ ಬೊಮ್ಮಾಯಿ ಯವರು ಏನು ಹೇಳಿದ್ದಾರೆಂದರೆ, ''ನೀರಾವರಿಯನ್ನು ಇಮ್ಮಡಿ ಮಾಡಿದಂತಹ ಹೆಗಡೆಯವರಿಗೆ ಋಣಿಯಾಗಿರಿ''. ಇದು ನಿಮ್ಮ ಸ್ಪೀಚ್. ಮೈಸೂರಿನಲ್ಲಿ ಹೀಗೆ ಹೇಳಿದ್ದಾರೆ.

''......ಕಳೆದ ಐದು ವರ್ಷಗಳಲ್ಲಿ ನೀರಾವರಿ ಪ್ರದೇಶ ಎರಡು ಪಟ್ಟಾಗಿದೆ. ಇದಕ್ಕೆ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರ ನೇತೃತ್ವವೇ ಕಾರಣ. ಇದಕ್ಕಾಗಿ ಜನತೆ ಶ್ರೀ ಹೆಗಡೆಯವರಿಗೆ ಚಿರಋಣಿಯಾಗಿರಬೇಕು ಎಂದು ಕಂದಾಯ ಹಾಗೂ ನೀರಾವರಿ ಖಾತೆಯ ಸಚಿವರಾದ ಶ್ರೀ ಎಸ್.ಆರ್. ಬೊಮ್ಮಾಯಿಯವರು ಬುಧವಾರ ಹೇಳಿದರು......''

ಅಂದರೆ ನಾವು ಇದಕ್ಕೋಸ್ಕರ ಚಿರಋಣಿಯಾಗಿರಬೇಕು. ಏತಕ್ಕೆ? ನೀವು ಸುಮಾರು ಎರಡು ಲಕ್ಷ ಹೆಕ್ಟೇರ್‌ಗಳನ್ನು ಕಡಿಮೆ ನೀರಾವರಿ ಮಾಡಿದ್ದಕ್ಕೆ, ನಿಮ್ಮ ಟಾರ್ಜೆಟ್‌ಗಿಂತಲೂ ಕಡಿಮೆ ಕೆಲಸ ಮಾಡಿದ್ದಕ್ಕೆ ನಾವು ನಿಮ್ಮ ಮುಖ್ಯ ಮಂತ್ರಿಗಳಿಗೆ ಚಿರಋಣಿಯಾಗಿರಬೇಕು. ಈ ಮಾತನ್ನು ಶ್ರೀ ಬೊಮ್ಮಾಯಿಯವರ ಬಾಯಿಂದ ಬಂದಿತಲ್ಲ ಎಂಬುದು ನನ್ನ ವ್ಯಥೆ ಹಿಂದೆ ಈ ಹಣದ ಬಗ್ಗೆಯಾಗಲೀ, ಅಥವಾ ಕಾವೇರಿ ಕೃಷ್ಣಾ ಬೇಸಿನ್‌ನಲ್ಲಾಗಲೀ ನೀರು ಉಪಯೋಗ ಮಾಡಿಕೊಂಡು ರೈತರಿಗೆ ಸಹಾಯ ಮಾಡಬೇಕು ಎಂದು ಹೇಳಿ ಇಲ್ಲಿ ವಿರೋಧ ಪಕ್ಷದಲ್ಲಿದ್ದಾಗ ಪದೇ ಪದೇ ಹೇಳತಕ್ಕಂಥವರು, ಖಂಡಿಸತಕ್ಕಂಥವರು, ಹೆಚ್ಚಿನ ಹಣ ಕೊಡದೇ ಹೋದರೆ ಅದಕ್ಕೆ ವಾದ ಮಾಡಿ ಏಕೆ ಕೊಟ್ಟಿಲ್ಲವೆಂದು ಕೇಳತಕ್ಕಂಥವರು ಇವತ್ತು ಹೀಗೆ ಸಮರ್ಥನೆ ಮಾಡುತ್ತಿದ್ದಾರಲ್ಲ. ಇದಕ್ಕೆ ಏನು ಹೇಳಬೇಕು?

ಶ್ರೀ ಎಸ್.ಆರ್. ಬೊಮ್ಮಾಯಿ.—೭೯ ರಿಂದ ೮೩ ರವರೆಗೆ ಒಟ್ಟು ಹಣ ಖರ್ಚಾಗಿರುವುದು ೯೮೦.೮೯ ಕೋಟಿ ರೂಪಾಯಿಗಳು. ೮೩–೮೪ ರಿಂದ ೮೮ ರವರೆಗೆ ಇರಿಗೇಶನ್‌ನಲ್ಲಿ ಎಲ್ಲಾ ಕೂಡಿ ಖರ್ಚಾಗಿರುವುದು ೧,೦೩೫.೪೯ ಕೋಟಿ ರೂಪಾಯಿಗಳು, ಇರಿಗೇಶನ್ ಪೊಟೆನ್‌ಶಿಯಲ್ ಕ್ರಿಯೇಟ್ ಆದದ್ದು ೫ ವರ್ಷಗಳಲ್ಲಿ ೧೦೮.೪೫ ಲಕ್ಷ ಹೆಕ್ಟೇರ್‌ಗಳು ಮತ್ತು ೧೨೫ ೨೯ ಲಕ್ಷ ಹೆಕ್ಟೇರ್‌ಗಳು. ಯಾವುದು ಹೆಚ್ಚು ಮತ್ತು ಯಾವುದು ಕಡಿಮೆ? ೭೯ ರಿಂದ ೮೩ ರವರಿಗೆ ಟೋಟಲ್ ಪೊಟೆನ್‌ಶಿಯಲ್ ಕ್ರಿಯೇಟ್ ಆದದ್ದು ೧೦೨.೪೫ ಲಕ್ಷ ಹೆಕ್ಟೇರ್ಸ್ ಮತ್ತು ೮೩ ರಿಂದ ೮೮ ರವರೆಗೆ ೧೨೫.೨೯ ಲಕ್ಷ ಹೆಕ್ಟೇರ್ಸ್. ೧೦೮ಕ್ಕಿಂತ ೧೨೫ ಸಣ್ಣದೋ ದೊಡ್ಡದೋ? ಅದನ್ನು ನಿಮಗೇ ಬಿಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೀಡಿಯಂ ಇರಿಗೇಶನ್‌ನಲ್ಲಿ ೨.೦೮ ಲಕ್ಷ ಕ್ರಿಯೇಟ್ ಆದದ್ದು. ಮೈನರ್ ಇರಿಗೇಶನ್‌ನಲ್ಲಿ ೯.೦. ಇವು ಎರಡು ಫಿಗರ್ಸ್ ಬಿಟ್ಟು ಬೇರೆ ಬರುವುದಿಲ್ಲ. ಟೇಬಲ್ ೧೨.೧ ನೋಡಿ

ಶ್ರೀ ಎಸ್. ಆರ್ ಬೊಮ್ಮಾಯಿ.—ನಾನೂ ಅದನ್ನೇ ಓದುತ್ತಿದ್ದೇನೆ. ಟೋಟಲ್ ಪೊಟೆನ್‌ಶಿಯಲ್ ಕ್ರಿಯೇಟೆಡ್-ಲಾಸ್ಟ್ ಕಾಲಮ್‌ನಲ್ಲಿದೆ ನೋಡಿ. ಅಲ್ಲಿ ಇರುವುದು ೧೦೮ ೪೫ ಲಕ್ಷ ಹೆಕ್ಟೇರ್‌ಗಳು. ಇಲ್ಲಿ ೧೨೫.೨೯ ಲಕ್ಷ ಹೆಕ್ಟೇರ್‌ಗಳು ಇವೆ. ದುಡ್ಡು ಡಬಲ್ ಇದೆ. ಆದರೆ ಪೊಟೆನ್‌ಶಿಯಲ್ ಕ್ರಿಯೇಟ್ ಮಾಡಿದ್ದು ಹೆಚ್ಚು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೆ ಕನ್‌ಫ್ಯೂಶನ್ ಆಗಿದೆ. ಸ್ವಲ್ಪ ಕೇಳಿ. ಟೇಬಲ್ ೧೨೧ ನಲ್ಲಿ ಮೇಜರ್ ಅಂಡ್ ಮೀಡಿಯಂ ಇರಿಗೇಶನ್‌ನಲ್ಲಿ ೭೮ ರಿಂದ ೮೩ ರವರೆಗೆ ಐದು ವರ್ಷದ ಫಿಗರ್ಸ್ ೩.೫೪ ಲಕ್ಷ ಇದೆ. ಮೈನರ್ ಇರಿಗೇಶನ್‌ನಲ್ಲಿ ೨.೦೭ ಲಕ್ಷ ಹೆಕ್ಟೇರ್ಸ್ ನಿಮ್ಮದು ಕೊನೆಗೆ ಬರುತ್ತದೆ. ಟೋಟಲ್ ಕ್ಯುಮುಲೇಟಿವ್ ಫಿಗರ್ಸ್ ತೆಗೆದುಕೊಳ್ಳಬೇಡಿ. ಈ ಐದು ವರ್ಷಗಳಲ್ಲಿ ನೀವು ಎಷ್ಟು ಕ್ರಿಯೇಟ್ ಮಾಡಿದಿರಿ? ಅದನ್ನು ಆಮೇಲೆ ಕ್ಲಾರಿಫೈ ಮಾಡಿಕೊಳ್ಳಿ. ಇಲ್ಲಿ ಇದೆ. ಇನ್ನೊಮ್ಮೆ ಬೇಕಾದರೆ ಓದಿ ಹೇಳುತ್ತೇನೆ. ಆದ್ದರಿಂದ ಅಧ್ಯಕ್ಷರೇ, ಹೀಗೆ ಇವತ್ತು ಹೆಚ್ಚು ಹಣ ಖರ್ಚು ಮಾಡಿದ್ದರೂ ಕೂಡ ಇವರು ಇರಿಗೇಶನ್ ಪೊಟೆನ್‌ಶಿಯಲ್ ಕಡಿಮೆ ಮಾಡಿದ್ದಾರೆ. ಇದಕ್ಕೆ ಕಾರಣ ಏನು? ಹೆಚ್ಚಿಗೆ ಹಣ ಖರ್ಚು ಮಾಡಿದಮೇಲೆ ಹೆಚ್ಚಿಗೆ ಇರಿಗೇಶನಲ್ ಪೊಟೆನ್‌ಶಿಯಲ್ ಹೆಚ್ಚು ಕ್ರಿಯೇಟ್ ಮಾಡಬೇಕಿತ್ತು. ಅಂದರೆ ಇಲ್ಲಿ ಎಲ್ಲಿ ಪೋಲಾಗಿದೆ? ಯಾವ ಯಾವ ಪ್ರಾಜೆಕ್ಟ್‌ನಲ್ಲಿ ಹಣದ ದುರುಪಯೋಗ ಆಗಿದೆ? ಯಾರ್‍ಯಾರು ಮಾಡಿದ್ದಾರೆ. ಇದರ ಬಗ್ಗೆ ತನಿಖೆ ನಡೆಸಿದ್ದೀರಾ?

ಅದರ ಬಗ್ಗೆ ಏನಾದರೂ ಕಂಡುಹಿಡಿದಿದ್ದೀರಾ ? ಜೊತೆಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅನೇಕ ರಿಪೋರ್ಟ್‌ಗಳನ್ನು ಕೊಟ್ಟಿದ್ದಾರೆ. ಈ ರಿಪೋರ್ಟ್‌ಗಳನ್ನು ಎಷ್ಟರ ಮಟ್ಟಿಗೆ ಜಾರಿಗೆ ತಂದಿದ್ದೀರಿ. ಇವತ್ತು ನಾನು ಉದಾಹರಣೆಗೆ ಹೇಳಬೇಕಾದರೆ, ತಮಗೆ ಗೊತ್ತಿದೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಅತ್ಯಂತ ಮಹತ್ವವಾದ ಪ್ರಾಜೆಕ್ಟ್ ಎಂದು. ಇದು ಒಂದೇ ಅಲ್ಲ, ಇರತಕ್ಕಂಥ ಪ್ರಾಜೆಕ್ಟ್‌ಗಳಲ್ಲಿ ಇದು ಮಹತ್ವವಾದ ಪ್ರಾಜೆಕ್ಟ್. ಇದಕ್ಕೆ ತಾವು ಎಷ್ಟರ ಮಟ್ಟಿಗೆ ಗಮನಕೊಟ್ಟಿದ್ದೀರಿ ತಾವು ನನಗೆ ೩-೪ ತಾಸು ಕಾಲಾವಕಾಶ ಕೊಟ್ಟರೆ ಪ್ರತಿಯೊಂದನ್ನೂ ಡೀಟೈಲ್ ಆಗಿ ತಮ್ಮ ಮುಂದೆ ಇಡುತ್ತೇನೆ. ಇವತ್ತು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ಎಷ್ಟರಮಟ್ಟಿಗೆ ಮಹತ್ವ ಕೊಟ್ಟಿದ್ದೀರಿ ಮತ್ತು ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥ ಎಲ್ಲಾ ಪ್ರಾಜೆಕ್ಟ್‌ಗಳಿಗೂ ಕೂಡ ಬಚಾವತ್ ಆಯೋಗದ ತೀರ್ಪಿನ ಪ್ರಕಾರ, ಸಿಗತಕ್ಕಂಥ ನೀರನ್ನು ಉಪಯೋಗ ಮಾಡಿಕೊಳ್ಳಬೇಕು. ಒಂದು ವೇಳೆ ಮಾಡಿಕೊಳ್ಳದೇ ಹೋದರೆ, ಎರಡು ಸಾವಿರ ಇಸವಿ ಆದಮೇಲೆ ಇದರ ಬಗ್ಗೆ ರಿವ್ಯೂ ಮಾಡತಕ್ಕಂಥ ಒಂದು ಕ್ಲಾಸ್ ಇದೆ. ೧೦ ವರ್ಷದಲ್ಲಿ ಪೂರ್ಣಮಾಡದೇ ಹೋದರೆ ಖಂಡಿತವಾಗಿ ಮುಂದೆ ನಾವು ಏನು ಹೊಡೆದು ಕೊಂಡರೂ ಕೂಡ ನಮಗೆ ಒಂದು ಹನಿ ನೀರು ಸಿಕ್ಕುವುದಿಲ್ಲ. ಈಗಾಗಲೇ ಎನ್.ಟಿ. ರಾಮರಾಯರು ತೆಲುಗು ಗಂಗಾ ಪ್ರಾಜೆಕ್ಟ್‌ನ್ನು ಇಂಪ್ಲಿಮೆಂಟ್ ಮಾಡಿಯೇ ತೀರುತ್ತೇನೆ. ಯಾರಿಗೂ ಕೇರ್ ಮಾಡುವುದಿಲ್ಲವೆಂದು ಹೇಳಿದ್ದಾರೆ. ಕೇವಲ ಮದ್ರಾಸ್ ಸಿಟಿಗೆ ಕುಡಿಯುವನೀರಿನ ವ್ಯವಸ್ಥೆಗಾಗಿ, ಕರ್ನಾಟಕ ಸರ್ಕಾರ, ಆಂಧ್ರ ಸರ್ಕಾರ ಮತ್ತು ತಮಿಳುನಾಡು ಸರ್ಕಾರ, ಈ ಮೂರು ಸರ್ಕಾರಗಳೂ ಒಪ್ಪಿ, ೧೫ ಟಿ.ಎಂ.ಸಿ. ನೀರನ್ನು ಬಿಡುಗಡೆ ಮಾಡಬೇಕೆಂಬ ವ್ಯವಸ್ಥೆಗೆ ೧೯೭೭ರಲ್ಲಿ ಅಗ್ರಿಮೆಂಟ್ ಆಗಿ ತದನಂತರ ೧೯೮೩ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಅಡಿಪಾಯ ಹಾಕಿದ ಮೇಲೆ ಕೆಲಸ ಪ್ರಾರಂಭವಾಯಿತು. ಆದರೆ ಇಷ್ಟಕ್ಕೇ ಸೀಮಿತವಾಗಲಿಲ್ಲ. ಅವರು ಏನು ಮಾಡುತ್ತಿದ್ದಾರೆ, ಎಂದರೆ ಎನ್.ಟಿ. ರಾಮರಾಯರು ಒರಿಜನಲ್ ಪ್ಲಾನನ್ನೇ ಅಂದರೆ, ಕುಡಿಯುವ ನೀರಿಗಾಗಿ ಮಾಡಿದ ವ್ಯವಸ್ಥೆಯನ್ನೇ ಬಿಟ್ಟು, ನಾವೇನು ಒಪ್ಪಿದ್ದೇವೆ, ಆ ಒಪ್ಪಿಗೆಯನ್ನು ತಳ್ಳಿಹಾಕಿ. ಇವತ್ತಿನದಿವಸ ಹೊಸ ಪ್ಲಾನನ್ನು, ಅಡಿಷನಲ್ ಪ್ಲಾನನ್ನು ತಯಾರು ಮಾಡಿಕೊಂಡು, ೫ ಲಕ್ಷ ಎಕರೆಗೆ ನೀರಾವರಿ ಆಗುವಂಥ ಕಾಲುವೆಯನ್ನು ಇವತ್ತಿನ ದಿವಸ ಎಕ್ಸಿಕ್ಯೂಟ್ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರೂ ಇದಕ್ಕೆ ಈಗಾಗಲೇ ಒಪ್ಪಿಗೆ ಕೊಟ್ಟಿದ್ದಾರೆಂದು ಸುದ್ದಿ ಹೊರಟಿತ್ತು. ಲಾಸ್ಟ್ ಟೈಮ್ ಸದನದಲ್ಲಿ ಈ ವಿಚಾರ ಕೇಳಿದಾಗ ತಾವು ಇಲ್ಲವೆಂದು ಹೇಳಿದ್ದೀರಿ. ನಾವು ಇದೇ ರೀತಿ ಸುಮ್ಮನಿದ್ದರೆ, ಅವರು ಇದನ್ನೂ ತಳ್ಳಿಹಾಕಿ, ಎಕ್ಸಿಕ್ಯೂಟ್ ಮಾಡಿಕೊಂಡು ಹೋಗುತ್ತಾರೆ. ನಾವು ಒಪ್ಪಿಕೊಂಡಿರತಕ್ಕಂತಾದ್ದು ಕೇವಲ ೧೫ ಟಿ.ಎಂ.ಸಿ. ನೀರನ್ನು ತೆಗೆದುಕೊಂಡು, ಮದ್ರಾಸ್ ಸಿಟಿಗೆ ನೀರು ಸರಬರಾಜು ಮಾಡುವುದಕ್ಕಾಗಿ ಮಾತ್ರ. ಇದನ್ನು ವೈಲೇಟ್ ಮಾಡಿ ಶ್ರೀಶೈಲಂನಿಂದ ಒಂದು ಕಾಲುವೆ ಹೊರಡಿಸಿ, ರಿಸರ್‌ವಾಯರ್ ಕೆಪ್ಯಾಸಿಟಿ ಹೆಚ್ಚು ಮಾಡಿ, ಚಿತ್ತೂರು ನೆಲ್ಲೂರು ಮತ್ತು ಕರ್ನೂಲಿಗೆ ಸಹಾಯ ಮಾಡ ತಕ್ಕಂಥ ವ್ಯವಸ್ಥೆ ಮಾಡಬೇಕೆಂದು ೬೧ ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗ ಮಾಡಬೇಕೆಂದು ನಿರ್ಧಾರ ಮಾಡಿಕೊಂಡು ಇವತ್ತಿನ ದಿವಸ ಎಕ್ಸಿಕ್ಯೂಟ್ ಮಾಡುತ್ತಿದ್ದಾರೆ. ಆದರೆ ನಾವು ಮಾತ್ರ ನಿದ್ರೆ ಮಾಡುತ್ತಿದ್ದೇವೆ. ನಮಗೆ ಇರತಕ್ಕಂಥ ಪಾಲನ್ನು ಉಪಯೋಗ ಮಾಡಿಕೊಳ್ಳುತ್ತಿಲ್ಲ. ನಮಗೆ ೭೦೦ ಟಿ.ಎಂ.ಸಿ.ಎಫ್.ಟಿ. ವಾಟರ್ ಅಲಾಟ್‌ಮೆಂಟ್ ಆಗಿದೆ. ಅದನ್ನು ಸರಿಯಾದ ರೀತಿ ಉಪಯೋಗ ಮಾಡಿಕೊಳ್ಳಬೇಕೆಂದರೂ ಕೂಡಾ, ಯಾವಾಗ ಕೇಳಿದರೂ ಕೂಡಾ ನಮ್ಮ ಹತ್ತಿರ ಹಣ ಇಲ್ಲ ಎಂದು

ಹೇಳುತ್ತಿದ್ದೀರಿ. ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದೀರಿ ವಾಗ್ದಾನ ಮಾಡಿದ್ದರೂ ಕೂಡಾ ಸರಿಯಾದ ರೀತಿಯಿಂದ ಹಣ ಕೊಟ್ಟಿಲ್ಲ. ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ಎಷ್ಟು ಹಣ ಕೊಡುತ್ತೇವೆಂದು ವಾಗ್ದಾನ ಮಾಡಿದ್ದಿರೋ, ಅಷ್ಟನ್ನು ಹೋದ ವರ್ಷ ಖರ್ಚು ಮಾಡಿದ್ದೀರಾ ? ಏತಕ್ಕೆ ಮಾಡಲಿಲ್ಲ. ಕಾವೇರಿ ಬೇಸಿನ್‌ಗೆ ಡಬಲ್ ಕೊಟ್ಟಿದ್ದೇವೆ ಎಂದು ನಿಮ್ಮ ವಾದವನ್ನೇ ಒಪ್ಪಿದರೂ ಕೂಡ ಅಲ್ಲಿಗೆ ಮಾತ್ರ ಡಬಲ್ ಕೊಟ್ಟು ಇಲ್ಲಿಗೆ ಸಿಂಗಲ್ ಕೊಡಿ ಎಂದು ಹೇಳಿದ್ದಾರೆಯೋ ? ಈ ಧೋರಣೆಯನ್ನು ಏತಕ್ಕೆ ತಳೆದಿದ್ದೀರಿ ? ಪ್ರತಿಯೊಂದಕ್ಕೂ ಕೂಡಾ ತಾವು ಹಣ ಕೊಡಬೇಕು. ನನ್ನ ವಾದ ಏನೆಂದರೆ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕಾಗಿತ್ತು, ಸರಕಾರ ಇದರಲ್ಲಿ ವಿಫಲವಾಗಿದೆ. ಇದನ್ನು ನೀವು ಒಪ್ಪಿಕೊಳ್ಳಬೇಕು. ಸುಮ್ಮನೆ ವಾದಕ್ಕೋಸ್ಕರ ವಾದ ಎಂದು ಮಾಡಿ ನಾವು ಮಾಡಿದ್ದೇ ಸರಿ ಇದೆ ಎಂದರೆ ಅದು ಸರಿಯಾದ ವಾದವಲ್ಲ. ಇವತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಎನ್.ಟಿ. ರಾಮರಾಯರು ನಮ್ಮ ಮುಖ್ಯಮಂತ್ರಿಗಳ ಫ್ರೆಂಡ್ ಆಗಿರಬಹುದು ಅಥವಾ ಅಪೊಸಿಷನ್ ಪಾರ್ಟಿಯಲ್ಲಿದ್ದಾರೆ ಎಂದು ಹೇಳಿ, ಎಲ್ಲರೂ ಸೇರಿಕೊಂಡು ಕೇಂದ್ರ ಸರಕಾರದ ವಿರುದ್ಧ ದೂರತಕ್ಕಂಥ ಒಂದು ಪ್ರಶ್ನೆ ಒಂದು ಕಡೆ ಇರಬಹುದು ಆದರೆ ರಾಜ್ಯದ ಹಿತದೃಷ್ಟಿಯಿಂದ, ಇಲ್ಲಿನ ರೈತರ ಹಿತದೃಷ್ಟಿಯಿಂದ ಅವರು ಮಾಡತಕ್ಕಂಥ ಕುತಂತ್ರ ಏನಿದೆ ಆ ಕುತಂತ್ರಕ್ಕೆ ತಾವು ಬಲಿ ಆಗಬಾರದು. ಅವರು ಹಾಕತಕ್ಕಂಥ ಜಾಲಕ್ಕೆ ನೀವು ಒಳಗಾಗಬಾರದು ಎನ್ನತಕ್ಕಂಥಾದ್ದು ನನ್ನ ವಾದ. ಒಂದು ವೇಳೆ ನೀವು ಸುಮ್ಮನೆ ಕುಳಿತರೆ ಅವರು ತಮ್ಮ ಕೆಲಸ ಮಾಡಿಕೊಂಡು ಬಿಡುತ್ತಾರೆ. ಅದಕ್ಕೆ ಎಷ್ಟು ಬೇಕೋ ಅಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಸಿದ್ಧರಿದ್ದಾರೆ. ''ಐ ವಿಲ್ ಗೋ ಅಹಡ್'' ಎಂದು ಅವರು ಹೇಳಿದ್ದಾರೆ. ೧೫೦೦ ಕ್ಯೂಸೆಕ್ಸ್ ಕೆಪ್ಯಾಸಿಟಿ ಇದ್ದಂಥ ಕಾಲುವೆಯ ಸಾಮರ್ಥ್ಯವನ್ನು ೧೧,೧೫೦ ಕ್ಯೂಸೆಕ್ಸ್ ಕೆಪ್ಯಾಸಿಟಿಗೆ ಮಾಡಿಬಿಟ್ಟಿದ್ದಾರೆ. ಅಷ್ಟು ದೊಡ್ಡ ಕಾಲುವೆಯನ್ನು ಅವರು ಎಕ್ಸಿಕ್ಯೂಟ್ ಮಾಡುತ್ತಿದ್ದಾರೆ. ಮದ್ರಾಸ್‌ಗೆ ಡ್ರಿಂಕಿಂಗ್ ವಾಟರ್ ಕೊಡುವ ಸಲುವಾಗಿ ಈ ಪ್ರಪೋಸಲ್‌ನ್ನು ಇನಿಷಿಯಲ್ ಆಗಿ ಕರ್ನಾಟಕ ಸರ್ಕಾರ ಒಪ್ಪಿಕೊಂಡಿತು. ಒಪ್ಪಿಕೊಂಡಾಗ ಅದು ಈ ರೀತಿ ಇರಲಿಲ್ಲ,

೨-೦೦ ಪಿ. ಎಂ.

ಈಗ ರಿವೈಸ್ಡ್ ಪ್ರಪೋಸಲ್‌ನ್ನು ಕೇಂದ್ರ ಸರಕಾರದ ಮುಂದಿಟ್ಟು ಅದನ್ನು ಒಪ್ಪಿಸತಕ್ಕಂಥ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ. ಇದರ ಬಗ್ಗೆ ಹಠ ಹಿಡಿದಿದ್ದಾರೆ. ಒಂದು ಕಡೆ ಪ್ರಪೋಸಲ್ ಅಪ್ರೂವ್ ಆಗದೇ ಇದ್ದರೂ ಅವರು ಕೆಲಸ ಮಾಡುತ್ತಿದ್ದಾರೆ ಎಂಬ ವದಂತಿ ಇದೆ. ಕೋಟ್ಯಾಂತರ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಅವರಿಗೆ ಮದ್ರಾಸ್‌ಗೆ ನೀರು ಕೊಡಬೇಕೆಂಬ ಕಾಳಜಿ ಏನೂ ಇಲ್ಲ, ತಮ್ಮ ರಾಜ್ಯದ ನೀರಾವರಿಗೆ ಹೆಚ್ಚಿನ ಸವಲತ್ತನ್ನು ಮಾಡಿಕೊಳ್ಳಬೇಕು. ತಮ್ಮ ರಾಜ್ಯದ ಬರಗಾಲ ಪ್ರದೇಶಗಳು ಏನಿವೆ ಅವಕ್ಕೆ ನೀರು ಕೊಡಬೇಕೆಂದು ಅವರು ಹಠ ಹಿಡಿದಿದ್ದಾರೆ. ಅದರಂತೆ ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಬರಗಾಲ ಪ್ರದೇಶಗಳಾದ ಬಿಜಾಪುರ, ಗುಲಬರ್ಗಾ ಮತ್ತು ರಾಯಚೂರುಗಳಿಗೆ ನೀರು ಕೊಡಬೇಕೆಂಬ ಪ್ರಯತ್ನವನ್ನು ನೀವು ಮಾಡುತ್ತಿಲ್ಲ. ಬೆಳಗಾಂ ಧಾರವಾಡ ಸಹ ಕೃಷ್ಣಾ ಬೇಸಿನ್‌ನಲ್ಲಿ ಬರುತ್ತದೆ. ಇವೆಲ್ಲಾ ಪ್ರದೇಶಗಳಿಗೂ ಈ ಯೋಜನೆಯಿಂದ ಅನುಕೂಲವಾಗುತ್ತದೆ. ಆದರೆ ಈ ಪ್ರದೇಶಗಳಿಗೆ ಸಹಾಯ ಮಾಡಬೇಕೆನ್ನುವ ಭಾವನೆ ನಿಮ್ಮಲ್ಲಿ ಏತಕ್ಕೆ ಇಲ್ಲ. ನಿಮ್ಮ ಕೌಂಟರ್ ಪಾರ್ಟ್ ಅವರು ಇದನ್ನು ಮಾಡಬಹುದು, ನಿಮ್ಮ ಆತ್ಮೀಯ ಮಿತ್ರರು ಇವತ್ತು ಇದನ್ನು ಮಾಡುತ್ತಿದ್ದಾರೆ. ಆದರೆ ಏತಕ್ಕೆ ನೀವು ಇದರ ಬಗ್ಗೆ ಹಠ ಹಿಡಿದು ಕೆಲಸ ಮಾಡುತ್ತಿಲ್ಲ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ನಿಮ್ಮ ಅಲೋಕೇಷನ್ ಕೂಡಾ ಯಾವ ರೀತಿ ಆಗಿದೆ ಎಂದರೆ.—

> "During 1987-88 the budget provision was Rs. 21.3 crores out of which expenditure incurred to the end of February 1988 was 8.16 crores and the expenditure during March 1988 is approximately 1.27 crores. The shortfall in expenditure is on account of non-receipt of Loc. The Irrigation potential created during 1987-88 is 3295 Hectares.

ಎಂದರೆ ನೀವು ಒಂದು ಕಡೆ ಅಲಾಟ್‌ಮೆಂಟ್ ಮಾಡಿರುತ್ತೀರಿ. ಇನ್ನೊಂದು ಕಡೆ ಎಕ್ಸ್‌ಪೆಂಡೀಚರ್ ಕಡಿಮೆ ಮಾಡಿರುತ್ತೀರಿ. ಏತಕ್ಕೆ ನೀವು ಕಾಗದದಲ್ಲಿ ಹೆಚ್ಚಿನ ಅಲಾಟ್‌ಮೆಂಟ್ ತೋರಿಸುವುದು ? ಹೆಚ್ಚಿಗೆ ಹಣವನ್ನು ಅಲಾಟ್‌ಮೆಂಟ್ ಮಾಡಿದ್ದೇವೆ ಎಂದು ಹೇಳುವುದು ಒಂದೆಡೆ, ಇನ್ನೊಂದು ಕಡೆ ಅದನ್ನು ಖರ್ಚು ಮಾಡುವುದಿಲ್ಲ. ಎಂದರೆ ಇದರ ಅರ್ಥ ಏನು? ಪಬ್ಲಿಸಿಟಿಗೋಸ್ಕರ ಅಥವಾ ಅಲ್ಲಿನ ಜನರನ್ನು ಮೆಚ್ಚಿಸುವುದಕ್ಕೋಸ್ಕರ ಇದನ್ನು ಮಾಡುತ್ತಿದ್ದೀರಾ? ಮತ್ತು ನೀವು ಹೆಚ್ಚಿನ ಕೆಲಸಮಾಡಿದ್ದೀರಿ ಎಂದರೆ ಹೇಗೆಮಾಡಿದ್ದೀರಿ ಎನ್ನುವುದನ್ನು ಇದರಲ್ಲಿ ತೋರಿಸಿ? ಇದಾದ ನಂತರ ಇದೊಂದೆ ಅಲ್ಲ ಮುಂದೆ ಹೇಳಬೇಕೆಂದರೆ ಈವನ್ ಡ್ಯಾಮ್ ಪೋರ್ಷನ್‌ನಲ್ಲಿ ಕೂಡ ಸರಿಯಾಗಿ ಕೆಲಸವಾಗಿಲ್ಲ. ಯಾವುದೇ ನಿಮಗೆಒಂದು ಯೋಜನೆಯನ್ನು ತೆಗೆದುಕೊಂಡರೂ ಸಹ ಇವತ್ತು ಯಾವ ರೀತಿಯಾಗಿ ತಾರತಮ್ಯ ಮಾಡಿದ್ದಾರೆನ್ನುವುದು ಇದರಿಂದ ಗೊತ್ತಾಗುತ್ತದೆ. ಮತ್ತು ತಾವು ಒಂದು ಕಡೆ ಹೆಚ್ಚಿನ ಹಣ ಕೊಟ್ಟಿದ್ದೇವೆಂದು ಹೇಳುತ್ತೀರಿ. ಈ ರೀತಿ ಇದ್ದರೂ ಸಹ ಇವತ್ತು ಇರಿಗೇಶನ್ ಪೊಟೆನ್‌ಷಿಯಲ್ ಬಹಳ ಕಡಿಮೆಯಾಗಿದೆ. ಇದಕ್ಕಾಗಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ನಿಮ್ಮ ಚೀಫ್ ಇಂಜನೀಯರ್ಸ್ ಆಗಲಿ ಇಂಜನೀಯರಿಂಗ್ ಡಿಪಾರ್ಟ್‌ಮೆಂಟ್‌ನವರೇ ಆಗಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ನಾನು ಕೊಡುವುದಾದರೆ ಕೆಲವು ಜನ ಒಳ್ಳೆಯ ಇಂಜನೀಯರ್ಸ್ ಇದ್ದಾರೆ. ಇನ್ನುಳಿದಂತೆ ನೂರಕ್ಕೆ ತೊಂಭತ್ತರಷ್ಟು ಜನ ಇಂಜನೀಯರ್ಸ್ ಕರೆಪ್ಟ್ ಇದ್ದಾರೆ. ಈ ಇರಿಗೇಶನ್ ಪ್ರಾಜೆಕ್ಟ್‌ಗಳಲ್ಲಿರುವಷ್ಟು ಕರೆಪ್ಟ್ ಬೇರೆ ಎಲ್ಲೂ ಇಲ್ಲ. ಆಮೇಲೆ ಲೋಕೋಪಯೋಗಿ ಇಲಾಖೆಯ ರಸ್ತೆಗಳು ಮತ್ತು ಬ್ರಿಡ್ಜ್‌ಗಳಲ್ಲಿರತಕ್ಕ ಇಂಜನೀಯರ್ಸ್ ಸಹ ಈ ಕರೆಪ್ಟ್ ಲಿಸ್ಟ್‌ನಲ್ಲಿ ಬರುತ್ತಾರೆ. ನಾನಿಲ್ಲಿ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರು ತಮ್ಮ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೋ ಅದನ್ನು ತಾವು ಸಹ ನೋಡಿರಬಹುದು. ಪ್ಲಾನ್ ಮತ್ತು ಎಸ್ಟಿಮೇಟ್ ಮಾಡುವಾಗ ಡಿಫೆಕ್ಟೀವ್ ಮಾಡುವುದು. ಇಲ್ಲಿ ಯಾವುದಾದರೊಂದು ಕೆಲಸಕ್ಕೆ ಟೆಂಡರ್ ಕರೆದ ಮೇಲೂ ಕೋಟ್ಯಾಂತರ ರೂಪಾಯಿಗಳನ್ನು ಕೊಡುವುದು. ಈಗ ಇಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಟಲ್ಭ ರಿಪೋರ್ಟ್ ನೋಡಿ ಒಂದೇ ಒಂದು ಉದಾಹರಣೆಯನ್ನು ಹೇಳಬೇಕೆಂದರೆ, ರಾಜನ್‌ಕೊಳ್ಳೂರು ಟನಲ್ ಬಗ್ಗೆ ನಮ್ಮ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರು ಅಬ್ಸರ್ವ್ ಮಾಡಿದ್ದಾರೆ. The Committee are unab e to accept the explanation of the Department ಎಂದು ಹೇಳಿದ್ದಾರೆ. ರಾಜನ್ ಕೊಳ್ಳೂರು ಟಾನಲ್‌ಗೆ ಮೊದಲು ಓರಿಜನಲ್ ಎಸ್ಟಿಮೇಟ್ ಆದದ್ದು ೭ ಕೋಟಿ ರೂಪಾಯಿಗಳು ಇದನ್ನು ಟೆಂಡರ್ ಕರೆದು ಮಾಡಿದ್ದಾರೆ ಟೆಂಡರ್ ಅಷ್ಟೇ ಹಣಕ್ಕೆ ಅಲಾಟ್ ಆಗಿದೆ. ಆಗಿದ್ದರೂ ಕೂಡ ಕೊನೆಗೆ ಕಂಟ್ರಾಕ್ಟ್‌ದಾರರು ಕ್ಲೇಮ್ ಮಾಡಿದ್ದು, ಡಿಪಾರ್ಟ್‌ಮೆಂಟ್‌ನವರು ಬಿಡುಗಡೆ ಮಾಡಿದ ಹಣ ೧೫.೫೨ ಲಕ್ಷ ರೂಪಾಯಿಗಳು. ಮೊದಲು ಈ ಕೆಲಸಕ್ಕೆ ೫ ಕೋಟಿ ರೂಪಾಯಿಗಳು ಅಲಾಟ್ ಆಗಿತ್ತು. ಆಮೇಲೆ ೭ ಕೋಟಿ ರೂಪಾಯಿಗಳಾಯಿತು. ಕೊನೆಗೆ ಬಿಡುಗಡೆ ಮಾಡಿದ ಹಣ ೧೫ ಕೋಟಿ ರೂಪಾಯಿಗಳು. ಇದಕ್ಕೆ ಕಮಿಟಿಯವರು ಏನು ಹೇಳಿರುವುದು ಈ ರೀತಿ ಇದೆ.

"The Committee are unable to accept this explanation. There has been an enormous increase in the cost of these tunnels. Additional expenditure of Rs. 10 crores has been incurred which is hundred percent more than their tendered cost which cannot be explained away. It is only due to inadequate investigation and defective estimation which did not take into account, the nature of the strata in which the tunnel was to be driven and the diametre of the tunnel. Provision made in estimate and the tender scheduled for the quantity of excavation, permanent supports. and lining were obviously tentative and without any firm basis, Such tentative estimated resulted in "extra items" and extra contractual payments to the contractors.

If the estimated requires such drastic revision. revised estimate should have been got up and got approved by Government. Government should have called for fresh tenders so that the benefit of competitive rates was not lost through extra contractual payment. This matter should be probed in detail and the persons responsible for the defective estimate resulting in new items and increase in quantities and the huge extra cost should be punished.''

ಈ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ? ೧೦ ಕೋಟಿ ರೂಪಾಯಿಗಳು ಹೆಚ್ಚು ಹಣ ಬಿಡುಗಡೆ ಮಾಡಿದ್ದಾರೆ. ಆಮೇಲೆ ಎಸ್ಟಿಮೇಟ್ ರಿವೈಜ್ ಆದ ಮೇಲೂ ಸಹ ಟೆಂಡರ್ ಕರೆಯಲಿಲ್ಲ. ಮೊದಲು ಕೊಟ್ಟಿದ್ದ ಟೆಂಡರ್‌ದಾರರಿಗೆ ಪುನಃ ಅವರಿಗೆ ಟೆಂಡರ್ ಕರೆಯದೆ ಕೊಡತಕ್ಕಂಥಾದು ಏನಿತ್ತು? ಅದಕ್ಕೆ ನಾನು ಹೇಳಬೇಕಾಗುತ್ತದೆ, ಏನೆಂದರೆ ಇದರಲ್ಲಿ ಎಗ್ಜಿಕ್ಯೂಟೀವ್ ಇಂಜನೀಯರ್‌ಸ್ ಶಾಮಿಲಾಗಿದ್ದಾರೆಂದು ನೀವು ಕಣ್ಣುಮುಚ್ಚಿ ಕುಳಿತುಕೊಂಡಿದ್ದರಿಂದ ಈ ಕೆಲಸವಾಗಿದೆ, ಒಂದು ಕೆಲಸಕ್ಕೆ ೧೦೦ ಪರ್ಸೆಂಟ್‌ನಷ್ಟು ಹಣ ಇನ್‌ಕ್ರೀಜ್ ಆಗಿದೆ, ಇದು ಯಾವ ನ್ಯಾಯ ? ಇವತ್ತು ಹತ್ತು. ಪರ್ಸೆಂಟ್ ಜಾಸ್ತಿಯಾಗಿದ್ದರೆ, ಇಲ್ಲ ೨೦ ಪರ್ಸೆಂಟ್ ಜಾಸ್ತಿಯಾಗಿದ್ದರೆ ಅದನ್ನು ಒಪ್ಪಬಹುದಿತ್ತು. ಆದರೆ ಇಲ್ಲಿ ನೂರು ಪರ್ಸೆಂಟ್ ಜಾಸ್ತಿಯಾಗಿದೆ. ಹತ್ತು ಕೋಟಿ ರೂಪಾಯಿಗಳು ಯಾರ ಹಣ? ಇದನ್ನು ಯಾರ ಜೇಬಿನಿಂದ ಕೊಡುತ್ತಾರೆ ? ಇವತ್ತು ತಾವು ಬಡವರ ಮೇಲೆ ತೆರಿಗೆಯನ್ನು ಹಾಕಿ. ಇಂತಹ ಪ್ರಾಜೆಕ್ಟ್‌ಗಳಿಗೆ ಹಣ ಕೊಟ್ಟು ಈ ರೀತಿಯಾಗಿ ಪೋಲು ಮಾಡಿ ಇರಿಗೇಷನ್ ಪ್ರಾಜೆಕ್ಟ್‌ಗಳು ಆಗಬೇಕೆಂದರೆ ಹೇಗೆ ಆಗುತ್ತವೆ ?

ಹಣವನ್ನು ಅಲಾಟ್ ಮಾಡಿ ಯಾವುದೋ ಕಂಟ್ರಾಕ್ಟರುಗಳಿಗೆ ಹಂಚುವುದಕ್ಕಲ್ಲ; ಅಥವಾ ಅವನ ಜೋಬು ತುಂಬಲಿಕ್ಕಲ್ಲ. ನಿಮ್ಮ ಫಿಸಿಕಲ್ ಅಚೀವ್‌ಮೆಂಟ್ ಏನು ? ನಿಮ್ಮ ಫಿಸಿಕಲ್ ಟಾರ್ಗೆಟ್ ಏನು ? ಎನ್ನತಕ್ಕದ್ದು ಇಂಪಾರ್ಟೆಂಟೇ ಹೊರತು ನೀವು ಹಣ ಹೆಚ್ಚಿಗೆ ಕೊಡುವುದಿಲ್ಲ. ನಿಮ್ಮ ಹಣ ಕಂಟ್ರಾಕ್ಟರುಗಳ ಜೋಬಿಗೆ ಹೋಗಿದೆ. ಇದನ್ನು ನಾನು ಹೇಳುತ್ತಿರುವುದಿಲ್ಲ ಪಿ.ಎ.ಸಿ. ನವರು ಕೊಟ್ಟಿರುವ ರಿಪೋರ್ಟ್‌ನಲ್ಲೇ ಈ ವಿಷಯವನ್ನು ಹೇಳಲಾಗಿದೆ. ಆಮೇಲೆ, ಯಾರಾದರು ಕಂಟ್ರಾಕ್ಟರುಗಳು ಷೆಡ್ಯೂಲ್ ಟೈಮ್ ಪ್ರಕಾರ ಕೆಲಸ ಮಾಡದೇ ಹೋದರೆ ಪೆನಾಲ್ಟಿ ಹಾಕುವ ನಿಯಮ ಇದೆ. ನೀವು ಪೆನಾಲ್ಟಿಯನ್ನು ಎಷ್ಟು ಹಾಕುತ್ತೀರಿ ಎಂದರೆ, ಒಂದು ದಿನಕ್ಕೆ ೫೦ ಪೈಸೆಯಿಂದ ೨ ರೂಪಾಯಿ ವರೆಗೆ ಹಾಕುತ್ತೀರಿ. ಯಾರಾದರು ಒಬ್ಬ ಕಂಟ್ರಾಕ್ಟರ್ ನಿಗದಿಯಾದ ಸಮಯಕ್ಕೆ ಸರಿಯಾಗಿ ಕೆಲಸ ಮಾಡದೇ ಇದ್ದರೆ ನೀವು ದಿನಕ್ಕೆ ೫೦ ಪೈಸೆ ಮಾತ್ರ ಪೆನಾಲ್ಟಿ ಹಾಕುತ್ತೀರಿ. ೫೦ ಪೈಸೆಗೇನಾದರು ವ್ಯಾಲ್ಯು ಇದೆಯಾ ? ಕಂಟ್ರಾಕ್ಟರುಗಳ ಸೇಫ್‌ಗಾರ್ಡ್‌ಗೋಸ್ಕರ ಇಷ್ಟು ಕಡಿಮೆ ಮಟ್ಟದಲ್ಲಿ ಪೆನಾಲ್ಟಿಯನ್ನು ಹಾಕುತ್ತಿದ್ದೀರಿ. ಯಾವುದಾದರು ಒಂದು ಕೆಲಸಕ್ಕೆ ಕಂಟ್ರಾಕ್ಟ್ ಕೊಟ್ಟ ಮೇಲೆ, ಆ ಕಂಟ್ರಾಕ್ಟ್‌ದಾರನು ಕೆಲಸ ಮಾಡದೇ ಒಂದೆರಡು ವರ್ಷ ಡಿಲೇ ಮಾಡುತ್ತಾನೆ. ಎರಡು ವರ್ಷ ಮೂರು ವರ್ಷ ಡಿಲೇ ಆದ ಮೇಲೆ ಕಂಟ್ರಾಕ್ಟ್‌ದಾರನು ಸರ್ಕಾರದವರಲ್ಲಿ ಈಗಿನ ರೇಟ್ ಪ್ರಕಾರ ಕಂಟ್ರಾಕ್ಟ್ ಹಣವನ್ನು ಕೊಡಿ, ಸ್ಟೀಲ್ ಬೆಲೆ ಜಾಸ್ತಿಯಾಗಿದೆ, ಸಿಮೆಂಟ್ ಬೆಲೆ ಜಾಸ್ತಿಯಾಗಿದೆ ಎಂದು ಕೇಳುತ್ತಾನೆ. ಸರ್ಕಾರದ ಹೊಸ ರೇಟನ್ನು ಕೊಡುವುದಕ್ಕೆ ಒಪ್ಪದೇ ಇದ್ದಾಗ ರೇಟನ್ನು ನಿಗದಿ ಮಾಡುವುದಕ್ಕೆಂದೇ ಇರುವ ಆರ್ಬಿಟ್ರೇಷನ್ ಮುಂದೆ ಹೋಗುತ್ತಾನೆ, ಆರ್ಬಿಟ್ರೇಷನ್‌ನವರು ಹೆಚ್ಚಿನ ಹಣವನ್ನು ಕೊಡುವುದಕ್ಕೆ ಶಿಫಾರಸ್ ಮಾಡುತ್ತಾರೆ. ಆರ್ಬಿಟ್ರೇಷನ್‌ನವರು ಮಾಡುವ ತೀರ್ಮಾನದಂತೆ ಕೋಟ್ಯಾಂತರ ರೂಪಾಯಿಗಳನ್ನು ಕಂಟ್ರಾಕ್ಟದಾರರಿಗೆ ಕೊಡಬೇಕಾಗುತ್ತದೆ. ಹೊಸ ರೇಟ್‌ಗಳನ್ನು ಕೊಡಿ ಎಂದು ಆರ್ಬಿಟ್ರೇಷನ್‌ನವರ ಮುಂದೆ ಹೋದ ೪೧ ಕೇಸ್‌ಗಳಲ್ಲಿ ೨೫ ಕೇಸ್‌ಗಳಿಗೆ ಹೆಚ್ಚು ಹಣವನ್ನು ಸರ್ಕಾರ ಕೊಟ್ಟಿದೆ. ಇದೇ ತರಹ ಹಿಂದಿನ ಸರ್ಕಾರ ಇದ್ದಾಗಲೂ ನಡೆದಿರಬಹುದು. ಈಗಲೂ ನಡೆಯುತ್ತಿರಬಹುದು, ನಾನು ಕೇಳುತ್ತಿರುವುದು ಇಂಥ ಪ್ರಾಬ್ಲಮ್ಸ್‌ಗಳನ್ನು ಇಮೀಡಿಯಟ್ ಆಗಿ ಏಕೆ ಸಾಲ್ವ್ ಮಾಡಬಾರದು? ಬಡವರ ಹಣದಲ್ಲಿ ಸರ್ಕಾರ ಕೋಟ್ಯಾಂತರರೂಪಾಯಿಗಳನ್ನು ಅನಾವಶ್ಯಕವಾಗಿ ಕಣ್ಣುಮುಚ್ಚಿಕೊಂಡು ಖರ್ಚು ಮಾಡುವುದಕ್ಕೆ ಅವಕಾಶ ಕೊಡುವುದು ಯಾವ

ನ್ಯಾಯ? ಕೋರ್ಟ್‌ಗೆ ಹೋದ ಕೇಸ್‌ಗಳಲ್ಲೂ ಸಹ ಇದೇ ತರಹ ಕಂಟ್ರಾಕ್ಟ್‌ದಾರರುಗಳ ಪರವಾಗಿಯೇ ನ್ಯಾಯ ತೀರ್ಮಾನವಾಗುತ್ತದೆ. ಸರ್ಕಾರದ ಪರವಾಗಿ ವಾದ ಮಾಡುವುದಕ್ಕೆ ಇಟ್ಟಿರುವ ಸರ್ಕಾರದ ವಕೀಲರುಗಳು ಕಂಟ್ರಾಕ್ಟ್‌ದಾರರುಗಳಿಗೆ ಶಾಮೀಲಾಗಿ ಕೇಸ್ ಬಗ್ಗೆ ಸರಿಯಾಗಿ ವಾದ ಮಾಡುವುದಿಲ್ಲ. ಕಂಟ್ರಾಕ್ಟ್‌ದಾರರ ವಿರುದ್ಧವಾಗಿ ಕೋರ್ಟ್‌ಗೆ ಹೋಗಿದ್ದ ಒಂದು ಕೇಸ್‌ನಲ್ಲಿ ೧೪ ತಿಂಗಳಲ್ಲಿ ಒಟ್ಟು ೩೦ ಅಡ್ಜರ್ನಮೆಂಟ್‌ನ್ನು ಕಂಟ್ರಾಕ್ಟ್‌ದಾರರಿಗೆ ನೀಡಲಾಗಿದೆ. ನಮ್ಮ ಲಾ ಡಿಪಾರ್ಟ್‌ಮೆಂಟ್ ಸಮರ್ಥವಿಲ್ಲವೆ ? ನಮ್ಮ ಗೌರ್ನಮೆಂಟ್ ಅಡ್ವೋಕೇಟ್ ಅವರು ಸರಿಯಾಗಿ ವಾದ ಮಾಡುತ್ತಿಲ್ಲವೇ ? ಸರ್ಕಾರಿ ವಕೀಲರಾಗಿ ತಮ್ಮ ನೆಂಟರು, ತಮ್ಮ ಜಾತಿಯವರು ಎಂದು ಎಂತೆಂಥವರನ್ನೋ ನೇಮಕ ಮಾಡಲಾಗಿದೆ ಇಂಥವರುಗಳಿಂದ ನಮ್ಮ ದೇಶದ ಪ್ರಾಜೆಕ್ಟ್‌ಗಳು ಹಾಳಾಗುತ್ತಿವೆ. ಇದರ ಬಗ್ಗೆ ಸರ್ಕಾರ ಹೆಚ್ಚು ಲಕ್ಷ್ಯ ಕೊಡಬೇಕು ಒಬ್ಬ ಕಂಟ್ರಾಕ್ಟ್‌ದಾರನೇನಾದರು ಒಂದು ಪ್ರಾಜೆಕ್ಟ್ ಬಗ್ಗೆ ಕೋರ್ಟ್‌ನಿಂದ ಸ್ಟೇ ಆರ್ಡರ್ ತೆಗೆದುಕೊಂಡು ಬಂದರೆ, ಆ ಕೇಸ್ ತೀರ್ಮಾನ ಆಗುವವರೆಗೂ ಇನ್ನೊಬ್ಬ ಕಂಟ್ರಾಕ್ಟ್‌ದಾರನಿಗೆ ಕೆಲಸವನ್ನು ವಹಿಸುವುದಕ್ಕೆ ಆಗುವುದೇ ಇಲ್ಲ. ಕಂಟ್ರಾಕ್ಟ್‌ದಾರರುಗಳು ಹಣದ ಆಸೆಗಾಗಿ, ಯಾರೋ ಒಬ್ಬ ಎಕ್ಸಿಕ್ಯೂಟಿವ್ ಇಂಜನೀಯರ್ ಪ್ರಾಜೆಕ್ಟ್‌ಗೆ ಸರಿಯಾದ ರೇಟ್‌ನಲ್ಲಿ ಹಣವನ್ನು ಕೊಟ್ಟಿಲ್ಲವೆಂದೋ ಅಥವಾ ಇನ್ಯಾವುದಾದರು ಒಂದು ಕಾರಣವನ್ನು ಕೊಟ್ಟು ಕೋರ್ಟ್‌ನಲ್ಲಿ ಸ್ಟೇ ಆರ್ಡರ್ ತೆಗೆದುಕೊಂಡು ಬರುತ್ತಾರೆ. ಸ್ಟೇ ಆರ್ಡರ್ ತೆಗೆದುಕೊಂಡು ಬರುವುದರಿಂದ ಪ್ರಾಜೆಕ್ಟ್ ಕೆಲಸಗಳು ೬ ತಿಂಗಳೋ ಒಂದು ವರ್ಷವೋ ನಿಧಾನವಾದರೆ ಮುಂದಕ್ಕೆ ಎಷ್ಟು ತೊಂದರೆಯಾಗುತ್ತದೆಂದು ಸರ್ಕಾರಕ್ಕೆ ತಿಳುವಳಿಕೆ ಇರಬೇಡವೇ ! ಸರ್ಕಾರಿ ವಕೀಲರುಗಳಲ್ಲಿ ಯಾರಾದರು ಸರಿಯಾಗಿ ಕೆಲಸ ಮಾಡದೇ ಇದ್ದರೆ ಅಂತವರನ್ನು ತೆಗೆದುಹಾಕಿ, ಯಾವ ಸರ್ಕಾರಿ ವಕೀಲರುಗಳು ಕಂಟ್ರಾಕ್ಟ್‌ದಾರನ ಪರವಾಗಿ ಶಾಮೀಲಾಗಿರುತ್ತಾರೋ ಅಂತಹವರುಗಳನ್ನು ತೆಗೆದುಹಾಕಿ ಅಂಥ ಜಾಗಗಳಿಗೆ ಸರಿಯಾಗಿ ಕೆಲಸ ಮಾಡುವವರನ್ನು ಮತ್ತು ಮೆರಿಟ್ ಮೇಲೆ ಸರ್ಕಾರಿ ವಕೀಲರುಗಳನ್ನು ನೇಮಕ ಮಾಡಿ. ಸರ್ಕಾರಿ ವಕೀಲರುಗಳು ಸರ್ಕಾರದ ಪರವಾಗಿ ಕೆಲಸ ಮಾಡದೇ ಇದ್ದರೆ ಪ್ರಾಜೆಕ್ಟ್‌ಗಳ ಕೆಲಸ ಹಾಳಾಗುತ್ತದೆ. ಇದರಿಂದ ರೈತರುಗಳಿಗೆ ಬಹಳ ತೊಂದರೆಯಾಗುತ್ತದೆ ಎಂಬ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಾನು ಇಷ್ಟೆಲ್ಲಾ ಹೇಳಿರುವುದು ಬರೀ ರಾಜನ್ ಕೊಳ್ಳೂರ್ ಟನಲ್ ಸಂಬಂಧಪಟ್ಟದ್ದೇ ಅಲ್ಲ. ಇನ್ನೂ ಒಂದು 'ಗುಂಡಲ್‌ಗೇರಿ' ಟನಲ್ ಪ್ರಾಜೆಕ್ಟ್ ಕಾಸ್ಟ್ ಕೂಡ ಒರಿಜಿನಲ್ ಆಗಿ ೨.೭೭ ಕೋಟಿ ರೂಪಾಯಿ ಆಗಿತ್ತು. ಈ ಕಾಸ್ಟ್ ಆಮೇಲೆ ಎಷ್ಟಾಯಿತು ಎಂದರೆ ೪.೫೦ ಕೋಟಿ ರೂಪಾಯಿಗಳಾಯಿತು. ಅಂದರೆ, ಎರಡು ಕೋಟಿ ೭೭ ಲಕ್ಷ ರೂಪಾಯಿಗಳ ವೆಚ್ಚದ ಪ್ರಾಜೆಕ್ಟ್ ನಾಲ್ಕೂವರೆ ಕೋಟಿ ರೂಪಾಯಿಗಳಷ್ಟಾಯಿತು. ಇದು ಯಾರ ಹಣ ? ಇವೆರಡೂ ಪ್ರಾಜೆಕ್ಟ್‌ಗಳಿಂದ ಸುಮಾರು ೧೨ ಕೋಟಿ ರೂಪಾಯಿ ಅಷ್ಟು ಹೆಚ್ಚು ಹಣ ಖರ್ಚಾಯಿತು. ಹೀಗೆ ಕೋಟ್ಯಾಂತರ ರೂಪಾಯಿಗಳು ಪೋಲಾಗಿದೆ, ನಾವು ಪ್ರಾಜೆಕ್ಟ್‌ಗಳಿಗೆ ಹಣ ಕೊಟ್ಟಿದ್ದೇವೆಂದರೆ ಆಗುವುದಿಲ್ಲ. ಒಂದು ಕೋಟಿ ರೂಪಾಯಿ ಕೆಲಸಕ್ಕೆ ೧೦ ಕೋಟಿ ರೂಪಾಯಿ ಖರ್ಚು ಮಾಡಿದರೆ ಹೇಗೆ ? ಅಲ್ಟಿಮೇಟ್ಲಿ ಪೊಟೆನ್‌ಶಿಯಾಲಿಟಿ ಕಡಿಮೆಯಾಗುತ್ತದೆ.

ಇದಕ್ಕೆ ೧೨ಕೋಟಿ ರೂಪಾಯಿಗಳು ಆಯಿತು. ಹೀಗೆ ಕೋಟ್ಯಾಂತರ ರೂಪಾಯಿಗಳು-ಇದರಲ್ಲಿ ಪೋಲು ಆಗಿದೆ. ನಾವು ಒಂದು ರೂಪಾಯಿ ಕೆಲಸಕ್ಕೆ ೧೦ ರೂಪಾಯಿಗಳನ್ನು ಖರ್ಚು ಮಾಡಿದರೆ ಹೀಗೆ ಆಗುತ್ತದೆ, ಅಲ್ಟಿಮೇಟ್‌ಲೀ ಪೊಟೆನ್‌ಷಿಯಾಲಿಟಿ ಕಡಿಮೆಯಾಗುತ್ತದೆ. ಇದರಲ್ಲಿ ಇನ್ನೊಂದು ವಿಷಯವೆಂದರೆ. ಇವರು ಅಷ್ಟಕ್ಕೆ ಸೀಮಿತವಾಗಿ ನಿಂತಿಲ್ಲ. ಇವರ ಬಗ್ಗೆ ಪಿ.ಎ.ಸಿ. ಕಮಿಟಿಯವರು ಇತ್ತೀಚೆಗೆ ಹೇಳಿದ್ದಾರೆ. ನಾವು ಅನೇಕ ಸಮಸ್ಯೆಗಳನ್ನು ಹಿಂದೆ ೧೭ನೇ ರಿಪೋರ್ಟ್‌ನಲ್ಲಿ ರೈಜ್ ಮಾಡಿದ್ದೇವೆ, ಅದರ ಪ್ರಕಾರ ನೀವು ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ? ಎಂದು ಹೇಳಿ ಪುನಃ ರಿವ್ಯೂ ಮಾಡಿದ್ದಾರೆ. ಅದಕ್ಕೆ ಇವರ ಉತ್ತರವು ಇಲ್ಲಿಯವರೆವಿಗೂ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅರ್ಬಿಟ್ರೇಷನ್‌ಗೆ ಹಾಕಿದ್ದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಆಯಿತು ಎಂದು ಹೇಳಿದ್ದಾರೆ, ಅದು ನಿಜ, ಆದರೆ ಅದನ್ನು ನಾವು ಮಾಡಿದ್ದಲ್ಲ, ನಿಮ್ಮ ಸರಕಾರ ಇದ್ದಾಗ ಮಾಡಿದ್ದುದು. ನಮ್ಮ ಸರ್ಕಾರದಲ್ಲಿ ಅರ್ಬಿಟ್ರೇಷನ್‌ಗೆ ನಾವು ಒಪ್ಪಿಕೊಂಡಿಲ್ಲ. ಹಾಗೆಂದ ಮೇಲೆ ನೀವು ಏಕೆ ಒಪ್ಪಿಕೊಂಡಿದ್ದೀರಿ ? ಮೊದಲು ಅದನ್ನು ಹೇಳಿ ! ಈಗ ಗಾಣಕ್ಕೆ ಕೈ ಹಾಕಿ ಕೊಂಡು ಕೈ ಹೋಯಿತು ಎಂದು ಹೇಳಿದರೆ ಹೇಗೆ ? ಅದಕ್ಕೆ ಏನು ಮಾಡುವುದು? ವರ್ಲ್ಡ್

ಬ್ಯಾಂಕ್‌ನಲ್ಲಿ ಈ ಒಂದು ಕಂಡೀಷನ್‌ಗೆ ಹಿಂದಿನ ಸರಕಾರ ಒಪ್ಪಿಕೊಳ್ಳದಿದ್ದರೆ ಅರ್ಬಿಟ್ರೇಶನ್‌ಗೆ ನಾವು ಏಕೆ ಹಾಕುತ್ತಾ ಇದ್ದೆವು ?.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ನೀವು ತಿಂಗಳಲ್ಲಿ ಅಷ್ಟೊಂದು ಅಡ್ಜರ್ನ್‌ಮೆಂಟ್ ತೆಗೆದುಕೊಳ್ಳಬೇಕೆಂದು ಇದೆಯೆ ?...

ಶ್ರೀ ಹೆಚ್.ಡಿ. ದೇವೇಗೌಡ.—ಅರ್ಬಿಟ್ರೇಶನ್ ಕ್ಲಾಸನ್ನು ನಾವು ತೆಗೆದುಹಾಕಿದ್ದೇವೆ. ವಿಶ್ವ ಬ್ಯಾಂಕ್‌ನವರ ಜೊತೆಗೆ ಆ ಕುರಿತು ವ್ಯವಹಾರವನ್ನು ನಾವು ಮಾಡುತ್ತಾ ಇದ್ದೇವೆ. ಯಾವುದೇ ಪ್ರಾಜೆಕ್ಟ್‌ಗೆ ನಾವು ಆರ್ಥಿಕ ನೆರವನ್ನು ತೆಗೆದುಕೊಳ್ಳುವಂಥ ಪರತ್ತು ಬಂದಾಗ ನಾವು ಅರ್ಬಿಟ್ರೇಷನ್‌ಗೆ ಒಪ್ಪುವುದಿಲ್ಲ ಎಂದು ಹೇಳಿ ಈ ಬಗ್ಗೆ ಇದ್ದ ಪರತ್ತು ತೆಗೆದುಹಾಕಿದ್ದೇವೆ. ಅವರೂ ಕೂಡ ಒಪ್ಪಿದ್ದಾರೆ, ಅರ್ಬಿಟ್ರೇಷನ್ ಅವಾರ್ಡ್ ಪಾಸ್ ಆದಮೇಲೆ, ಲಾಯರ್ ಏನು ಹೇಳಿದರು ಅಂದರೆ, ಸಾಮಾನ್ಯವಾಗಿ ಅರ್ಬಿಟ್ರೇಷನ್ ಅವಾರ್ಡ್ ಪಾಸ್ ಆದಾಗ, ಈ ಹಿಂದೆ ಎಲ್ಲಾ ಪೇಮೆಂಟ್ ಮಾಡಿಕೊಂಡು ಬಂದರು. ಆದರೆ ನಾವು ಬಂದ ಮೇಲೆ ಒಂದು ವರ್ಷ ಅದರ ಮೇಲೆ ಹೋರಾಟ ಮಾಡಿದ್ದೇವೆ, ಹೀಗೆ ಕೊಡ ಬಾರದು ಎನ್ನುವ ಬಗ್ಗೆ. ಅದು ಮಾನ್ಯ ಮೊಯಿಲಿಯವರಿಗೂ, ಧರ್ಮಸಿಂಗ್‌ರವರಿಗೂ ಗೊತ್ತಿರುವ ವಿಚಾರ. ಇದಕ್ಕಾಗಿ ಒಂದು ವರ್ಷ ನಾವು ಕೊಡಲಿಲ್ಲ ಆದರೆ ಕೋರ್ಟ್‌ನಲ್ಲಿ ಅವರ ಪ್ರಕಾರ ತೀರ್ಮಾನ ಆದಮೇಲೆ ವಿಧಿ ಇಲ್ಲದೆ ಕೊಡಬೇಕಾಗಿ ಬಂತು. ನಾವು ಸರಕಾರದ ನಾರ್ಮ್ಸ್ ಪ್ರಕಾರ ಪ್ರತಿಯೊಂದನ್ನೂ ಕೂಡ ವರ್ಕ್‌ಔಟ್ ಮಾಡಿದ್ದೇವೆ. ಬೇಕಾದರೆ ನಾನು ಸಂಬಂಧಪಟ್ಟ ವಿವರವನ್ನು ಕೊಡಬಲ್ಲೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದೊಂದು ಇರಬಹುದು ಇಲ್ಲ ಎಂದು ನಾನು ಹೇಳುವುದಿಲ್ಲ ಹೀಗೆ ನೀವು ಒಂದುಕಡೆ ಸಮರ್ಥನೆ ಮಾಡಿಕೊಳ್ಳುತ್ತೀರಿ. ಆದರೆ ಮತ್ತೊಂದು ಕಡೆ ಈ ರೀತಿಯಾಗಿ ನಡೆಯುತ್ತಿದೆ. ಡಿಲೇ ಆದಾಗ ಅದನ್ನು ತಪ್ಪಿಸುತ್ತೇವೆ ಎಂದು ಏಕೆ ಹೇಳುವುದಿಲ್ಲ ? ಇಲ್ಲಿ ಪಿ ಎ.ಸಿ. ಯವರ ರಿಪೋರ್ಟ್ ಇದೆ, ಇದರಲ್ಲಿ ಏನು ಹೇಳುತ್ತಾರೆ ?...

ಶ್ರೀ ಹೆಚ್.ಡಿ. ದೇವೇಗೌಡ.—ಪಿ.ಎ.ಸಿ. ಯವರ ರಿಪೋರ್ಟ್‌ನ್ನು ನಾನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಅದರ ಮೇಲೆಯೇ, ನಾವು ಹೇಳದೆ, ಕೇಳದೆ ಜ್ಯುಡೀಶಿಯಲ್ ಎನ್‌ಕ್ವಯರಿಗೆ ಒಪ್ಪಿಗೆ ಕೊಟ್ಟಿದ್ದು. ಕ್ಯಾಬಿನೆಟ್‌ನ್ನು ಕೇಳದೇ ಈ ಒಪ್ಪಿಗೆ ಕೊಟ್ಟಿದು. ಕೊನೆಯ ಏಳು ದಿವಸಗಳಲ್ಲಿ ಪಿ.ಎ.ಸಿ. ಯವರು ರಿಪೋರ್ಟ್‌ನ್ನು ಸಬ್‌ಮಿಟ್ ಮಾಡಿದರು. ಅವರು ಏನು ಬರೆದಿದ್ದಾರೆ, ಅದರ ಪ್ರಕಾರ ವಿವರಣೆಯನ್ನು ಕೊಡುವುದಕ್ಕೆ ಹೋದರೆ, ಆ ಬಗ್ಗೆ ಸೂಕ್ತ ಮಾಹಿತಿಯನ್ನು ತರಿಸಿ ಕೊಡು ತ್ತಾರೆ. ಕಾಸ್ಟ್ ಎಸ್ಕಲೇಶನ್ ಬರೆ ಡಿಫೆಕ್ಟಿವ್ ಟೆಂಡರ್ ಒಂದಕ್ಕೆ ಆಗುವುದಿಲ್ಲ. ನಾನಾ ಕಾರಣ ಗಳಿಂದಾಗಿ ಆಗುತ್ತದೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದರೆ ಡಿಬೆಟ್ ಮಾಡಬಹುದು, ಯಾಕೆಂದರೆ ಹೋದ ವರ್ಷ ೪೦ ರೂಪಾಯಿಗಳ ಬೆಲೆ ಸಿಮೆಂಟ್ ಇದ್ದರೆ, ಈ ವರ್ಷ ೬೦ ರೂಪಾಯಿ ಗಳು ಆಗಬಹುದು. ಸ್ಟೀಲ್‌ನ ಬೆಲೆ ೫,೮೦೦ ರೂಪಾಯಿ ಇದ್ದುದು ೭೦೦೦ ರೂಪಾಯಿಗಳು ಆಗ ಬಹುದು. ಇಂಥ ವಿಷಯಗಳನ್ನು ನಾವು ಯಾರಿಗೆ ಹೇಳುವುದು ? ಈ ಕುರಿತು ಮಾನ್ಯ ಪಾಲ್ಕೀ ವಾಲರವರ ಭಾಷಣವನ್ನು ಕೂಡ ನಾನು ಕೇಳಿದ್ದೇನೆ. ಅವರು ಸಿಮೆಂಟ್ ಬೆಲೆ ೭೦ ರೂಪಾಯಿಗಳು ಆಗಿಬಿಟ್ಟರೆ ದೇಶದಲ್ಲಿ ಉತ್ಪಾದನೆ ಜಾಸ್ತಿ ಆಗುತ್ತದೆ ಎಂದು ಹೇಳಿದರು. ಇನ್ನೂ ಕೆಲವು ವಿಚಾರಗಳ ಬಗ್ಗೆ ಅವರು ಮಾತನಾಡಿದ್ದರು. ಆದರೆ ಹಾಗೆ ಬೆಲೆ ಇಳಿದಿಲ್ಲ. ಹೀಗೆ ಚರ್ಚೆ ಮಾಡಲಿಕ್ಕೆ ಹೋದರೆ ಬೇಕಾದಷ್ಟು ಇದೆ. ಈಗ ಆ ಬಗ್ಗೆ ಚರ್ಚೆ ಬೇಡ. ಆದರೆ ನಮ್ಮ ಕಾಲದಲ್ಲಿ ಅಕ್ರಮ ನಡೆದಿದೆ ಅಂದರೆ ನಾನು ಈಗಲೂ ಕೂಡ ಅದರ ತನಿಖೆಗೆ ಒಪ್ಪಿಕೊಳ್ಳುತ್ತೇನೆ.

ಅನೇಕ ಕಾರಣಗಳಿಂದ ಎಸ್ಟಿಮೇಟ್ ರಿವೈಸ್ ಆಗುತ್ತದೆಂದು ಒಪ್ಪಿಕೊಳ್ಳೋಣ. ಆದರೆ ನೂರಕ್ಕೆ ನೂರರಷ್ಟು ಯಾವ ಕಾಲದಲ್ಲೂ ರಿವೈಸ್ ಆಗಿಲ್ಲ. ನಾನು ಕೇಳುವುದು ಅದನ್ನೇ.

ಶ್ರೀ ಎಸ್.ಆರ್. ಬೊಮ್ಮಾಯಿ.—ಪ್ರತಿಯೊಂದು ಇರ್‌ಗೇಷನ್ ಪ್ರಾಜೆಕ್ಟಿನ ಹಿಸ್ಟರಿ ನೋಡಿದರೆ ಅದು ಘಟಪ್ರಭಾ, ಮಲಪ್ರಭಾ, ಅಪ್ಪರ್ ಕೃಷ್ಣ ಯಾವುದೇ ಇರಬಹುದು, ಎಸ್ಕಲೇಷನ್ ಕಾಸ್ಟ್ ಡಬ್ಬಲ್, ಟ್ರಿಬ್ಬಲ್, ಫೋರ್‌ಟೈಮ್ಸ್ ಜಾಸ್ತಿಯಾಗಿರುವ ಉದಾಹರಣೆ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಸ್ಕಲೇಷನ್ ಕಾಸ್ಟ್ ಜಾಸ್ತಿ ಆಗುವುದು ಸಹಜ. ಆದರೆ ಅಪ್ಪರ್‌ಕೃಷ್ಣಾ ಪ್ರಾರಂಭದಲ್ಲಿ ೧೪೩ ಕೋಟಿಗೆ ಅಂದಾಜಾಗಿದ್ದುದು ಇವತ್ತು ೧೦೭೩ ಕೋಟಿಗೆ

ಹೋಗಿದೆ. ಆರ್ಬಿಟ್ರೇಷನ್‌ಗೆ ಅವಕಾಶ ಕೊಟ್ಟವರು ನಾವಲ್ಲ ಎಂದು ನೀವು ತಪ್ಪಿಸಿಕೊಳ್ಳುವ ಹಾಗಿಲ್ಲ ಆದರೆ ನಾವು ನಿಮಗಿಂತಲೂ ಹೆಚ್ಚು ಹಣ ಬಿಡುಗಡೆ ಮಾಡಿದ್ದೇವೆ ಎಂದು ಬೇಕಾದರೆ ಹೇಳಿಕೊಳ್ಳೋಣ ಇರಿಗೇಷನ್ ಪೊಟೆನ್‌ಶಿಯಾಲಿಟಿ ಕ್ರಿಯೇಟ್ ಮಾಡಿದ್ದೇವೆಂದು ಹೇಳಿಕೊಳ್ಳಿ. ಮೊದಲು ಕೂಡ ಹಣದ ಕೊರತೆ ಇತ್ತು. ಎಲ್.ಟಿ.ಸಿ. ಕಡಿಮೆ ಇದೆ ಎಂದು ನೀವು ಪರ್‌ಫಾರ್ಮೆನ್ಸ್ ರಿಪೋರ್ಟಿನಲ್ಲಿ ಬರೆದುಕೊಂಡಿದ್ದೀರಿ. ಆದರೆ ಹೆಗಡೆಯವರ ಕಾಲದಲ್ಲಿ ಪೊಟೆನ್‌ಷಿಯಾಲಿಟಿ ಡಬಲ್ ಆಯಿತೆಂದು ಹೇಳಿಕೊಳ್ಳುತ್ತಲೇ ಎಸ್ಕಲೇಷನ್ ಕಾರಣದಿಂದಲೋ ಅಥವಾ ಇನ್ನಾವ ಕಾರಣದಿಂದಲೋ ಪ್ರೊಜೆಕ್ಟ್‌ಗಳು ಹಿಂದೆ ಬೀಳುತ್ತಿರುವುದನ್ನೂ ನೀವು ಹೇಳಬೇಕಾಗಿದೆ. ನಿಮ್ಮ ಐದು ವರ್ಷಗಳ ಅವಧಿಯಲ್ಲಿ ನಿಮಗೆ ಬೇಕಾದುದ್ದನ್ನು ಭಾಷಣ ಮಾಡಬಹುದು, ಆದರೆ ನಾಳೆ ನೀವು ಈ ಕಡೆ ಬಂದಾಗ ನೀವೇ ಬಾಯಿಮುಚ್ಚಿಕೊಳ್ಳಬೇಕಾಗುತ್ತದೆ. ನಿಮಗೆ ತಿರುಗಿಸಿ ನಾವು ಹೇಳುತ್ತೇವೆ. ಆದ್ದರಿಂದ ನೀವು ಮಾಡಿದ್ದೇನು ? ದಯವಿಟ್ಟು ಜನರಿಗೆ ಸಂಶಯ ಬರುವ ಕೆಲಸ ಮಾಡಬೇಡಿ.

ಇನ್ನು ಅಲೊಕೇಷನ್ ಬಗ್ಗೆ ಹೇಳಿದ್ದೀರಿ. ನೀವು ಎಷ್ಟೆಲ್ಲ ವಾಗ್ದಾನ ಮಾಡಿದ್ದೀರಿ ಅದರ ಸ್ವಲ್ಪ ಭಾಗವನ್ನು ಮಾತ್ರ ನೀವು ಕೊಟ್ಟಿರಿ ಎಂಬುದನ್ನು ಮುಚ್ಚಿಡಲಾರಿರಿ. ಅಪ್ಪರ್ ಕೃಷ್ಣಾಗೆ ಒರಿಜಿನಲ್ ಕಾಸ್ಟ್ ಎಷ್ಟಿತ್ತು ಎಂದು ನೋಡಿ ಈಗ ಅದು ಆಕಾಶಕ್ಕೇರಿರುವುದನ್ನು ನೋಡಿದರೆ ನೀವು ಕೆಲಸಗಳನ್ನು ಪೂರೈಸಲು ಚುರುಕು ತೋರಿಸಿರುವುದಿಲ್ಲ. ಸಿಮೆಂಟ್, ಸ್ಟೀಲ್. ಕೂಲಿ ದರ ಇವುಗಳು ಜಾಸ್ತಿಯಾಗಿದ್ದರೂ ಕೂಡ ನೀವು ೮೫ ಕೋಟಿ ಎಂದು ಕಾಗದದಲ್ಲಿ ತೋರಿಸಿ ಕೇವಲ ೪೩ ಕೋಟಿ ಮಾತ್ರ ಖರ್ಚು ಮಾಡಿದ್ದೀರಿ. ಇಷ್ಟಾದರೂ ಈ ವರ್ಷ ಕೇವಲ ೪೧ ಕೋಟಿ ಮಾತ್ರ ಇಟ್ಟಿದ್ದೀರಲ್ಲ, ಇದು ಯಾವ ನ್ಯಾಯ ? ಹೋದವರ್ಷಕ್ಕಿಂತ ಈ ವರ್ಷ ಕಡಿಮೆ. ತೋರಿಕೆಗಾದರೂ ಹೋದವರ್ಷ ೮೦ ಕೋಟಿ ಇತ್ತು, ಈ ವರ್ಷ ೪೧ಕ್ಕೆ ಇಳಿದುಬಿಟ್ಟಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೮೩-೮೪ ರಿಂದ ತೆಗೆದುಕೊಂಡರೆ ಚೆನ್ನಾಗಿರುತ್ತದೆ. ಒಂದು ವರ್ಷದ್ದು ತೆಗೆದುಕೊಂಡರೆ ಸರಿಯಾಗುವುದಿಲ್ಲ. ಈ ವರ್ಷ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಫೈನಲ್ ಸ್ಟೇಜಿನಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ವರ್ಷದ್ದು ತೆಗೆದುಕೊಂಡರೆ ೫ ವರ್ಷದ್ದು ತೆಗೆದುಕೊಳ್ಳಿ ಎಂದು ಹೇಳುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಅಂಕಿ ಅಂಶಗಳ ಪ್ರಕಾರವೇ ನಾವು ಅಮೌಂಟ್ ಖರ್ಚು ಮಾಡಿದೆಯೆಂದು ಒಪ್ಪಿಕೊಂಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಅಮೌಂಟ್‌ಗೆ ತಕ್ಕ ಹಾಗೆ ಎಲ್ಲಿ ಖರ್ಚು ಮಾಡಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸೂಪರ್‌ಪ್ಲಾನ ಡ್ಯಾಮುಗಳು ಕಟ್ಟತಕ್ಕಂತಹದ್ದು ಬೇರೆ ಇರಿಗೇಷನ್ ಪೋರ್‌ಷನ್ ಬೇರೆ ಇದೆ. ವಿವರವೆಲ್ಲ ಇದೆ, ಕೊಡುತ್ತೇನೆ. ಹಣ ಎಲ್ಲೂ ಹೋಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೨೦೦೦ ವರ್ಷದ ಒಳಗಾಗಿ ಕೃಷ್ಣಾ ಬೇಸಿನ್‌ನಲ್ಲಿರತಕ್ಕಂತಹ ಎಲ್ಲಾ ನೀರನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆಂದು ಒಂದು ಕಡೆ ಹೇಳುತ್ತೀರಿ. ಇನ್ನೊಂದು ಕಡೆ ಅದಕ್ಕೆ ಸರಿಯಾದ ಹಣವನ್ನು ಕೊಡುವುದಿಲ್ಲ, ಇದನ್ನು ಪೂರ್ತಿ ಮಾಡದಿದ್ದರೆ ತೆಲುಗುಗಂಗಾ ಯೋಜನೆಯಲ್ಲಿ ಆಂಧ್ರದವರು ಎಲ್ಲ ನೀರನ್ನು ಉಪಯೋಗಿಸಿಕೊಳ್ಳುತ್ತಾರೆ. ಅವರು ಹೊಡೆದುಕೊಂಡು ಹೋಗುತ್ತಾರೆಂದು ಹೇಳುತ್ತಾರೆ ಆದಕ್ಕೆ ೪೨ ಕೋಟಿಯನ್ನು ಏಕೆ ಇಟ್ಟಿದ್ದೀರಿ. ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಏಕೆ ಕೊಟ್ಟಿಲ್ಲ. ೮೫ ಕೋಟಿ ರೂಪಾಯಿಯನ್ನು ಇಡುವಾಗ ನಿಮಗೆ ವಿವೇಕ ಇರುವುದಿಲ್ಲವೇ, ಯೋಚನೆ ಮಾಡಿ ಏಕೆ ಇಡುವುದಿಲ್ಲ. ೮೫ ಕೋಟಿ ಇಟ್ಟು ೪೨ ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದರೆ ಹೇಗೆ ? ಈ ಸದನವನ್ನು ಸಮಾಧಾನ ಮಾಡುವುದಕ್ಕೋಸ್ಕರ ೮೫ ಕೋಟಿ ಎಂದು ತೋರಿಸುತ್ತೀರಾ ? ಇದಕ್ಕೆ ಉತ್ತರ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹೇಳುತ್ತೇನೆ. ಈ ಮನೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈ ವರ್ಷದ ಪ್ಲಾನ್ ಸೈಜ್ ಅನ್ನು ಕಡಿಮೆ ಮಾಡತಕ್ಕಂತಹ ವಿಚಾರವನ್ನು ಕೂಡ ಹೇಳಿದ್ದಾರೆ. ಕರ್ನಾಟಕ ಸರಕಾರ ಒಂದೇ ಅಲ್ಲ ಎಲ್ಲಾ ರಾಜ್ಯ ಸರಕಾರಗಳೂ ಕೂಡ ತಮ್ಮ ತಮ್ಮ

ಪ್ಲಾನ್ ಸೈಜ್ ಅನ್ನು ಕಡಿಮೆ ಮಾಡಿದ್ದಾರೆ. ಅದಕ್ಕೆ ಅನೇಕ ಕಾರಣಗಳು ಇವೆ. ಉತ್ತರ ಪ್ರದೇಶ ದಲ್ಲಿ ೫೦೦ ಕೋಟಿ ಕಡಿಮೆ ಮಾಡಿದ್ದಾರೆ. ಗುಜರಾತಿನಲ್ಲಿ ಕಡಿಮೆ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೇಂದ್ರ ಸರಕಾರವನ್ನು ದೂರುವುದನ್ನು ಮುಂದುವರಿಸಿ ಕೊಂಡು ಹೋಗಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಂಧ್ರ ಸರಕಾರ ಕೂಡ ಕಡಿಮೆ ಮಾಡಿದೆ. ಕರ್ನಾಟಕ ಒಂದೇ ಅಲ್ಲ, ಎಲ್ಲಾ ರಾಜ್ಯಗಳು ಕಡಿಮೆ ಮಾಡಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೫೦ ಕೋಟಿ ಇಟ್ಟು ೪೦ ಕೋಟಿ ಬಿಡುಗಡೆ ಮಾಡಿದ್ದರೆ ಒಪ್ಪಿಕೊಳ್ಳುತ್ತೇವೆ ಆದರೆ ೮೫ ಕೋಟಿ ಇಟ್ಟು ೪೨ ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೀರಿ ಎಂದರೆ ೫೦ ಪರ್ಸೆಂಟ್‌ಗಿಂತ ಕಡಿಮೆಯಾಗುತ್ತದೆ. What moral right you have got ? ಒಂದು ಕಡೆ ಇಷ್ಟು ಹಣವನ್ನು ಇಟ್ಟಿದ್ದೇವೆಂದು ಹೇಳುವುದು ಇನ್ನೊಂದು ಕಡೆ ಹಣವನ್ನು ಬಿಡುಗಡೆ ಮಾಡುವುದಿಲ್ಲ, ಸರಕಾರ ಆ ಕೆಲಸ ಮಾಡಿದೆ ಈ ಕೆಲಸ ಮಾಡಿದೆ ಎಂದು ಊರ ತುಂಬಾ ಪ್ರಚಾರ ಮಾಡಿ ಕೊಂಡು ಪುಸ್ತಕಗಳನ್ನು ಪಬ್ಲಿಸಿಟಿ ಮಾಡಿಕೊಂಡು ಇರುವಂತಹ ಸರಕಾರವೇನಾದರು ಇದ್ದರೆ ಇಂತಹ ಸರಕಾರ ಬೇರೆ ಯಾವುದೂ ಇಲ್ಲ. ಇಲ್ಲಿಂದ ಕಾಶ್ಮೀರ, ಕನ್ಯಾಕುಮಾರಿಯವರೆಗೂ ಜನತಾ ಸರಕಾರದ ಅಚೀವ್‌ಮೆಂಟ್ ಹೋಗಿದ್ದೇ ಹೋಗಿದ್ದು. ರೈತರಿಗೆ ಮೋಸ ಮಾಡಿ ಆಳಬೇಕೆಂದು ಇದ್ದರೆ ಬಹಳ ದಿವಸವಿರುವುದಿಲ್ಲ. ಇದು ಬಹಳ ದಿವಸ ಹೋಗುವುದಿಲ್ಲ. ಒಂದು ಕಡೆ ಈ ರೀತಿಯಾದ ಮೋಸ ನಡೆಯುತ್ತಿದೆ ಇನ್ನೊಂದು ಕಡೆ ಸರಿಯಾದಂತಹ ಕೆಲಸದ ವ್ಯವಸ್ಥೆಯಿಲ್ಲ. ಇನ್ನು ಬೆಣ್ಣೆ ತೊರೆ ಪ್ರಾಜೆಕ್ಟ್ ಏನು ಇದೆ ಅದಕ್ಕೆ ೨,೧೦,೦೦೦ ಇಟ್ಟಿದ್ದೀರ. ಆದರೆ ಚರ್ಚು ಮಾಡಿದ್ದು ೨ ಕೋಟಿ ೧೧ ಲಕ್ಷರೂಪಾಯಿಗಳು. ಈ ವರ್ಷ ೪ ಕೋಟಿ ೨೫ ಲಕ್ಷ ಇಟ್ಟಿದ್ದಾರೆ. ಈ ರೀತಿ ವರ್ಷೇ ವರ್ಷೇ ಆಗುತ್ತಿದೆ. ಈ ಪ್ರಾಜೆಕ್ಟ್ ಅನ್ನು ಕಂಪ್ಲೀಟ್ ಮಾಡಬೇಕಾದರೆ ಕನಿಷ್ಟ ೧೦ ಕೋಟಿ ರೂಪಾಯಿ ಖರ್ಚು ಮಾಡಿದರೆ ೫-೬ ವರ್ಷಗಳಲ್ಲಿ ಪೂರ್ತಿಯಾಗುತ್ತದೆ. ಇಲ್ಲದಿದ್ದರೆ ಇದು ಆಗುವುದಿಲ್ಲ ಬೆಣ್ಣೆ ತೊರೆ ಪ್ರಾಜೆಕ್ಟ್ ಗುಲ್ಬರ್ಗಾದ ನೀರಾವರಿ ಯೋಜನೆಗೆ ಬೇಕು ಅತಿಮುಖ್ಯವಾಗಿ ಬೇಕಾಗುತ್ತದೆ. ಇದರಿಂದ ಇರಿಗೇಷನ್ ಕೂಡ ಆಗುತ್ತದೆ ಇದು ಮಲ್ಟಿ ಪರ್‌ಪಸ್ ಸ್ಕೀಮ್. ಹೋದ ಸಲ ಇದಕ್ಕೆ ೨ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಈ ಸಲ ಡಬಲ್ ಮಾಡಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಬೆಣ್ಣೆ ತೊರೆ ಪ್ರಾಜೆಕ್ಟ್ ನಾವು ಅಧಿಕಾರಕ್ಕೆ ಬರುವವರೆಗೆ ನಿದ್ರೆ ಮಾಡುತ್ತಿತ್ತು. ಆನಂದವಾದ ನಿದ್ದೆ ಗಾಢವಾದ ನಿದ್ರೆ ಮಾಡಿದ್ದು ೮೩ ರಿಂದ ಈಚೆಗೆ ಅದು ಎದ್ದಿದೆ. ನಾವು ೨ ಕೋಟಿ ಇಲ್ಲವೇ ೫೦ ಲಕ್ಷ ಇಟ್ಟಿದ್ದೇವೆಯೋ ಅದು ಬೇರೆ ಪ್ರಶ್ನೆ. ೮ ವರ್ಷಗಳ ಕಾಲ ಗಾಢ ವಾದ ನಿದ್ರೆಯಲ್ಲಿತ್ತು, ರಾಮಾಯಣದ ಕುಂಭಕರ್ಣನು ನಿದ್ದೆ ಮಾಡಿದ ಹಾಗೆ ಮಾಡುತ್ತಿತ್ತು.

೨-೩೦ ಪಿ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಆ ರೀತಿಯಲ್ಲಿ ಅದನ್ನು ಹೇಳಿದರೆ ಇವರು ಈ ರೀತಿ ಹೇಳುವುದು. ಹಾಗಾದರೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ನಾನು ಹೇಳುತ್ತೇನೆ, ಅನೇಕ ಪ್ರಾಜೆಕ್ಟ್ ಗಳನ್ನು ನಾವು ಮಾಡಿದ್ದು ನೀವು ಮಾಡುತ್ತಿದ್ದೀರಾ ? every government has to give priorities.

ಶ್ರೀ ಹೆಚ್. ಡಿ. ದೇವೇಗೌಡ.—ಖರ್ಗೆಯವರಿಗೆ ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ. ಈ ನೀರಾವರಿ ವಿಚಾರದಲ್ಲಿಯೇ ಜಗಳ ತೆಗೆದು ರಾಜೀನಾಮೆ ಕೊಟ್ಟಿರುವ ವಿಷಯ ತಮಗೆ ಗೊತ್ತಿದೆ. ದಯವಿಟ್ಟು ವಾದ ಮಾಡಬೇಡಿ. ನೀವು ಮಾಡಿದ ಯಾವುದಾದರೂ ಪ್ರಾಜೆಕ್ಟನ್ನು ನಾವು ನಿಲ್ಲಿಸಿ ದ್ದೇವೆ ಎಂದು ನೀವು ಹೇಳಿದರೆ ಈ ಸಭೆಯಲ್ಲಿ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ಜೀವ ತುಂಬಿ ಲಾಭ ಆಗತಕ್ಕಂಥ ಕೆಲಸ ಮಾಡ ಬೇಕಲ್ಲ. ಏನೋ ಸುಮ್ಮನೆ ಆಕ್ಸಿಜನ್ ಮೇಲೆ ಮನುಷ್ಯ ಜೀವಂತ ಇರುತ್ತಾನೆಯೇ ? ಏನೋ ಒಬ್ಬ ಖಾಯಿಲೆ ಮನುಷ್ಯ ಇನ್ನೇನು ಸತ್ತುಹೋಗುತ್ತಾನೆ ಎನ್ನುವ ಸಮಯದಲ್ಲಿ ಆ ಸಮಯದಲ್ಲಿ ಆಕ್ಸಿಜ ನನ್ನು ಕೊಟ್ಟು ಸ್ವಲ್ಪ ಹೊತ್ತು ಜೀವಂತ ಇಡಬಹುದು. ಆದರೆ ಇಲ್ಲಿ ಆ ರೀತಿ ಮಾಡುವುದು ಬೇಡ. ಈಗ ಆ ರೀತಿ ಆಗಿದೆ. ಲೋಯರ್ ಮುಲ್ಲಾಮಾರಿ ಕೂಡಾ ಮಲಗಿತ್ತಲ್ಲಾ, ಅದಕ್ಕೆ ಏನು ಕೊಟ್ಟಿ

ದ್ದೀರಿ ? ಅಪ್ಪರ್ ಕೃಷ್ಣ ಬೆಣ್ಣೆತೊರೆ ಲೋಯರ್ ಮುಲ್ಲಾಮಾರಿ ಎಲ್ಲೋ ಏನೋ ಕೊಟ್ಟಿದ್ದೇವೆಂದು ಈ ರೀತಿ ಕೊಟ್ಟಿದ್ದೇವೆಂದು ಹೇಳಿ ಶಹಭಾಷ್‌ಗಿರಿಯನ್ನು ಪಡೆದುಕೊಳ್ಳಬೇಡಿ. ನನ್ನ ವಾದ ಏನೆಂದರೆ ನೀವು ಮೈನರ್ ನೀರಾವರಿಗೆ ಎಷ್ಟು ಆದ್ಯತೆಯನ್ನು ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಪ್ರಾಜೆಕ್ಟ್ ವೈಸ್ ಬಗ್ಗೆ ಹೇಳಿದಿರಿ. ಕಾರಂಜಕ್ಕೆ ನೀವು ಹತ್ತು ವರ್ಷದಿಂದ ಏನು ಕೊಟ್ಟಿದ್ದೀರಿ. ಈಗ ೩–೪ ವರ್ಷದಿಂದ ಏನು ಕೊಟ್ಟಿದ್ದೇವೆ. ಹಾಗೆಯೇ ಬೆಣ್ಣೆತೊರೆ, ಅಮರ್ಜಾಗೆ ಎಷ್ಟು ಕೊಟ್ಟಿದ್ದೀರಿ, ಈಗ ಎಷ್ಟು ಕೊಟ್ಟಿದ್ದೇವೆ ಅದನ್ನು ನೀವು ನೋಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಕೊಟ್ಟಿಲ್ಲಾ. ಈಗ ಇಡೀ ಪುಸ್ತಕವನ್ನು ನೋಡ ಬೇಕಾಗುತ್ತದೆ. ಅಧ್ಯಕ್ಷರು ನನಗೆ ಪರ್ಮಿಷನ್ ಕೊಟ್ಟರೆ ಇಡೀ ಪುಸ್ತಕವನ್ನು ಓದುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವ ರೀತಿ ನೀವು ಹೇಳಬೇಕೋ ಆ ರೀತಿ ಹೇಳಿ. ಆದರೆ ಬೆಣ್ಣೆತೊರೆ ಪ್ರಾಜೆಕ್ಟ್ ಪ್ರಾರಂಭವಾದದ್ದೇ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಮಾತು ಹೇಳಿದರೆ ನಿಮಗೆ ಸಿಟ್ಟು ಬರಬಾರದು. ಪ್ರೊಪೋಸಲ್ ನಲ್ಲಿ ಅದೇ ರೀತಿಯಾಗಿರತಕ್ಕಂಥ ಪ್ರಾಜೆಕ್ಟ್‌ಗಳಿಗೆ ಹೆಚ್ಚು ಕೊಟ್ಟಿಲ್ಲ. ನಿಮಗೆ ಬೇಕಾಗಿ ರತಕ್ಕಂಥ ಪ್ರಾಜೆಕ್ಟ್‌ಗಳಿಗೆ ಹೆಚ್ಚಿಗೆ ಹಣವನ್ನು ನೀವು ಮಾಡಿಕೊಂಡಿಲ್ಲವೇ ? ಅವುಗಳಿಗೆ ಏಕೆ ಕೊಟ್ಟಿರಿ ? ಆದ್ದರಿಂದ ಅದನ್ನು ದಯವಿಟ್ಟು ಸಮರ್ಥಿಸಿಕೊಳ್ಳಬೇಡಿ ? ಇವತ್ತು ಬೆಣ್ಣೆತೊರೆ ಯಾಗಲೀ, ಅಮರ್ಜಾ ಪ್ರಾಜೆಕ್ಟ್ ಕೆಲಸ ಆಗಲೀ ಸರಿಯಾಗಿ ಆಗಿಲ್ಲ. ಇವತ್ತು ಅಮರ್ಜಾ ಪ್ರಾಜೆಕ್ಟ್ ಹೆಸರು ಹೇಳಿ ಕಬ್ಬು ಬೆಳೆಯುತ್ತಾರೆ ಎಂದು ಹೇಳಿ ಅಲ್ಲಿ ಕಾರ್ಖಾನೆ ಸ್ಥಾಪನೆಯಾಯಿತು. ಆದರೆ ಅಲ್ಲಿ ಕಬ್ಬೇ ಇಲ್ಲ. ಪ್ರಾಜೆಕ್ಟನ್ನೇ ಕಪ್ಲೀಟ್ ಮಾಡದೇ ಹೋದರೆ ಅಲ್ಲಿಗೆ ಕಬ್ಬು ಎಲ್ಲಿಂದ ಬರಬೇಕು ? ಅದನ್ನು ಕಂಪ್ಲೀಟ್ ಮಾಡಬೇಕಾಗುತ್ತದೆ. ಇದಕ್ಕೆ ನೀವು ಪ್ರಾವಿಷನ್ ಮಾಡಿದ್ದು ೨೫೦ ಕೋಟಿ ರೂಪಾಯಿ, ಅಂದರೆ ಎರಡೂವರೆ ಕೋಟಿ ರೂಪಾಯಿ. ಅದನ್ನು ಮುಗಿಸುವುದು ಯಾವಾಗ ? ಅದಕ್ಕೆ ಬೇಕಾಗಿರತಕ್ಕಂಥ ಹಣ ಎಂದರೆ ಸುಮಾರು ಆರು ಕೋಟಿ ರೂಪಾಯಿ ಬೇಕು. ಅದನ್ನು ಎರಡು ವರ್ಷದಲ್ಲಿಯೇ ಮುಗಿಸಬಹುದಲ್ಲಾ. ಸುಮಾರು ಮೂರು––ಮೂರುವರೆ ಕೋಟಿ ರೂಪಾಯಿ ಕೊಟ್ಟರೆ ಎರಡು ವರ್ಷದಲ್ಲಿ ಮುಗಿದುಹೋಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಅಮರ್ಜಾಗೆ ಆರು ಕೋಟಿ ರೂಪಾಯಿ ಸಾಕು ಎಂದು ಹೇಳು ತ್ತಾರೆ. ಆ ಹಣದಲ್ಲಿ ಕೇವಲ ಪ್ರಾರಂಭಿಕ ಕೆಲಸವನ್ನು ಮಾತ್ರ ಮುಗಿಸಬಹುದು ಎಂದು ಕಾಣುತ್ತದೆ. ನಾನು ಮತ್ತೊಮ್ಮೆ ಅವರ ಗಮನಕ್ಕೆ ತರುತ್ತೇನೆ. ೧೯೭೨ ರಲ್ಲಿ ಬರಗಾಲ ಕಾಮಗಾರಿಯಲ್ಲಿ ತೆಗೆದು ಕೊಂಡಂಥ ಯೋಜನೆಗಳಿವು. ಅಪ್ಪರ್ ಮುಲ್ಲಾಮಾರಿ, ಲೋಯರ್ ಮುಲ್ಲಾಮಾರಿ, ಅಮರ್ಜಾ, ಬೆಣ್ಣೆತೋರೆ, ಅವುಗಳು ಏನೇ ಇರಲಿ, ಮಸ್ಕಿನಾಲಾ ಇರಲಿ, ಅದು ಯಾವುದೇ ಇರಲಿ, ಅವುಗಳನ್ನು ತೆಗೆದುಕೊಂಡಾಗ ಆಗ ಶ್ರೀಮಾನ್ ದೇವರಾಜ ಅರಸ್ ಮುಖ್ಯಮಂತ್ರಿಗಳಾಗಿದ್ದಾಗ ಕೆ. ಹೆಚ್. ಪಾಟೀಲರು ಮಂತ್ರಿಗಳು ಆಗಿದ್ದರು. ಆಗ ಬರಗಾಲ ಬಂದಿದ್ದು ಹೋಯಿತು, ಆದರೆ ಈ ಯೋಜನೆ ಗಳು ಮಾತ್ರ ಹಾಗೆಯೇ ನಿಂತುಹೋದವು. ಅಮರ್ಜಾಗೆ ೧೯೮೪ ರಲ್ಲಿ ಟೆಂಡರ್ ಕರೆದದ್ದು ಸ್ಪಿಲ್‌ವೇ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ಕೋಟಿಯೋ ಒಂದುವರೆ ಕೋಟಿ ರೂಪಾಯಿಯೋ ಅಲ್ಲಿ ಪ್ರೊವೈಡ್ ಮಾಡಿದ್ದೆವು. ಅದಾದ ಮೇಲೆ ಬೆಣ್ಣೆತೊರೆ ಯೋಜನೆಯಿಂದ ನೀರು ಕೊಡಬೇಕು ಎಂದು ಹೇಳಿ ಆ ಕೆಲಸ ಪ್ರಾರಂಭ ಮಾಡಿದೆವು. ಅಪ್ಪರ್ ಮುಲ್ಲಾಮಾರಿ ಈಗ ಆಲ್‌ಮೋಸ್ಟ್ ಕಂಪ್ಲೀ ಷನ್ ಸ್ಟೇಜ್‌ನಲ್ಲಿದೆ. ಇನ್ನು ಡ್ಯಾಮ್ ಪೋರ್ಷನ್, ಡಿಸ್ಟ್ರಿಬ್ಯೂಷನ್ ಸಿಸ್ಟಂ ಇರಬಹುದು. ಕಾರಂಜಾಗೆ ಸುಮಾರು ಒಂದಕ್ಕೆ ಮೂರು ಪಟ್ಟು ಅಷ್ಟು ಹಣವನ್ನು ಕೊಡಬೇಕು. ಇವುಗಳಿಗೆ ಹೆಚ್ಚಿಗೆ ಹಣ ಬೇಕು, ನಿಜ. ಒಪ್ಪಿಕೊಳ್ಳುತ್ತೇನೆ. ಈಗ ನಾವು ೧೯೮೮ ರಲ್ಲಿದ್ದೇವೆ. ಎರಡು ಸಾವಿರ ಇಸವಿಯೊಳ ಗಾಗಿ ನಾವು ನೀರಿನ ಪೂರ್ಣ ಉಪಯೋಗ ಮಾಡಿಕೊಳ್ಳಲಿಕ್ಕೆ ಏನಾದರೂ ಸ್ವಲ್ಪ ಸಲಹೆಯನ್ನು ಕೊಡಿ, ಅದು ಹೇಗೆ ಎಂದು ಹೇಳಿ. ಟೀಕೆ ಮಾಡಿ ಸಂತೋಷ. ಅದರ ಜೊತೆಗೆ ಸಲಹೆ ಕೊಡಿ, ಹೀಗೆ ಮಾಡ ಬೇಕು, ಏನು ಮಾಡಬೇಕು, ಎಂತು ಮಾಡಬೇಕು ಎಂಬ ಬಗ್ಗೆ ಸಲಹೆಯನ್ನು ಕೊಡಿ, ಸ್ವಲ್ಪ ಐಡಿಯಾಸ್‌ನ್ನು ಕೊಟ್ಟರೆ ತೆಗೆದುಕೊಳ್ಳುತ್ತೇವೆ.

ಕಾಂಗ್ರೆಸ್ ಸರ್ಕಾರ ಇದ್ದಾಗ ಆಗಿದ್ದುದು, ನಾನು ಎಂದೂ ಪಕ್ಷದ ಬಗ್ಗೆ ಮಾತನಾಡುವುದಿಲ್ಲ, ಅವಿಭಾಜ್ಯ ಕಾಂಗ್ರೆಸ್‌ನಲ್ಲಿ ರೆಸಲ್ಯೂಷನ್ ಠರಾವು ಆಯಿತು. ಎಂ. ಆರ್. ಪಾಟೀಲ್ ಈ ಜಾಗದಲ್ಲಿ ಕುಳಿತಿದ್ದರು. The entire Upper Krishna project should be funded by the Govt. of India ಎಂದು ಒಕ್ಕೊರಲಿನಿಂದ ಸಭೆಯಲ್ಲಿ ತೀರ್ಮಾನ ಮಾಡಿದರು. ಆದರೆ ಕೇಂದ್ರ ಸರ್ಕಾರದವರು ಒಪ್ಪಿಕೊಂಡರಾ? ಆದ್ದರಿಂದ ನನ್ನ ಮುಂದೆ ಇರುವ ಪ್ರಶ್ನೆ, ಬಹುಶಃ ನೀವು ಹೇಳಿದಿರಿ, ಬಹಳ ಜನರನ್ನು ಕಳುಹಿಸಿಕೊಟ್ಟಿರಿ ಎಂದು ನಾನು ಅಲ್ಲಿ ಕುಳಿತರೆ ನಿಮಗಿಂತ ಚೆನ್ನಾಗಿ ಮಾತನಾಡುತ್ತೇನೆ ನನಗೆ ಇಲ್ಲಿಯೇ ಕುಳಿತುಕೊಳ್ಳಲು ವ್ಯಾಮೋಹ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.— ನೀವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಏಕೆ ಅಷ್ಟು ಆಸಕ್ತಿ ವಹಿಸುತ್ತೀರಿ, ಬರಬೇಕಾದರೆ ಈಗಲೇ ಬಂದು ಬಿಡಿ, ನಾವು ಅಲ್ಲಿ ಹೋಗುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ.— ೬೪ನೇ ಇಸವಿಯಲ್ಲಿ ಈ ವಿಚಾರದಲ್ಲಿ ಖಾಸಗಿ ನಿರ್ಣಯವನ್ನು ಮಂಡಿಸಿ ನಾನು ತಮ್ಮ ಪಕ್ಕದಲ್ಲಿಯೇ ಕುಳಿತುಕೊಂಡು ಮಾತನಾಡಿದ್ದೆ, ನ್ಯಾಯವಾಗಿ ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಹೇಳಿದ್ದೀರಿ. ಅದೇ ರೀತಿ ನಾನು ಹೋರಾಟ ಮಾಡಿದ್ದೇನೆ. ಅದೇ ರೀತಿ ಅಧಿಕಾರ ಬಿಟ್ಟು ಕುಳಿತಿದ್ದೇನೆ. ನನ್ನ ಪಕ್ಷದ ಪ್ರಶ್ನೆ ಅಲ್ಲ ಇದು. ಇದು ದೇಶದ ಪ್ರಶ್ನೆ, ರಾಜ್ಯದ ಪ್ರಶ್ನೆ. ಆದ್ದರಿಂದ ಪಕ್ಷ ಮರೆತು ಮಾತನಾಡಿ ಎಂದು ಹೇಳುತ್ತೇನೆ. ಹೇಗೆ ಸಂಪನ್ಮೂಲಗಳನ್ನು ರೂಡಿಸಿಕೊಳ್ಳಬೇಕು ಎಂದು ಸಲಹೆ ಕೊಡಿ ಇದಕ್ಕೆ ಕೇಂದ್ರ ಸರ್ಕಾರದ ನೀತಿಯೂ ಕಾರಣ ಇದೆ. ೧ ಕೋಟಿ ೮೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ೭ನೇ ಪ್ಲಾನ್‌ನಲ್ಲಿ ೧೬ ಕೋಟಿ ರೂಪಾಯಿಗಳನ್ನು ನೀರಾವರಿಗೆ ಇಟ್ಟಿದ್ದೇವೆ. ರಾಮಕೃಷ್ಣ ಹೆಗಡೆ ಅವರು ಅಧಿಕಾರದಲ್ಲಿರಲಿ ಯಾರೇ ಇರಲಿ "are we really helping the farming community today, that is the issue"

(ಶ್ರೀ ಡಿ. ಟಿ. ಜಯಕುಮಾರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಾವು ನಿಮ್ಮನ್ನು ಬೈಯುವುದು ಬೇಡ. ನೀವೂ ನಮ್ಮನ್ನು ಬೈಯುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆಯಿತು, ನೋಡೋಣ, ನೀವೂ ಆರಿಸಿ ಕಳಿಸಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ — ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳುವ ಬಗ್ಗೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,— ಅದನ್ನು ಮೊದಲೇ ಕೊಟ್ಟಿದ್ದೀರಿ. ಕೊಟ್ಟಿದ್ದು ನೋಡೋಣ. ಆಮೇಲೆ ಸಹಾಯ ಹೇಗೆ ಮಾಡಬೇಕು ಎಂಬುದನ್ನೂ ನೋಡಿ ಮಾಡೋಣ.

ಶ್ರೀ ಹೆಚ್. ಡಿ. ದೇವೇಗೌಡ.— ಮನೆಯಲ್ಲಿ ಅಕ್ಕಿ, ಕಾಯಿ ಪಲ್ಯ ಇಲ್ಲದೇ ಹೋದರೆ ಅಡಿಗೆ ಹೇಗೆ ಮಾಡಿ ಹಾಕುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ದೇವೇಗೌಡರೇ, ನಿಮ್ಮ ಸಲಹೆಗೆ ಸರ್ಕಾರವೇ ಒಪ್ಪುವುದಿಲ್ಲವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನು ತಾಳಿ ಭಾಗ್ಯ ಯೋಜನೆ ಬಗ್ಗೆ, ಟೂರ್ ಮಾಡಿದ್ದರ ಬಗ್ಗೆ, ಕಾಶಿಯಿಂದ ಕನ್ಯಾಕುಮಾರಿವರೆಗೆ ನಿಮ್ಮ ಲಿಟರೇಚರ್ ಪಬ್ಲಿಶ್ ಮಾಡಿ ತಮ್ಮ ಫೋಟೋ ಹಾಕಿಕೊಂಡು ಓಡಾಡುವುದಕ್ಕೆ ದುಡ್ಡು ಇರುತ್ತದೆ, ಇದಕ್ಕೆ ಇಲ್ಲ.

ಛೇರ್ಮನ್.— ದಯವಿಟ್ಟು ವಿಷಯಕ್ಕೆ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹೀಗೆ ಆದರೆ ವಿಷಯ ಡೈವರ್ಟ್ ಆಗುತ್ತದೆ.

ಛೇರ್ಮನ್.— ದಯವಿಟ್ಟು ವಿಷಯಕ್ಕೆ ಬನ್ನಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಟೀಕೆ ಮಾಡಿ, ಸಲಹೆ ಕೊಡಿ, ನಾವು ಬೇಡ ಅನ್ನುವುದಿಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ನಿಮ್ಮಷ್ಟು ಎಕ್ಸ್‌ಪರ್ಟ್ ಅಲ್ಲ. ಮಾತನಾಡುವುದಕ್ಕೆ

ಶ್ರೀ ಎಸ್. ಆರ್. ಬೊಮ್ಮಾಯಿ.— ಇರಿಗೇಷನ್ ಬಗ್ಗೆ ಸಲಹೆ ಕೊಡಿ, ಆದರೆ ತಾಳಿ ಭಾಗ್ಯ ಯೋಜನೆ ಬಗ್ಗೆ ಮಾತನಾಡುವುದು ಬೇಡ. ಯಾವುದನ್ನು ಹೇಳಬೇಕೋ ಅದನ್ನು ಹೇಳಬೇಕು. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಸಲಹೆ ಕೊಡಿ. ಅದು ಬಿಟ್ಟು ಬೇರೆ ವಿಷಯ ಹೇಳಿದರೆ ನಾನೂ ಹೇಳಬೇಕಾಗುತ್ತದೆ. ಶ್ರೀ ರಾಜೀವ್‌ಗಾಂಧಿಯವರ ಹಾಲಿಡೇ ಖರ್ಚು ಎಷ್ಟು ಆಗುತ್ತದೆ ? ಆ ಖರ್ಚಿನಲ್ಲಿ ಒಂದು ಇರಿಗೇಷನ್ ಕೆಲಸ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹೆಗಡೆಯವರನ್ನು ಪರ್ಮನೆಂಟ್ ಆಗಿ ಡಿಫೆಂಡ್ ಮಾಡುತ್ತಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ — ರಾಜೀವ್ ಗಾಂಧಿಯವರ ಹಾಲಿಡೇ ಖರ್ಚು ಏನಿದೆ, ಅದರಲ್ಲಿ ಒಂದು ಇರಿಗೇಷನ್ ಕೆಲಸ ಆಗುತ್ತದೆ.

SRI M. MALLIKARJUNA KHARGE.—I am sorry, I never said. ನಾನು ಇಲ್ಲಿಯವರೆಗೆ ಸಂಮ್ಯಮನೆ ಇದ್ದೆ. I am told that unjustifiably you have distributed the amount. You are not giving priority to the projects which are ready to come-up.

ಛೇರ್ಮನ್.—ಮಾನ್ಯ ಖರ್ಗೆಯವರೇ, ಮಂತ್ರಿಗಳು ಮಾತನಾಡುವುದಕ್ಕೆ ಬಿಡಿ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇವರನ್ನು ರಾಜ್ಯ ಸಭೆಗೆ ಮುಂದಿನ ಸಲ ಆರಿಸಿ ಕಳಿಸಿ. ಶ್ರೀ ರಾಜೀವ್‌ಗಾಂಧಿ ವಿರುದ್ಧ ಮಾತನಾಡುವುದಕ್ಕೆ ಇವರನ್ನು ಮುಂದಿನ ಸಲ ಪಾರ್ಲಿಮೆಂಟಿಗೆ ಕಳಿಸಿ. ಇವರಿಗೆ ಪ್ರಮೋಷನ್ ಕೊಟ್ಟರೆ ರಾಜೀವ್‌ಗಾಂಧಿ ವಿರುದ್ಧ ಮಾತನಾಡಿ ಬರುತ್ತಾರೆ,

ಛೇರ್ಮನ್.—ದಯವಿಟ್ಟು ವಿಷಯಕ್ಕೆ ಬನ್ನಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಎಷ್ಟರ ಮಟ್ಟಿಗೆ ಸಾಧನೆಯನ್ನು ಮಾಡಿದ್ದೀರಿ...

ಶ್ರೀ ಹೆಚ್. ಡಿ. ದೇವೇಗೌಡ.—ಅಲ್ಲಿ ಪಾರ್ಲಿಮೆಂಟಿನಲ್ಲಿ ರಾಜೀವ್‌ಗಾಂಧಿ ವಿರುದ್ಧ ಮಾತನಾಡುವುದು ಬೇಕಾಗಿಲ್ಲ. ನೀರಾವರಿ ಕಾನ್‌ಫರೆನ್ಸ್‌ನಲ್ಲಿ ರಾಜೀವ್‌ಗಾಂಧಿಯವರೂ ಇದ್ದರು, ಅಲ್ಲೂ ಕೂಡ ನಾನು ವಿಷಯವನ್ನು ಪ್ರತಿಪಾದನೆ ಮಾಡಿದ್ದೇನೆ. ಅಲ್ಲಿ ಹಲವಾರು ಕೇಂದ್ರ ಸರ್ಕಾರದ ಮಂತ್ರಿಗಳು ಸಭೆಯಲ್ಲಿ ಇದ್ದರು. ಅಲ್ಲಿಯೂ ನಾನು ಮಾತನಾಡಿದ್ದೇನೆ. ಅವರು ಕೇಳಿಸಿಕೊಂಡಿಲ್ಲವೆಂದು ಕಾಣುತ್ತದೆ. ನಮಗೆ ರಾಜೀವ್‌ಗಾಂಧಿ ಹತ್ತಿರ ಮಾತನಾಡುವ ಅವಕಾಶ ಸಿಕ್ಕಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿ ನಾವು ಯಾರ ಮಾತನ್ನು ಕೇಳಬೇಕಾಗಿದೆ. ಹೆಗಡೆಯವರು ನೀರಾವರಿ ವಿಷಯದಲ್ಲಿ ಮಾತನಾಡುತ್ತಾ ಬರೀ ನೀರಾವರಿಗೆ ಹಣ ಕೊಟ್ಟರೆ ಸಾಹುಕಾರರಿಗೆ ಅನುಕೂಲವಾಗುತ್ತದೆ. ಸಮಾಜದಲ್ಲಿರತಕ್ಕ ದೀನ ದಲಿತರನ್ನು ಉದ್ಧಾರ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ನೀವು ಹೇಳುತ್ತೀರಿ, ಸಲಹೆ ಕೊಡಿ ಎಂದು. ಸಲಹೆ ಕೊಟ್ಟರೆ ದೇವೇಗೌಡರು ಹೇಳುತ್ತಾರೆ. ಅದರಲ್ಲಿ ಗಿಮಿಕ್ಸ್ ವಿಚಾರಗಳು ಇರಕೂಡದು ಎಂದು. ನಮ್ಮ ಸಲಹೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ? ನಮ್ಮ ಸಲಹೆಗಳನ್ನು ನೀವು ಕೇಳುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ನೀರಾವರಿ ಬಗ್ಗೆ ಚರ್ಚೆ ನಡೆಯುವಾಗ ರಚನಾತ್ಮಕವಾದಂಥ ಸಲಹೆಗಳನ್ನು ಕೊಡಿ ಎಂದು ಮಾನ್ಯ ದೇವೇಗೌಡರು ಹೇಳಿದ್ದಾರೆ. ನಿಮ್ಮಿಂದ ನಮಗೆ ಸಲಹೆಗಳು ಬೇಕಾಗಿದೆ. ಇಲ್ಲಿ ಗಿಮಿಕ್ಸ್ ವಿಚಾರಗಳನ್ನು ಪ್ರಸ್ತಾಪ ಮಾಡುವುದು ಬೇಡ. ನಾವು ಆ ಕಡೆ ಇದ್ದಾಗ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೇವೆ. ಸಲಹೆಗಳನ್ನು ಕೊಡುವಂತಹ ಸಾಮರ್ಥ್ಯ ತಮಗಿದೆ. ಆದ್ದರಿಂದ ಸಲಹೆಗಳನ್ನು ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೆಲವು ಪ್ರಾಜೆಕ್ಟ್‌ಗಳನ್ನು ನಾವು ತಕ್ಷಣ ಮುಗಿಸಬೇಕು. ಇಲ್ಲದಿದ್ದರೆ ನೀರಾವರಿ ಯೋಜನೆಗಳ ಆಧಾರದ ಮೇಲೆ ೧೦-೧೨ ಕೋಟಿ ರೂಪಾಯಿಗಳ ಬಂಡವಾಳದಿಂದ ಪ್ರಾರಂಭ ಮಾಡಿದಂಥ ಕಾರ್ಖಾನೆಗಳು ಸಹ ನಷ್ಟ ಅನುಭವಿಸಬೇಕಾಗುತ್ತದೆ. ಕಬ್ಬನ್ನೇ ಬೆಳೆಯದಿದ್ದರೆ ಸಕ್ಕರೆ ಕಾರ್ಖಾನೆಯಿಂದ ಏನು ಪ್ರಯೋಜನ ? ಈ ಕಾರ್ಖಾನೆಗಳಲ್ಲಿಯೂ ಸಹ ಸರ್ಕಾರದ ಹಣ ಇರುತ್ತದೆ. ನೀರಾವರಿ ಯೋಜನೆಗಳ ಕೆಲಸ ಮುಗಿಯದಿದ್ದರೆ ಕಾರ್ಖಾನೆಗಳು ಸಹ

ಲಾಭ ಮಾಡುವುದಿಲ್ಲ. ಆದ್ದರಿಂದ ಇಂತಹ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹಣ ಒದಗಿಸುವ ವ್ಯವಸ್ಥೆ ಮಾಡಬೇಕು, ಅದನ್ನು ಬಿಟ್ಟು ಯೋಜನೆಗಳನ್ನು ಜೀವಂತ ಇಟ್ಟಿದ್ದೇವೆ ಎಂದು ಹೇಳುವುದು ಸರಿಯಲ್ಲ. ಅರ್ಧವಾಗಿರುವ ಕೆಲಸವನ್ನು ಜಾಗ್ರತೆ ಮುಗಿಸಬೇಕು. ಲೋಯರ್ ಮುಲ್ಲಾಮಾರಿ ಯೋಜನೆಯ ಕೆಲಸವನ್ನು ಕೂಡಲೇ ಮುಗಿಸಿದರೆ ಚಿಂಚೋಳಿ ತಾಲ್ಲೂಕ್‌ಗೆ ಮತ್ತು ಗುಲ್ಬರ್ಗ ಜಿಲ್ಲೆಯ ಕೆಲವು ಭಾಗಗಳಿಗೆ ಅನುಕೂಲವಾಗುತ್ತದೆ ಇಂತಹ ಕೆಲಸಕ್ಕೆ ನೀವು ಕೇವಲ ಒಂದು ಕೋಟಿ ೨೫ ಲಕ್ಷ ರೂ.ಗಳನ್ನು ಒದಗಿಸಿದರೆ ಅದರಲ್ಲಿ ಅರ್ಧ ಭಾಗ ಎಸ್ಟಾಬ್ಲಿಷ್‌ಮೆಂಟ್ ಖರ್ಚಿಗೆ ಹೋಗುತ್ತದೆ. ನೀವು ಇಲ್ಲಿ ಎಲ್ಲ ಯೋಜನೆಗಳಿಗೂ ಆದ್ಯತೆ ಕೊಟ್ಟಿದ್ದೇವೆ, ಹಣವನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದರೆ ಹೇಗೆ ? ಇವು ಸಕಾಲದಲ್ಲಿ ಮುಗಿಯಲು ಸಾಧ್ಯವೇ ? ಮುಖ್ಯವಾಗಿ ನೀವು ಇವುಗಳನ್ನು ಮುಗಿಸಲು ಸಾಕಷ್ಟು ಆಸಕ್ತಿ ವಹಿಸಿಲ್ಲ. ಲೋಯರ್‌ಮುಲ್ಲಾಮಾರಿ, ಮಸ್ಕಿನಾಳ, ಮರಾಹಿ ಮುಂತಾದ ಯಾವ ಯೋಜನೆಗಳಿಗೂ ಸಹ ಸಾಕಷ್ಟು ಹಣವನ್ನು ಒದಗಿಸಿಲ್ಲ ಮತ್ತು ಹೆಚ್ಚಿನ ಆದ್ಯತೆಯನ್ನು ನೀವು ಕೊಟ್ಟಿಲ್ಲ. ಮುಖ್ಯವಾಗಿ ನೀರಾವರಿಗೆ ಹೆಚ್ಚಿನ ಹಣವನ್ನು ಒದಗಿಸುವುದರ ಮೂಲಕ ಹಣ ಖರ್ಚು ಮಾಡುವುದನ್ನು ನೀವು ಮರೆತು ಹೋಗಿದ್ದೀರಿ. ಮುಖ್ಯವಾಗಿ ನೀವು ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕು. ಈ ಮಾತನ್ನು ತಮಗೆ ಪದೇ ಪದೇ ಇಲ್ಲಿ ಹೇಳಿದರೆ ಬೇಜಾರಾಗಬಹುದು. ನಮ್ಮ ಕರ್ನಾಟಕ ರಾಜ್ಯದಲ್ಲಿ ೨೬ ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮೈನರ್ ಇರಿಗೇಷನ್ ಟ್ಯಾಂಕ್‌ಗಳಿವೆ. ಇವುಗಳ ಪೈಕಿ ಒಂದು ಅಥವಾ ಒಂದೂವರೆ ಲಕ್ಷದಷ್ಟು ಟ್ಯಾಂಕ್‌ಗಳು ಮಾತ್ರ ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಮತ್ತು ಮುಂಬೈ ಕರ್ನಾಟಕದ ಭಾಗದಲ್ಲಿವೆ. ಇನ್ನುಳಿದವು ಹಳೆಯ ಮೈಸೂರು ಭಾಗದಲ್ಲಿವೆ. ಇವು ಹಳೆ ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಿಸಲ್ಪಟ್ಟಿರಬಹುದು, ಇವುಗಳ ನಿರ್ಮಾಣಕ್ಕೆ ಅನೇಕ ಕಾರಣಗಳು ಇರಬಹುದು ಆದರೆ ಇವುಗಳ ಅಭಿವೃದ್ಧಿ ಸಲುವಾಗಿ ತಾವು ಹೆಚ್ಚಿನ ಆದ್ಯತೆ ಕೊಟ್ಟಿಲ್ಲ. ಈ ದಿಶೆಯಲ್ಲಿ ನೀವು ಹೆಚ್ಚಿನ ಹಣವನ್ನು ಒದಗಿಸಿಲ್ಲ. ನೀವು ಇಲ್ಲಿ ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದಾಗ, ಎಲ್ಲೆಲ್ಲಿ ಹೆಚ್ಚಿನ ಆದ್ಯತೆ ಕೊಟ್ಟು ಕೆಲಸ ಪ್ರಾರಂಭ ಮಾಡಬೇಕೋ ಅಲ್ಲಿ ಕೆಲಸ ಮಾಡಿಲ್ಲ. ವಿಶ್ವಬ್ಯಾಂಕ್‌ನ ನೆರವಿನ ಮೂಲಕ ಸುಮಾರು ೭೫–೭೬ ಟ್ಯಾಂಕ್‌ಗಳ ಕೆಲಸವನ್ನು ಏನು ತೆಗೆದುಕೊಂಡಿದ್ದೀರಿ, ಆ ಕೆಲಸವೂ ಸಹ ಬಹಳ ನಿಧಾನವಾಗಿ ನಡೆಯುತ್ತಿದೆ ೧೯೭೯–೮೦ರಲ್ಲಿ ಈ ಕೆಲಸಗಳಿಗೆ ಎಷ್ಟು ಪ್ರಾತಿನಿಧ್ಯ ಕೊಡಬೇಕಾಗಿತ್ತೋ ಅಷ್ಟು ಕೊಡದಿದ್ದರೂ ಸಹ ಈಗ ಸ್ವಲ್ಪ ಮಟ್ಟಿಗೆ ಕೆಲಸ ನಡೆದಿದೆ. ಆದರೆ ಇಲ್ಲಿ ಹಣವಿದ್ದರೂ ಸಹ ಅದು ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿಲ್ಲ, ಇದಕ್ಕೆ ನೀವು ಕೊಡುವ ಕಾರಣಗಳೆಂದರೆ, ಮಿಷಿನರಿಗಳಿಲ್ಲ, ಇಂಜಿನಿಯರ್‌ಗಳು ಇಲ್ಲ, ಟೆಂಡರ್‌ಗಳು ಬೇಗ ಅಪ್ರೂವ್ ಆಗುವುದಿಲ್ಲ. ಎಂದು, ಇದಕ್ಕಾಗಿಯೇ ಒಬ್ಬ ಸ್ಪೆಷಲ್ ಚೀಫ್–ಇಂಜಿನಿಯರ್ ಇದ್ದರೂ ಕೂಡ...

ಶ್ರೀ ಎಸ್. ಆರ್. ಬೊಮ್ಮಾಯಿ.—ಇದಕ್ಕೆ ವಿಶ್ವಬ್ಯಾಂಕ್‌ನ ಕೆಲವು ಷರತ್ತುಗಳಿವೆ. ಅದರ ಪ್ರಕಾರ ನೋಟಿಫಿಕೇಷನ್ ಹೊರಡಿಸಬೇಕಾಗುತ್ತದೆ, ಟೆಂಡರ್ ಕರೆಯಬೇಕಾಗುತ್ತದೆ. ಹೀಗೆ ಹಲವಾರು ನಿಬಂಧನೆಗಳಿವೆ. ಇಲ್ಲಿ ಅನೇಕ ಟೆಕ್ನಿಕಲ್ ಡಿಫಿಕಲ್ಟೀಸ್ ಇರುವುದರಿಂದ ಕೆಲಸ ಸ್ವಲ್ಪ ತಡವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹೇಳುವುದು ಏನೆಂದರೆ, you take quick steps ಪ್ರತಿ ಸಲ ರಿವ್ಯೂ ಮಾಡಬೇಕು. ಪ್ರತಿ ತಿಂಗಳು ಟಾರ್ಗೆಟ್ ಏನಿದೆ ಅದರ ಮಂತ್ಲೀಸ್ ಟಾರ್ಗೆಟ್ ಕೊಡಿ, ಅದನ್ನು ರಿವ್ಯೂ ಮಾಡಿ. ಯಾರು ಮಾಡುವುದಿಲ್ಲ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. you should take disciplinary action against them. ನೀವು ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡಬೇಕು. ಏನಾದರೂ ಕುಂದುಕೊರತೆ ಇದ್ದರೆ let me recall. ಇಂಥಾದ್ದಕ್ಕೋಸ್ಕರ ಈ ಕೆಲಸ ಆಗಿಲ್ಲ, ಬುಲ್ಡೋಜರ್ ಇರಲಿಲ್ಲ. ನೋಟಿಫಿಕೇಷನ್ ಟೈಂ ಪ್ರಕಾರ ಆಗಲಿಲ್ಲ, ಅದಕ್ಕೋಸ್ಕರ ಕೆಲಸ ಆಗಲಿಲ್ಲ ಎಂದು ಹೇಳಲಿ. ಇದು ಹೇಗಾಗಿದೆಯೆಂದರೆ ಹುಚ್ಚಿ ಲಗ್ನದಲ್ಲಿ ಉಣ್ಣುವವನೇ ಜಾಣ ಎಂಬಂತಾಗಿದೆ. ಹುಚ್ಚಿ ಲಗ್ನದಲ್ಲಿ ಯಾರೂ ಕೇಳುವವರಿಲ್ಲ. ಅವರೇ ಬಡಿಸಿಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಂತ್ಲಿ ರಿವ್ಯೂ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ದರ್ಬಾರಿನಲ್ಲಿ ಹುಚ್ಚಿ ಲಗ್ನದಂತೆ ಆಗಬಾರದು. ಯಾರು ಎಷ್ಟೋ ಆಕ್ಸಿಕ್ಯೂಟ್ ಮಾಡುವುದು ಏನಿದೆ, ಈ ರೀತಿಯಾದರೆ ಖಂಡಿತವಾಗಿ ನಮ್ಮ ನೀರಾವರಿ

ಯೋಜನೆಗಳನ್ನು ಸಂಪೂರ್ಣವಾಗಿ ನೆರವೇರಿಸುವುದಕ್ಕೆ ಆಗುವುದಿಲ್ಲ ಮತ್ತು ನಮ್ಮ ಗುರಿ ಸಾಧಿಸುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ವಿಷಯವೇನೆಂದರೆ ನಿಮ್ಮ ಉಳಿದಂಥ ಪ್ರಾಜೆಕ್ಟ್‌ಗಳಿಗೆ ಅಲಾಟ್‌ಮೆಂಟ್ ಏನಿದೆ, ಈ ವರ್ಷ ಕೊಟ್ಟಿದ್ದು ಅದನ್ನೂ ಕೂಡ ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇದು ಯಾರಿಗೊ ಖುಷಿ ಪಡಿಸುವುದಕ್ಕೋಸ್ಕರ ಮಾಡುವಂಥ ಕೆಲಸವಲ್ಲ. ಮಾನ್ಯ ದೇವೇಗೌಡರು ಹೇಳಿದಹಾಗೆ ಇದು ಎಲ್ಲರಿಗೂ ಸಂಬಂಧಪಟ್ಟಂಥ ವಿಷಯ ಮತ್ತು ನಮ್ಮ ಕಳಕಳಿಯೇನೆಂದರೆ, ಕರ್ನಾಟಕದಲ್ಲಿರತಕ್ಕಂಥ ರೈತರ ಏಳಿಗೆಯಾಗಬೇಕಾದರೆ ಅಥವಾ ನಮ್ಮಲ್ಲಿರತಕ್ಕಂಥ ನೀರಿನ ಸಂಪನ್ಮೂಲವನ್ನು ಸರಿಯಾದ ರೀತಿ ಉಪಯೋಗಮಾಡಿಕೊಳ್ಳಬೇಕಾದರೆ ನಾವು ಹಠ ಹಿಡಿದು ಕೆಲಸ ಮಾಡಬೇಕಾಗುತ್ತದೆ. ಅಥವಾ ಅದಕ್ಕೆ ಇವತ್ತು ರಿಸೋರ್ಸ್‌ಸ್ ಮೊಬಲೈಸೇಷನ್ ಮಾಡಬೇಕಾಗಿದೆ. ನಾವು ಆ ಕಡೆ ಇದ್ದಾಗಲೂ ಕೂಡ ಬೆಟರ್‌ಮೆಂಟ್ ಲೆವಿ ಹಾಕಿರಿ ಎಂದು ಹೇಳಿದಂಥ ಮನುಷ್ಯ ನಾನು. ಆದರೆ ನಾವು ಹೇಳಿದಾಗ ನೀವು ಒಪ್ಪುವುದಿಲ್ಲ, ನೀವು ಹೇಳಿದಾಗ ನಾವು ಒಪ್ಪುವುದಿಲ್ಲ. ಇದಕ್ಕೆ ಯಾರಾದರೂ ಬೋಲ್ಡ್ ಸ್ಟೆಪ್ ತೆಗೆದುಕೊಳ್ಳಬೇಕಾಗುತ್ತದೆ. ಇದೇರೀತಿ ನಡೆಯಲ್ಲಿ, ನಮಗೇನು, ೫ ವರ್ಷ ಇಲ್ಲವೇ ೬ ವರ್ಷ ಮುಖ್ಯಮಂತ್ರಿ ಪದವಿ ಸಿಕ್ಕಿದೆ ಸಾಕು ಅಂದರೆ ನೀವು ಈ ಪ್ರಾಜೆಕ್ಟ್ ಯಾವುದನ್ನೂ ಸಹ ಕಂಪ್ಲೀಟ್ ಮಾಡಲಿಕ್ಕೆ ಆಗುವುದಿಲ್ಲ. ನಾವು ಈ ಪ್ರಾಜೆಕ್ಟ್‌ನ್ನು ಕಂಪ್ಲೀಟ್ ಮಾಡಬೇಕಾದರೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈ ರೀತಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವಾಗ ಅದಕ್ಕೆ ಸಹಾಯಮಾಡಿ, ಎಂದರೆ ರೈತರು ಏಕೆ ಮಾಡುವುದಿಲ್ಲ ? ಅವರನ್ನು ಕರೆಯಿರಿ ಮೀಟಿಂಗ್‌ಮಾಡಿ ಹೇಳಿ. ಒಂದು ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡಬೇಕಾದರೆ ಸಾವಿರ ಕೋಟಿ ರೂಪಾಯಿ ಖರ್ಚು ಆಗುತ್ತದೆ. ಸಾವಿರ ಕೋಟಿ ರೂಪಾಯಿ ಹಣವನ್ನು ಖರ್ಚುಮಾಡಿ ಈ ಪ್ರಾಜೆಕ್ಟ್ ಕಂಪ್ಲೀಟ್ ಮಾಡಬೇಕಾಗುತ್ತದೆ, ಆದ್ದರಿಂದ ದಯವಿಟ್ಟು ನೀವು ಸಹಾಯಮಾಡಿ ಅಂದರೆ ಖಂಡಿತವಾಗಿ ರೈತರು ಮಾಡುತ್ತಾರೆ, ಈಗ ನಾನು ಒಂದು ಕೊಳವೆ ಬಾವಿ ಡ್ರೈಲ್ಯಾಂಡ್‌ನಲ್ಲಿ ತೆಗೆಯಲು ಪಿ. ಎಲ್. ಡಿ. ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುತ್ತೇನೆ, ಅದಕ್ಕೆ ಇಂಟರಸ್ಟ್ ಕೊಡುತ್ತೇನೋ ಇಲ್ಲವೋ, ಪಂಪ್‌ಸೆಟ್ ಹಾಕಿಕೊಳ್ಳಲು ಸಾಲ ತೆಗೆದುಕೊಂಡಿರುತ್ತೇನೆ. ಅದಕ್ಕೆ ಇಂಟರೆಸ್ಟ್ ಕೊಡುತ್ತೇನೋ ಇಲ್ಲವೋ, ಎಲೆಕ್ಟ್ರಿಸಿಟಿ ತೆಗೆದುಕೊಳ್ಳುತ್ತೇನೆ, ಕರೆಂಟ್ ಬಿಲ್ ಕೊಡುತ್ತೇನೋ ಇಲ್ಲವೋ ಇಷ್ಟೆಲ್ಲಾ ನಾನು ಕಟ್ಟುವಾಗ ಇದಕ್ಕೆ ಏಕೆ ಕೊಡಬಾರದು. ನೀವು ಎಲ್ಲಾ ಪ್ರಯತ್ನ ಮಾಡಿದರೂ ಬೆನಿಫಿಟ್ ಎಷ್ಟು ಮಂದಿಗೆ ಸಿಕ್ಕುವುದು ಹಾರ್ಡ್ಲಿ ೪೦ ಪರ್ಸೆಂಟ್. ಇಡೀ ಎಫರ್ಟ್ಸ್ ಹಚ್ಚಿ ಎಲ್ಲಾ ಕೆಲಸ ಮಾಡಿದರೂ ನಮ್ಮಲ್ಲಿ ಇರಿಗೇಟ್ ಆಗುವುದು ಹಾರ್ಡ್ಲಿ ೪೦ ಪರ್ಸೆಂಟ್, ಅಥವಾ ೩೭ ಪರ್ಸೆಂಟ್ ಎಷ್ಟೋ ಬರುತ್ತದೆ. ಇನ್ನು ಉಳಿದಂಥ ಡ್ರೈ ಲ್ಯಾಂಡ್ ಫಾರ್ಮರ್ಸ್ ಎಷ್ಟಿರುತ್ತಾರೆ ಎಂದರೆ ೬೩ ಪರ್ಸೆಂಟ್ ಇರುತ್ತಾರೆ. ಇವರಿಗೆ ನೀವು ಯಾವರೀತಿಯ ಸಹಾಯವನ್ನೂ ಮಾಡುವುದಕ್ಕೆ ಆಗುವುದಿಲ್ಲ. Either they have to depend on well irrigation or tubewells or sprinklers. ಅವರು ಇಷ್ಟು ಕಷ್ಟಪಟ್ಟು ತಮ್ಮ ಪ್ರಯತ್ನ ಮಾಡಿಕೊಳ್ಳುವಾಗ, ಪಿ.ಎಲ್.ಡಿ, ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡರೆ, ನ್ಯಾಷನಲೈಸ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡರೆ, ಷೆಡ್ಯೂಲ್ಡ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡರೆ ಅಲ್ಲಿ ಕಟ್ಟುತ್ತಾರೆ. ಇಲ್ಲಿ ನೀವು ಧೈರ್ಯ ತೋರಿಸಬೇಕು. ಕೆಲವು ವೆಲ್‌ಫೇರ್ ಸ್ಕೀಮ್ಸ್‌ನ್ನು ಬಿಡುವುದಕ್ಕಾಗುವುದಿಲ್ಲ, ಈಗ ಎಜುಕೇಷನ್ ಇರುತ್ತದೆ, ಅಲ್ಲಿ ಶಾಲೆ ತೆಗೆದುಹಾಕುವುದಕ್ಕೆ ಆಗುತ್ತದೆಯೇ? ಇದೇರೀತಿ ಹಿಂದುಳಿದ ಬೋರ್ಡಿಂಗ್ ವಿಧ್ಯಾರ್ಥಿಗಳಿಗೆ ವ್ಯವಸ್ಥೆಯನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಕೆಲವು ಅನಾವಶ್ಯಕವಾದಂತ ಖರ್ಚುಗಳನ್ನು ನಿಲ್ಲಿಸಬಹುದು. ಅನೇಕ ಕಡೆ ತಾವು ಕೊಡತಕ್ಕಂಥ ಸಮ ವಸ್ತ್ರಗಳನ್ನು ಸಾರಾಸಗಟು ಎಲ್ಲಿ ಮಕ್ಕಳೂ ತೊಟ್ಟುಕೊಳ್ಳುವುದಿಲ್ಲ. ಸಾಮಾಜಿಕ ಸಮಾನತೆಯನ್ನು ತರಬೇಕಾದರೆ ಬಡಮಕ್ಕಳಿಗೆ ಸಹಾಯ ಮಾಡಿ. ಆದರೆ ಚೀಫ್ ಪಾಪ್ಯುಲಾರಿಟಿಗೋಸ್ಕರ ಸಹಾಯ ಮಾಡಬೇಡಿ, ನಿಜಲಿಂಗಪ್ಪನವರು ಏನು ಹೇಳಿದ್ದಾರೆ populistic schemes ಎಂದು, ಅದನ್ನು ಗಮನದಟ್ಟುಕೊಂಡು ಕೆಲಸಮಾಡಿ, ನಾವು ಹೇಳುವುದನ್ನು ಕೇಳದೆ ಇದ್ದರೂ ಅವರು ಹೇಳಿರುವುದನ್ನಾದರೂ ನೆನಪಿನಲ್ಲಿಟ್ಟುಕೊಂಡು ಕೆಲಸ ಮಾಡುತ್ತೀರೆಂದು ನಾನು ಭಾವಿಸುತ್ತೇನೆ, ತಾಳೀ ಭಾಗ್ಯದ ಬದಲು ರೈತರ ಭಾಗ್ಯಕ್ಕೋಸ್ಕರ ಪ್ರಯತ್ನಮಾಡಿ, ಹಣ ಸಂಗ್ರಹಿಸಿಯೆಂದು ಅವರು ಹೇಳಿದ್ದಾರೆ. ಅದಕ್ಕೆ ಪ್ರಯತ್ನ ಮಾಡಿ, ನಾನು ಫೈನಾನ್ಸ್ ವಿಚಾರ ಬಂದಾಗ ಅದರ ಬಗ್ಗೆ ಹೇಳುತ್ತೇನೆ. ಇವೊತ್ತು ಇರತಕ್ಕ ಹಣವನ್ನು ನ್ಯಾಯವಾಗಿ

ಯೋಜನಾವಾರು ಡಿಸ್ಟ್ರಿಬ್ಯೂಟ್ ಮಾಡಬೇಕು. ಫಿಜಿಕಲ್ ಟಾರ್ಗೇಟ್ ಆಚೀವ್ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡಬೇಕು. ಈ ಜವಾಬ್ದಾರಿ ನಿಮ್ಮ ಮೇಲಿದೆ. ಹೋದವರ್ಷಕ್ಕಿಂತ ಈ ವರ್ಷ ಕಡಿಮೆ ಹಣವನ್ನು ಇಟ್ಟಿದ್ದೀರಿ. ಮುಖ್ಯ ಮಂತ್ರಿಗಳು ಪರ್‌ಪಸ್‌ಲೀ ಈ ರೀತಿ ಮಾಡಿದ್ದಾರೆಂದು ಹೇಳಬೇಕಾಗುತ್ತದೆ. ದೇವೇಗೌಡರು ಇದ್ದಾಗ ಜಾಸ್ತಿ ಹಣವನ್ನು ಇಟ್ಟು ಕಡಿಮೆ ಹಣ ಖರ್ಚು ಮಾಡುತ್ತಿದ್ದರು. ಈ ವರ್ಷ ಕಡಿಮೆ ಹಣ ಇಟ್ಟಿರುವುದರಿಂದ ಖರ್ಚು ಇನ್ನೂ ಕಡಿಮೆಯಾಗುತ್ತದೆ. ಮುಂದೆ ನೀವು ಏನು ಮಾಡುತ್ತೀರೆಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಏನು ಹೇಳುತ್ತಿದ್ದೀರಿ, ಹಿಂದಿನ ಮುಖ್ಯ ಮಂತ್ರಿಗಳ ನಿಮ್ಮ ಮೇಲಿನ ವಿರಸಕ್ಕೋಸ್ಕರ ಕೊಟ್ಟ ಹಣವನ್ನು ಈ ರೀತಿ ರಿಲೀಜ್ ಮಾಡುತ್ತಿಲ್ಲ. ಆದರೆ ಇವತ್ತು ಹೀಗೆ ಆಗುವುದಿಲ್ಲ. ಈಗ ಹಣ ಹೆಚ್ಚಾಗುತ್ತದೆ, ಅದಕ್ಕೆ ವರಿ ಮಾಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಕೊಟ್ಟಂಥ ಹಣ ಇಂಜಿನಿಯರ್‌ಗಳಿಗೆ, ಅಸಿಸ್ಟೆಂಟ್ ಇಂಜಿನಿಯರ್‌ಗಳ ಜೇಬಿಗೆ ಅವರ ಮುಖಾಂತರ ಕಂಟ್ರಾಕ್ಟ್‌ದಾರರ ಜೇಬಿಗೆ ಹೋಗುವುದು ಬೇಡ, ನೀವು ಎಷ್ಟು ಇರಿಗೇಷನ್ ಪೊಟೆನ್ಸಿಯಲ್ ಕ್ರಿಯೇಟ್ ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನು ಅಚೀವ್ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಇಷ್ಟು ಮಾತ್ರ ಹೇಳುತ್ತೇನೆ. ಫಿಜಿಕಲ್ ಪರ್‌ಫಾರ್‌ಮೆನ್ಸ್, ಕಳೆದ ೫ ವರ್ಷಕ್ಕಿಂತ ಹಿಂದೆ ಏನು ಇತ್ತು, ಅದಕ್ಕಿಂತ ಚೆನ್ನಾಗಿ ಪಿ.ಡಬ್ಲ್ಯೂ.ಡಿ. ಇಲಾಖೆ ಕೆಲಸ ಮಾಡುತ್ತಿದೆಯೆಂದು ಹೇಳುತ್ತೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಭಾಷಗಿರಿ ನೀವು ತೆಗೆದುಕೊಳ್ಳ ಬೇಡಿ ಅದು ಈ ಹಿಂದಿನ ಮಂತ್ರಿಗಳಿಗೆ ಹೋಗುತ್ತದೆ,

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಬೇರೆ, ನಾವು ಬೇರೆ ಅಲ್ಲ. ಸರ್ಕಾರಕೆ ಹೋಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೮೬-೮೭ರ ಫಿಗರ್ ನೋಡಿದರೆ, ಮುಖ್ಯ ಮಂತ್ರಿಗಳ ಸಹಕಾರ ಇಲ್ಲ. ಬೆಂಬಲ ಇಲ್ಲ. ಇವತ್ತು ಅಲೋಕೇಷನ್ ಏನು ಮಾಡಿದ್ದೀರಿ. ಅದಕ್ಕೆ ತಕ್ಕಂತೆ ಎಕ್ಸಪೆಂಡೀಚರ್ ಮಾಡಿಲ್ಲ. ಏನು ಎಕ್ಸಪೆಂಡೀಚರ್ ತೋರಿಸಿದ್ದೀರಿ, ಅದಕ್ಕೆ ತಕ್ಕಂತೆ ಅಲೋಕೇಷನ್ ಈ ವರ್ಷ ಇಲ್ಲ. ಅದರ ಅರ್ಥ ವರ್ಷೇ ವರ್ಷೇ ಅಲಾಟ್‌ಮೆಂಟ್ ಇಳಿಮುಖವಾಗುತ್ತಾ ಇದೆ It is declining. Your allotment every year is coming down. This year it has completely come down. ಇದನ್ನು ನೀವು ಹೆಚ್ಚಿಗೆ ಯಾವ ರೀತಿ ಮಾಡುತ್ತೀರಿ ? ಎರಡು ಸಾವಿರ ಇಸವಿಯೊಳಗೆ ಕೃಷ್ಣ ಬೇಸಿನ್‌ನಲ್ಲಿ ಬರುವ ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡುವುದಕ್ಕೆ ಏನಾದರೂ ಔಷಧಿ ಕಂಡುಹಿಡಿದ್ದೀರಾ ? ಮಂತ್ರವನ್ನು ಕಂಡು ಹಿಡಿದಿದ್ದೀರಾ ? ನಮ್ಮ ಮೇಲೆ ಇನ್ನು ಮುಂದೆ ಗೂಬೆ ಕೂರಿಸುವುದಕ್ಕೆ ಬರುವುದಿಲ್ಲ. ೧೯೭೭-ಹಾಗೂ ೮೩ರ ಹಿಂದೆ ಏನು ಮಾಡಿದ್ದೀರಿ ಅದು ನಿಮ್ಮ ಮೇಲೆಯೇ ಬರುತ್ತದೆ. ಯಾವ ವಿಚಾರ ತೆಗೆದುಕೊಂಡರೂ ನೀವೇ ಜವಾಬ್ದಾರರಾಗುತ್ತೀರಿ ? ಅಂದರೆ ನೀವು ಹೇಗೆ ಸಿಕ್ಕಿಬಿದ್ದಿದ್ದೀರಿ ಎಂದರೆ ನಮ್ಮ ಕಡೆ ಅಡಕೊತ್ತು ಎಂದು ಕರೆಯುತ್ತಾರೆ, ಅಂದರೆ ಅಡಿಕೆಯನ್ನು ಕತ್ತರಿಸುವ ಕತ್ತರಿಯಲ್ಲಿ ಸಿಕ್ಕಿಹಾಕಿಕೊಂಡಂತೆ ನೀವು ಸಿಕ್ಕಿಹಾಕಿಕೊಂಡು ಬಿಟ್ಟಿದ್ದೀರಿ. ಹಿಂದಿನದನ್ನು ತೆಗೆದುಕೊಂಡರೂ ಸಹ ಅದೂ ನಿಮ್ಮದೇ ಪಾಪ. ಈಗಿನದನ್ನು ತೆಗೆದುಕೊಂಡರೂ ಇದೂ ನಿಮ್ಮದೇ ಪಾಪ. ನಾವು ಮಧ್ಯಂತರದವರು. ನಾವು ಯಾವುದಕ್ಕೂ ಸಿಕ್ಕುವುದಿಲ್ಲ. ಆದರೆ ನೀವು ಮಾತ್ರ ಇದರಿಂದ ತಪ್ಪಿಸಿಕೊಳ್ಳುವಂತಿಲ್ಲ. ನಿಮ್ಮ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುತ್ತಿದೆ. ಉದಾಹರಣೆಗೆ ಮಲಪ್ರಭಾ ಯೋಜನೆಯನ್ನೇ ತೆಗೆದುಕೊಳ್ಳಿ. ಇದರಲ್ಲಿ ಕೂಡ ನೀವು ಏನು ಪ್ರೊಪೋಸಲ್ ಇಟ್ಟಿದ್ದೀರಿ ಎಂದರೆ ಸುಮಾರು ೯ ಸಾವಿರ ಹೆಕ್ಟೇರ್ ಇರಿಗೇಷನ್ ಪೊಟೆನ್‌ಶಿಯಾಲಿಟಿಯನ್ನು ಕ್ರಿಯೇಟ್ ಮಾಡುತ್ತೇವೆಂದು ಹೇಳಿದ್ದೀರಿ. ಇದು ನಿಮಗೆ ಸಾಧ್ಯವಿಲ್ಲ, ಏಕೆಂದರೆ ನಿಮ್ಮ ಟಾರ್ಗೆಟ್‌ನ್ನು ನೀವು ಎಲ್ಲಿಯೂ ಕೂಡ ರೀಚ್ ಆಗಿಲ್ಲ. ಬೇಕಾದರೆ ಪುಟ ೨೭ರಲ್ಲಿ ತೆಗೆದು ನೋಡಿ. ನೀವು ಇಲ್ಲಿ ಇಟ್ಟಿದ್ದು ೨೬-೪೫ ಕೋಟಿ ರೂಪಾಯಿಗಳು. ಆದರೆ ನೀವು ಖರ್ಚು ಮಾಡಿದ್ದು ೫-೮೯ ಕೋಟಿ ರೂಪಾಯಿಗಳು. ನಾನು ತಮಗೆ ಕೇಳುತ್ತೇನೆ. ಇಷ್ಟೊಂದು ಕಡಿಮೆ ಏತಕ್ಕೆ ಖರ್ಚು ಮಾಡಿದಿರಿ ?

ಇನ್ನು ಅಪ್ಪರ್ ಕೃಷ್ಣಾ ಬಗ್ಗೆ ತಾವು ಒಂದು ಕಾರಣವನ್ನು ಹೇಳಿದಿರಿ. ಇದೂ ಕೂಡ ನಿಮ್ಮದು. ಇಲ್ಲಿ ೨೩ ಕೋಟಿ ರೂಪಾಯಿಗಳನ್ನು ತೋರಿಸಿದಿರಿ. ಆದರೆ ಖರ್ಚು ಮಾಡಿದ್ದು ಕೇವಲ ೫ ಕೋಟಿ. ಈ ವರ್ಷ ೨೬.೫ ಕೋಟಿ ರೂಪಾಯಿಗಳನ್ನು ನೀವು ತೋರಿಸಿದ್ದೀರಿ. ನನಗನಿಸುತ್ತದೆ. ನೀವು ಹಿಂದೆ ಅಷ್ಟೊಂದು ಹಣವನ್ನು ತೋರಿಸಿ ೫ ಕೋಟಿ ಖರ್ಚು ಮಾಡಿದಂತೆ ಈ ವರ್ಷವೂ ಕೂಡ ನೀವು ನಿಮ್ಮ ಗುರಿಯನ್ನು ಮುಟ್ಟುವುದಿಲ್ಲ. ಈ ವರ್ಷವೂ ಕೂಡ ಜನರಿಗೆ ಬೋಗಸ್ ಫಿಗರ್ಸ್‌ನ್ನು ತೋರಿಸುತ್ತಿದ್ದೀರೆಂದು ನಾನು ಹೇಳಬೇಕಾಗುತ್ತದೆ.

ಇದೇ ರೀತಿ ಘಟಪ್ರಭಾ ವಿಚಾರವನ್ನು ತೆಗೆದುಕೊಂಡರೆ, ಇದರಲ್ಲೂ ಕೂಡ ಅಂದರೆ ೮೭–೮೮ರ ಸಾಲಿನಲ್ಲಿ ಸುಮಾರು ೧೯.೮೬ ಕೋಟಿ ರೂಪಾಯಿಗಳನ್ನು ನೀವು ಪ್ರೊವೈಡ್ ಮಾಡಿದ್ದೀರಿ, ಆದರೆ ಖರ್ಚು ಮಾಡಿದ್ದು ಕೇವಲ ೬.೨೪ ಕೋಟಿ ರೂಪಾಯಿಗಳು ಮಾತ್ರ. ಈ ವರ್ಷ ನಿಮ್ಮ ಪ್ರೊಪೋಸೆಲ್ ಸುಮಾರು ೨೦ ಕೋಟಿ ರೂಪಾಯಿಗಳು, ನಿಮ್ಮ ಟಾರ್ಗೆಟ್ ೧ ಸಾವಿರ ಹೆಕ್ಟೇರ್. ಸ್ವಾಮಿ, ನಾನು ಹೇಳುತ್ತೇನೆ, ಇದೂ ಕೂಡ ನಿಮ್ಮ ಕೈಯಿಂದಾಗುವುದಿಲ್ಲ. ಕಳೆದಸಾರಿ ನಿಮ್ಮ ಬಜೆಟ್ ಪ್ರಾವಿಷನ್ ಮಾಡುವಾಗ ಏನು ತೋರಿಸಿದ್ದೀರಿ ಎಂಬುದನ್ನು ತಾವು ನೋಡಿ. ಕೃಷಿ ಮಾಡುವುದಕ್ಕೆ, ಬರಗಾಲ ಪ್ರದೇಶಗಳಲ್ಲಿ ಕೆಲಸಮಾಡುವುದಕ್ಕೆ ಎಂದು ತೋರಿಸಿದ್ದೀರಿ. ಜನರನ್ನು ಖುಷಿ ಮಾಡುವುದಕ್ಕೆ ನೀವು ೨೦ ಕೋಟಿ ರೂಪಾಯಿಗಳನ್ನು ತೋರಿಸಿ ಅದರಲ್ಲಿ ಕೇವಲ ೫ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಇದು ಸರಿಯೇ? ಸ್ವಾಮಿ, ನೀವು ಈ ವರ್ಷ ಏನು ಫಿಗರ್ಸ್‌ನ್ನು ಕೊಟ್ಟಿದ್ದೀರಿ. ಏನು ಟಾರ್ಗೆಟ್‌ನ್ನು ತೋರಿಸಿದ್ದೀರಿ ಅದರಲ್ಲಿ ಕೂಡ ಈ ವರ್ಷ ನೀವು ಕೇವಲ ೧ ಕೋಟಿ ಕೂಡ ಖರ್ಚು ಮಾಡುವುದಿಲ್ಲವೆಂದು ನನಗನಿಸುತ್ತದೆ. ಇದರಲ್ಲಿ ನನಗೆ ಸಂಶಯ ಇದೆ. ನೀವು ನಿಮ್ಮ ಮುಖ್ಯ ಮಂತ್ರಿಗಳ ಜೊತೆ ಚರ್ಚೆಮಾಡಿ. ನಿಮಗೆ ಹೊಸದಾಗಿ ಈ ಪೋರ್ಟ್‌ಫೋಲಿಯೋ ಸಿಕ್ಕಿದೆ. ನಿಮಗೆ ಇನ್ನೂ ಇದರ ಒಂದು ಅಂದಾಜು ಸರಿಯಾಗಿ ಸಿಕ್ಕಿಲ್ಲ. ಈ ವರ್ಷ ನಾವು ೨೦ ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಶಕ್ತಿ ಇದೆಯೋ, ಇಲ್ಲವೇ ಎಂಬುದನ್ನು ನೀವು ನಿಮ್ಮ ಮುಖ್ಯ ಮಂತ್ರಿಗಳ ಹತ್ತಿರ ಕೇಳಿ. ನಾನು ಏತಕ್ಕೆ ನೀವೇ ಕೇಳಿ ಎಂದು ಹೇಳುತ್ತಿದ್ದೇನೆಂದರೆ, ನಾವು ಇದರ ಬಗ್ಗೆ ನಿಮ್ಮ ಮುಖ್ಯ ಮಂತ್ರಿಗಳನ್ನು ಕೇಳಿದರೆ ಅದಕ್ಕೆ ರಾಜಕೀಯ ಎಂದು ಹೇಳುತ್ತೀರಿ. ಆದ್ದರಿಂದ ನೀವೇ ಕೇಳಿ. ನೀವು ಶಂಕರಾನಂದ್‌ರವರನ್ನು ಬಡಿದೂ ಬಡಿದೂ ಇದಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಿ ಎಂದು ಕೇಳಿದ್ದೀರೆಂದು ನನಗೆ ಅನಿಸುತ್ತದೆ. ೧ ಕೋಟಿ ರೂಪಾಯಿ ನಿಗದಿ ಮಾಡಿದರೆ ಅದರಲ್ಲಿ ೩೬ ಲಕ್ಷ ಖರ್ಚಾಗುತ್ತದೆ. ಆ ಹಣ ನಿಮ್ಮ ಸಿಬ್ಬಂದಿವರ್ಗಕ್ಕೆ ಖರ್ಚಾಗುತ್ತದೆ. ಈ ಬಾಬಿಗೆ ನೀವು ಈ ವರ್ಷ ಕೇವಲ ೧ ಕೋಟಿ ರೂ. ಮಾತ್ರ ಇಟ್ಟಿದ್ದೀರಿ. ಅದಕ್ಕಿಂತ ಹೆಚ್ಚಿಗೆ ಇಟ್ಟಿಲ್ಲ. ನಿಮಗೆ ಎಲ್ಲಿ ಹೆಚ್ಚಿನ ಸಹಾಯ ಇದೆ ಅಲ್ಲಿಗೆ ಅಂದರೆ ಬೆಳಗಾಂ ಜಿಲ್ಲೆಯ ಹಿಪ್ಪರಗಿ ಪ್ರಾಜೆಕ್ಟ್‌ಗೆ ನೀವು ಮಾಡಿರತಕ್ಕ ಸೇವೆಯನ್ನು ನೀವೇ ನೋಡಿ.

ಇನ್ನು ಮಲಪ್ರಭಾ ... ದುಗಂಗಾ ವಿಚಾರದಲ್ಲಿ ಹೇಳುವುದಾದರೆ ೧೯೮೭–೮೮ರಲ್ಲಿ ನೀವು ಪ್ರೊವೈಡ್ ಮಾಡಿದ್ದು ೧೭೫ ಲಕ್ಷ ರೂಪಾಯಿಗಳು. ಆದರೆ ಖರ್ಚು ಮಾಡಿದ್ದು ೧ ಕೋಟಿ ರೂಪಾಯಿಗಳು. ಅಂದರೆ ಇನ್ನೂ ೭೫ ಲಕ್ಷ ರೂಪಾಯಿಗಳನ್ನು ಖರ್ಚುಮಾಡದೆ ಹಾಗೆಯೇ ಉಳಿಸಿದ್ದೀರಿ.

೩–೦೦ ಪಿ. ಎಂ.

೭೫ ಲಕ್ಷ ರೂಪಾಯಿಗಳು ಅಲ್ಲೂ ನಿಮಗೆ ಉಳಿತಾಯವಾಯಿತು. ಈ ವರ್ಷ ಎರಡು ಕೋಟಿ ಇಟ್ಟಿದ್ದೀರಿ. ಇದು ನನಗನಿಸುತ್ತದೆ ಏನೆಂದರೆ ಕೇವಲ ಪ್ರಾವಿಷನ್ ಮಾಡಿರತಕ್ಕಂಥದ್ದಾಗಿದೆಯೇ ಹೊರತು ಯಾವ ಕೆಲಸಗಳನ್ನು ತೆಗೆದುಕೊಳ್ಳಲು ಆಗುವುದಿಲ್ಲವೆಂದು ಹೇಳಬೇಕಾಗುತ್ತದೆ.

ಇನ್ನು ಹೇಮಾವತಿ ತೆಗೆದುಕೊಂಡರೆ, ಇದು ಕಾವೇರಿ ಬೇಸಿನ್ ಪ್ರಾಜೆಕ್ಟ್‌ನಲ್ಲಿ ಬರತಕ್ಕಂಥಾದ್ದಾಗಿದೆ. ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಸರ್ಕಾರ ಕೊಟ್ಟುಕೊಂಡು ಬರುತ್ತಿದೆ. ಅಲ್ಲೂ ಕೂಡ ಕನಿಷ್ಟಪಕ್ಷ ನೂರು ಪರ್ಸೆಂಟ್ ಖರ್ಚು ಮಾಡುತ್ತೀರಾ ? ಇದು ಮಾನ್ಯ ದೇವೇಗೌಡರ ಪ್ರೀತಿ ಪಾತ್ರವಾದ ಪ್ರಾಜೆಕ್ಟ್. ಎಷ್ಟು ಪ್ರಾವಿಷನ್ ಮಾಡಿದ್ದೀರಿ ಅಷ್ಟಾದರೂ ಖರ್ಚು ಮಾಡುತ್ತೀರಾ ? ಇಡೀ ನಿಮ್ಮ ತಾಕತ್ತು ತೋರಿಸಿ ಹಣ ಖರ್ಚು ಮಾಡುತ್ತೀರಾ ? ಅಲ್ಲೂ ಕೂಡ ಪ್ರಾವಿಷನ್ ಮಾಡಿದ್ದು ೧೯೮೭–೮೮ಕ್ಕೆ ಸುಮಾರು ೩೧ ಕೋಟಿ ೭೪ ಲಕ್ಷ ರೂಪಾಯಿಗಳು. ಎಕ್ಸ್‌ಪೆಂಡೀಚರ್ ಮಾಡಿದ್ದು ೧೪ ಕೋಟಿ ರೂಪಾಯಿಗಳು. ಅಂದರೆ ಅರ್ಧದಷ್ಟು ಮಾತ್ರ ಖರ್ಚು ಮಾಡಲು

ನಿಮಗೆ ಸಾಧ್ಯವಾಯಿತು. ಮಾನ್ಯ ದೇವೇಗೌಡರು ಮಂತ್ರಿಗಳಾಗಿದ್ದ ಕಾಲದಲ್ಲಿ ೩೧ ಕೋಟಿ ಪ್ರಾವಿಜನ್ ಮಾಡಿದ್ದರಲ್ಲಿ ೧೪ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿರುತ್ತಾರೆಂದರೆ ಹೇಗೆ ? ಸ್ವಾಮಿ ಈಗ ಎಷ್ಟಾಗಿದೆ ಹೇಳಿ ? ೩-೪ ಕೋಟಿ ರೂಪಾಯಿಗಳು. ನೀವು ೯ ತಿಂಗಳಲ್ಲಿ ಖರ್ಚು ಮಾಡಿರುವುದು ೧೪ ಕೋಟಿ ರೂಪಾಯಿಗಳು. ನಿಮ್ಮ ಕಂಟ್ರಾಕ್ಟರ್ಸ್ ೩ ತಿಂಗಳಲ್ಲಿ ಹತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವವರು ಬಿಲ್ಲಿಗೋಸ್ಕರವಾಗಿ ಫೈಟ್ ಮಾಡುತ್ತಿದ್ದಾರೆ. ಕೇವಲ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವವರು ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್‌ಗೆ ಸುತ್ತುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹೇಮಾವತಿ ಕಂಟ್ರಾಕ್ಟರ್ಸ್ ಏನಿದ್ದಾರೆ ಅವರು ಷೆಡ್ಯೂಲ್ ಟೈಮ್‌ನಲ್ಲಿ ಕೆಲಸ ಮಾಡಿದ್ದಾರೆ. ಸರ್ಕಾರ ಕೊಡಬೇಕಾದ ಹಣವನ್ನು ಕೊಡದಿದ್ದರೂ ಮುಂಚಿತವಾಗಿ ಕೆಲಸ ಮಾಡಿದ್ದಾರೆ. ಅಂಥ ಉದಾಹರಣೆ ಇದೆ. ಅದನ್ನು ತಾವು ಮೆಚ್ಚಿಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೧ ಕೋಟಿ ರೂಪಾಯಿಗಳನ್ನು ತಾವು ಅಲಾಟ್‌ಮೆಂಟ್ ಮಾಡಿ ೧೪ ಕೋಟಿ ರೂಪಾಯಿಗಳನ್ನು ನವೆಂಬರ್ ತಿಂಗಳೊಳಗೆ ಖರ್ಚು ಮಾಡಿದ್ದೀರಿ. ಅಂದರೆ ಈ ಬ್ಯಾಲೆನ್ಸ್ ಎಷ್ಟು ಉಳಿಯುತ್ತದೆಂದು ಕೇಳಿದರೆ ಮಾರ್ಚ್ ಎಂಡ್ ವೇಳೆಗೆ ೧೭ ಕೋಟಿ ಎಂದು ಹೇಳಿದ್ದೀರಿ. ಇದನ್ನೇ ಲೆಕ್ಕ ತೆಗೆದುಕೊಂಡರೂ ಕೂಡ ಅಲ್ಲೂ ಕೂಡ ಸುಮಾರು ೧೫ ಕೋಟಿ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದೀರಿ. ಯಾವ ಆಧಾರದ ಮೇಲೆ ಇಷ್ಟು ಲ್ಯಾಪ್ಸ್ ಆಯಿತು. ಇದಕ್ಕೆ ಏನು ಕಾರಣ ? ಈ ವರ್ಷ ಎಷ್ಟು ಹಣವನ್ನು ಇಟ್ಟಿದ್ದೀರಿ ಎಂದರೆ ಹೋದ ವರ್ಷಕ್ಕಿಂತಲೂ ಕಡಿಮೆ, ೩೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಜೆಟ್ ಸ್ಟೇಟ್‌ಮೆಂಟ್ ನಂಬರ್ ೯, ಇದರಲ್ಲಿ ನೋಡಿ. ಎಲ್ಲ ವಿವರಗಳು ದೊರೆಯುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಲಾಟ್‌ಮೆಂಟ್ ನಾನು ಹೇಳುತ್ತಿದ್ದೇನೆ. ಆರು ಸಾವಿರ ಹೆಕ್ಟೇರ್‌ಗಳಷ್ಟು ಇರಿಗೇಷನ್ ಪೊಟೆನ್‌ಷಿಯಾಲಿಟಿ ಕ್ರಿಯೇಟ್ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಇದು ಸಾಧ್ಯವಾಗುವುದಿಲ್ಲ. ಟಾರ್‌ಗೇಟ್ ಅಚೀವ್ ಮಾಡುತ್ತೇವೆಂದು ಹೇಳುತ್ತೀರಿ. ಹೋದ ವರ್ಷದ ಟಾರ್‌ಗೆಟ್‌ನ್ನು ಅಚೀವ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈಗಲೂ ಕೂಡ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಮಾನ್ಯ ದೇವೇಗೌಡರು ಎಷ್ಟೇ ಆಸಕ್ತಿ ತೆಗೆದುಕೊಂಡರೂ, ಮಂತ್ರಿಗಳಾಗಿ ಕೆಲಸ ಮಾಡಿದ ಪ್ರಭಾವ ಇದ್ದರೂ ಇಷ್ಟು ಮಾಡಿದ್ದೇವೆಂದು ಹೇಳಲು ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ ?

ಇನ್ನು ತುಮಕೂರು ಕೆನಾಲ್ ಬಗ್ಗೆ ಹೇಳುವುದಾದರೆ, ಮಾನ್ಯ ವೈ. ಕೆ. ರಾಮಯ್ಯನವರು ಪ್ರಚಾರ ಮಾಡಿದ್ದೇ ಮಾಡಿದ್ದು, ಫಂಕ್ಷನ್ ಮಾಡಿದ್ದೇ ಮಾಡಿದ್ದು, ಚೀಫ್ ಮಿನಿಸ್ಟರ್ ಹೋದರು, ಮಾನ್ಯ ದೇವೇಗೌಡರು ಹೋದರು, ಆದರೆ ಅಲ್ಲಿದ್ದ ಆಫೀಸ್ ಬಂದಾಯಿತು, ಅಲ್ಲಿಗೆ ೯ ಜನ ಮಂತ್ರಿಗಳು ಹೋದರು, ಅಲ್ಲಿ ಕನಿಷ್ಟಪಕ್ಷ ಏನು ಸಾಧನೆಯಾಗಿದೆ ಎನ್ನುವುದನ್ನು ನೋಡೋಣ. ಇಲ್ಲಿ ತುಮಕೂರು ಕೆನಾಲ್ ಅಂಥ ಪ್ರತ್ಯೇಕವಾಗಿ ಇಲ್ಲ. ಇದಕ್ಕೆ ೧೯೮೭ರವರೆಗೆ ಖರ್ಚು ಮಾಡಿರತಕ್ಕದ್ದು ೫೭.೯ ಕೋಟಿ ಎಂದು ಹೇಳಿದ್ದಾರೆ. ಗ್ರಾಂಟ್ ಕೊಟ್ಟಿರತಕ್ಕದ್ದು ೨೦ ಕೋಟಿ ರೂಪಾಯಿಗಳು. ಅಲ್ಲಿ ಇವರು ಹೋಗಿ ೨೦ ಕೋಟಿ ೩೦ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಅನೌನ್ಸ್ ಮಾಡಿ ಬಂದರು, ಆ ಭಾಗದ ರೈತರು ಏನಿದ್ದಾರೆ ಅವರು ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿದ್ದಾರೆ. ನಿಮ್ಮ ಏಳಿಗೆಗಾಗಿ ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ ರೈತರಿಂದ ಚಪ್ಪಾಳೆ ಬಾರಿಸಿಕೊಂಡು ೯ ಜನ ಮಂತ್ರಿಗಳು ಹೋಗಿ ಫೌಂಡೇಷನ್ ಸ್ಟೋನ್ ಹಾಕಿ ಕಛೇರಿಯ ಉದ್ಘಾಟನೆ ಮಾಡಿ ಬಂದರು. ಖರ್ಚು ಮಾಡಿದ್ದು ಮಾತ್ರ ೫ ಕೋಟಿ ರೂಪಾಯಿಗಳು. ಇದು ನಿಮ್ಮ ಫರ್‌ಫಾರ್ಮೆನ್ಸ್. ಹೆಚ್ಚಿನ ಹಣ ಖರ್ಚು ಮಾಡಿ ಸಾಧನೆ ಸಾಧಿಸುತ್ತೇವೆಂದು ಹೇಳುತ್ತೀರಲ್ಲ, ಎಲ್ಲಿದೆ ನಿಮ್ಮ ಸಾಧನೆ ? ಇದಕ್ಕೆಲ್ಲ ತಾವು ಉತ್ತರಿಸಬೇಕು. ಒಂದು ಪ್ರಾಜೆಕ್ಟ್‌ನಲ್ಲೇನೋ ಈ ರೀತಿ ಆಗಿದೆ ಎಂದರೆ ಸರಿ. ಆದರೆ ಎಲ್ಲಾ ಕಡೆಯೂ ಇದೇ ಪರಿಸ್ಥಿತಿ. ೧೦-೨೦ ಪರ್ಸೆಂಟ್ ಷಾರ್ಟ್‌ಫಾಲ್ ಅಂಥ ತಿಳಿದುಕೊಳ್ಳೋಣ ಅಂದರೆ ಇವರು ಕೆಲಸ ಮಾಡಿರತಕ್ಕದ್ದೇ ೨೦-೨೫ ಪರ್ಸೆಂಟ್ ಯಾವುದೇ ವಿಷಯದಲ್ಲಿ ಪಾಸ್ ಆಗಬೇಕಾದರೆ ಮಿನಿಮಮ್ ೩೫ ಮಾರ್ಕ್ಸ್ ತೆಗೆದುಕೊಳ್ಳಬೇಕು. ಅದಕ್ಕೂ ಕೂಡ ಇವರು

ಯೋಗ್ಯರಲ್ಲ. ೩೫ ಪರ್ಸೆಂಟ್ ಕೆಲಸ ಕೂಡ ಮಾಡಿಲ್ಲ. ಗ್ರೇಸ್ ಮಾರ್ಕ್ಸ್ ಕೊಟ್ಟರೂ ಪಾಸ್ ಆಗುವುದಿಲ್ಲ. ಏಕೆಂದರೆ ಲೆಸ್ ದ್ಯಾನ್ ೨೫ ಪರ್ಸೆಂಟ್ ವರ್ಕ್ ಆಗಿದೆ. ನೀವು ಏನು ವಾಗ್ದಾನ ಮಾಡಿದ್ದಿರಿ, ಅದಕ್ಕಿಂತ ೨೫ ಪರ್ಸೆಂಟ್ ಕಡಿಮೆ ಕೆಲಸ ಮಾಡಿದರೆ ಯಾವ ರೀತಿ ೩೫ ಪರ್ಸೆಂಟ್ ಅಂಕಗಳನ್ನು ಕೊಟ್ಟು ಪಾಸ್ ಮಾಡುವುದಕ್ಕಾಗುತ್ತದೆ ? ನೀವು I-ಕ್ಲಾಸ್ ಆಗುವುದಿಲ್ಲ. II-ಕ್ಲಾಸ್ ಆಗುವುದಿಲ್ಲ, III-ಕ್ಲಾಸ್‌ನಲ್ಲಿ ಕೂಡ ಪಾಸ್ ಆಗುವುದಿಲ್ಲ. ಜನರ ಕಣ್ಣಿನಲ್ಲಿ ನಿಮಗೆ ಯಾವುದೇ ಕ್ಲಾಸ್ ದೊರೆಯುವುದಿಲ್ಲ. ಪ್ರತಿಯೊಂದು ಪ್ರಾಜೆಕ್ಟ್‌ನಲ್ಲೂ ಸಂಪೂರ್ಣವಾಗಿ ವಿಫಲರಾಗಿದ್ದೀರಿ.

ಒಬ್ಬ ಮಾನ್ಯ ಸದಸ್ಯರು.—ಗ್ರೇಸ್ ಮಾರ್ಕ್ಸ್ ಕೊಟ್ಟರೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗ್ರೇಸ್ ಮಾರ್ಕ್ಸ್ ಕೊಟ್ಟರೂ ಪಾಸ್ ಆಗುವುದಿಲ್ಲ. ನಾವು ಗ್ರೇಸ್ ಮಾರ್ಕ್ಸ್ ಕೊಟ್ಟಿರುವುದರಿಂದ ಬದುಕಿದ್ದೀರಿ. ೨೦ ಪರ್ಸೆಂಟ್ ಬಂದಾಗ ನಾವು ೫ ಪರ್ಸೆಂಟ್ ಕೊಟ್ಟರೆ ೨೫ ಪರ್ಸೆಂಟ್ ಆಗುತ್ತದೆ. ಆದರೂ ಪಾಸ್ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮಂಥ ಎಕ್ಸಾಮಿನರ್ ಇದ್ದರೆ ಆಯಿತು. I-ಕ್ಲಾಸ್ ಆಗಿ ಕೆಲಸ ಮಾಡಿದರೂ ಫೇಲ್ ಮಾಡತಕ್ಕ ಎಕ್ಸಾಮಿನರ್ ಇದ್ದರೆ ಬಹಳ ಕಷ್ಟ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾವು ಪೇಪರ್ ನೋಡಿ ಮಾರ್ಕ್ಸ್ ಕೊಡುತ್ತೇವೆಯೇ ಹೊರತು ಮುಖ ನೋಡಿ ಅಲ್ಲ. ಯಾವ ರೀತಿ ವರ್ಕ್ ಎಕ್ಸಿಕ್ಯೂಟ್ ಮಾಡಿದ್ದೀರಿ, ಯಾವ ರೀತಿ ಹಣ ಅಲಾಟ್ ಮಾಡಿದ್ದೀರಿ, ನಿಮ್ಮ ಅಲೋಕೇಷನ್ ಪ್ರಕಾರ ಹಣ ಕೊಟ್ಟಿದ್ದೀರಾ, ನೀವು ಹಾಕಿದ ಟಾರ್ಗೆಟ್ ಅನ್ನು ರೀಚ್ ಆಗಿದ್ದೀರಾ ಎಂಬುದನ್ನು ನೋಡಿದರೆ ನಿಮಗೆ ಏನೂ ಮಾರ್ಕ್ಸ್ ಸಿಗುವುದಿಲ್ಲ. ಇದ ಕ್ಕೋಸ್ಕರ ಫೆಯಿಲ್ಯೂರ್ ಆಗಿ ೩೫ ಪರ್ಸೆಂಟ್‌ಗಿಂತ ಕೆಳಗಡೆ ಇದ್ದೀರಿ. ತುಮಕೂರು ಕೆನಾಲ್ ವಿಚಾರ ಆದಮೇಲೆ ಹಾರಂಗಿ ಪ್ರಾಜೆಕ್ಟ್. ಇದು ಕಾವೇರಿ ಬೇಸಿನ್‌ನಲ್ಲಿರತಕ್ಕದ್ದು. ಇದಕ್ಕೂ ಪ್ರಾತಿನಿಧ್ಯ ಕೊಟ್ಟರಿ. ಈ ನೀರನ್ನು ತಮಿಳ್ನಾಡಿನವರು ತೆಗೆದುಕೊಳ್ಳುತ್ತಾರೆ. ಕಾವೇರಿ ಬೇಸಿನ್‌ನಲ್ಲಿ ನಾನ್ ಪ್ಲಾನ್‌ನಲ್ಲಿ ಇರತಕ್ಕ ಪ್ರಾಜೆಕ್ಟ್ ಅಂದಮೇಲೆ ಅದಕ್ಕೂ ಆದ್ಯತೆ ಕೊಡಬೇಕೆಂದು ಹೆಚ್ಚಿನ ಗಮನ ಕೊಟ್ಟು ಕೆಲಸ ಮಾಡಬೇಕೆಂದು ಹಿಂದಿನ ಸರ್ಕಾರ ತೀರ್ಮಾನ ಮಾಡಿತು. ಈಗ ನಾವೂ ಮಾಡುತ್ತೇವೆಂದು ಜಂಬ ಕೊಚ್ಚಿಕೊಂಡು ೧೯೮೭–೮೮ರಲ್ಲಿ ೧೪ ಕೋಟಿ ರೂಪಾಯಿಗಳನ್ನು ಪ್ರಾವಿಷನ್ ಮಾಡಿ ಖರ್ಚು ಮಾಡಿದ್ದು ಮಾತ್ರ ೩ ಕೋಟಿ ರೂಪಾಯಿಗಳು ಮಾತ್ರ. ಅಂದರೆ ೨೦ ಪರ್ಸೆಂಟ್ ಕೂಡ ಆಗಲಿಲ್ಲ. ಈ ರೀತಿ ಕೆಲಸ ಮಾಡಿದರೆ ನೀವು ಎಲ್ಲಿ ಗುರಿ ಮುಟ್ಟುತ್ತೀರಿ ? ನಿಮಗೆ ಎಷ್ಟು ಖರ್ಚು ಮಾಡತಕ್ಕ ಯೋಗ್ಯತೆ ಇದೆ ಅಷ್ಟೇ ಹೇಳಿ, ನಿಮಗೆ ೩ ಕೋಟಿ ರೂಪಾಯಿಗಳ ಕೆಲಸ ಮಾಡುವುದಕ್ಕೆ ಮಾತ್ರ ಸಾಮರ್ಥ್ಯತೆ ಇದ್ದರೆ ೩ ಕೋಟಿ ರೂಪಾಯಿಗಳ ಪ್ರಾವಿಷನ್ ಮಾಡಿ. ಅದು ಬಿಟ್ಟು ೧೪ ಕೋಟಿ ರೂಪಾಯಿ ಪ್ರಾವಿಜನ್ ಮಾಡಿ ೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಸರಿಯಲ್ಲ. ೨೦ ಕೋಟಿ ರೂಪಾಯಿ ಪ್ರಾವಿಜನ್ ಮಾಡಿ ೬ ಕೋಟಿ ರೂಪಾಯಿ ಖರ್ಚು ಮಾಡುತ್ತೀರಿ. ೧೨ ಕೋಟಿ ರೂಪಾಯಿ ಪ್ರಾವಿಜನ್ ಮಾಡಿ ೫ ಕೋಟಿ ರೂಪಾಯಿ ಖರ್ಚು ಮಾಡುತ್ತೀರಿ. ಇಲ್ಲಿ ೧೪ ಕೋಟಿ ರೂಪಾಯಿಗಳನ್ನು ಪ್ರಾವಿಜನ್ ಮಾಡಿ ೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದರ ಅರ್ಥ ಏನೆಂದರೆ ನಿಮಗೆ ಕೆಲಸ ಮಾಡುವುದಕ್ಕೆ ಮನಸ್ಸು ಇಲ್ಲ. ನಿಮಗೆ ಯಾವ ಒಂದು ಅಂದಾಜೂ ಇಲ್ಲ. ನಿಮಗೆ ರಿಸೋರ್ಸ್‌ಸ್ ಇಲ್ಲವೆಂದರೆ ಹೇಗೆ ಹಣವನ್ನು ಪ್ರೊವೈಡ್ ಮಾಡುತ್ತೀರಿ ? ಯಾವ ಆಧಾರದ ಮೇಲೆ ಈ ಅಂಕಿ ಅಂಶಗಳನ್ನು ಕೊಟ್ಟಿರಿ ? ಏತಕ್ಕೆ ಕೊಟ್ಟಿರಿ ? ಇದು ಹಾರಂಗಿ ಕಥೆ ಆಮೇಲೆ ಕಾರಂಜ. ಇದರಲ್ಲಿ ಕೂಡ ತಾವು ೧೯೮೭–೮೮ರಲ್ಲಿ ೮ ಕೋಟಿ ರೂಪಾಯಿ ಕೊಟ್ಟಿರಿ. ಖರ್ಚು ಎಷ್ಟು ಮಾಡಿದಿರಿ ? ೨,೯೫ ೦೦.೦೦೦ ರೂಪಾಯಿ, ಅಂದರೆ ಕೇವಲ ಮೂರು ಕೋಟಿ..

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಸರಿಯಲ್ಲ. ಎಲ್ಲಾ ಅಮೌಂಟ್ ಖರ್ಚು ಮಾಡಿದೆ ಅದು ನವೆಂಬರ್‌ರವರೆಗೆ ಆದ ಖರ್ಚು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ಆಲ್‌ರೈಟ್. ಕಾರಂಜ ಪ್ರಾಜೆಕ್ಟ್‌ಗೆ ಒರಿಜಿನಲ್ ಗ್ರ್ಯಾಂಟ್ ೮ ಕೋಟಿ ರೂಪಾಯಿ ಇದ್ದರೆ ಖರ್ಚು ಮಾಡಿರುವುದು ೫,೭೩,೦೦,೦೦೦ ರೂಪಾಯಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ರಿವೈಸ್ಡ್ ಗ್ರ್ಯಾಂಟ್ ಇದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಹಾಕಿಕೊಂಡರೆ ನಾವೇನು ಮಾಡುವುದಕ್ಕಾಗುತ್ತದೆ? ನೀವು ಮೊನ್ನೆ ರಿವೈಸ್ ಮಾಡಿಕೊಂಡು ೧೦೦ ಪರ್ಸೆಂಟ್ ಟಾರ್ಜೆಟ್ ಮುಟ್ಟಿದೆ ಎಂದು ಹೇಳುವುದಕ್ಕೆ ಹೋಗಬೇಡಿ. You have provided in the budget i. e., Rs. ೮ Crores but you spent only Rs. 5 Crores.

ಶ್ರೀ ಎಸ್. ಆರ್, ಬೊಮ್ಮಾಯಿ.—ಹಿಂದಿನ ವರ್ಷ ನೋಡಿ. ೮೬–೮೭ರ ಬಜೆಟ್ ಎಸ್ಟಿಮೇಟ್ ೯ ಕೋಟಿ ರೂಪಾಯಿ. ಆದರೆ ಖರ್ಚು ಮಾಡಿರುವುದು ೯ ಕೋಟಿ ೨೭ ಲಕ್ಷ ರೂಪಾಯಿಗಳು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—೧೯೮೭–೮೮ರದ್ದು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹೇಳುವಾಗ ಎರಡೂ ಹೇಳಬೇಕಲ್ಲ. ಹಿಂದಿನ ವರ್ಷದ್ದೂ ನೋಡಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹೋದ ವರ್ಷದ ಬಗ್ಗೆ ಹೋದ ವರ್ಷ ಹೇಳಿದ್ದಾಯಿತಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪಿಕ್ಚರ್ ಕೊಡುವಾಗ ಒಂದೇ ಕಡೆ ನೋಡಬೇಡಿ. ಎರಡೂ ಕಡೆ ನೋಡಿ. ೧೯೮೬–೮೭ರಲ್ಲಿ ೯ ಕೋಟಿ ರೂಪಾಯಿ ಪ್ರಾವಿಷನ್ ಮಾಡಿದ್ದೆವು. ನೀವು ದೇವೇಗೌಡರು ಹೇಳಿದ್ದನ್ನು ಮರೆಯಬೇಡಿ. ಕಾರಂಜ ಪ್ರಾಜೆಕ್ಟ್ ೧೦ ವರ್ಷದಿಂದ ಮಲಗಿತ್ತು, ಒಂದು ಪೈಸೆ ಕೂಡ ಅದಕ್ಕೆ ಖರ್ಚಾಗಲಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಬರಗಾಲ ಬಂದಾಗ ಎಲ್ಲಾ ಪ್ರಾರಂಭ ಮಾಡಿದ್ದೇ ನಾವು. ನೀವು ಕ್ರೆಡಿಟ್ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಹೆಚ್ಚು ಕೊಡುತ್ತೇವೆಂದು ಬೆನ್ನು ತಟ್ಟಿಕೊಂಡು ೮ ಕೋಟಿ ಖರ್ಚು ಮಾಡುತ್ತೇವೆಂದು ೫ ಕೋಟಿ ಖರ್ಚು ಮಾಡುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹೋದ ವರ್ಷ ೯ ಕೋಟಿ ರೂಪಾಯಿ ಎಂದು ಹೇಳಿ ೯ ಕೋಟಿ ೨೭ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವಲ್ಲ ಅದೂ ಹೇಳಿ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ಹೋದವರ್ಷ ೮ ಕೋಟಿ ರೂಪಾಯಿಗಳನ್ನು ಕೊಟ್ಟು ಈ ವರ್ಷ ಏಳೂವರೆ ಕೋಟಿ ರೂಪಾಯಿಗಳನ್ನು ಏತಕ್ಕೆ ಕೊಡುತ್ತೀರಿ ? ಪ್ರೈಸ್ ಎಸ್ಕಲೇಷನ್ ಆಗುತ್ತದೆ. ಕಬ್ಬಿಣ, ಸಿಮೆಂಟ್ ರೇಟ್ ಜಾಸ್ತಿಯಾಗಿದೆ. ಅಂದರೆ ನೀವು ಮಾಡಿದ ಪ್ರಾವಿಷನ್ ಜಾಸ್ತಿ ಎಂದು ತಿಳಿದುಕೊಳ್ಳಲೋ ಅಥವಾ ಬೇರೆ ಏನು ತಿಳಿದುಕೊಳ್ಳಲಿ ? ಆ ಪ್ರಕಾರ ಲೆಕ್ಕ ನೋಡಿದರೆ ೧೯೮೬–೮೭ಕ್ಕಿಂತ ಕಡಿಮೆ ಹಣ ಕೊಟ್ಟಿದ್ದೀರಿ ಎಂದು ಹೇಳಬೇಕಾಗುತ್ತದೆ. ೭ ಕೋಟಿ ೫೭ ಲಕ್ಷ ರೂಪಾಯಿ ಅಂದರೆ ಎಸ್ಕಲೇಷನ್ ವ್ಯಾಲ್ಯೂ ತೆಗೆದುಕೊಂಡರೆ ೪ ಕೋಟಿ ರೂಪಾಯಿ ಕೊಟ್ಟಂತಾಗುತ್ತದೆ. ಸುಮ್ಮನೆ ಹಣ ಕೊಟ್ಟಿದ್ದೇವೆ ಎಂದು ಹೇಳಿದರೆ ಆಯಿತಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್‌ಫ್ಲೇಷನ್ ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಒಂದು ಕಡೆ ಇನ್‌ಫ್ಲೇಷನ್ ಆಗಿದೆ ಎಂದು ಹೇಳುತ್ತೀರಿ. ಆದರೆ ಹಣ ಹೆಚ್ಚು ಮಾಡಿಲ್ಲ. ಇನ್ನೂ ಹೆಚ್ಚು ಮಾಡಬೇಕಾಗಿತ್ತು. ಹೋದವರ್ಷಕ್ಕಿಂತ ಕಡಿಮೆ ಹಣ ಒದಗಿಸಿದ್ದೀರಿ ಅಂದರೆ ಅದರ ಅರ್ಥ ನಿಮಗೇನೂ ಇಂಟರೆಸ್ಟ್ ಇಲ್ಲ ಎಂದು. ಯಾವುದೇ ಪ್ರಾಜೆಕ್ಟ್ ನೀವು ತೆಗೆದುಕೊಳ್ಳಿ. ಅಪ್ಪರ್ ಕೃಷ್ಣ, ಮಲಪ್ರಭ, ಘಟಪ್ರಭ, ಚುಲ್ಕಿ ನಾಲಾ ಯಾವುದೇ ಪ್ರಾಜೆಕ್ಟ್ ತೆಗೆದುಕೊಳ್ಳಿ. ನಿಮಗೆ ಆಸಕ್ತಿ ಇದ್ದಿದ್ದರೆ ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಸಹಾಯ ಮಾಡುತ್ತಾ ಇದ್ದೀರಿ. ಬೆಣ್ಣೆತೊರೆ ಪ್ರಾಜೆಕ್ಟ್ ಬಗ್ಗೆ ನಾನು ಹೇಳಿದೆ. ಏತಕ್ಕಾಗಿ ಅದಕ್ಕೆ ಆದ್ಯತೆ ಕೊಡಬೇಕು ಎಂದು ಹೇಳಿದೆ. ಏನೂ ಮಲಗಿತ್ತು. ನಾನು ಎಬ್ಬಿಸಿದೆ. ಎಂದು ಹೇಳಿದರು. ಅನೇಕ ಪ್ರಾಜೆಕ್ಟ್‌ಗಳನ್ನು ಎಬ್ಬಿಸಿದ್ದಾರೆ. ಅದರಲ್ಲಿ ಇದೂ ಒಂದು ಇರಬಹುದು. ಆದರೆ ನಿಮ್ಮ ಪ್ರಯತ್ನ ಯಾವರೀತಿ ಇರಬೇಕು ? ಯಾವುದು ಜಾಗ್ರತೆ ರಿಸಲ್ಟ್ ಕೊಡುತ್ತದೆ, ಯಾವುದು ನಮಗೆ ಸಹಾಯವಾಗುತ್ತದೆ ಅದಕ್ಕೆ ಹೆಚ್ಚಿನ ಹಣ ಕೊಟ್ಟು ಕಂಪ್ಲೀಟ್ ಮಾಡುವುದಕ್ಕೆ ಏನು ಕಷ್ಟ ? ಒರಿಜಿನಲ್ ಅಲಾಟ್‌ಮೆಂಟ್ ಮತ್ತು ಈಗ ಮಾಡಿರುವುದು ಹೋಲಿಸಿದರೆ ಕೋಟ್ಯಾಂತರ ರೂಪಾಯಿಗಳಷ್ಟು ರಿವೈಸ್ಡ್ ಮಾಡಿದ್ದೀರಿ. ಯಾವುದು ಮುಖ್ಯವಾಗಿ ಆಗಬೇಕಾಗಿತ್ತೋ ಅಂಥ ಪ್ರಾಜೆಕ್ಟ್‌ಗೆ ಹೆಚ್ಚು ಹಣ ಕೊಟ್ಟು

ಕಂಪ್ಲೀಟ್ ಮಾಡಿಲ್ಲ ಎಂಬುದನ್ನು ಈಗ ಹೇಳಬೇಕಾಗಿದೆ. ಆಮೇಲೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಯವರು ಕೆಲವು ವಿಷಯಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಎಷ್ಟರಮಟ್ಟಿಗೆ ನೀವು ಆಚರಣೆಯಲ್ಲಿ ತಂದಿದ್ದೀರಿ ?

ಶ್ರೀಮಾನ್ ದೇವೇಗೌಡರು ಆರ್ಬಿಟ್ರೇಷನ್ ಕೇಸಸ್ ಬಗ್ಗೆ ಹೇಳಿದರು. ಕಂಟ್ರಾಕ್ಟುದಾರರು ೯೦ ಪರ್ಸೆಂಟ್ ಕೆಲಸ ಆಗಿ ಇನ್ನು ೧೦ ಪರ್ಸೆಂಟ್ ಕೆಲಸವನ್ನು ಬಾಕಿ ಇಟ್ಟು ಕೊಂಡು ಯಾವುದೋ ಒಂದು ನೆಪದ ಮೇಲೆ ಕೋರ್ಟಿಗೆ ಹೋಗಿ ಕೋರ್ಟಿನ ರಕ್ಷಣೆಯನ್ನು ತೆಗೆದುಕೊಂಡು ಲಕ್ಷಾಂತರ ಹಾಗೂ ಕೋಟ್ಯಾಂತರ ರೂಪಾಯಿಗಳನ್ನು ಹೊಡೆಯತಕ್ಕ ಪ್ರಯತ್ನ ಮಾಡುತ್ತಿದ್ದರು. ಅದನ್ನು ಸರಿಪಡಿಸಿದ್ದೇವೆ. ಅಂತಹವರನ್ನು ಪಟ್ಟಿಯಿಂದ ತೆಗೆದುಹಾಕಿದ್ದೇವೆಂದು ಹೇಳಿದರು. ಅದು ಬಹಳ ಒಳ್ಳೆಯದು. ಆದರೆ ನನಗೆ ಸಿಕ್ಕಿದಂತಹ ವರ್ತಮಾನದ ಪ್ರಕಾರ ಇಷ್ಟಾದರೂ ಕೂಡ ಇನ್ನೂ ಕೆಲವು ಕಂಟ್ರಾಕ್ಟುದಾರರು ಉದ್ದೇಶ ಪೂರ್ವಕವಾಗಿ ಸ್ಟೇಯನ್ನು ತೆಗೆದುಕೊಂಡು ಕೆಲಸ ನಿಲ್ಲಿಸತಕ್ಕ ಪ್ರಯತ್ನ ಮಾಡುತ್ತಿದ್ದಾರೆ ಎಂಬುದು ಗೊತ್ತಾಗಿದೆ. ಆದ್ದರಿಂದ ಸರ್ಕಾರದವರು ಇಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ಯೋಜನೆಗಳು ಬಹಳ ಅತಿಮುಖ್ಯವಾದ ಯೋಜನೆಗಳು ನಾವು ಎಷ್ಟೇ ಹೇಳಿದರೂ ಕೂಡ ಇದಕ್ಕೆ ಸಹಾಯ ಮಾಡದಿದ್ದರೆ ಬಹಳ ಅನ್ಯಾಯವಾಗುತ್ತದೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಪಿ. ಎ. ಸಿ. ಕೂಡ ಇದರ ಬಗ್ಗೆ ಹೇಳಿದೆ. ಯಾರ್ಯಾರು ಕಂಟ್ರಾಕ್ಟುದಾರರು ಈ ಯೋಜನೆಗಳಲ್ಲಿ ಮಾಡುವಂತಹ ಕೆಲಸ ಕಾರ್ಯಗಳಿಗೆ ಅಡ್ಡಿ ಆತಂಕಗಳನ್ನು ಉಂಟುಮಾಡಿ ಯಾರ್ಯಾರು ಕೆಲಸವನ್ನು ನಿಲ್ಲಿಸಿದ್ದಾರೋ ಅಂತಹ ವರನ್ನು ಬ್ಲಾಕ್ ಲಿಸ್ಟ್ ಮಾಡಿ ಅಂತ ಕೂಡ ಹೇಳಿದೆ. ಅಂತಹವರನ್ನು ಏಕೆ ಕೆಲಸದಲ್ಲಿ ಇಟ್ಟು ಕೊಂಡು ಕೆಲಸವನ್ನು ಕೊಟ್ಟಿದ್ದೀರಿ. ಅವರು ನಿಮಗೆ ಬೀಗರಾ, ನೆಂಟರಾ ಅಂತಹ ಪ್ರೀತಿ ವಿಶ್ವಾಸ ಏನು ? ಅಥವಾ ನಿಮ್ಮ ಪಕ್ಷಕ್ಕೆ ಸಹಾಯ ಮಾಡತಕ್ಕಂತಹವರಾ, ಯಾರು ಅವರು ? ಯಾರು ನಿಜವಾಗಿ ಕೆಲಸ ಮಾಡುವುದಿಲ್ಲವೋ ಅಂತಹವರನ್ನು ಆ ಪಟ್ಟಿಯಿಂದಲೇ ತೆಗೆದುಹಾಕಿಬಿಡಿ. ಯಾರಾದರೂ ಹೇಳಿರಲಿ, ನಾನೇ ಹೇಳಿದೆ ಅಂತ ತಿಳಿದುಕೊಳ್ಳಿ. ಇಂತಹವರನ್ನು ಮೊದಲು ತೆಗೆದು ಹಾಕಿ. ಇದನ್ನು ಸರಿಮಾಡದಿದ್ದರೆ ಯಾವ ಯೋಜನೆಗಳನ್ನು ಸಕಾಲದಲ್ಲಿ ಮಾಡಿ ನಿಜವಾಗಿಯೂ ಕಷ್ಟದಲ್ಲಿರತಕ್ಕ ರೈತರಿಗೆ ಸಹಾಯವನ್ನು ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಮಾಡಿದ್ದೇವೆಯೋ ಅದಕ್ಕೆ ಬದಲಾಗಿ ಒಂದೆರಡು ಕಂಟ್ರಾಕ್ಟುದಾರರಿಗೆ ಹಾಗೂ ಅವರು ಬದುಕುವುದ ಕ್ಕೋಸ್ಕರ ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ಇವನ್ನು ಮಾಡಿದ ಹಾಗೆ ಆಗುತ್ತದೆ. ಅದರೂ ಈ ರೀತಿ ಬ್ಲಾಕ್ ಲಿಸ್ಟನಲ್ಲಿರತಕ್ಕಂತಹವರಿಗೂ ಪುನಃ ಕೆಲಸವನ್ನು ಕೊಟ್ಟಿದ್ದಾರೆ ಎನ್ನುವ ದೂರು ಬಂದಿದೆ. ಇಂತಹವರು ಯಾರ್ಯಾರು ಇದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಅವರೆಲ್ಲ ಆಂಧ್ರ ಪ್ರದೇಶದವರು. ಅವರು ಇಲ್ಲಿಗೆ ಬಂದು ಹಣ ವನ್ನು ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಂತಹವರು ಯಾರ್ಯಾರು ಇದ್ದಾರೆ ಅವರನ್ನು ಮೊದಲು ಪಟ್ಟಿಯಿಂದ ತೆಗೆದು ಹಾಕಿ. ನಮ್ಮಲ್ಲೂ ಕೂಡ ಅಂತಹವರು ಇದ್ದರೆ, ಅವರನ್ನು ತೆಗೆದು ಹಾಕಿ. ಪಿ.ಎ.ಸಿ.ಯವರು ಏನು ಸಲಹೆ ಮಾಡಿದ ಪ್ರಕಾರ ಎಷ್ಟು ಜನರನ್ನು ಬ್ಲಾಕ್ ಲಿಸ್ಟ್ ಮಾಡಿದ್ದೀರಿ ? ಆ ರೀತಿ ಬ್ಲಾಕ್ ಲಿಸ್ಟ್ ಮಾಡಿದಂತಹವರಿಗೆ ಮತ್ತೆ ಕೆಲಸವನ್ನು ಕೊಟ್ಟಿದ್ದೀರೋ ಹೇಗೆ ಎಂಬ ಬಗ್ಗೆ ತಾವು ಉತ್ತರ ಕೊಡುತ್ತೀರೆಂದು ನಾನು ನಿರೀಕ್ಷಣೆ ಮಾಡುತ್ತೇನೆ.

ಇನ್ನು ಹೆಚ್ಚು ವಿಚಾರಗಳನ್ನು ಹೇಳದೆ, ತೆಲುಗು ಗಂಗಾ ಬಗ್ಗೆ ಹೇಳುವುದಾದರೆ, ನಮ್ಮ ಪಾಲಿನ ನೀರನ್ನು ಅವರು ಬಳಸಿಕೊಳ್ಳದ ಹಾಗೆ ನೋಡಿಕೊಳ್ಳಬೇಕು. ಅವರೂ ಕೂಡ ಇದನ್ನು ಯಾವ ರೀತಿ ಮಾಡುತ್ತಿದ್ದಾರೆಂಬುದನ್ನು ಈಗಾಗಲೇ ನಾನು ಹೇಳಿದ್ದೇನೆ. ಅವರು ಏನಾದರೂ ಮಾಡಿ ಇದನ್ನು ಎಗ್ಸಿಕ್ಯೂಟ್ ಮಾಡುತ್ತೇವೆ ಎನ್ನತಕ್ಕ ದಾಟಿಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರಕ್ಕೆ ಹಾಗೂ ಪ್ರಧಾನ ಮಂತ್ರಿಗಳಿಗೆ ಮಾನ್ಯ ಮುಖ್ಯ ಮಂತ್ರಿಗಳಿಂದ ೧೯೮೫ರಲ್ಲೇ ಪತ್ರ ಬರೆಸಲಾಗಿದೆ ಎಂಬುದಾಗಿ ಮಾಜಿ ಸಚಿವರಾದ ಶ್ರೀಮಾನ್ ದೇವೇಗೌಡರು ತಮ್ಮ ಭಾಷಣದಲ್ಲೇ ಹೇಳಿದ್ದಾರೆ. ಆದರೆ ನಮ್ಮ ಕಳಕಳಿಯ ಮನವಿ ಏನೆಂದರೆ ಈ ಒಂದು ತೆಲುಗು ಗಂಗಾ ಯೋಜನೆ......

ಶ್ರೀ ಬಿ. ಬಸವಲಿಂಗಪ್ಪ.— ನಾನು ತಮಗೆ ಮಾಡಬಾರದಾಗಿತ್ತು. ಏಕೆಂದರೆ, ತಾವು ತಮ್ಮ ಭಾಷಣವನ್ನು ಮುಗಿಸುವಹಂತದಲ್ಲಿದ್ದೀರಿ, ಆದಕ್ಕೋಸ್ಕರ ಎರಡು ನಿಮಿಷದಲ್ಲಿ ವಿಷಯ ಹೇಳಿ ಬಿಡುತ್ತೇನೆ. ಶ್ರೀಮಾನ್ ದೇವೇಗೌಡರು ತಮ್ಮ ಸಚಿವ ಪದವಿಗೆ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅವರು ರಾಜೀನಾಮೆಯನ್ನು ಕೊಡುವಾಗ ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಗಳ ಬಗ್ಗೆ ೬ ಪುಟಗಳಷ್ಟು ಕಾಗದದಲ್ಲಿ ಅನೇಕ ಕಾರಣಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವಂತಹ ಪ್ರತಿಯೊಂದು ಕಾರಣಗಳಿಗೂ ಸರಿಯಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಆ ರೀತಿಯ ಕಾರಣಗಳು ನಮ್ಮ ಕಡೆಯಿಂದ (ವಿರೋಧ ಪಕ್ಷ) ಬಂದದ್ದಲ್ಲ. ನಿಮ್ಮ ಕಡೆಯಿಂದಲೇ (ಆಡಳಿತ ಪಕ್ಷದವರು) ಬಂದಿದೆ. ಪ್ರತಿಯೊಂದು ಅಂಕಿ ಅಂಶಗಳಿಗೂ ತಾವು ಉತ್ತರ ಕೊಡಲೇ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಪತ್ರಿಕೆಯಲ್ಲಿ ಈ ರೀತಿ ಬಂದಿದೆ.

"NTR RULES OUT PARLEY ON TELUGU-GANGA"
Chief Minister, NTR on Thursday Categorically ruled out holding parleys with his counter-parts in Karnataka & Maharashtra to resolve the dispute over Telugu-Ganga project that envisages supply of drinking water to Madras. He said he had to keep in view his relation between the two riparian States and it was not desirable for him to take the initiative...

In an exclusive Interview in Andhra Pradesh on the occasion of the new edition being launched"...

ಎಂದು ಹೇಳಿದ್ದಾರೆ. ಇದನ್ನು ಮೊನ್ನೆ ಕೂಡಾ ಹೇಳಿದ್ದಾರೆ. ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳದೇ ಇದ್ದರೆ ನಮ್ಮ ರಾಜ್ಯಕ್ಕೆ ದೊಡ್ಡ ಅನ್ಯಾಯವಾಗುತ್ತದೆ. ಬೇಕಿದ್ದರೆ ತಾವು ಆಲ್ ಪಾರ್ಟಿ ಡೆಲಿಗೇಷನನ್ನು ಕರೆದು ಕೊಂಡು ಹೋಗಿ ಅದಕ್ಕೆ ತಾವು ಲೀಡ್ ಮಾಡಿ. ನಾವೆಲ್ಲರೂ ಪ್ರಧಾನಮಂತ್ರಿಯವರ ಹತ್ತಿರ ಹೋಗಿ ಈ ವಿಷಯದ ಬಗ್ಗೆ ಹೇಳೋಣ. ಇಲ್ಲದಿದ್ದರೆ ಈಗಾಗಲೇ ನಮಗೆ ಕ್ಲಿಯರೆನ್ಸ್ ಸಿಕ್ಕಿದೆ ಎಂದು ಅವರು ಮಾಡುತ್ತಾ ಹೋದರೆ ಮುಂದೆ ನಾವು ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ. ತೊಂದರೆಯಲ್ಲಿ ಸಿಕ್ಕುತ್ತೇವೆ. ಇದರಿಂದ ಬರಗಾಲದ ಬವಣೆಯಲ್ಲಿರತಕ್ಕ ಪ್ರದೇಶದಲ್ಲಿರತಕ್ಕ ಜನರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. You will be betraying the people of this State. ಇದಕ್ಕಾಗಿ ನೀವು ರಿಸೋರ್ಸಸ್ ಮೊಬಲೈಸ್ ಮಾಡುವುದರ ಮೂಲಕ ಹಣ ಸಂಗ್ರಹಣೆ ಮಾಡಿ. ನೀವು ಏನಾದರೂ ಮಾಡಿ ಬೆಗ್, ಬಾರೋ or ಸ್ಟೀಲ್ ಎನ್ನುವ ಹಾಗೆ ಏನಾದರೂ ನೀವು ಮಾಡಿ. do whatever you want, but execute all the projects. ಅದಕ್ಕೆ ಏನು ಬೆಂಬಲ ಬೇಕೋ ಅದನ್ನು ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಅದು ಬಿಟ್ಟು ನೀವು ಏನು ಮಾಡಿದಿರಿ, ನಿಮ್ಮ ಸರ್ಕಾರ ಏನು ಮಾಡಿತು ಎಂದು ಕೇಳುವುದು ಬೇಡ. ಅದಕ್ಕೆ ನಾನು ಅವರನ್ನು ಕೇಳಲಿಲ್ಲ. ಮಾನ್ಯ ದೇವೇಗೌಡರು ಬೇಸತ್ತು, ಬೇಸತ್ತು ಸಾಕಪ್ಪ ನಿಮ್ಮ ಸಹವಾಸ ಅಂತ ಮಂತ್ರಿ ಪದವಿ ಬಿಟ್ಟರು ಪಾಪ. ಈಗಂತೂ ಅವರು ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಿಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಅವರಿಗೆ ಗೊತ್ತಾದಮೇಲೆ ಪಾಪ ಅವರು ತಾನೆ ಏನು ಮಾಡುತ್ತಾರೆ? ನೀವು ಹಣಾನೇ ಕೊಡಲಿಲ್ಲ ಅವರಿಗೆ. ಅಥವಾ ಈ ಪ್ರಾಜೆಕ್ಟ್‌ಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಅವರಿಗೆ ಸಹಾಯ ಮಾಡಿಲ್ಲ. ಇದನ್ನೆಲ್ಲಾ ಹೇಳಿ ಅವರೇ ಬೇಡ ಅಂದ್ರು ಅವರು ರಾಜೀನಾಮೆ ಕೊಟ್ಟದ್ದಕ್ಕೂ ಕಾರಣ ಹೇಳಿದ್ದಾರೆ. ನಾನು ಬೇರೆ ಯಾವುದೇ ಕಾರಣಕ್ಕೆ ರಾಜೀನಾಮೆ ಕೊಡಲಿಲ್ಲ. ಸಿಒಡಿ ಎನ್‌ಕ್ವಯರಿ ಇದೆಯೆಂದು ರಾಜೀನಾಮೆ ಕೊಡಲಿಲ್ಲ. ಅಥವಾ ತಮ್ಮ ಮೇಲೆ ಲೋಕಾಯುಕ್ತದ ಗೂಬೆ ಕೂರಿಸಿದರು ಎಂದು

ಕೊಟ್ಟಿಲ್ಲ. ಬೇರೆ ಛಾರ್ಜಸ್ ಇದೆ ಎಂದು ಕೊಡಲಿಲ್ಲ, ನಾನು ಕೊಟ್ಟ ಕಾರಣ ಏಕೆಂದರೆ ಈ ರಾಜ್ಯದಲ್ಲಿ ಇರತಕ್ಕ ರೈತರಿಗೆ ಅನ್ಯಾಯ ಆಗುತ್ತಾ ಇದೆ, ಈ ರಾಜ್ಯದಲ್ಲಿನ ನೀರನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುತ್ತಾ ಇಲ್ಲ, ನನಗೆ ಸರಿಯಾದ ರೀತಿಯಲ್ಲಿ ಅಲೋಕೇಷನ್ ಕೊಟ್ಟಿಲ್ಲ, ಸರಿಯಾದ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲವಾದ್ದರಿಂದ ಬೇಸತ್ತು ರಾಜೀನಾಮೆಯನ್ನು ಕೊಡುತ್ತಿದ್ದೇನೆನ್ನುವ ಮಾತನ್ನು ಸ್ಪಷ್ಟವಾಗಿ ಈ ಸದನದಲ್ಲಿ ಹೇಳಿದ್ದಾರೆ. ಇದಕ್ಕಿಂತಲೂ ಸ್ಪಷ್ಟವಾದ ಉತ್ತರ ನಿಮಗೆ ಬೇರೆ ಎಲ್ಲೂ ಸಿಗುವುದಿಲ್ಲವೆಂದು ನನ್ನ ಭಾವನೆ. ಅವರು ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಟ್ಟಿದ್ದಾರೆ ಅಂಕಿ ಅಂಶಗಳನ್ನು ಕೊಟ್ಟು ಬೇಸತ್ತು ರಾಜೀನಾಮೆ ಕೊಟ್ಟಿದ್ದಾರೆ. ಅದರ ಪ್ರಕಾರ ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಹಾಗೆಯೇ ಎಷ್ಟು ಹಣವನ್ನು ಅಲಾಟ್ ಮಾಡಿದ್ದೀರಿ ಹಾಗೂ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವ ಬಗ್ಗೆ ಅಂಕಿಅಂಶ ನೀವೂ ಕೊಟ್ಟಿದ್ದೀರಿ. ಆದರೆ ನೀವು ದುರ್ದೈವ ಮೈಸೂರಿನಲ್ಲಿ ಹೋಗಿ ಏನು ಹೇಳಿದ್ದೀರಿ? ಪೈಪೋಟಿ ಎಂದರೆ ಅವರು ಸರಿ ಇಲ್ಲ ಎಂದರೆ ನೀವು ಸರಿ ಇದ ಎಂದು ಹೇಳುವುದು. ಹೆಗಡೆಯವರ ಕಾಲದಲ್ಲಿ ಇರಿಗೇಷನ್ ಡಬಲ್ ಆಗಿದೆ, ಆದಕ್ಕಾಗಿ ಈ ಸ್ಟೇಟ್‌ನಲ್ಲಿ ಇರತಕ್ಕವರು ಅವರಿಗೆ ಚಿರಋಣಿಗಳಾಗಿರಬೇಕು ಎನ್ನುವ ಒಂದು ಮಾತು ಏನಿದೆ...

ಶ್ರೀ ಎಸ್. ಆರ್. ಬೊಮ್ಮಾಯಿ.— ಅವರು ಯಾವ ಪತ್ರಿಕೆಯನ್ನು ಓದಿದರೋ ನನಗೆ ಗೊತ್ತಿಲ್ಲ. ಯಾವ ಪತ್ರಿಕೆಯಲ್ಲಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕನ್ನಡ ಪ್ರಭಾದಲ್ಲಿ ಬಂದಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾನು ಏನು ಮಾತನಾಡಿದ್ದೇನೋ ಅದನ್ನು ನಾನು ಹೇಳುತ್ತೇನೆ. ಅವರು ಹೇಳುವುದು ಅಲ್ಲ. ಹೆಡ್ ಲೈನ್ಸ್ ಏನು ಕೊಟ್ಟಿದ್ದಾರೋ, ಅವರು ಏನು ಬರೆದಿದ್ದಾರೆ ಎಂದು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—''ನೀರಾವರಿ ಹಿಮ್ಮಡಿಸಿದ ಹೆಗಡೆ ಸರ್ಕಾರಕ್ಕೆ ಋಣಿಯಾಗಿರಿ'.

ಶ್ರೀ ಎಸ್. ಆರ್. ಬೊಮ್ಮಾಯಿ.— ಹೆಡ್ ಲೈನ್ಸ್ ಕೊಡುವುದರಲ್ಲಿ ಬದಲಾವಣೆ ಇರುತ್ತದೆ. ತಾವು ಅದನ್ನು ಓದುವ ಅವಶ್ಯಕತೆ ಇಲ್ಲ. ಉತ್ತರವನ್ನು ಕೊಡುವಾಗ ನಾನು ಇದರ ಬಗ್ಗೆ ಹೇಳುತ್ತೇನೆ. ಈ ವಿಷಯ ಪ್ರಜಾವಾಣಿಯಲ್ಲಿ ಬಂದಿದೆ, ಕನ್ನಡ ಪ್ರಭಾದಲ್ಲಿ ಬಂದಿದೆ, ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿದೆ. ನಾನು ಏನು ಮಾತನಾಡಿದ್ದೀನೆಂದು ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕೊನೆಯದಾಗಿ ಏನು ಪತ್ರಿಕೆಯಲ್ಲಿ ಬಂದಿದೆ ಅದನ್ನು ಓದಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

> ''ಕಳೆದ ಐದು ವರ್ಷದಲ್ಲಿ ನೀರಾವರಿ ಪ್ರದೇಶ ಎರಡು ಪಟ್ಟು ಆಗಿದೆ. ಇದಕ್ಕೆ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ನೇತೃತ್ವವೇ ಕಾರಣ. ಇದಕ್ಕಾಗಿ ಜನತೆ ಹೆಗಡೆಯವರಿಗೆ ಚಿರಋಣಿ ಆಗಬೇಕೆಂದು ಕಂದಾಯ ಹಾಗೂ ನೀರಾವರಿ ಖಾತೆ ಸಚಿವರಾದ ಎಸ್.ಆರ್. ಬೊಮ್ಮಾಯಿ ಅವರು ಬುಧವಾರ ಹೇಳಿದರು''

ಎಂದರೆ ನಿಮ್ಮ ಮಾತಿನಲ್ಲಿ ಸತ್ಯ ಇದೆ ಎನ್ನುವುದಾದರೆ ಈ ಪುಸ್ತಕಗಳನ್ನೆಲ್ಲಾ ಸುಟ್ಟುಹಾಕಿ. ಏಕೆಂದರೆ ಏನು ತಾವು ಪ್ರಿಂಟ್ ಮಾಡಿ ಈ ದೇಶದ ಜನತೆ ತಿಳಿದು ಕೊಳ್ಳಲಿ ಎಂದು ಕೊಟ್ಟಿದ್ದೀರಿ ಅವರ ಅಂಕಿ ಅಂಶಕ್ಕೂ ನಿಮ್ಮ ಭಾಷಣಕ್ಕೂ ವ್ಯತ್ಯಾಸವಾಗುತ್ತದೆ. ಆದ್ದರಿಂದ ಏನು ಪುಸ್ತಕಗಳನ್ನು ನಮಗೆ ಕೊಟ್ಟಿದ್ದೀರಿ ಅವನ್ನು ಸುಟ್ಟುಹಾಕಿ. ಇಲ್ಲವೇ ನೀವು ತಪ್ಪುದಾರಿಗೆ ಎಳೆಯುತ್ತಿದ್ದೀರಿ ಎಂದಾಯಿತು ಅಥವಾ ಅವರು ತಪ್ಪುದಾರಿಗೆ ಎಳೆಯುತ್ತಿದ್ದಾರೆಂದಾಯಿತು. ಇಲ್ಲಾ ಮುಖ್ಯಮಂತ್ರಿಯವರಿಗೆ ಸಪೋರ್ಟ್ ಮಾಡುವುದಕ್ಕೋಸ್ಕರ ಹೇಳಿಕೆ ಕೊಟ್ಟಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ನಾನು ದಯವಿಟ್ಟು ಕಳಕಳಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ತಾವು ಹಿರಿಯರಿದ್ದೀರಿ ಅನುಭವಸ್ಥರು ಇದ್ದೀರಿ. ಆದ್ದರಿಂದ xxx ಕೆಲಸವನ್ನು ನೀವು ಮಾಡಬೇಡಿರಿ.

SRI S.R. BOMMAI —He must withdraw it.

SRI M. RAGHUPATHY. —He must apologise.

(ಗೊಂದಲ)

ಶ್ರೀ ಎಸ್.ಆರ್.ಬೊಮ್ಮಾಯಿ.—ಅವರು ಮಾತನಾಡುವಾಗ **ಪದಗಳನ್ನು ಉಪಯೋಗಿಸಿದ್ದಾರೆ ಅದನ್ನು ವಿತ್‌ಡ್ರಾ ಮಾಡಬೇಕು.

ಛೇರ್ಮನ್.—ನಾನು ಆ ಪದವನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

SRI S.R. BOMMAI.—You have to withdraw it.

INTERRUPTION

SRI M. RAGHUPATHY.—Most indignified language.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಆ ಪದವನ್ನು ವಿತ್‌ಡ್ರಾ ಮಾಡಿ.

SRI M. RAGHUPATHY.—I am on a point of order.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಹೇಳಿದ್ದೆ ಹೇಳಿ, ನೀವು ಮಾಡಿದ್ದೆ ಸರಿ ಎಂದು ಹೇಳುತ್ತೀರಿ ಎನ್ನುವ ಅರ್ಥದಲ್ಲಿ ಹೇಳಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಅವರು ತಲೆಹಿಡಿಯುತಕ್ಕ ಪದವನ್ನು ಏನು ಬಳಸಿದ್ದಾರೆ ಅದನ್ನು ವಿತ್‌ಡ್ರಾ ಮಾಡಬೇಕು.

ಛೇರ್ಮನ್.—ಮಾನ್ಯ ಖರ್ಗೆಯವರು ದಯವಿಟ್ಟು ಆ ಪದವನ್ನು ವಿತ್‌ಡ್ರಾ ಮಾಡಿಕೊಳ್ಳಿ.

SRI R. VENKATARAMAIAH.—That should be withdrawn. It is not proper

ಶ್ರೀ ಎಂ. ರಘುಪತಿ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನು ಹೇಳಿರತಕ್ಕ ಪದ ಅನ್‌ಪಾರ್ಲಿಮೆಂಟರಿ ಇದ್ದರೆ ವಿತ್‌ಡ್ರಾ ಮಾಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ತಲೆಹಿಡಿಯುತಕ್ಕ ಕೆಲಸ ಅಂದರೆ ಅದು ಪಿಂಪ್ ಎಂದು ಅರ್ಥ. ಅದಕ್ಕೆ ನೀವು ಕ್ಷಮಾಪಣೆ ಕೇಳಬೇಕು, ಇದೇನು? ಇದು ಸಂಸ್ಕೃತಿ ಏನು ?

ಛೇರ್ಮನ್—ಮಾನ್ಯ ಸಚಿವರು ಕ್ರಿಯಾಲೋಪ ಎತ್ತಿದ್ದಾರೆ, ಬೇರೆ ಸದಸ್ಯರುಗಳು ಕುಳಿತುಕೊಳ್ಳಿ. ಅವರ ಕ್ರಿಯಾಲೋಪ ಏನು ಕೇಳೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಛೇರ್ಮನ್‌ರವರಿಗೆ ನಾನು ಈಗಾಗಲೇ ಹೇಳಿದ್ದೇನೆ. ಅವರ ಮನಸ್ಸಿಗೆ ನೋಯಿಸಬೇಕೆಂದೂ ಹಾಗೂ ಅವರಿಗೆ ಅಗೌರವ ತರುವ ರೀತಿಯಲ್ಲಿ ಹೇಳಿಲ್ಲ. ಹಾಗೇನಾದರೂ ಆಗಿದ್ದರೆ ಆ ಪದವನ್ನು ವಿತ್‌ಡ್ರಾ ಮಾಡುತ್ತೇನೆಂದು ಹೇಳಿದ್ದೇನೆ. ನಾನು ಆ ರೀತಿ ಹೇಳಿದ ಮೇಲೆ...

SRI S.R. BOMMAI.—He must apologise.

ಛೇರ್ಮನ್.—ಆ ಪದವನ್ನು ಎಕ್ಸ್‌ಪಂಜ್ ಮಾಡಿದ್ದೇನೆ. ಆಮೇಲೆ ವಿತ್‌ಡ್ರಾ ಮಾಡಿದ್ದೇನೆಂದು ಸಹ ಹೇಳಿದ್ದಾರೆ. ಆ ಪದವನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

ಶ್ರೀ ಕೆ. ಮಲ್ಲಪ್ಪ.—ಇದು ಊರ ಮುಂದೆ ಚಪ್ಪಲಿಯಲ್ಲಿ ಹೊಡೆದು ಮನೆ ಬಾಗಿಲಲ್ಲಿ ಕಾಲಿಗೆ ಬಿದ್ದರು. ಅಂದ ಹಾಗೆ ಆಯಿತು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ಆ ಪದವನ್ನು ಎಕ್ಸ್‌ಪಂಜ್ ಮಾಡಿದ್ದೀರಿ. ಅದು ಮುಗಿಯಿತು, ಅವರು ಏತಕ್ಕೆ ಮಾತನಾಡಬೇಕು ?

(ಗೊಂದಲ)

* Expunged as ordered by the chair.

ಛೇರ್ಮನ್.—ನಾನು ಆ ಪದವನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

ಶ್ರೀ ಎಂ. ರಘುಪತಿ.—ಎಕ್ಸ್‌ಪಂಜ್ ಮಾಡಬೇಡಿ, ವಿತ್‌ಡ್ರಾ ಮಾಡಬೇಕು. Expunction is not a punishment. Expunction is the easiest way to rescue a person.

ಛೇರ್ಮನ್.—ವಿತ್‌ಡ್ರಾ ಕೂಡ ಮಾಡಿದ್ದಾರೆ.

ಶ್ರೀ ಎಂ. ರಘುಪತಿ.—ವಿತ್‌ಡ್ರಾ ಮಾಡಿದ್ದರೆ ಸರಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಖರ್ಗೆಯವರು ಒಂದು ಪದವನ್ನು ಉಪಯೋಗಿಸಿದ್ದಾರೆ. ಅದರ ಅರ್ಥ ಹಳೆಯ ಮೈಸೂರಿನಲ್ಲಿ ಸರಿಯಾದ ಅರ್ಥವಾಗುವುದಿಲ್ಲ. ಅವರು ಹೈದರಾಬಾದ್ ಕರ್ನಾಟಕ ಏರಿಯಾದಿಂದ ಬಂದಿದ್ದಾರೆ. ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ, ಅವರು ಆ ಪದವನ್ನು ವಿತ್‌ಡ್ರಾ ಮಾಡಿದ್ದಾರೆ, ತಾವೂ ಕೂಡ ಅದನ್ನು ಎಕ್ಸ್‌ಪಂಜ್ ಮಾಡಲಿಕ್ಕೆ ಆರ್ಡರ್ ಮಾಡಿದ್ದೀರಿ. ಆದ್ದರಿಂದ ಈಗ ಅದನ್ನು ಅಷ್ಟಕ್ಕೇ ಮುಗಿಸೋಣ.

ಛೇರ್ಮನ್.—ಅದು ಆಯಿತು. ಖರ್ಗೆಯವರೇ, ತಾವು ಬೇಗ ಮುಗಿಸಿ.

೨–೩೦ ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಬಗ್ಗೆ ವೈಯುಕ್ತಿಕವಾಗಿ ನನಗೆ ಗೌರವ ಇದೆ. ನಾನು ಇದನ್ನು ಯಾವ ಅರ್ಥದಲ್ಲಿ ಹೇಳಿದ್ದು ಎಂದರೆ ಒಬ್ಬರಿಗೊಬ್ಬರಿಗೆ ಪೈಪೋಟಿ ಬೇಡ ಎನ್ನುವ ಅರ್ಥದಲ್ಲಿ ಹೇಳಿದೆನೇ ಹೊರತು, ಬೇರೆ ಅರ್ಥ ಬರತಕ್ಕಂಥ ರೀತಿಯಲ್ಲಿ ಹೇಳಲಿಲ್ಲ. ನಿಮಗೂ ಕೂಡ ಅನ್ಯಾಯವಾಗಿದ್ದರೆ ಅನ್ಯಾಯವಾಗಿದೆ ಎಂದು ಹೇಳತಕ್ಕಂಥ ಧೈರ್ಯ ಬರಲಿ ಎಂದು ನಾನು ಹೇಳಿದ್ದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಖರ್ಗೆಯವರನ್ನು ನಾನು ಬಲ್ಲೆ. ನನ್ನನ್ನು ಅವರು ಬಲ್ಲರು. ೨೫ ವರ್ಷಗಳಿಂದ ನಾನು ರಾಜಕೀಯದಲ್ಲಿದ್ದೇನೆ. ನಾನು ಯಾವುದೇ ಒಬ್ಬ ಹಿರೋ ವರ್ಶಿಪರ್ ಅಲ್ಲ. ಆ ಗುಣ ನನ್ನ ರಕ್ತದಲ್ಲೇ ಇಲ್ಲ. ನನ್ನ ರಾಜಕೀಯ ಜೀವನದಲ್ಲಿ ಇದು ಇಲ್ಲ, ನಾನು ಉತ್ತರ ಕೊಡುವಾಗ ಹೇಳುತ್ತೇನೆ. ಶ್ರೀ ರಾಮಕೃಷ್ಣ ಹೆಗಡೆ ಯವರನ್ನು ಮೆಚ್ಚಿಸುವಂತಾದ್ದು, ಅಥವಾ ಬೇರೆ ಜನರನ್ನು ಮೆಚ್ಚಿಸುವಂತಾದ್ದು ಅಲ್ಲ. ಜನ ಮೆಚ್ಚು ವಂಥ ರೀತಿಯಲ್ಲಿ ನಾವು ನಡೆದುಕೊಳ್ಳಬೇಕಾಗುತ್ತದೆ. ಹೀರೋ ವರ್ಶಿಪ್ ವಿಚಾರ ನನ್ನಲ್ಲಿ ಇಲ್ಲವೇ ಇಲ್ಲ. ಈ ಸಭೆಯಲ್ಲಿ ಹೇಳಿದ್ದೇನೆ. ಕ್ಯಾಬಿನೆಟ್‌ನಲ್ಲಿ ಹೇಳಿದ್ದೇನೆ. ತಪ್ಪು ಮಾಡಿದರೆ ತಪ್ಪು ಎಂದು ಹೇಳುತ್ತೇನೆ. ಶ್ರೀ ದೇವೇಗೌಡರಿಗೆ ಏನು ಹೇಳಬೇಕೋ ಅದನ್ನು ಹೇಳಿದ್ದೇನೆ. ಇದರಲ್ಲಿ ನಾನು ಹಿಂದು ಮುಂದು ನೋಡತಕ್ಕದ್ದು ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂತೋಷ. ತಾವು ತಮ್ಮ ಉತ್ತರದಲ್ಲಿ ಹೇಳುತ್ತೇನೆ ಎಂದು ಹೇಳಿದ್ದೀರಿ. ಕಾದು ನೋಡೋಣ. ಇಷ್ಟು ಮಾತ್ರ ನಾನು ಹೇಳುತ್ತೇನೆ. ಸಧ್ಯದಲ್ಲಿ ಇರ ತಕ್ಕಂಥ ತೆಲುಗು–ಗಂಗಾ ವಿಚಾರದ ಬಗ್ಗೆ ನನ್ನ ಸಲಹೆಯನ್ನು ಹೇಳಿದ್ದೇನೆ. ಉಳಿದಂಥ ಪ್ರಾಜೆಕ್ಟ್‌ಗಳ ಬಗ್ಗೆ ಕೂಡ ಹೇಳಿದ್ದೇನೆ. ಎಷ್ಟರ ಮಟ್ಟಿಗೆ ನೀವು ಇದರಲ್ಲಿ ಯಶಸ್ವಿಯಾಗುತ್ತೀರೆಂದು ಕಾದು ನೋಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ತೆಲುಗು–ಗಂಗಾ ವಿಚಾರ ಗೊತ್ತಾದಾಗ ನನ್ನ ಸಹದ್ಯೋಗಿ ಗಳಾಗಿದ್ದ ಶ್ರೀ ದೇವೇಗೌಡರು ಖುದ್ದಾಗಿ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳನ್ನು ಭೇಟಿ ಯಾಗಿದ್ದರು, ಪಾರ್ಲಿಮೆಂಟಿನ ಎಲ್ಲಾ ಸದಸ್ಯರನ್ನು ಕರೆದು ಸಭೆ ಮಾಡಿದ್ದಾರೆ. ಈ ಬಗ್ಗೆ ಮೆಮೊರ್‍ಯಾಂಡಮ್ ಕೂಡ ತಯಾರು ಮಾಡಿದ್ದೇವೆ. ಎಲ್ಲಾ ಪಕ್ಷದ ಸದಸ್ಯರು ಪ್ರಧಾನಮಂತ್ರಿ ಯವರನ್ನು ಭೇಟಿ ಮಾಡತಕ್ಕಂಥ, ಮೆಮೊರ್‍ಯಾಂಡಮ್ ಕೊಡತಕ್ಕದ್ದು ಸಹ ನಡೆದಿದೆ. ಆಮೇಲೆ ಮುಖ್ಯಮಂತ್ರಿಗಳು ಮತ್ತು ನಾನು ಕೇಂದ್ರ ನೀರಾವರಿ ಮಂತ್ರಿಗಳನ್ನು ಭೇಟಿಯಾಗಿದ್ದೇವೆ, ಈ ಬಗ್ಗೆ ಉಭಯ ಪಕ್ಷಗಳ ಮಾತುಕತೆ ನಡೆಸುವ ಬಗ್ಗೆ ಅವರು ಹೇಳಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರ ಕ್ಲಿಯರೆನ್ಸ್ ಕೊಟ್ಟಿಲ್ಲ ಎಂಬ ಮಾತನ್ನು ನಾನು ಸ್ಪಷ್ಟಪಡಿಸಬಯಸುತ್ತೇನೆ. ಕೇಂದ್ರದಿಂದ ನಮಗೆ ಆಶ್ವಾಸನೆ ಸಿಕ್ಕಿದೆ. ನಮ್ಮನ್ನು ಕೇಳದೆ ಕ್ಲಿಯರೆನ್ಸ್ ಕೊಡುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಇವತ್ತು ಕೂಡ ಎಂ.ಪಿ.ಗಳು ದೊಡ್ಡ ವಿಷಯವಾಗಿ ಪ್ರಸ್ತಾಪ ಮಾಡಿದ್ದಾರೆ. ಇದು ಪೇಪರ್‌ನಲ್ಲಿ ಬಂದಿದೆ. ಆದ್ದರಿಂದ ಇದು ಬಹಳ ಮುಖ್ಯವಾದದ್ದು ಅದಕ್ಕಾಗಿ ಇಷ್ಟು ಮಾತ್ರ ಹೇಳುತ್ತೇನೆ. ಈ ನಿಮ್ಮ ನೀರಾವರಿ ಇಲಾಖೆಯ ಬಗ್ಗೆ ಮಾತನಾಡುವಾಗ ಒಂದು ವರ್ಷದಲ್ಲಿ ನೀವು ಏನು ನಿರೀಕ್ಷಣೆ ಮಾಡಿದ್ದೀರಿ, ಅದಕ್ಕೆ ಸರಿಯಾದ ರೀತಿಯಲ್ಲಿ, ಆ ನಿರೀಕ್ಷೆಯ ಮಟ್ಟಕ್ಕೆ ಸರ್ಕಾರ ಬರಲಿಲ್ಲ. ಮತ್ತು ಏನು ಆಶ್ವಾಸನೆಯನ್ನು ಕೊಟ್ಟಿದ್ದರು. ಟಾರ್ಜೆಟ್ ಅನ್ನು ಅಚೀವ್ ಮಾಡುತ್ತೇವೆ ಎಂದು,ಅದನ್ನು ಕೂಡ ಮಾಡಲಿಲ್ಲ, ಆದ್ದರಿಂದ ಈ ಸರ್ಕಾರ ಈ ನೀರಾವರಿ ವಿಷಯದಲ್ಲಿ ಟಾರ್ಜೆಟ್‌ನ್ನು ಅಚೀವ್ ಮಾಡುವಲ್ಲಿ ವಿಫಲಗೊಂಡಿದೆ. ಅದಕ್ಕಾಗಿ ನಾನು ಈ ಬೇಡಿಕೆಗಳಿಗೆ ನನ್ನ ಬೆಂಬಲ ಕೊಡದೇ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಮತ್ತು ನನಗೆ ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ತಮಗೂ ಕೂಡ ವಂದಿಸುತ್ತೇನೆ.

† ಶ್ರೀ ಶಿವಾನಂದ ಕೌಜಲಗಿ (ಬೈಲಹೊಂಗಲ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ನೀರಾವರಿ ಮಂತ್ರಿಗಳಿಗೆ ಸಂಬಂಧಿಸಿದ ಬೇಡಿಕೆಯನ್ನು ನಾನು ಸ್ವಾಗತಿಸುತ್ತೇನೆ. ಇವತ್ತಿನ ದಿವಸ ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳದೆ ಈ ಮಲಪ್ರಭಾ ಯೋಜನೆಯಲ್ಲಿ ಬರತಕ್ಕಂಥ ಹಳ್ಳಿಗಳ ಪರಿಸ್ಥಿತಿಯನ್ನು ಮತ್ತು ಪುನರ್‌ನಿವೇಶನಗೊಂಡ ಹಳ್ಳಿಗಳ ಸ್ಥಿತಿಗತಿಗಳ ಬಗ್ಗೆ ಎರಡು ಮಾತುಗಳನ್ನು ಮಾನ್ಯ ನೀರಾವರಿ ಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ನಿಜವಾಗಿಯೂ ೧೯೭೮ರಲ್ಲಿ ಮಲಪ್ರಭಾ ಯೋಜನೆಯಿಂದ ಮುಳುಗಡೆಯಾದಂಥ ಪ್ರದೇಶದ ಪುನರ್‌ನಿವೇಶ ಹಳ್ಳಿಗಳ ಸ್ಥಿತಿಗತಿಗಳನ್ನು ನೋಡಿದಲ್ಲಿ ಬಹಳ ತ್ರಾಸ ಅನ್ನಿಸುತ್ತದೆ.

ಅಲ್ಲಿ ಇವತ್ತಿನ ದಿವಸ ಶಾಲೆಗಳನ್ನು ಕೊಟ್ಟಿದ್ದು. ಆ ಶಾಲೆಗಳ ರಿಪೇರಿಯನ್ನು ಯಾರೂ ಮಾಡುತ್ತಿಲ್ಲ. ಒಂದೇ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೈಲಹೊಂಗಲ ತಾಲ್ಲೂಕು ಸುತ್ತುಗಟ್ಟಿ ಮತ್ತು ಸಂಗೊಳ್ಳಿ ಗ್ರಾಮಗಳಲ್ಲಿರುವ ಶಾಲೆಗಳನ್ನು ರಿಪೇರಿ ಮಾಡಿಲ್ಲ. ಜಿಲ್ಲಾ ಪರಿಷತ್‌ನವರನ್ನು ಕೇಳಿಕೊಂಡಾಗ, ಅವರು ಈ ಕೆಲಸ ನೀರಾವರಿ ಇಲಾಖೆಗೆ ಸೇರುತ್ತದೆ, ಅವರೇ ಮಾಡುತ್ತಾರೆ ಎಂದು ಹೇಳುತ್ತಾರೆ ಇವರನ್ನು ಕೇಳಿದರೆ. ಅವು ನಮಗೆ ಸಂಬಂಧ ಇಲ್ಲವೆಂದು ಹೇಳುತ್ತಾರೆ. ಹೀಗಾಗಿ ಅಲ್ಲಿಯ ಶಾಲೆಗಳನ್ನಾಗಲೀ ಅಥವಾ ಯಾವುದೇ ಸರ್ಕಾರಿ ಬಿಲ್ಡಿಂಗ್‌ಗಳನ್ನು ರಿಪೇರಿ ಮಾಡಿಸುವವರು ಯಾರೂ ಇಲ್ಲ. ಆದಕಾರಣ ನೀರಾವರಿ ಇಲಾಖೆಯವರು ಈ ಜವಾಬ್ದಾರಿಯನ್ನು ತೆಗೆದುಕೊಂಡು, ಈ ಕೆಲಸಗಳನ್ನು ಪೂರ್ಣಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಗುಡಿಗಳ ಬಗ್ಗೆ ಸರ್ಕಾರದವರು ಪುನರ್‌ವಸತಿ ಹಳ್ಳಿಗಳಲ್ಲಿ ಒಂದೇ ಗುಡಿಯಲ್ಲಿ ಎಲ್ಲಾ ದೇವರುಗಳನ್ನು ಇಡುವುದು ಎಂದು ಒಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಮುಸಲ್ಮಾನ್ ದೇವರು, ಹಿಂದುಳಿದ ವರ್ಗದವರ ದೇವರು, ಲಿಂಗಾಯತರ ದೇವರು, ಬ್ರಾಹ್ಮಣರ ದೇವರುಗಳನ್ನು ಒಂದೇ ಗುಡಿಯಲ್ಲಿ ಇಡುವುದರಿಂದ, ಹೊಂದಾಣಿಕೆ ಸಾಧ್ಯವಿಲ್ಲ. ಆದಕಾರಣ ಇವರುಗಳಿಗೆ ಬೇರೆಬೇರೆ ಗುಡಿಗಳನ್ನು ಕಟ್ಟಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ, ಇವತ್ತಿನ ದಿವಸ ಕೆಲವು ಭಾಗಗಳಲ್ಲಿ ನೀರನ್ನು ಕೊಡದೇ ನೀರಿನ ಟ್ಯಾಕ್ಸನ್ನು ವಸೂಲ್ಮಾಡುತ್ತಿದ್ದಾರೆ. ಬೈಲಹೊಂಗಲ, ಹುಕ್ಕೇರಿ, ಮಾವಳ್ಳಿ ಮತ್ತು ಇಂಗಳಗಿ ಭಾಗಗಳಿಗೆ ನೀರನ್ನು ಕೊಡದೇ ಹೋದರೂ ಸಹಿತ, ದಂಡದ ಬಡ್ಡಿಯನ್ನು ವಸೂಲ್ಮಾಡುತ್ತಿದ್ದಾರೆ. ತಮಗೆ ಒಂದೇ ಒಂದು ವಿಷಯ ಹೇಳುತ್ತೇನೆ. ಏನೆಂದರೆ, ದಂಡದ ಬಡ್ಡಿ ೮೦ ಲಕ್ಷ ರೂಪಾಯಿಗಳು, ನೀರಿನ ಟ್ಯಾಕ್ಸ್ ೧೫ ಲಕ್ಷ ರೂಪಾಯಿಗಳು ಆಗಿದೆ. ನೀರನ್ನು ಕೊಡದೇ ದಂಡದ ಬಡ್ಡಿಯನ್ನು ವಸೂಲ್ಮಾಡುತ್ತಿದ್ದಾರೆ ಈ ದಂಡದ ಬಡ್ಡಿಯನ್ನು ವಸೂಲ್ಮಾಡಬಾರದು. ಈಗಾಗಲೇ ಮಾನ್ಯ ಕಂದಾಯ ಮತ್ತು ನೀರಾವರಿ ಮಂತ್ರಿಗಳು ೩೦-೪-೮೮ರವರೆಗೆ ದಂಡದ ಬಡ್ಡಿಯನ್ನು ಸೂಟ್ ಬಿಡುತ್ತೇವೆಂದು ಹೇಳಿದ್ದಾರೆ. ಈ ಬಗ್ಗೆ ಸರ್ಕಾರಿ ಆಜ್ಞೆಯನ್ನು ಕೂಡಲೇ ಹೊರಡಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇನ್ನು ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕಂಥ ಹಳ್ಳಿಗಳಿಗೆ, ಏತನೀರಾವರಿ ಯೋಜನೆ ಮುಖಾಂತರ ಎಷ್ಟು ನೀರು ಕೊಡಬೇಕೋ ಅಷ್ಟು ನೀರನ್ನು ಕೊಡುತ್ತಾ ಇಲ್ಲ. ಆದಕಾರಣ ಅಲ್ಲಿರತಕ್ಕ ಕಾಲುವೆಗಳ ರಿಪೇರಿ ಮಾಡಿಸಿ, ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕಂಥಜನರಿಗೆ ನೀರನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಚಿಕ್ಕನೀರಾವರಿ ವಿಚಾರವಾಗಿ ಹೇಳಬೇಕಾದರೆ, ಇವತ್ತಿನ ದಿವಸ ಉತ್ತರ ಕರ್ನಾಟಕದಲ್ಲಿ ಚಿಕ್ಕನೀರಾವರಿ ಯೋಜನೆಯು ಅಷ್ಟೊಂದು ಚೆನ್ನಾಗಿ ನಡೆದಿಲ್ಲವೆಂದು ಹೇಳಬೇಕಾಗಿದೆ. ಇವತ್ತಿನ ದಿವಸ ಉತ್ತರ ಕರ್ನಾಟಕದ ೪ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷದಿಂದ ಒಂದು ಯೋಜನೆಯು ಸರ್ವೆಯನ್ನು ಸಹ ಮಾಡಿಲ್ಲ, ಒಂದೂ ಫೈನಲ್ ಹಂತಕ್ಕೆ ಬಂದಿಲ್ಲ. ಚಿಕ್ಕಬೂದನೂರಿನಲ್ಲಿ ಕಳೆದ ನಾಲ್ಕು ವರ್ಷದಿಂದ ಪೆಂಡಿಂಗ್ ಇರತಕ್ಕ ಯೋಜನೆ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು, ಇದನ್ನು ಬಜೆಟ್‌ನಲ್ಲಿ ಸೇರಿಸಬೇಕೆಂದು ಹೇಳಿದರೂ ಕೂಡ ಇದುವರೆಗೆ ಸೇರಿಸಿಲ್ಲ. ಇಲ್ಲಿ ಈ ಯೋಜನೆ ಜಾರಿಗೆ ಬಂದರೆ, ೧೫೦೦ ಎಕರೆಗೆ ನೀರಾವರಿಯಾಗುತ್ತದೆ, ಇದಕ್ಕೆ ಸುಮಾರು ೮೦ ಲಕ್ಷ ರೂಪಾಯಿಗಳ ಅಂದಾಜು ವೆಚ್ಚ ತಗಲುತ್ತದೆ ಈ ಬಗ್ಗೆ ಮಾನ್ಯ ಮಂತ್ರಿಗಳನ್ನು ಕೇಳಿದರೆ, ಇದು ಬಜೆಟ್‌ನಲ್ಲಿ ಸೇರಿಲ್ಲವೆಂದು ಹೇಳುತ್ತಾರೆ. ಬರಗಾಲ ಪ್ರದೇಶದಲ್ಲಿ ಬರತಕ್ಕಂಥ ಈ ಯೋಜನೆ, ಆ ಏರಿಯಾ ಜನರ ಕ್ಷೇಮಕ್ಕಾಗಿ ಕೂಡಲೇ ಇದಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಕೊಟ್ಟು ತಕ್ಷಣ ಈ ಯೋಜನೆಯನ್ನು ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹೋದ ಅಧಿವೇಶನದಲ್ಲಿ ಮಾನ್ಯ ದೇವೇಗೌಡರು ಈ ಕೆಲಸವನ್ನು ಇನ್ನು ೨-೩ ತಿಂಗಳಲ್ಲಿ ತೆಗೆದುಕೊಳ್ಳಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದರು. ಆದ್ದರಿಂದ ಅವರ ಆಶ್ವಾಸನೆಯನ್ನು ಈಡೇರಿಸಬೇಕೆಂದು ಮಾನ್ಯ ಬೊಮ್ಮಾಯಿಯವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಇರಿಗೇಟೆಡ್ ಏರಿಯಾವನ್ನು ಡೆವೆಲಪ್‌ಮೆಂಟ್ ಮಾಡುವ ಸಲುವಾಗಿ ಹಣವನ್ನು ೩೧ನೇ ಮಾರ್ಚಿಯೊಳಗೆ ಬಿಡುಗಡೆ ಮಾಡುತ್ತಾರೆ. ಆದರೆ ಮೊನ್ನೆ ಮಾರ್ಚಿ ೨೮ನೇ ತಾರೀಖಿನ ದಿವಸ, ಮಲಪ್ರಭಾ ಯೋಜನೆಯಲ್ಲಿ ಬರತಕ್ಕಂಥ, ಇರಿಗೇಷನ್ ನಾರ್ತ್ ತಾಲ್ಲೂಕು ಆಫೀಸರ್‌ಗಳು ಒಂದು ಕೋಟಿ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದರು. ಇವತ್ತಿನ ದಿವಸ ನಾವು ಏನು ಮಾಡುವುದು, ಸರ್ಕಾರದವರು ೩೧ನೇ ಮಾರ್ಚಿಗೆ ಹಣ ಕೊಟ್ಟಿರುವುದರಿಂದ ಲ್ಯಾಪ್ಸ್ ಆಯಿತು. ಎಂದು ಹೇಳಿದ್ದಾರೆ. ಹಣವನ್ನು ಕೂಡಲೇ ವೇಳೆಗೆ ಸರಿಯಾಗಿ ಬಿಡುಗಡೆ ಮಾಡಿ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪುನರ್ವಸತಿ ಹಳ್ಳಿಗಳ ಬಗ್ಗೆ ಹೇಳಬೇಕಾದರೆ ನಂಗಳ ಗ್ರಾಮದಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಶಾಲೆಗಳನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡಿದರು ಇವತ್ತಿನವರೆಗೆ ಈ ಶಾಲೆಗಳು ಕಟ್ಟಡ ಇನ್ನು ಪೂರ್ಣವಾಗಿಲ್ಲ. ಶಾಲೆಗಳು ಸ್ಥಿತಿಗಳು ಹೀಗಿರುವಾಗ ಇನ್ನು ಈ ಯೋಜನೆಗಳು ಯಾವಾಗ ಮುಗಿಯುತ್ತದೆಂದು ತಾವು ತಿಳಿದುಕೊಳ್ಳಬೇಕು. Rehabilitated Areas ಯೋಜನೆಯಲ್ಲಿ ಬರತಕ್ಕ ಹಳ್ಳಿಗಳಲ್ಲಿ ಆಸ್ಪತ್ರೆ ಶಾಲೆ, ಬಸ್ಸುನಿಲ್ದಾಣಗಳನ್ನು ಕಟ್ಟಿಸಿ ರಸ್ತೆ ರಿಪೇರಿ ಸಹಿತ ಮಾಡಬೇಕು. ೧೯೭೮ ರಿಂದ ೮೮ ರವರೆಗೆ ಯಾವುದೇ ಒಂದು ಹಳ್ಳಿಯಲ್ಲಿಯೂ ರಸ್ತೆ ರಿಪೇರಿ ಆಗಿಲ್ಲ. ರಸ್ತೆಯ ರಿಪೇರಿ ಬಗ್ಗೆ ಕೇಳಿದರೆ ಪಿ ಡಬ್ಲ್ಯೂ.ಡಿ. ಇಲಾಖೆಗೆ ವರ್ಗಾವಣೆ ಆಗಿದೆಯೆಂದು ಹೇಳುತ್ತಾರೆ. ಪಿ.ಡಬ್ಲ್ಯೂ.ಡಿ. ಇಲಾಖೆಯವರನ್ನು ಕೇಳಿದರೆ ಅದು ನೀರಾವರಿ ಇಲಾಖೆಗೆ ವರ್ಗಾವಣೆಯಾಗಿದೆಯೆಂದು ಹೇಳುತ್ತಾರೆ. ಮಾಜಿ ಲೋಕೋಪಯೋಗಿ ಸಚಿವರಾದ ದೇವೇಗೌಡರು ನಮ್ಮ ಊರಿಗೆ ಬಂದಾಗ ನಮ್ಮ ಊರಿನ ಬಡಾವಣೆಗಳಲ್ಲಿ ಎಲ್ಲ ಕಡೆ ಮಣ್ಣನ್ನು ಹಾಕಿದರು. ಇದಕ್ಕೆ ಗ್ರ್ಯಾಂಟ್ ಎಲ್ಲಿಂದ ಬಂತು ಎಂದು ಕೇಳಿದರೆ ಇಲಾಖೆಯಿಂದ ಕ್ಲೈ ಮಾಡಿದ್ದೇವೆಂದು ಹೇಳಿದರು. ಹೀಗಾಗದಂತೆ ನೋಡಿಕೊಳ್ಳುವ ಸಲುವಾಗಿ ಒಮ್ಮೆಲೇ ರಸ್ತೆಯನ್ನು ರಿಪೇರಿ ಮಾಡಬೇಕು. ಇವತ್ತಿನ ತನಕ ಒಂದು ಕಿ. ಮೀ. ಸಹಿತ ಟಾರು ರಸ್ತೆಯಾಗಿಲ್ಲ. ಲಿಫ್ಟ್ ಇರಿಗೇಷನ್ನಿನಲ್ಲಿ ಮುಳುಗಡೆಯಾದ ಪ್ರದೇಶದ ಹಳ್ಳಿಯಲ್ಲಿ ಟಾರ್ ರಸ್ತೆ ಮಾಡಲು ಪ್ರಾವಿಜನ್ ಇಲ್ಲವೆಂದು ಹೇಳುತ್ತಾರೆ, ಇದೇ ಪ್ರಾಜೆಕ್ಟ್ ಹಣದಲ್ಲಿ ಟಾರ್ ರಸ್ತೆ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಮಾಜಿ ಲೋಕೋಪಯೋಗಿ ಸಚಿವರಾದ ದೇವೇಗೌಡರು ನನ್ನ ಕ್ಷೇತ್ರಕ್ಕೆ ಕೆಲವೊಂದು ಕೆಲಸಗಳನ್ನು ಮಾಡಿಸಿ ಕೊಟ್ಟಿದ್ದಾರೆ. ಅದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೆಲವೊಂದು ಕೆಲಸಗಳು ಅರ್ಧವಾಗಿರುವುದನ್ನು ಪೂರ್ಣವಾಗಿ ಮುಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಚಿಕ್ಕ ಬೂದನೂರಿನ ನೀರಾವರಿ ಕೆಲಸವನ್ನು ೨-೩ ತಿಂಗಳಿನಲ್ಲಿ ಪ್ರಾರಂಭಿಸಬೇಕೆಂದು ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ನಾವು ನೀರಾವರಿಯ ಬಗ್ಗೆ ಯೋಚನೆ ಮಾಡುವಾಗ ಅವರು ಕೊಟ್ಟಿರುವ ಅಂಕಿಅಂಶಗಳು ಸತ್ಯವಾಗಿದೆ. ಬೆಂಗಳೂರು ತುಮಕೂರು, ಕೋಲಾರಗಳಲ್ಲಿ ಯಾವ ಯೋಜನೆಯನ್ನು ತೆಗೆದುಕೊಂಡು ಯಾವ ಅನುಕೂಲವನ್ನು ಮಾಡಿಕೊಟ್ಟಿಲ್ಲ. ನಮಗೆ ೮೮-೮೯ರ ಇರಿಗೇಷನ್ ಪ್ರಾಜೆಕ್ಟ್ ಎಂದು ಒಂದು ಪುಸ್ತಕವನ್ನು ಕೊಟ್ಟಿದ್ದಾರೆ. ನಾನು ನಿನ್ನೆಯಿಂದ ಅದರಲ್ಲಿ ಹುಡುಕಾಡುತ್ತಿದ್ದೇನೆ. ಬೆಂಗಳೂರು ಕೋಲಾರ, ತುಮಕೂರು, ಚಿತ್ರದುರ್ಗ ಇಂತಹ ಪ್ರದೇಶಗಳಲ್ಲಿ ನೀರಾವರಿ ಮಾಡಿರುವುದು ಯಾವುದಾದರೂ ಯೋಜನೆ ಸಿಗುತ್ತದೆಯೋ ಇಲ್ಲವೋ ಎಂದರೆ ದುರಾದೃಷ್ಟವಶಾತ್ ಇಲ್ಲಿಯವರೆಗ ಅದು ಕಾಣಿಸಲಿಲ್ಲ. ಇದೆಯೋ ಇಲ್ಲವೋ ಗೊತ್ತಿಲ್ಲ. ಯಾವ ಪ್ರಾಜೆಕ್ಟ್ ಇದರಲ್ಲಿ ಸೇರಿಲ್ಲ. ಇಲ್ಲಿರುವ ನೀರನ್ನು ನಾವು ಸರಿಯಾಗಿ ಉಪಯೋಗ ಮಾಡಿಕೊಳ್ಳಲು ಆಗುತ್ತಿಲ್ಲ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಪ್ರಾಜೆಕ್ಟ್. ವೈ. ಕೆ. ರಾಮಯ್ಯನವರು ಎಲ್ಲ ಪಾರ್ಟಿಯವರನ್ನು ಸೇರಿಸಿ ಒಂದು ಸಮ್ಮೇಳನವನ್ನು ಮಾಡಿದರು. ಅದನ್ನು ತುಮಕೂರು ಕೋಲಾರ ಜಿಲ್ಲೆಗೆ ಕೊಡಿ ಮತ್ತು ಕಾವೇರಿ ನದಿಯಲ್ಲಿ ನೀರಿಲ್ಲವೆಂದು ಹೇಳಿದರು. ಅದನ್ನು ಕೋಲಾರದವರೆಗೂ ವಿಸ್ತರಿಸಿ ೨೦೦ ಅಡಿ ಬೆಂಗಳೂರಿನಿಂದ ಬಹಳ ಕಡಿಮೆ ಪ್ರದೇಶದಲ್ಲಿದೆ. ಕೋಲಾರದ ಬಗ್ಗೆ ಅವರು ಮಹತ್ವವಿಲ್ಲ ಬೇಗಳೂರು ತುಮಕೂರು ಜಿಲ್ಲೆಗಳ ಬಗ್ಗೆ ಅವರು ಯೋಚನೆ ಮಾಡಿಲ್ಲ. ಈ ಸರ್ಕಾರಕ್ಕೆ ನಾಲ್ಕು ಜಿಲ್ಲೆಗಳ ಬಗ್ಗೆ ಗಮನ ಇದೆಯೋ ಇಲ್ಲವೋ ನನಗೆ ಅನುಮಾನವಿದೆ. ಮಾಜಿ ದೇವೇಗೌಡರು ಮಂತ್ರಿಗಳಾಗಿದ್ದಾಗ ನಾನು ಅನೇಕ ಭಾರಿ ಎಲ್ಲರೂ ಸೇರಿ ಮಲತಾಯಿ ದೋಷಣೆ ಮಾಡುತ್ತಿರೆಂದು ನಾನು ಹೇಳಿದೆ.

ಸಮ್ಮೇಳನಕ್ಕೆ ಬಂದಿದ್ದ ಮಂತ್ರಿಗಳೆಲ್ಲರೂ ಕೂಡಾ, ಅದು ಮಾನ್ಯ ಚನ್ನಬಸಪ್ಪನವರು ಇರಬಹುದು, ದೇವೇಗೌಡರು ಇರಬಹುದು ಅಥವಾ ಎಂ. ಎಲ್. ಸಿ ಆಗಿದ್ದ ನಮ್ಮ ಸ್ನೇಹಿತರೊಬ್ಬರು ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿದ್ದರು, ಅವರಿರಬಹುದು, ಎಲ್ಲರೂ ಕೂಡಾ ಮೈಸೂರು, ಹಾಸನ ಜಿಲ್ಲೆಗಳಿಂದ ಬಂದು ಈ ನಮ್ಮ ನಾಲ್ಕು ಜಿಲ್ಲೆಗಳನ್ನು ಮರೆತಿದ್ದಾರೆ ಎಂದು ಹೇಳಿದ್ದಾರೆ. ಅದು ಸತ್ಯವಾಗಿದೆ. ನಮ್ಮ ಚೀಫ್ ಮಿನಿಸ್ಟರ್‌ರವರು ಕೋಲಾರಕ್ಕೆ ಬಂದಿದ್ದರು ೨೫ ಸಾವಿರ ಜನ ಸೇರಿದ್ದ ಪಬ್ಲಿಕ್ ಮೀಟಿಂಗ್‌ನಲ್ಲಿ ಭಾಷಣ ಮಾಡಿದರು. ಆಗ ಮಾನ್ಯ ಬೈರೇಗೌಡರು ಮಂತ್ರಿಗಳಾಗಿದ್ದರು. ಕೋಲಾರ ಜಿಲ್ಲೆಯಲ್ಲಿ ಆರು ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುತ್ತೇವೆ, ಮುಳುಬಾಗಿಲ್‌ನಲ್ಲಿ ಎರಡು, ಶ್ರೀನಿವಾಸಪುರದಲ್ಲಿ ಎರಡು, ಬಾಗೆಪಲ್ಲಿಯಲ್ಲಿ ಒಂದು ಈ ರೀತಿ ಆರು ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆದರೆ ನಮ್ಮ ಎಂಜಿನಿಯರ್ಸ್ ಇದ್ದಾರೆ ಮಹಾನುಭಾವರು, ಅವರು ಎಲ್ಲಾ ಪ್ರಾಜೆಕ್ಟ್‌ಗಳಿಗೂ ಟೆಕ್ನಿಕಲ್ ಫೀಸಿಬಿಲಿಟಿ ಇಲ್ಲ ಎಂದು ಒಂದು ತಕರಾರು ಹಾಕುತ್ತಾರೆ. ಇಂತಹವರನ್ನು ಏನನ್ನಬೇಕೆಂದು ನನ್ನ ಮನಸ್ಸಿಗೆ ಬರುವುದಿಲ್ಲ. ನಾನು ಒಂದು ೨೫ ಪ್ರಾಜೆಕ್ಟ್ಸ್ ನೋಡಿದ್ದೇನೆ, ಇದೇ ರೀತಿ ಮಾಡಿದ್ದಾರೆ. ನನಗೆ ಬಹಳ ಸಂಕಟವಾದುದು ಎಂದರೆ, ಒಬ್ಬರು ಸೂಪರಿಂಟೆಂಡಿಂಗ್ ಎಂಜಿನಿಯರ್ ಇದ್ದರು, ಅವರಿಗೆ ಟ್ರಾನ್ಸ್‌ಫರ್ ಆಗಿ ಇನ್ನೇನು ಒಂದು ಎಂಟು ದಿವಸಗಳಲ್ಲಿ ಹೋಗಲಿದ್ದಾನೆ ಎನ್ನುವಾಗ ಅವನಿಗೆ ಒಂದು ಸಾವಿರ ರೂಪಾಯಿ ತೆಗೆದುಕೊಂಡು ಹೋಗಿ ಕೊಟ್ಟಲ್ಲಿ ಎಂತಹ ಪ್ರಾಜೆಕ್ಟ್‌ನ್ನಾದರೂ ಸ್ಯಾಂಕ್ಷನ್ ಮಾಡಿಕೊಡುತ್ತಾನೆ, ದುಡ್ಡು ಕೊಡದೇ ಹೋದರೆ ಮಾಡಿ ಕೊಡುವುದಿಲ್ಲ ಎಂದರು ಇದರಿಂದ ನನಗೆ ಬಹಳ ಸಂಕಟವಾಯಿತು. ನಾನು ಯಾವುದೋ ಒಬ್ಬ ಕಂಟ್ರಾಕ್ಟರ್ ಮೂಲಕ ಅವರನ್ನು ಸರಿ ಮಾಡಬೇಕಾಗಿತ್ತು. ಸರಿ ಮಾಡಲಿಕ್ಕೆ ಆ ಕಂಟ್ರಾಕ್ಟರ್‌ನನ್ನು ಕಳುಹಿಸುವುದಕ್ಕೆ ಆಗಲಿಲ್ಲ, ದುಡ್ಡು ಕೊಡಲಿಲ್ಲ. ಅದಕ್ಕೆ ತಕರಾರು ಹಾಕಿ ವಾಪಸ್ ಕಳುಹಿಸಿಬಿಟ್ಟರು. ಆ ಮಹಾನುಭಾವರು. ಇನ್ನು ಕೆಲವರು ಒಳ್ಳೆಯ ಆಫೀಸರ್ಸ್ ಇದ್ದಾರೆ, ಚೀಫ್ ಎಂಜಿನಿಯರ್ ಚಿಕ್ಕಣ್ಣನವರಾಗಲೀ, ಬಸವರಾಜ್‌ರವರಾಗಲೀ ಇವರೆಲ್ಲ ಸ್ವಲ್ಪ ಚೆನ್ನಾಗಿ ಕೆಲಸ ಮಾಡುತ್ತಾರೆ. ಕರ್ನಾಟಕದಲ್ಲಿ ಕೋಲಾರ, ಬೆಂಗಳೂರು, ತುಮಕೂರು ಮತ್ತು ಚಿತ್ರದುರ್ಗ ಇಂತಹ ಜಿಲ್ಲೆಗಳು ಇವೆ. ಅಲ್ಲಿ ನೀರಾವರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಬೇಕು ಎಂಬುದನ್ನು ಮರೆಯಬಾರದು. ಇರುವ ನದಿಗಳ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಪಾಲಿನ ಎಲ್ಲ ನೀರೂ ಆಂಧ್ರ ಮತ್ತು ತಮಿಳುನಾಡುಗಳಿಗೆ ಹರಿದು ಹೋಗುತ್ತಿದೆ, ಇದರ ಬಗ್ಗೆ ಗಮನ ಕೊಡಬೇಕು ಎಂದು ಹೇಳಿ ಹೇಳಿ ಸುಸ್ತಾಗಿ ಹೋಗಿದ್ದೇನೆ. ನನಗಂತೂ ಬೇಜಾರಾಗಿದೆ. ಇದು ನಮ್ಮ ದುರಾದೃಷ್ಟ. ಫೇಟ್ ಎಂದು ಇಂಗ್ಲಿಷ್‌ನಲ್ಲಿ ಏನು ಹೇಳುತ್ತಾರೆ, ಅದು ಎಂದುಕೊಂಡು ಸುಮ್ಮನೆ ಬಿಟ್ಟುಬಿಟ್ಟಿದ್ದೇನೆ. ಮಾನ್ಯ ದೇವೇಗೌಡರು ನಮ್ಮ ಜಿಲ್ಲೆಯ ಬಗ್ಗೆ ಒಂದು ಮೀಟಿಂಗ್

ಕರೆದು ಇದನ್ನು ಸರಿಪಡಿಸುತ್ತೇನೆ ಎಂದು ನನಗೆ ಹೇಳಿದರು. ಈ ಅಸೆಂಬ್ಲಿಯಲ್ಲೇ ಪ್ರಾಮಿಸ್ ಮಾಡಿದ್ದರು. ಆದರೆ ಅವರು ಮೂರು ವರ್ಷದಿಂದ ಏನೂ ಮಾಡಲಿಲ್ಲ. ಅವರೂ ಕೆಲಸ ಬಿಟ್ಟರು, ಅವರ ಕೆಲಸ ಹೋಯಿತು, ಅಲ್ಲಿಗೆ ಅದು ಮುಗಿದು ಹೋಯಿತು. ಈಗ ಮಾನ್ಯ ಬೊಮ್ಮಾಯಿಯವರು ಬಂದಿದ್ದಾರೆ ಅವರಿಗೆ ೬ ಡಿಪಾರ್ಟ್‌ಮೆಂಟ್‌ಗಳಿವೆ. ನನಗಂತೂ ನಂಬಿಕೆ ಇಲ್ಲ, ನಾವು ಏತಕ್ಕೆ ಭಾಷಣ ಮಾಡಬೇಕು ಅವರಂತೂ ನಮ್ಮ ಜಿಲ್ಲೆ ಬಗ್ಗೆ ಗಮನ ಇಟ್ಟಿಲ್ಲ. ಗಮನ ಕೊಡುವ ಪರಿಸ್ಥಿತಿಯೂ ಇಲ್ಲ. ಇದು ಒಂದು.

ಇನ್ನು ನೀರಾವರಿ ಸೌಕರ್ಯ ಇಲ್ಲದೆ ಬಹಳ ಬಾಧೆ ಬಿದ್ದು ಬದುಕುವ ಜನಗಳು ಎಂದರೆ ಬೆಂಗಳೂರು ಕೋಲಾರ ಮತ್ತು ತುಮಕೂರು ಜಿಲ್ಲೆಯವರು. ನೀರಾವರಿ ಇಲ್ಲದಿದ್ದರೂ ಕೂಡಾ ಸತತವಾಗಿ ಹೋರಾಟ ಮಾಡಿ ಬಾವಿಗಳನ್ನು ತೋಡಿ, ೫೦ ಅಡಿ ಆಳ ಇದ್ದ ಬಾವಿಗಳನ್ನು ೬೦–೭೦ ಅಡಿ ಆಳಮಾಡಿ ಜೊತೆಗೆ ಸರ್‌ಪ್ಲಸ್ ಬೋರ್‌ವೆಲ್ ತೆಗೆಸಿ, ಇರುವ ನೀರನ್ನು ಉಪಯೋಗಿಸಿಕೊಂಡು ಸ್ವಲ್ಪ ಬಾಳು ಮಾಡುತ್ತಿದ್ದೇವೆ. ನಾನು ಇವತ್ತು ಬೆಳಿಗ್ಗೆ ಆಂಧ್ರಪ್ರದೇಶದ ಒಬ್ಬ ಆಫೀಸರ್ ಹತ್ತಿರ ಮಾತನಾಡುತ್ತಿದ್ದೆ ಆಂಧ್ರದಲ್ಲಿ ನೀವು ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಏನೇನು ಅನುಕೂಲ ಮಾಡಿಕೊಟ್ಟಿದ್ದೀರಿ ಎಂದು ಕೇಳಿದೆ. ಅವರು ಮೂರು ಉದಾಹರಣೆಗಳನ್ನು ಕೊಟ್ಟರು. ಸರ್‌ಪ್ಲಸ್ ಬೋರ್‌ವೆಲ್ಸ್‌ ಬ್ಯಾಕ್‌ವರ್ಡ್‌ಕ್ಲಾಸ್‌ನವರು ಹಾಕಿದರೆ ಅವರಿಗೆ ೫೦ ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆ ಎಂದರು. ಇಲ್ಲೂ ಕೂಡಾ ಇದೇ ಯೋಜನೆಯನ್ನು ಜಾರಿ ಮಾಡಬೇಕೆಂದು ಮಾನ್ಯ ಬೊಮ್ಮಾಯಿಯವರನ್ನು ನಾನು ಕೇಳಿಕೊಳ್ಳುತ್ತೇನೆ. ಎಲ್ಲಿ ನೀರಾವರಿ ಯೋಜನೆಗಳು ಇಲ್ಲವೋ ಅಲ್ಲಿ ಇದನ್ನು ಇಂಟ್ರಡ್ಯೂಸ್ ಮಾಡಬೇಕು ಎಂದು ಸ್ಪಷ್ಟವಾಗಿ ಕೇಳಿಕೊಳ್ಳುತ್ತೇನೆ. ರಾಜ್ಯದ ಎಲ್ಲಾ ಕಡೆ ನೀರಾವರಿ ಯೋಜನೆಗಳಿವೆ ಎಂದು ನಾನು ಹೇಳುವುದಿಲ್ಲ ರಾಯಚೂರು ಜಿಲ್ಲೆ ತೆಗೆದುಕೊಂಡರೆ ಅಲ್ಲಿಯ ಕುಷ್ಟಗಿ ಮತ್ತು ಎಲಬುರ್ಗಾ ತಾಲ್ಲೂಕುಗಳಲ್ಲಿ ನೀರಾವರಿ ಅನುಕೂಲ ಇಲ್ಲ, ಆದರೆ ಬೇರೆ ತಾಲ್ಲೂಕುಗಳಲ್ಲಿ ಇದೆ. ನಾನು ಹೇಳುವುದು ಏನು ಎಂದರೆ ನಾಲ್ಕೈದು ಜಿಲ್ಲೆಗಳು ಏನು ಬೆಂಗಾಡಾಗಿವೆ, ಬೆಂಗಾಡಾಗಲಿವೆ, ಅಂತಹ ಪ್ರದೇಶಗಳಲ್ಲಿ ಬೋರ್‌ವೆಲ್ಸ್ ಹಾಕಿದರೆ ೫೦ ಪರ್ಸೆಂಟ್ ಸಬ್ಸಿಡಿ ಕೊಡಬೇಕು. ಇದು ಸರ್‌ಪ್ಲಸ್ ಬೋರ್‌ವೆಲ್ಸ್ ವಿಚಾರ. ಇನ್ನು ಓಪನ್‌ವೆಲ್ಸ್ ಒಳಗೆ ಬೋರ್‌ವೆಲ್ ಹಾಕಿದರೂ ಅಲ್ಲಿ ೫೦ ಪರ್ಸೆಂಟ್ ಸಬ್ಸಿಡಿಯನ್ನು ಕೊಡುವ ಸ್ಕೀಮ್ ಆಂಧ್ರದಲ್ಲಿ ಇದೆ ಎಂದರು. ಅದನ್ನು ಇಲ್ಲಿಯೂ ಅನುಕರಣೆ ಮಾಡುವುದರಲ್ಲಿ ತಪ್ಪಿಲ್ಲ. ಆಮೇಲೆ ಅಲ್ಲಿ ಒಬ್ಬನಿಗೆ ೨೦ ಎಕರೆ ಜಮೀನಿದ್ದರೆ ಅವನು ಒಂದು ಅಗ್ರಿಮೆಂಟ್ ಬರೆದುಕೊಟ್ಟರೆ ಆ ಜಮೀನಿನಲ್ಲಿ ಒಂದು ಬೋರ್‌ವೆಲ್ ಹಾಕಿಕೊಡುವ ಸ್ಕೀಮ್ ಇದೆಯಂತೆ, ೨೦ ಎಕರೆ ಜಮೀನಿನಲ್ಲಿ ಅವನು ಒಂದ ಬೆಳೆ ತೆಗೆದರೆ, ಒಂದು ಎಕರೆಗೆ ೬೦ ರೂಪಾಯಿಯಂತೆ ಅವನು ಸರಕಾರಕ್ಕೆ ಕಟ್ಟಬೇಕೆಂಬ ಸ್ಕೀಮ್ ಆಂಧ್ರದಲ್ಲಿ ಇದೆ. ಒಂದು ಎಕರೆ ಬೆಳೆಗೆ ೬೦ ರೂಪಾಯಿ ನಂತೆ ಅವನು ಸರಕಾರಕ್ಕೆ ಕಟ್ಟಬೇಕು, ಆಗ ಸರಕಾರದವರೇ ಅಲ್ಲಿ ಬೋರ್‌ವೆಲ್ ಹಾಕಿಕೊಡುತ್ತಾರೆ. ಅದನ್ನಾದರೂ ಇಲ್ಲಿ ಮಾಡಿಕೊಟ್ಟರೆ ನಿಜವಾಗಲೂ ಕೂಡಾ ನಮ್ಮ ಪ್ರದೇಶಗಳಲ್ಲಿ ಬಹಳಷ್ಟು ಸುಧಾರಣೆಯಾಗುತ್ತದೆ, ಹಾಗೂ ಬೆಳೆ ಬೆಳೆಯುವುದಕ್ಕೆ ಅವಕಾಶವಾಗುತ್ತದೆ.

ಆದ್ದರಿಂದ ಈ ಬಗ್ಗೆ ತಾವು ಬಹಳ ಸೀರಿಯಸ್ ಆಗಿ ತೆಗೆದುಕೊಳ್ಳಬೇಕು. ಸರ್ಕಾರ ಈ ಬಗ್ಗೆ ನನಗೊಂದು ಸ್ಪಷ್ಟ ಉತ್ತರವನ್ನು ಕೊಡಬೇಕು ಮತ್ತು ಈ ಭಾಗಗಳ ಬಗ್ಗೆ ತಾವು ಸ್ವಲ್ಪ ಜಾಸ್ತಿ ಕರುಣೆ ತೋರಿಸಬೇಕು. ಈ ಭಾಗದ ರೈತರ ಬಗ್ಗೆ ಸ್ವಲ್ಪ ಕರುಣೆ ತೋರಿಸಿದರೆ ಅವರು ಚೆನ್ನಾಗಿ ಬದುಕುವುದಕ್ಕೆ ಸಾಧ್ಯವಾಗುತ್ತದೆ ಮತ್ತು ತಾವು ಸಹಾಯ ಮಾಡಿದಂತಾಗುತ್ತದೆ. ಇಲ್ಲದೆ ಹೋದರೆ ನೂರಾರು ವರ್ಷಗಳಾದರೂ ಸಹ ಈ ಭಾಗ ಮರಳುಗಾಡು ಪ್ರದೇಶವಾಗಿಯೇ ಉಳಿದು ಬಿಡುತ್ತದೆ. ಈಗ ನಮ್ಮಲ್ಲಿ ಇರುವುದು ಅಲ್ಪಸ್ವಲ್ಪ ಈ ಸರ್‌ಪ್ಲೆಸ್ ಬೋರ್‌ಗಳೇ. ಬಾವಿಗಳಲ್ಲಿ ನೀರು ಇಲ್ಲ. ಸುಮಾರು ೫೦ ಅಡಿಗಳು ತೋಡಿದರೂ ಸಹ ಬಾವಿಯಲ್ಲಿ ನೀರು ಸಿಗುವುದಿಲ್ಲ. ಈಗ ಇರತಕ್ಕಂಥ ಬಾವಿಗಳೆಲ್ಲಾ ಒಣಗಿ ಹೋಗಿವೆ. ನಮ್ಮಲ್ಲಿ ಈ ಡ್ರೈ ಲ್ಯಾಂಡ್ ಡವಲಪ್‌ಮೆಂಟ್ ವರ್ಕ್ ಅನ್ನು ಸಹ ಸರಿಯಾಗಿ ಮಾಡುತ್ತಿಲ್ಲ. ಈ ಸರ್ಕಾರಕ್ಕೆ ನಮ್ಮ ಭಾಗದ ಕಡೆ ಆಸಕ್ತಿ ಇಲ್ಲ ಎನ್ನುವುದಕ್ಕೆ ನಾನು ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಈಗ ತಾವು ಗಂಗಾಕಲ್ಯಾಣ ಯೋಜನೆಯೊಂದು ಮಾಡಿದ್ದೀರಿ. ಇದು ನೀರಾವರಿ ಇಲಾಖೆಯಿಂದ ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮ. ಇದನ್ನು ಮಾನ್ಯ ದೇವೇಗೌಡರು ಜಾರಿಗೆ ತಂದರು. ನಮ್ಮ ಕೋಲಾರ ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಯ ಅನೇಕ ಹಳ್ಳಿಗಳಿಗೆ ಈ ಯೋಜನೆ ಅನ್ವಯವಾಗುತ್ತದೆ. ಆದರೆ ನಮ್ಮ ಈ ಎರಡೂ ಜಿಲ್ಲೆಗಳನ್ನು

ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಬ್ಲಾಕ್ ಅಂಡ್ ಗ್ರೇ ಎಂದು ಮಾಡಿದ್ದರು, ಆದರೆ ಮಾನ್ಯ ದೇವೇಗೌಡರು ಮಂತ್ರಿಗಳಾಗಿದ್ದಾಗ ಇದು ಈ ಯೋಜನೆಗೆ ಅನ್ವಯವಾಗುವುದಿಲ್ಲವೆಂದು ಇಲ್ಲಿ ಆಶ್ವಾಸನೆ ಕೊಟ್ಟರು. ನಾನು ಹಿಂದೆ ಅಸೆಂಬ್ಲಿಯಲ್ಲಿ ಅವರು ಕೊಟ್ಟ ಆಶ್ವಾಸನೆಯ ಬಗ್ಗೆ ಏನು ಕೇಳಿದೆನೆಂದರೆ. ಸ್ವಾಮಿ ನೀವೇನೋ ಇಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟುಬಿಡುತ್ತೀರಿ. ಅದು ಕಾರ್ಯರೂಪಕ್ಕೆ ಬರುವುದು ಎಷ್ಟೋ ದಿವಸಗಳಾಗುತ್ತದೆ ಆದ್ದರಿಂದ ಈ ಬಗ್ಗೆ ತಾವು ಒಂದು ಆರ್ಡರ್ ಮಾಡಿ ಎಂದು, ಆದರೆ ಅದು ಇಲ್ಲಿಯವರೆವಿಗೂ ಆಗಲಿಲ್ಲ. ನಾನು ನಿನ್ನೆಯ ದಿವಸ ನಮ್ಮ ಪಾರ್ಟಿಯ ಒಬ್ಬರನ್ನು ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದೆ, ಆಗ ಅವರು ಬೆಂಗಳೂರು ಜಿಲ್ಲೆ ಮತ್ತು ಕೋಲಾರ ಜಿಲ್ಲೆ ಈ ಪ್ರದೇಶಗಳು ಬ್ಲಾಕ್ ಅಂಡ್ ಗ್ರೇ ಆಗಿವೆ ಇದನ್ನು ಇನ್ನು ನಾವು ರಿವೈಜ್ ಮಾಡಿಲ್ಲ ಎಂದು ಹೇಳಿದ್ದಾರೆ. ಇದರಿಂದ ಈ ಗಂಗಾಕಲ್ಯಾಣ ಯೋಜನೆಯಿಂದ ರೈತರಿಗೆ ಸಿಗತಕ್ಕಂಥ ಅನುಕೂಲ ಕೂಡ ಹೋಯಿತು. ಯಾರು ಹರಿಜನ ಮತ್ತು ಗಿರಿಜನರಿರುತ್ತಾರೋ ಅವರಿಗೆ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಈ ಗಂಗಾಕಲ್ಯಾಣ ಯೋಜನೆ ಇರುವುದು. ಇದರಲ್ಲಿ ಯಾರು ಬಡವರು ಇರುತ್ತಾರೋ ಅವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ. ಆದರೆ ಈ ನೀರಾವರಿ ಇಲಾಖೆಯಿಂದ ನಮಗೆ ಅನುಕೂಲವೇನಾಗುತ್ತದೆ ಎನ್ನುವುದಕ್ಕಿಂಥ ಅನಾನುಕೂಲಗಳು ಎಷ್ಟಾಗುತ್ತಿವೆ ಎನ್ನುವುದನ್ನು ನಾನು ಹೇಳಬೇಕಾಗಿದೆ, ನಮ್ಮ ಜಿಲ್ಲೆಯಲ್ಲಿ ಸುಮಾರು ಐದುನೂರು ಕೆರೆಗಳು ಇವೆ, ಈ ಎಲ್ಲಾ ಕೆರೆಗಳಲ್ಲಿ ವರ್ಷದಲ್ಲಿ ಒಂದು ಹದಿನೈದು ದಿವಸ ಇಲ್ಲ ಅಂದರೆ ಒಂದು ತಿಂಗಳ ಕಾಲ ನೀರು ಇದ್ದರೆ ಇರಬಹುದು ಅದಕ್ಕಿಂತ ಜಾಸ್ತಿ ನೀರು ಇರುವುದಿಲ್ಲ. ಆದರೆ ನಮ್ಮ ಜಿಲ್ಲೆಯಲ್ಲಿ ಇವರು ನೀರು ಕಂದಾಯ ವಸೂಲಿ ಮಾಡುತ್ತಿದ್ದಾರೆ, ನಾವಿಲ್ಲಿ ಕೇಳಿದರೆ ಇಲ್ಲ ವಸೂಲಿ ಮಾಡುತ್ತಿಲ್ಲವೆಂದು ಮಂತ್ರಿಗಳು ಹೇಳಿ ತಪ್ಪಿಸಿಕೊಳ್ಳುತ್ತಾರೆ. ಆದರೆ ಅಲ್ಲಿ ನೀರು ಕೊಡದೇ ನೀರು ಕಂದಾಯ ವಸೂಲಿ ಮಾಡುತ್ತಿದ್ದಾರೆ, ನಾವಿಲ್ಲಿ ಆ ಬಗ್ಗೆ ಪ್ರಶ್ನೆ ಮಾಡಿದಾಗ ಮಾನ್ಯ ಬೊಮ್ಮಾಯಿಯವರು ಗೌಡರು ನೀರಿನ ಕಂದಾಯ ಹಾಕುತ್ತಾರೆ ನಾವು ಶಾನುಭೋಗರು ಕಂದಾಯ ವಸೂಲಿ ಮಾಡುತ್ತೇವೆಂದು ಸಲೀಸಾಗಿ ಹೇಳಿ ತಪ್ಪಿಸಿಕೊಂಡರು ಇವತ್ತಿನವರೆವಿಗೂ ನೀರಿನ ಕಂದಾಯ ವಸೂಲಿ ಮಾಡುವುದನ್ನು ಬಿಟ್ಟಿಲ್ಲ ಸ್ವಾಮಿ ಇವರು. ನೀರು ಕೊಟ್ಟು ನೀರಿನ ಕಂದಾಯ ವಸೂಲಿ ಮಾಡಿದರೆ ಸರಿ; ಆದರೆ ನಮ್ಮಲ್ಲಿ ನೀರೇ ಕೊಟ್ಟಿಲ್ಲ, ನೀರು ಕಂದಾಯ ಕೊಡಿ ಎಂದರೆ ಹೇಗೆ ? ನೀವು ಏನಾದರೂ ಹೊಸದಾಗಿ ಪ್ರಾಜೆಕ್ಟ್ ಮಾಡಿ ನೀರು ಕೊಟ್ಟು ನಮ್ಮ ಜಮೀನು ಎಲ್ಲಾ ತರೀ ಜಮೀನು ಮಾಡಿ ಕೊಟ್ಟಿದ್ದರೆ ಆಗ ಹೋಗಲಿ ನೀರು ಕೊಟ್ಟಿದ್ದಾರೆ ನೀರಿನ ಕಂದಾಯ ಕೊಡೋಣವೆಂದು ಕೊಡಬಹುದಿತ್ತು ; ಅದನ್ನು ತಾವು ಮಾಡಿಲ್ಲ. ನೀರು ಕೊಟ್ಟು ಕಂದಾಯ ಕೊಡಿ ಎಂದು ಹೇಳಿದ್ದರೆ ನಮ್ಮ ರೈತರು ಸಂತೋಷವಾಗಿ ಕಂದಾಯ ಕೊಡುತ್ತಿದ್ದರು ಸ್ವಾಮಿ. ೧೯೭೦ನೇ ಇಸವಿಯಲ್ಲಿ ನೀರಿನ ಕಂದಾಯ ವಸೂಲಿ ಬಗ್ಗೆ ಒಂದು ಯೋಜನೆ ಬಂತು ಸ್ವಾಮಿ. ಆಗ ತಾವು ಅದನ್ನು ಪ್ರೊಟೆಸ್ಟ್ ಮಾಡಿದ್ದೆವು ಆಗ ನಾನು ಲಾಯರ್ ಆಗಿದ್ದೆ, ಆಗ ನನ್ನ ಮೇಲೆ ಕೆಲವು ಕೇಸ್‌ಗಳನ್ನು ಹಾಕಿ ಬಹಳ ತೊಂದರೆ ಕೊಟ್ಟರು. ನಮ್ಮ ಕಾಂಗ್ರೆಸ್ಸ್ ಸ್ನೇಹಿತರಿಗೂ ಕೂಡ ನಾನು ಹೇಳಿದ್ದೆ. ಅವರು ಸಹ ಇದನ್ನು ಗಮನಿಸಲಿಲ್ಲ. ಇವತ್ತು ಪ್ರತಿಯೊಂದು ಸಂಸಾರವು ಸಾವಿರ, ಐದುನೂರು ರೂಪಾಯಿಗಳು ನೀರಿನ ಕಂದಾಯದ ಬಾಕಿ ಕೊಡಬೇಕಾಗಿದೆ. ನೀರಿನ ಕಂದಾಯ ಕೊಡದಿದ್ದಾಗ ಅವರನ್ನು ಮನೆಗಳಿಂದ ಹೊರಗೆ ಓಡಿಸುತ್ತಿದ್ದಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಈ ಬಗ್ಗೆ ಒಂದು ಸ್ಪಷ್ಟವಾದ ಉತ್ತರ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ

ನೀರು ಕಂದಾಯ ಯಾವ ರೀತಿ ಹಾಕಬೇಕು ಎಂದರೆ, ಇರಿಗೇಷನ್ ಡಿಪಾರ್ಟ್‌ಮೆಂಟಿನಿಂದ ಅಸಿಸ್ಟೆಂಟ್ ಇಂಜಿನೀಯರ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್ ಪರವಾಗಿ ತಹಶೀಲ್‌ದಾರ್‌ರವರು ಇಬ್ಬರೂ ಜಂಟಿಯಾಗಿ ಎಲ್ಲೆಲ್ಲಿ ರೈತರುಗಳು ಕೆರೆಯ ನೀರನ್ನು ಉಪಯೋಗಿಸುತ್ತಾರೆ ಎಂಬುದನ್ನು ಇನ್‌ಸ್ಪೆಕ್ಟ್ ಮಾಡಿ ಇಂತಿಂಥ ಜಮೀನುಗಳಲ್ಲಿ ಮಾತ್ರ ಕೆರೆಯ ನೀರನ್ನು ಉಪಯೋಗಿಸಲಾಗಿದೆಯೆಂದು ಸರ್ಟಿಫಿಕೇಟ್ ಕೊಟ್ಟರೆ ಮಾತ್ರ ನೀರಿನ ಕಂದಾಯವನ್ನು ವಸೂಲಿಮಾಡಬೇಕಾಗುತ್ತದೆ ಆದರೆ, ಆ ತರಹ ಕೆಲಸವನ್ನು ಇದುವರೆಗೆ ಸರ್ಕಾರದವರು ಮಾಡಿಸಿಲ್ಲ. ಯಾವುದೋ ಹಿಂದಿನ ಕಾಲದಲ್ಲಿ ಒಂದು ಸಾರಿ ಒಂದು ಜಮೀನಿಗೆ ತರಿ ಎಂದು ಹೆಡ್ ಲೈನ್ ಬರೆದುಬಿಟ್ಟಿರುತ್ತಾರೆ. ತರಿ ಎಂದು ಹೆಡ್ ಲೈನ್ ಬಂದರೆ ಸಾಕು, ನೀರು ಕಂದಾಯವನ್ನು ಹಾಕುತ್ತಾರೆ ಕೆಲವು ಸಾರಿ ಆ ಜಮೀನುಗಳಲ್ಲಿ ಬೆಳೆಯನ್ನು ಸಹ ಬೆಳೆದಿರುವುದಿಲ್ಲ. ಅಂಥ ಜಮೀನುಗಳಿಗೆಲ್ಲಾ ನೀರಿನ ಕಂದಾಯ ಎಂದು ರೈತರುಗಳಿಂದ ಹಣವನ್ನು

ವಸೂಲಿ ಮಾಡುತ್ತಿದ್ದಾರೆ. ಇರಿಗೇಷನ್ ಡಿಪಾರ್ಟ್‌ಮೆಂಟಿನವರು ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಇಬ್ಬರೂ ಸೇರಿಕೊಂಡು ರೈತರುಗಳನ್ನು ಹಗಲು ದರೋಡೆ ಮಾಡುತ್ತಿದ್ದಾರೆ. ಇವರು ಮಾಡುತ್ತಿರುವುದು ತುಂಬಾ ಮೋಸ ಸ್ವಾಮಿ ದಯಮಾಡಿಟ್ಟು ಇದರ ಬಗ್ಗೆ ಮಾನ್ಯ ಮಂತ್ರಿಯವರು ಸ್ಪಷ್ಟೀಕರಣ ಕೊಡಬೇಕು. ರೆವಿನ್ಯೂ ಡಿಪಾರ್ಟ್‌ಮೆಂಟಿನ ಅಧಿಕಾರಿಗಳನ್ನು ಈ ಬಗ್ಗೆ ಕೇಳಿದರೆ, ಇರಿಗೇಷನ್ ಡಿಪಾರ್ಟ್‌ಮೆಂಟಿನವರು ಈ ಹಣವನ್ನು ವಸೂಲಿ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೋಸ್ಕರ ನೀರು ಕಂದಾಯವನ್ನು ವಸೂಲಿ ಮಾಡುತ್ತಿದ್ದೇವೆಂದು ಹೇಳುತ್ತಾರೆ. ನೀರಿನ ಕಂದಾಯ ಎಂದು ಒಣ ಭೂಮಿಗೆಲ್ಲಾ ಹೆಚ್ಚು ಕಂದಾಯವನ್ನು ವಸೂಲಿ ಮಾಡುವುದು ತುಂಬಾ ಅನ್ಯಾಯ. ಬೆಂಗಾಡು ಪ್ರದೇಶಗಳಾದ ಕೋಲಾರ, ತುಮಕೂರು, ಬೆಂಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಈ ರೀತಿ ನೀರಿನ ಕಂದಾಯವನ್ನು ವಸೂಲಿ ಮಾಡಿದರೆ ರೈತರುಗಳ ಗತಿ ಏನು ಎಂದು ಸರ್ಕಾರ ಯೋಚನೆ ಮಾಡಬೇಕು. ಈ ನಾಲ್ಕು ಜಿಲ್ಲೆಗಳಿಗೆ ಬೇರೆ ಕಡೆಯಿಂದ ನೀರು ಕೊಡುವ ಬಗ್ಗೆ ಲಿಂಕ್ ರೇಂಜ್ ಸ್ಕೀಮ್‌ನ್ನು ಏನಾದರು ಸರ್ಕಾರ ಮಾಡುತ್ತದೆಯೋ ಎಂದರೆ, ಅದೂ ಇಲ್ಲ, ಭದ್ರಾ ಜಲಾಶಯದಿಂದ ಕೋಲಾರದ ೪ ತಾಲ್ಲೂಕುಗಳಿಗೆ ಅಂದರೆ, ಗೌರಿಬಿದನೂರು, ಬಾಗೇಪಲ್ಲಿ, ಗುಡಿಬಂಡೆ, ಚಿಕ್ಕಬಳ್ಳಾಪುರಗಳಿಗೆ ನೀರು ಸರಬರಾಜು ಮಾಡುವ ಬಗ್ಗೆ ಶ್ರೀ ಪರಮಶಿವಯ್ಯ ಎಂಬ ಇಂಜಿನೀಯರ್ ಒಬ್ಬರು ಪ್ಲಾನ್ ಮಾಡಿದ್ದರು. ಕೋಲಾರ ಜಿಲ್ಲೆಗೆ ನೀರು ಬರಬೇಕಾದರೆ ಮೊದಲು ತುಮಕೂರು ಜಿಲ್ಲೆಗೆ ನೀರು ಬರಬೇಕಾಗುತ್ತದೆ. ಆದರೆ ಇದುವರೆಗೂ ಭದ್ರಾ ನೀರನ್ನು ತುಮಕೂರಿನವರೆಗೇ ತರುವುದಕ್ಕಾಗಲಿಲ್ಲ. ಇನ್ನು ಕೋಲಾರ ಜಿಲ್ಲೆಯವರೆಗೆ ಅದು ಮುಟ್ಟುತ್ತದೆಯೋ ಎಂದು ಯೋಚನೆ ಮಾಡಬೇಕಾದ ಪರಿಸ್ಥಿತಿ ನಮಗಿದೆ. ವೆಸ್ಟ್ ಫ್ಲೋಯಿಂಗ್ ರಿವರ್ಸ್‌ಗಳನ್ನು ಈಸ್ಟ್ ಫ್ಲೋಯಿಂಗ್ ರಿವರ್ಸ್‌ಗಳಾಗಿ ಮಾಡಿದರೆ ಈ ಪ್ರಪಂಚದಲ್ಲಿ ಯಾವ ಅಡಚಣೆಯೂ ಇರುವುದಿಲ್ಲ. ಗಂಗಾ ಕಾವೇರಿ ಪ್ರಾಜೆಕ್ಟ್ ಮಾಡಬೇಕೆಂದು ಮಾನ್ಯ ಮುರಾರ್ಜಿ ದೇಸಾಯಿಯವರು ೧೯೭೭ರಲ್ಲಿ ಅಧಿಕಾರಕ್ಕೆ ಬರುತ್ತಲೇ ಹೇಳಿದ್ದರು. ಆಮೇಲೆ ಅದನ್ನು ಬಿಟ್ಟುಬಿಟ್ಟರು. ಈಗಲೂ ಕೂಡ ಈ ಯೋಜನೆಯನ್ನು ಮಾಡಬಹುದು ಈ ಯೋಜನೆಯನ್ನು ಮಾಡುವುದರಿಂದ ಈ ನಮ್ಮ ಪೀಳಿಗೆಯವರಿಗೆ ಅನುಕೂಲವಾಗದಿದ್ದರೂ ನಮ್ಮ ಮುಂದಿನ ಪೀಳಿಗೆಯವರಿಗೆ ಬಹಳ ಅನುಕೂಲವಾಗುತ್ತದೆ. ಸರ್ಕಾರ ಈಗಲಾದರೂ ಇದರ ಬಗ್ಗೆ ಯೋಚನೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ನಮಗೆ ತಿಳಿದ ಹಾಗೆ ಕರ್ನಾಟಕ ರಾಜ್ಯಕ್ಕೂ ಆಂಧ್ರ ಪ್ರದೇಶದ ರಾಜ್ಯಕ್ಕೂ ಹೋಲಿಕೆ ಮಾಡಿ ನೋಡಿದರೆ, ಆಂಧ್ರ ಪ್ರದೇಶದವರು ಅವರಿಗೆ ಸಿಕ್ಕುವ ನೀರಿನಲ್ಲಿ ನೂರಕ್ಕೆ ೮೦ ರಷ್ಟು ಉಪಯೋಗ ಮಾಡಿಕೊಂಡಿದ್ದಾರೆ. ಅದೇ ನಮ್ಮ ಕರ್ನಾಟಕ ರಾಜ್ಯ ನಮಗೆ ಸಿಕ್ಕುವ ನೀರಿನಲ್ಲಿ ಕೇವಲ ೨೭ ಪರ್ಸೆಂಟೋ ೩೦ ಪರ್ಸೆಂಟ್‌ನಷ್ಟೋ ಮಾತ್ರ ಉಪಯೋಗ ಮಾಡಿಕೊಂಡಿದೆ ಅಪ್ಪರ್ ಕೃಷ್ಣ ಯೋಜನೆಯಲ್ಲಿ ನಾವು ಎಷ್ಟು ನೀರನ್ನು ಉಪಯೋಗ ಮಾಡಬೇಕಾಗಿತ್ತೋ ಅಷ್ಟು ನೀರನ್ನು ಉಪಯೋಗ ಮಾಡುವುದಕ್ಕೆ ಇದುವರೆಗೂ ಆಗಿಲ್ಲ ಮೊನ್ನೆ, ಕೆಲವು ದಿನಗಳ ಹಿಂದೆ ನಾನು ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ವಿಚಾರ ಮಾಡಿದಾಗ ಒರಿಜನಲ್ ಪ್ರಾಜೆಕ್ಟ್ ಕಾಸ್ಟ್ ೨೩೦ ಅಥವಾ ೨೪೦ ಕೋಟಿ ರೂಪಾಯಿಗಳಾಗಿದ್ದದ್ದು ಇವತ್ತು ಅದರ ಪ್ರಾಜಕ್ಟ್ ಕಾಸ್ಟ್ ಎರಡು ಸಾವಿರ ಕೋಟಿ ರೂಪಾಯಿಗಳಿಗೆ ತಲುಪಿದೆ. ಆದರೂ ಇನ್ನೂ ಫಸ್ಟ್ ಫೇಸ್ ಮುಕ್ತಾಯವಾಗಿಲ್ಲ. ಇವರು ಆ ಯೋಜನೆಯನ್ನು ಕಂಪ್ಲೀಟ್ ಮಾಡುವುದು ಯಾವಾಗ ? ಬಚಾವತ್ ಅವಾರ್ಡ್ ಪ್ರಕಾರ ೧೯೯೦ ರೊಳಗೆ ನಾವು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನ್ನು ಮುಗಿಸಿ ನಮ್ಮ ಪಾಲಿಗೆ ಬರುವ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕು. ವರ್ಲ್ಡ್ ಬ್ಯಾಂಕಿನವರು ಈ ಯೋಜನೆಗಾಗಿ ಕೊಡುವ ಹಣವನ್ನು ಪೂರ್ತಿಯಾಗಿ ತೆಗೆದುಕೊಂಡು ಕೆಲಸ ಮಾಡುವುದಕ್ಕೆ ರಾಜ್ಯ ಸರ್ಕಾರದವರು ಫೇಲ್ ಆಗಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳಿಗೆ ಈ ಅಪ್ಪರ್ ಕೃಷ್ಣ ಯೋಜನೆಯಿಂದ ಅನುಕೂಲ ಮಾಡಿಕೊಡುತ್ತೇವೆಂದು ಹೇಳಲಾಗಿತ್ತು ಆದರೆ ಆ ಕೆಲಸವನ್ನೂ ಸಹ ಇವರು ಮಾಡುತ್ತಿಲ್ಲ. ಆಮೇಲೆ ಕೆಲವು ದಿನಗಳ ಹಿಂದೆ ತುಂಗಭದ್ರ ಎಡದಂಡೆ ಕಾಲುವೆ ಒಡೆಯಿತು.

೪-೦೦ ಪಿ. ಎಂ.

ಆಗ ೧೧ ನೇ ತಾರೀಖಿನೊಳಗಾಗಿ ಎಡದಂಡೆ ಕಾಲುವೆಯನ್ನು ರಿಪೇರಿ ಮಾಡಿಸಿಕೊಡುತ್ತೇನೆಂದು ಮಾನ್ಯ ದೇವೇಗೌಡರು ಬಹಳ ದೊಡ್ಡದಾಗಿ ಹೇಳಿದರು. ಆದರೆ ನಾಲ್ಕು ತಿಂಗಳು ಆಯಿತು. ಅದಕ್ಕೆ ಹಾಕಿರುವ ಕೋಟ್ಯಾಂತರ ರೂಪಾಯಿಗಳು ನಷ್ಟ ಆಯಿತು. ನೀರು ಮುಟ್ಟಲು ನಾಲು

ತಿಂಗಳ ಕಾಲ ಬೇಕಾಯಿತು, ಈಗ ಅಲ್ಲಿಯ ಜನರ ಮೇಲೆ ಪೆನಾಲ್ಟಿ ಹಾಕಿ ಕಂದಾಯವನ್ನು ವಸೂಲು ಮಾಡುತ್ತಾ ಇದ್ದಾರೆ ಇದೇ ರೀತಿಯಲ್ಲಿ ನಾವು ಭೀಮರಾಯನಗುಡಿಗೆ ಹೋದರೆ ದಾರಿ ಉದ್ದಕ್ಕೂ ಕಾಲುವೆಗಳನ್ನು ನೋಡಬಹುದಾಗಿದೆ. ಆದರೆ ಆ ಕಾಲುವೆಗಳಲ್ಲಿ ನೀರನ್ನು ಬಿಟ್ಟಿಲ್ಲ. ಏಕೆ ಬಿಟ್ಟಿಲ್ಲ ಎಂದು ಹೇಳಿದರೆ, ನೀರು ಬಿಟ್ಟರೆ ಕಾಲುವೆಗಳಲ್ಲಿ ಬ್ರೀಜ್ ಆಗುತ್ತದೆ. ಇದರಿಂದ ಮತ್ತೆ ನಷ್ಟ ಸಂಭವಿಸಬಹುದಾಗಿದೆ. ಇದಕ್ಕೆಲ್ಲಾ ಕಾರಣ ಅಲ್ಲಿಗೆ ಸೂಕ್ತ ಪ್ರಮಾಣದಲ್ಲಿ ಕೊಟ್ಟ ಸಿಮೆಂಟ್‌ನ ಬಳಕೆಯನ್ನು ಸರಿಯಾಗಿ ಮಾಡಿಲ್ಲ, ಅಲ್ಲೆಲ್ಲಾ ವಿಪರೀತ ಎನ್ನುವಷ್ಟು ಲಂಚದ ಸಾಮ್ರಾಜ್ಯವಿದೆ. ಕಾಲುವೆಗಳಿಗೆ ಒದಗಿಸಿರುವ ಸಿಮೆಂಟ್‌ನ್ನು ಲಾರಿಗಟ್ಟಲೆ ಹೊರಗೆ ಸಾಗಿಸುತ್ತಾರೆ. ಕಡಿಮೆ ಸಿಮೆಂಟ್‌ನ್ನು ಉಪಯೋಗಿಸಿ ಕಳಪೆ ದರ್ಜೆಯ ಕಾಲುವೆಗಳನ್ನು ನಿರ್ಮಾಣ ಮಾಡಿರುವುದರಿಂದ ನೀರು ಬಿಟ್ಟರೆ ಅಲ್ಲಿ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಅಲ್ಲಿರುವ ಒಬ್ಬೊಬ್ಬ ಚೀಫ್ ಇಂಜಿನೀಯರ್ ಕೂಡ ಯೂಸ್‌ಲೆಸ್ ಇದ್ದಾರೆ ಎಂದು ಹೇಳಬೇಕಾಗುತ್ತದೆ, ನಾವು ನೀರಿಲ್ಲದ ಕಾಲುವೆಗಳನ್ನು ನೋಡಬಹುದೇ ಹೊರತು ನೀರು ಬಿಟ್ಟು ಜನರಿಗೆ ಉಪಯುಕ್ತವೆನಿಸುವ ಒಂದು ಸ್ಥಿತಿಯನ್ನು ನಾವು ಅಲ್ಲಿ ಕಾಣುವಂತಿಲ್ಲವಾಗಿದೆ. ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ರೈತರ ಹೆಸರಿನಲ್ಲಿ ಇಷ್ಟೊಂದು ಹಣವನ್ನು ಖರ್ಚು ಮಾಡಿದ್ದರೂ ಅದರಿಂದ ರೈತರಿಗೆ ಏನು ಉಪಯೋಗವಾಗಿದೆ ಅಂದರೆ, ಏನೂ ಇಲ್ಲ ಎಂದು ಹೇಳಬೇಕಾಗುತ್ತದೆ. ಹೀಗೆ ೨೦ ಮೈಲಿಗಳ ಅಂತರಕ್ಕೆ ಹೋದರೂ ಕಾಲುವೆಗಳನ್ನು ನೋಡಬಹುದೇ ಹೊರತು ನೀರನ್ನು ನೋಡುವಂತಿಲ್ಲ. ನೀರಾವರಿ ತೆರಿಗೆಯನ್ನು ಹಾಕಿ ರೈತರಿಗೆ ಅನುಕೂಲ ಮಾಡಿಕೊಡುವುದು ಸರಕಾರದ ಕರ್ತವ್ಯವಾದರೂ ಹಾಗೆ ನಡೆಯುತ್ತಿಲ್ಲ. ಒಂದೊಂದು ಕಡೆ ಸರ್‌ಪ್ಲಸ್ ನೀರು ಇದೆ, ಆದರೆ ಅದರಿಂದ ಉಪಯೋಗವನ್ನು ಪಡೆಯುತ್ತಾ ಇಲ್ಲ. ಏಕೆಂದರೆ ಇವೊತ್ತು ನಮ್ಮ ಹತ್ತಿರ ಹಣವೇ ಇಲ್ಲ. ಇರುವ ಹಣವನ್ನು ಸರಿಯಾಗಿ ಸೂಕ್ತ ರೀತಿಯಲ್ಲಿ ಉಪಯೋಗ ಮಾಡುತ್ತಾ ಇಲ್ಲ. ಬಳಕೆಗಾಗಿ ಇಟ್ಟಂಥ ಹಣದಲ್ಲಿ ೮೦ ಪರ್ಸೆಂಟ್‌ನಷ್ಟು ಹಣವನ್ನು ಕೂಡ ಸರಿಯಾಗಿ ಖರ್ಚು ಮಾಡುತ್ತಾ ಇಲ್ಲ. ಆದುದರಿಂದ ಆ ಬಗ್ಗೆ ಸರ್ಕಾರ ಸೂಕ್ತ ಶ್ರದ್ಧೆಯನ್ನು ವಹಿಸಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಇಂತಹ ಕಡೆಗಳಲ್ಲಿರುವ ಎಲ್ಲಾ ಅಧಿಕಾರಿಗಳು, ಇಂಜಿನೀಯರ್ಸ್‌ನ್ನು ನಾನು ಕೆಟ್ಟವರು ಎಂದು ಹೇಳುವುದಿಲ್ಲ. ಆದರೆ ಆ ಇಲಾಖೆಯಲ್ಲಿ ಬಹಳಷ್ಟು ಜನ ಕೆಟ್ಟವರು ಸೇರಿಕೊಂಡಿದ್ದಾರೆ, ಅಲ್ಲಿ ಲಂಚವು ರೆಗ್ಯುಲರೈಸ್ ಆಗಿ ಬಿಟ್ಟಿದೆ. ಅಲ್ಲಿ ಲಂಚವನ್ನು ಕೊಡುವವರು ಹೇಳದೇ ಕೇಳದೇ ಕೊಡತಕ್ಕಂಥ ಒಂದು ಪರಿಪಾಠ ಬೆಳೆದು ಬಿಟ್ಟಿದೆ. ಕೆಳಮಟ್ಟದಿಂದ ಮೇಲ್ಮಟ್ಟದ ವರೆಗೂ ಯಾರ್ಯಾರು ಯಾರು ಯಾರಿಂದ ವಸೂಲು ಮಾಡಿಕೊಡಬೇಕೆಂಬ ಬಗ್ಗೆ ಒಂದು ವ್ಯವಸ್ಥೆಯೇ ಇದೆ ಎಂದು ಕಾಣುತ್ತದೆ ಒಂದು ವೇಳೆ ಸರಿಯಾದ ರೀತಿಯಲ್ಲಿ ಲಂಚವನ್ನು ಮುಟ್ಟಿಸದಿದ್ದಲ್ಲಿ ಫಸ್ಟ್ ಬಿಲ್‌ನ್ನು ಕೊಡುತ್ತಾರೆ, ಸೆಕೆಂಡ್ ಬಿಲ್‌ನ್ನು ಸೈನ್ ಹಾಕಿಸಿಕೊಂಡು ಇಟ್ಟುಕೊಳ್ಳುತ್ತಾರೆ. ಹೀಗೆ ವಿಪರೀತ ಲಂಚದ ಪರಿಣಾಮ ಅಲ್ಲಿ ಉಂಟಾಗಿದೆ. ಇದಕ್ಕೂ ಕೆಲವು ಕಾರಣಗಳು ಇರಬಹುದು. ಈ ನೌಕರ ವರ್ಗದವರಿಗೆ ಸಂಬಳ ಸಾರಿಗೆಯನ್ನು ಸ್ವಲ್ಪ ಹೆಚ್ಚಿಗೆ ಕೊಡಬೇಕು ಎಂದು ನನ್ನ ಅಭಿಪ್ರಾಯ. ಅವರೂ ಕೂಡ ಒಳ್ಳೆಯ ರೀತಿಯಲ್ಲಿ ಬದುಕಬೇಕು. ಆದರೆ ಆ ಜನರು ಲಂಚವನ್ನು ತಗೆದುಕೊಳ್ಳುವುದು ಬೇಡ. ಲಂಚ ತೆಗೆದುಕೊಳ್ಳದೇ ಅವರಿಗೆ ಬರುವ ಜಾಸ್ತಿ ಹಣವನ್ನು ಉಪಯೋಗಿಸಿಕೊಂಡು ಸುಖವಾಗಿ ಬದುಕಲಿ ಎಂದು ಬಯಸುವವನು ನಾನಾಗಿದ್ದೇನೆ. ಈ ಲಂಚದ ಪರಿಪಾಠ ಇನ್ನೂ ಮುಂದುವರಿಯುವುದು ಬೇಡ. ಮೊದಲು ರಾಜಗೋಪಾಲಾಚಾರಿಯವರು ಹೇಳಿದ ಒಂದು ಮಾತು ನೆನಪು ಬರುತ್ತದೆ. ಈ ಪಿ. ಡಬ್ಲ್ಯು. ಡಿ. ಇಲಾಖೆಯು ದೇಶಕ್ಕೆ ಒಂದು ಶತ್ರು ಇದ್ದ ಹಾಗೆ ಎಂದು ಹೇಳಿದ್ದಾರೆ. ಆದರೆ ಆ ಹೆಸರನ್ನು ಖಾಯಂ ಆಗಿ ನಾವು ಬೆಳೆಸಿಕೊಂಡು ಹೋಗಬೇಕೆ ? ಅದನ್ನು ತೊಡೆದು ಹಾಕಲು ಪ್ರಯತ್ನ ಮಾಡುವುದು ಅವಶ್ಯಕ. ಅದಕ್ಕೆ ನಮ್ಮಲ್ಲಿ ನಿಷ್ಠೆ ಬೇಕಾಗುತ್ತದೆ. ಮಾನ್ಯ ದೇವೇಗೌಡರು ಮೊದಲು ಬಂದಾಗ ಸ್ವಲ್ಪ ಚುರುಕು ಉಂಟು ಮಾಡಿದ್ದರು. ಅನಂತರ ಯಾರಾದರೂ ಅವರಿಗೆ ದಬಾಯಿಸಿ ಬಿಟ್ಟಿರಬೇಕು. ಕೆಲವು ಪ್ರತಿಷ್ಠಿತ ವ್ಯಕ್ತಿಗಳು ಇದೆಲ್ಲಾ ನಿಮಗೆ ಏಕೆ ಬೇಕು ? ನಿಮ್ಮ ಪಾಡಿಗೆ ನೀವು ಇದ್ದು ಬಿಡಿ ಎಂದು ಹೇಳಿದ್ದಾರೋ ಏನೋ ಗೊತ್ತಿಲ್ಲ ಒಟ್ಟಿನಲ್ಲಿ ಈ ಇಲಾಖೆಯಲ್ಲಿನ ತಮಾಷೆಯನ್ನು ನೋಡಿಕೊಂಡು ಇವರು ಸುಮ್ಮನೆ ಕುಳಿತುಕೊಂಡಿದ್ದಾರೆಂದು ನನಗನ್ನಿಸಿತು. ನಾವು ನಿಜವಾಗಿಯೂ ಯು. ಕೆ. ಪಿ. ಪ್ರಾಜೆಕ್ಟ್‌ನಲ್ಲಿ ಎಷ್ಟು ಕೆಲಸವನ್ನು ಇದುವರೆಗೂ ತೆಗೆದುಕೊಳ್ಳಬೇಕಾಗಿತ್ತೋ ಅಷ್ಟು ಕೆಲಸವನ್ನು ನಾವು ತೆಗೆದುಕೊಂಡಿಲ್ಲ ಎಂದು ಹೇಳಬೇಕಾಗುತ್ತದೆ.

ಜೊತೆಗೆ ನಮ್ಮ ಸರ್ಕಾರವೂ ಸಹ ಅದೇ ರೀತಿ ಇದೆ. ಮೂರು ವರ್ಷದಿಂದ ಇರಿಗೇಷನ್ ಬಿಲ್ಸ್ ಕೊಟ್ಟಿಲ್ಲ ಇನ್ನೂ ಕೆಲವು ಪೆಂಡಿಂಗ್ ಇದೆ, ಕಂಟ್ರಾಕ್ಟರ್‌ಗಳೆಲ್ಲ ಬಂದು ಯೋಜನೆಗಳ ಬಿಲ್ ಕೊಟ್ಟಿಲ್ಲ ಎಂದು ಕೇಳುತ್ತಿರುತ್ತಾರೆ. ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳನ್ನು ದಬಾಯಿಸಿ, ಏಕೆ ಕೊಟ್ಟಿಲ್ಲ ಎಂದರೆ, ಪೂರಲಿ ಏನು ರೈಟ್ಸ್ ಇದೆ ಸಾರ್, ನಮ್ಮ ಬಳಿ ದುಡ್ಡೇ ಇಲ್ಲ ಎನ್ನುತ್ತಾರೆ. ಸರ್ಕಾರದವರು ಆದ್ಯತೆ ಮೇರೆಗೆ ಇರಿಗೇಷನ್ ಬಗ್ಗೆ ಏನೇನು ಟಾರ್ಗೆಟ್ ಹಾಕಿಕೊಂಡಿದ್ದೀರೋ ಅವನ್ನು ಫುಲ್‌ಫಿಲ್ ಮಾಡಲೇಬೇಕು. ಈ ರೀತಿ ಮುಂದುವರಿದರೆ ಕರ್ನಾಟಕದ ಏಳ್ಗೆ ಹೇಗಾದಿತು ಎಂಬುದೇ ಪ್ರಶ್ನೆ. ದಯವಿಟ್ಟು ಶ್ರದ್ಧೆ ವಹಿಸಿ ಏನು ಒಂದು ಟಾರ್ಗೆಟ್ ಅಲಾಟ್‌ಮೆಂಟ್ ಕೊಟ್ಟಿದ್ದೀರೋ ಅದನ್ನು ಯಾವ ಕಾರಣದಿಂದಲೂ ಲ್ಯಾಪ್ಸ್ ಮಾಡದೆ ಖರ್ಚು ಮಾಡಬೇಕೆಂದು ಕೇಳಿಕೊಂಡು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜೂಗೌಡ (ಹನೂರು),— ಸನ್ಮಾನ್ಯ ಸಭಾಪತಿಗಳೇ, ಈ ದಿವಸ ಸದನದ ಮುಂದೆ ಇಟ್ಟಿರುವ ನೀರಾವರಿ ಮತ್ತು ಕಂದಾಯ ಬೇಡಿಕೆಗಳ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಮೊದಲನೆಯದಾಗಿ ರಾಜ್ಯದಲ್ಲಿ ನಾವು ಕೈಗೆತ್ತಿಕೊಂಡಿರುವ ಭಾರಿ, ಮಧ್ಯಮ ಹಾಗೂ ಸಣ್ಣ ನೀರಾವರಿ ಕೆಲಸಗಳನ್ನು ೭ನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಮುಗಿಸುತ್ತೇವೆಂದು ಕಳೆದ ಸಾಲಿನಲ್ಲಿ ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಿರಿ. ಹಾಗೆ ತಿಳಿಸುವುದಕ್ಕಿಂತ ಮುನ್ನ ಆ ವಿಷಯ ರಾಜ್ಯದ ಸಚಿವ ಸಂಪುಟದ ಮುಂದೆ ಬಂದು ಅಲ್ಲಿ ತೀರ್ಮಾನವಾಗಿ ಶತಾಯಗತಾಯ ಈ ಕೆಲಸವನ್ನು ಮಾಡೇ ಮಾಡುತ್ತೇವೆಂದು ತೀರ್ಮಾನಕ್ಕೆ ಬಂದ ಮೇಲೆ ರಾಜ್ಯಪಾಲರ ಭಾಷಣದಲ್ಲಿ ಸೂಚ್ಯವಾಗಿ ತಿಳಿಸಿದ್ದಿರೆಂದು ನಾನು ತಿಳಿದುಕೊಂಡಿದ್ದೇನೆ. ಅಂದಮೇಲೆ ಅಲ್ಲಿ ಪ್ರಸ್ತಾಪ ಮಾಡಿದ ಮೇಲೆ ಅದನ್ನು ಪೂರ್ಣಗೊಳಿಸುವ ನೈತಿಕ ಹೊಣೆ ಸರ್ಕಾರದ್ದು. ಅದನ್ನು ಪರೀಕ್ಷೆ ಮಾಡಿ ನೋಡಿದರೆ ಏನು ಮಾತು ಕೊಟ್ಟಿದ್ದರೋ ಆ ಕಾರ್ಯ ಮಾಡಲಿಲ್ಲ. ಮುಖ್ಯವಾಗಿ ಮಾತನ್ನು ಉಳಿಸಿಕೊಳ್ಳುವ ಜ್ಞಾಪಕ ನಿಮಗೆ ಇಲ್ಲವೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ವರ್ಷವೂ ಕೂಡ ನೀರಾವರಿ ಪ್ರವಾಹ ನಿಯಂತ್ರಣಕ್ಕೆ ಬಹಳ ಕಡಿಮೆ ಹಣವನ್ನು ಬಜೆಟ್‌ನಲ್ಲಿ ಇಟ್ಟಿದ್ದೀರಿ. ೮೭-೮೮ರಲ್ಲಿ ೧೯೦.೪೭ ಕೋಟಿ ಏನು ನಿಗದಿ ಮಾಡಿತ್ತೋ ಅದರಲ್ಲಿ ಶೇಕಡ ೨೮ರಷ್ಟು ಮಾತ್ರ ಖರ್ಚಾಗಿದ್ದು ಆ ಪೈಕಿ ಸಿಬ್ಬಂದಿ ಮತ್ತಿತರೆ ಖರ್ಚುಗಳನ್ನೆಲ್ಲ ಕಳೆದ ಮೇಲೆ ಕೇವಲ ಶೇಕಡ ೧೬ರಷ್ಟು ಮಾತ್ರ ಖರ್ಚಾಗಿದೆ. ೧೯೮೭-೮೮ರಲ್ಲಿ ಒಟ್ಟು ಯೋಜನಾ ವೆಚ್ಚದಲ್ಲಿ ಇದು ೨೧.೯ ಕೋಟಿ ಆಗುತ್ತದೆ, ಆದರೆ ಖರ್ಚು ಮಾಡಿದ್ದು ಬಹಳ ಕಡಿಮೆ ಅಂದರೆ ಶೇಕಡ ೮ರಿಂದ ೧೦ರಷ್ಟು ಮಾತ್ರ. ಇವತ್ತು ಕೇಂದ್ರದಲ್ಲಿ ಬಜೆಟ್ ಮಂಡನೆ ಮಾಡಿದ್ದಾರೆ, ರೈತರ ಹಿತಾಸಕ್ತಿಗಳನ್ನು ಗಮನಿಸಿ ಯೋಜನಾ ಮತ್ತು ಕೃಷಿ ಹಾಗೂ ನೀರಾವರಿಗೆ ಶೇಕಡ ೪೦ರಷ್ಟು ಹಣವನ್ನು ಮೀಸಲಾಗಿಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಸಹ ಏಕೆ ಹಾಗೆ ಮಾಡಬಾರದೆಂದು ನನ್ನ ಪ್ರಶ್ನೆ. ಹೀಗೆ ನೀರಾವರಿ ಮತ್ತು ಕೃಷಿಗೆ ಆದ್ಯತೆ ಮೇರೆಗೆ ನಮ್ಮ ರಾಜ್ಯದಲ್ಲಿ ಶೇಕಡ ೩೦ರಿಂದ ೪೦ರಷ್ಟು ಹಣ ಮೀಸಲಿಟ್ಟರೆ ಕೈಗೆತ್ತಿಕೊಂಡಿರುವ ಎಲ್ಲ ಯೋಜನೆಗಳ ಕಾಮಗಾರಿಗಳನ್ನು ಮುಗಿಸಲು ಸಾಧ್ಯವಾಗುತ್ತದೆ. ಈ ಸಲಹೆಯನ್ನು ನಾನು ರಾಜ್ಯ ಸರಕಾರದ ಮುಂದೆ ಇಡುತ್ತಿದ್ದೇನೆ. ತಾವು ಮುಂದೆ ಬಡ್ಜೆಟ್ ಮಂಡನೆ ಮಾಡುವಾಗ ಯೋಜನಾ ವೆಚ್ಚ ಏನು ಇದೆ ಅದರಲ್ಲಿ ಕೊನೇಪಕ್ಷ ೪೦ರಷ್ಟನ್ನು ನೀರಾವರಿ ಕಾಮಗಾರಿಗಳಿಗೆ ಮೀಸಲಿಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಕೇಂದ್ರ ಸರಕಾರ ತನ್ನ ಬಜೆಟ್ಟಿನಲ್ಲಿ ಒಂದು ಹೊಸ ಯೋಜನೆಯನ್ನು ರೂಪಿಸಿದೆ. ಸತತ ಬರಗಾಲಕ್ಕೀಡಾಗಿರತಕ್ಕಂತಹ ರೈತರು ಏನು ಸಂಕಷ್ಟದಲ್ಲಿದ್ದಾರೆ ಅವರಿಗೆ ಪರಿಹಾರ ನೀಡುವ ದೃಷ್ಟಿಯಿಂದ ರಾಷ್ಟ್ರ ಕೃಷಿ ಸಾಲ ಪರಿಹಾರ ನಿಧಿ ಎಂದು ಒಂದು ಯೋಜನೆಯನ್ನು ಮಾಡಿದೆ. ಯಾವ ರೈತರು ಬರಗಾಲಕ್ಕೆ ಸಿಕ್ಕಿ ಸಂಕಷ್ಟಕ್ಕೆ ಈಡಾಗುತ್ತಾನೆ ಅವನಿಗೆ ಪರಿಹಾರ ನಿಧಿಯಿಂದ ಸಾಲದ ರೂಪದಲ್ಲಿ ಸಹಾಯಧನ ಕೊಡುತ್ತಿದ್ದಾರೆ. ಅದೇ ರೀತಿ ಈ ರಾಜ್ಯದಲ್ಲಿ ಒಂದು ಕೃಷಿ ಸಾಲ ಪರಿಹಾರ ನಿಧಿಯನ್ನು ಏರ್ಪಡಿಸಿ ಸಂಕಷ್ಟದಲ್ಲಿರುವ ಕೃಷಿಕರಿಗೆ ಸಹಾಯ ಮಾಡಬೇಕು ಎಂಬ ಸಲಹೆಯನ್ನು ಸರಕಾರಕ್ಕೆ ಕೊಡಲಿಚ್ಛಿಸುತ್ತೇನೆ. ಕಳೆದ ಐದು ವರ್ಷಗಳಿಂದ ಏನು ಹಣವನ್ನು ಕಾಮಗಾರಿಗಳಿಗೆ ಖರ್ಚು ಮಾಡುತ್ತಿದ್ದೇವೆ ಅದನ್ನೇ ಮುಂದುವರೆಸಿಕೊಂಡು ಹೋದರೆ ಇನ್ನು ೧೦ ವರ್ಷಗಳಾದರೂ ಕೂಡ ಈ ಯೋಜನೆಗಳು ಪೂರ್ಣಗೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಬೊಮ್ಮಾಯಿಯವರು ತಾವು ವಿರೋಧ ಪಕ್ಷದಲ್ಲಿದ್ದಾಗ ನೀರಾವರಿ ಕಾಮಗಾರಿಗಳನ್ನು ಯಾವ ರೀತಿ ಮಾಡಬೇಕೆಂಬ ಬಗ್ಗೆ ಸಲಹೆಯನ್ನು ಕೊಟ್ಟಿದ್ದೆ ಎಂದು ಹೇಳಿದರು, ನಾನು ಅವರು ಹೇಳಿದ್ದನ್ನು ಗಮನಿಸಿದೆ ಅವರು ಆಗ ಏನು ಸಲಹೆ

ಯನ್ನು ವಿರೋಧ ಪಕ್ಷದಲ್ಲಿದ್ದು ಕೊಟ್ಟಿದ್ದರು ಅದನ್ನು ಈಗ ಏಕೆ ಕಾರ್ಯಗತ ಮಾಡಲಿಲ್ಲ? ಅವರು ಏನು ಸಲಹೆ ಕೊಟ್ಟಿದ್ದರು ಅದರ ಬಗ್ಗೆ ಅವರು ಉತ್ತರ ಕೊಡುವಾಗ ತಿಳಿಸಿದರೆ ಒಳ್ಳೆಯದು. ನಾನು ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ. ಚೈನಾ ದೇಶದವರು ತಮ್ಮ ದೇಶವನ್ನು ಅಭಿವೃದ್ಧಿ ಮಾಡಬೇಕೆಂಬ ಸದುದ್ದೇಶದಿಂದ ಒಂದು ವರ್ಷ ಪೂರ್ತಿ ಇಂಧನ ಬಳಸಿ ಓಡಿಸತಕ್ಕಂತಹ ವಾಹನಗಳು ಏನು ಇವೆ ಅದನು ಸ್ಥಗಿತ ಮಾಡಿ ೧೦ ಸಾವಿರ ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡಿ ಆ ಹಣದಲ್ಲಿ ತಮ್ಮ ದೇಶದ ಅಭಿವೃದಿ ಕೆಲಸಗಳನ್ನು ಸಾಧನೆ ಮಾಡಿದರು, ನಮ್ಮಲ್ಲೂ ಕೂಡ ಇಂತಹ ತ್ಯಾಗಕ್ಕೆ ಸಿದ್ಧರಾಗಿರಬೇಕು. ನಮ್ಮ ರಾಜ್ಯದಲ್ಲಿ ಮುಜರಾಯಿ ದೇವಸ್ಥಾನಗಳು ಏನು ಇವೆ ಅದರಲ್ಲಿರತಕ್ಕಂತಹ ಅನುಪಯುಕ್ತವಾದಂತಹ ಚಿನ್ನ, ಬೆಳ್ಳಿ, ಮುಂತಾದ ಸ್ವತ್ತುಗಳು ಏನು ಇವೆ ಅವೆಲ್ಲವನ್ನೂ ಮಾರಾಟ ಮಾಡಿ ಅದರಿಂದ ಬರತಕ್ಕಂತಹ ಹಣವನ್ನು ಈ ನೀರಾವರಿ ಕಾಮಗಾರಿಗಳಿಗೆ ಏಕೆ ಹಾಕಿಕೊಳ್ಳಬಾರದು? ಅದನ್ನು ಇದಕ್ಕೆಂದು ಏಕೆ ಮೀಸಲಿಡಬಾರದು ಎಂದು ಕೇಳಬಯಸುತ್ತೇನೆ. ಈಗಾಗಲೇ ಸರಕಾರ ಸಿಬ್ಬಂದಿ ವೇತನಕ್ಕೆಂದು ಚನ್ನಕೇಶವ ದೇವಸ್ಥಾನದಲ್ಲಿರತಕ್ಕಂತಹ ಹಣವನ್ನು ತೆಗೆದುಕೊಂಡಿದೆ ಆದರೆ ನಾವು ಇದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳದೇ ಹೋದಾಗ ದೇವಸ್ಥಾನದಲ್ಲಿ ಕೂಡ ಇವು ಉಳಿಯುವುದಿಲ್ಲ ಮುಂದೆ ಅರ್ಚಕರ ಪಾಲೋ ಇಲ್ಲವೇ ಬೇರೆಯಾದ ಪಾಲೋ ಆಗುತ್ತದೆ. ಈ ಎಲ್ಲಾ ಸಂಪತ್ತನ್ನು ಕ್ರೋಢೀಕರಿಸಿದಾಗ ಸಾವಿರಾರು ಕೋಟಿ ರೂಪಾಯಿಯಾಗುತ್ತದೆ. ಈ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ವರದಿಯನ್ನು ಸಲ್ಲಿಸಲು ಈ ಸದನದ ಸಮಿತಿಯನ್ನು ಮಾಡಿ. ಆ ಸಮಿತಿ ಕೊಟ್ಟ ವರದಿಯ ಮೇಲೆ ಅದರ ಆಗು ಹೋಗುಗಳನ್ನು ನೋಡಿಕೊಂಡು.........

ಶ್ರೀ ಜಿ, ಎಸ್. ಶಿವನಂಜಪ್ಪ.—ತಾವು ಹೇಳುತ್ತಿರುವುದನ್ನು ಸಂಬಂಧಪಟ್ಟ ಮಂತ್ರಿಗಳು ಯಾರು ಬರೆದುಕೊಳ್ಳುತ್ತಿಲ್ಲ.

ಮೈಸ್ ಚೇರ್ಮನ್.—ಸಾರಿಗೆ ಮಂತ್ರಿಗಳು ಬರೆದುಕೊಳ್ಳುತ್ತಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಊಟಕ್ಕೆ ಹೋಗಿದ್ದಾರೆ.

ಶ್ರೀ ಜಿ. ರಾಜೂಗೌಡ.—ಸಾವಿರಾರು ಕೋಟಿ ರೂಪಾಯಿಗಳನ್ನು ಇದರಿಂದ ಸಂಗ್ರಹ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಸರಕಾರ ಇದರಲ್ಲಿ ಕಾರ್ಯಪ್ರವೃತ್ತರಾಗಬೇಕು. ನಮ್ಮಲ್ಲಿ ಸರಕಾರಿ ಇಲಾಖೆಗಳಲ್ಲಿ ಕೆಟ್ಟು ಹೋಗಿರತಕ್ಕಂತಹ ವಾಹನಗಳು ಏನು ಇದೆ ಅವನ್ನೆಲ್ಲಾ ಬಿಕರಿ ಮಾಡಿದರೆ ಅನೇಕ ಕೋಟಿ ರೂಪಾಯಿಗಳನ್ನು ಗಳಿಸಲಿಕ್ಕೆ ಸಾಧ್ಯವಾಗುತ್ತದೆ. ಇದರಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಯೋಚಿಸಿ ಮಾಡಿದಾಗ ನಾವು ಏನು ಕಾಮಗಾರಿಗಳನ್ನು ಕೈಗೆ ತೆಗೆದುಕೊಂಡಿದ್ದೇವೆ ಅದನ್ನು ಪೂರ್ಣ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಕೃಷ್ಣಾ ನದಿ ಯೋಜನೆಗೆ ಇನ್ನೂರು ಕೋಟಿ ರೂಪಾಯಿ ಕೊಡಬೇಕು ಕಾವೇರಿ ಯೋಜನೆಗೆ ನೂರು ಕೋಟಿ ರೂಪಾಯಿ ಕೊಡಬೇಕು ಎಂದು ನಾವೆಲ್ಲಾ ಸೇರಿ ಇಲ್ಲಿ ತೀರ್ಮಾನ ಮಾಡಿದ್ದೆವು. ಆ ತೀರ್ಮಾನ ಕೂಡಾ ಸರ್ವಾನುಮತದಿಂದ ಅಂಗೀಕಾರವಾಗಿ ಅದಕ್ಕೆ ಬೆಂಬಲ ಸಿಕ್ಕಿತ್ತು. ಆದರೆ ಅದನ್ನು ಕಾರ್ಯಗತ ಮಾಡಲಿಕ್ಕೆ ಆಗಲಿಲ್ಲ. ಕಾರಣವೇನೆಂದರೆ ಸಂಪನ್ಮೂಲದ ಕೊರತೆ. ಆದ್ದರಿಂದ ಅದನ್ನು ಕೈಬಿಟ್ಟೆವು. ಈ ಸಮಯದಲ್ಲಿ ಇನ್ನೊಂದು ಮುಖ್ಯವಾದ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳ ಭಾಷಣದ ಧಾಟಿ ನೋಡಿದಾಗ ಅವರು ಸರ್ವಾಧಿಕಾರಿಗಳಂತೆ ವರ್ತನೆ ಮಾಡುತ್ತಿದ್ದಾರೆ ಎಂದು ಕಾಣುತ್ತದೆ. ೧೯೯೦ ಇಸವಿಯೊಳಗೆ ಅಂತರರಾಜ್ಯ ತೆಲುಗು ಗಂಗಾ ಯೋಜನೆಯನ್ನು ಪೂರೈಸುತ್ತೇನೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಅನುಮತಿ ಕೊಡಲಿ. ಅನುಮತಿಯನ್ನು ನಿರಾಕರಣೆ ಮಾಡಲಿ, ನಾನು ೧೯೯೦ನೇ ಇಸವಿಯೊಳಗೆ ಇದನ್ನು ಮುಗಿಸುತ್ತೇನೆ ಎಂದು ಅವರು ಹೇಳುವ ಧಾಟಿ ನೋಡಿದರೆ ಭಯ ಆಗುತ್ತದೆ ಕೊನೆಗೆ ಈ ಸಂಬಂಧವಾಗಿ ಮಹಾರಾಷ್ಟ್ರವಾಗಲೀ, ಕರ್ನಾಟಕವಾಗಲೀ ಯಾರ ಜೊತೆ ಯಾವುದೇ ಮಾತುಕತೆ ಆಡಲಿಕ್ಕೆ ಇಚ್ಛೆ ಪಡುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇಲ್ಲಿ ಮುಖ್ಯವಾಗಿರತಕ್ಕಂಥ ವಿಚಾರ ಕೃಷ್ಣಾನದಿ ಹಂಚಿಕೆ ವಿವಾದವನ್ನು ಬಚಾವತ್ ಆಯೋಗ ನೀಡಿರತಕ್ಕಂಥ ತೀರ್ಪಿನಲ್ಲಿ ಆಂಧ್ರ ಪ್ರದೇಶದ ನದಿ ನೀರು ಹರಿದು ಬರುವ ಮುಖಜ ಭೂಮಿಯಲ್ಲಿರುವುದರಿಂದ ಅದರಲ್ಲಿ ಬರುವ ಹೆಚ್ಚುವರಿ ನೀರನ್ನು ಉಪಯೋಗಿಸುವುದಕ್ಕೆ ನಮ್ಮ ರಾಜ್ಯಕ್ಕೆ ಈ ನದಿಯ ಹಕ್ಕು ಇದೆ. ಈ ನದಿಯ ಮುಖಜ ಪ್ರದೇಶದಲ್ಲಿ ನಮ್ಮ ರಾಜ್ಯ ಇರುವುದರಿಂದ ಅಲ್ಲಿ ಬರತಕ್ಕಂಥ ಹೆಚ್ಚುವರಿ ನೀರನ್ನು ಎರಡು ಸಾವಿರ ಇಸವಿಯೊಳಗಾಗಿ

ಬಳಸಿಕೊಳ್ಳುತ್ತೇವೆ ಎನ್ನುತಕ್ಕಂಥ ಮಾತನ್ನು ಹೇಳಿದ್ದಾರೆ. ಆದರೆ ಮಹಾರಾಷ್ಟ್ರಕ್ಕಾಗಲೀ ಕರ್ನಾಟಕಕ್ಕಾಗಲೀ ಹೆಚ್ಚುವರಿ ನೀರನ್ನು ಉಪಯೋಗಿಸ ತಕ್ಕಂತಹ ಹಕ್ಕಿಲ್ಲ. ನನ್ನ ರಾಜ್ಯ ಒಂದಕ್ಕೆ ಮಾತ್ರ ಹೆಚ್ಚುವರಿ ನೀರನ್ನು ಅನುಭವಿಸುವುದಕ್ಕೆ ಸಾಧ್ಯ ಎನ್ನುತಕ್ಕಂಥ ಮಾತನ್ನು ಅವರು ಈ ಉದ್ದೇಶ ಇಟ್ಟುಕೊಂಡಿರುವುದರಿಂದ ಹೇಳಿದ್ದಾರೆ. ಈ ರೀತಿ ಅವರು ಮಾತನಾಡಿರುವುದರಿಂದ ನಮಗೆ ದೊರೆಯಬೇಕಾಗಿರತಕ್ಕಂಥ ನೀರಿನ ಹಕ್ಕನ್ನು ಕೂಡಲೇ ಉಪಯೋಗಿಸಿಕೊಳ್ಳಬೇಕು. ಇದರ ಬಗ್ಗೆ ನಾವೆಲ್ಲರೂ ಕೂಡಾ ಸನ್ನದ್ಧರಾಗಬೇಕು. ಈ ಬಚಾವತ್ ಆಯೋಗದ ತೀರ್ಮಾನ ಒಂದಿಂಚೂ ಆ ಕಡೆ ಈ ಕಡೆ ತಿರುಗದ ರೀತಿಯಲ್ಲಿ ಇದರ ಬಗ್ಗೆ ಕೇಂದ್ರದ ಮೇಲೆ ಒತ್ತಾಯ ತಂದು ಅದನ್ನು ಯಾವ ರೀತಿ ಮಾಡಬೇಕೋ ಆ ರೀತಿ ಮಾಡಬೇಕು ಎಂದು ನಾನು ಹೇಳುತ್ತೇನೆ. ಮತ್ತು ಅನೇಕ ನೀರಾವರಿ ಕಾಮಗಾರಿಗಳ ಸಂಬಂಧದಲ್ಲಿ ಕೆಲವರು ತಮ್ಮ ಜಮೀನು ಮನೆಯನ್ನು ಕಳೆದುಕೊಂಡಿದ್ದಾರೆ, ಇದರಿಂದ ಅವರೆಲ್ಲರೂ ನಿರ್ವಸಿತರಾಗಿದ್ದಾರೆ. ಆದ್ದರಿಂದ ಈ ವಿಚಾರವಾಗಿ ಗಮನ ಹರಿಸಿ ಅವರಿಗೆ ವಸತಿ ಸೌಕರ್ಯದ ಏರ್ಪಾಡು ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ. ಮತ್ತೆ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದಮೇಲೆ ಪ್ರತಿಯೊಂದು ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು ೨೫೦ ಹೆಕ್ಟೇರ್ ಅಷ್ಟು ಜಮೀನಿನಲ್ಲಿ ನೀರಾವರಿ ಮಾಡುತ್ತೇವೆ ಎನ್ನುತಕ್ಕಂಥದ್ದು ರಾಜ್ಯಪಾಲರ ಭಾಷಣದಲ್ಲಿಯೂ ಹೇಳಿದೆ. ಅದನ್ನು ನಾವೆಲ್ಲರೂ ಕೂಡಾ ಒಪ್ಪಿಕೊಂಡಿದ್ದೆವು. ಆದರೆ ಇದುವರೆಗೂ ಮಂಡಲ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರತಕ್ಕಂಥ ಯಾವುದೇ ನೀರನ್ನು ಕೂಡಾ ನೀರಾವರಿಗೆ ಬಳಸಿಲ್ಲ ಎನ್ನುತಕ್ಕಂಥದ್ದನ್ನು ಘಂಟಾಘೋಷವಾಗಿ ಹೇಳುತ್ತೇನೆ. ದಯಮಾಡಿ ಏನು ಮಾತನ್ನು ಮೊದಲು ಕೊಟ್ಟಿದ್ದೀರಿ, ಆ ಮಾತನ್ನು ಉಳಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಸಣ್ಣ ನೀರಾವರಿ ಬಗ್ಗೆ ನಾವು ಅನೇಕ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯಿಂದ ಜಿಲ್ಲಾ ಪರಿಷತ್ತು ವ್ಯಾಪ್ತಿಗೆ ವಹಿಸಬೇಕು ಎಂದು ಸುಮಾರು ೩೦-೪೦ ಕೆರೆಗಳನ್ನು ಆ ಪಿ.ಹೆಚ್.ಇ. ಇಲಾಖೆಗೆ ವಹಿಸಿದ್ದೆವು. ಆ ಇಲಾಖೆಯ ಅಭಿಯಂತರರು, ಸಹಾಯಕ ಕಾರ್ಯಪಾಲ ಅಭಿಯಂತರರು, ಕಾರ್ಯಪಾಲ ಅಭಿಯಂತರರು ಏನಿದ್ದಾರೆ, ಅವರುಗಳಿಗೆ ಈ ನೀರಾವರಿ ಬಗ್ಗೆ ಎಳ್ಳಷ್ಟೂ ಗೊತ್ತಿಲ್ಲ ಎಂದು ಹೇಳುವುದಕ್ಕೆ ನನಗೆ ವ್ಯಸನವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಒಬ್ಬ ಸಹಾಯಕ ಅಭಿಯಂತರರು ಕೆರೆಯ ಪಕ್ಕದಲ್ಲಿ ನಿಂತುಕೊಂಡು ಮಾತನಾಡುತ್ತಾ ರಿವಿಟ್‌ಮೆಂಟ್ ಕೆರೆಯನ್ನು ಆ ಕಡೆ ಕಟ್ಟಬೇಕೋ ಈ ಕಡೆ ಕಟ್ಟಬೇಕೋ ಎಂದು ಕೇಳುವುದನ್ನು ನೋಡಿದರೆ ಎಷ್ಟರ ಮಟ್ಟಿಗೆ ಅವರು ಅನುಭವ ಪಡೆದಿದ್ದಾರೆ ಎಂಬುದು ಗೊತ್ತಾಗುತ್ತದೆ. ಈ ಸಣ್ಣ ನೀರಾವರಿ ಕೆರೆಗಳು ಏನಿವೆ, ಇವೆಲ್ಲವನ್ನೂ ಕೂಡಾ ಮತ್ತೆ ಸರ್ಕಾರವೇ ವಾಪಸ್ ತೆಗೆದುಕೊಂಡು ಈಗ ನಮ್ಮಲ್ಲಿ ಸಣ್ಣ ನೀರಾವರಿ ಇಲಾಖೆ ಏನು ಇದೆ. ಆ ನೀರಾವರಿ ಇಲಾಖೆಗೆ ಇದರ ಜವಾಬ್ದಾರಿಯನ್ನು ವಹಿಸಿ ಅದರ ಮುಖಾಂತರ ಈ ಕೆಲಸವನ್ನು ಮಾಡಿಸಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮತ್ತೆ ನಮ್ಮ ಮೈಸೂರು ಜಿಲ್ಲೆಯಲ್ಲಿ ಕಬಿನಿ ಜಲಾಶಯ ನಿರ್ಮಾಣವಾಗುತ್ತಿದೆ. ಅಲ್ಲಿ ೧೫೮-೧೬೦ ಕಿಲೋ ಮೀಟರ್‌ಗಳಷ್ಟು ಕೆಲಸವಾಗಿದೆ. ಇನ್ನು ೫-೬ ಕಿಲೋ ಮೀಟರ್ ಮಾತ್ರ ಕೆಲಸ ಪೂರ್ತಿಯಾಗದೇ ಉಳಿದಿದೆ ಅಲ್ಲೇನೋ ಮಣ್ಣು ಸಡಿಲವಾಗಿದೆ ಎಂದು, ಕಲ್ಲುಬಂಡೆ ಸಿಕ್ಕಿದೆ ಎಂದು ಅದನ್ನು ಇಂಜಿನಿಯರಿಂಗ್ ಸರಿಯಾದ ರೀತಿಯಲ್ಲಿ ಗಮನಿಸದೇ ಕೆಲಸ ಸ್ಥಗಿತವಾಗಿದೆ ಮತ್ತು ಕೆಲಸ ಕೂಡಾ ನಿಂತುಹೋಗಿದೆ. ದಯಮಾಡಿ ಇದರ ಬಗ್ಗೆ ಹೆಚ್ಚಿಗೆ ಗಮನ ಕೊಡಬೇಕು. ೧೯೮೩-೮೪ರಲ್ಲಿ ನೀರನ್ನು ಕೊಡುತ್ತೇವೆ ಎನ್ನುತಕ್ಕಂಥ ವಾಗ್ದಾನವನ್ನು ಸರ್ಕಾರ ಮಾಡಿತ್ತು. ಆದರೆ ೧೯೮೮ನೇ ಇಸವಿ ಆದರೂ ಇಲ್ಲಿಯವರೆಗೂ ಕೊಟ್ಟಿಲ್ಲ. ಆದ್ದರಿಂದ ಈ ಮಧ್ಯದಲ್ಲಿ ೪-೫ ಕಿಲೋ ಮೀಟರ್‌ಗಳ ಕೆಲಸ ಆಗದೆ ಸ್ಥಗಿತಗೊಂಡಿದೆ. ಈ ಕೆಲಸವನ್ನು ಆದಷ್ಟು ಬೇಗನೆ ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವ ಕಾಲದಲ್ಲಿ ಈ ಇರಿಗೇಷನ್ ಬಿಲ್ಲ್ ವಿಚಾರದಲ್ಲಿ ನನಗೆ ತಿಳಿದ ಮಟ್ಟಿಗೆ ಕೆಲವರು ಕೋರ್ಟಿಗೆ ಹೋಗಿದ್ದಾರೆ, ಜಪ್ತಿ ಮಾಡಿಸಿದ್ದಾರೆ ಎನ್ನುತಕ್ಕ ವಿಷಯವನ್ನೂ ಕೇಳಿದೆ. ಅದು ನಿಜವೇ, ಆದರಿಂದ ನಮ್ಮ ರಾಜ್ಯಕ್ಕೆ ಆಗಬೇಕಾಗಿದ್ದ ಪ್ರಯೋಜನ ಆಗಿದೆಯೋ ? ದಯಮಾಡಿ ಎಷ್ಟು ಪೆಂಡಿಂಗ್ ಬಿಲ್ಸ್ ಕೊಡಬೇಕಾಗಿವೆ, ಯಾರ್ಯಾರು ಇದರ ಬಗ್ಗೆ ಕೋರ್ಟಿಗೆ ಹೋಗಿದ್ದಾರೆ ಎನ್ನುತಕ್ಕ ಮಾಹಿತಿಯನ್ನು ತಾವು ಒದಗಿಸಿಕೊಡಬೇಕು ಎಂದು ಕೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ೧೯೭೮ರಿಂದ ಇಲ್ಲಿಯತನಕ ೭೨½ ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಖರ್ಚು ಮಾಡಿದ್ದೇವೆ. ಒಂದು ಎಕರೆ ಭೂಮಿ ಕೂಡ ನೀರಾವರಿಗೆ ಒಳಪಟ್ಟಿಲ್ಲ. ಈ ಸದನದಲ್ಲಿ

ಇದರ ಬಗ್ಗೆ ನಾವು ಪ್ರಶ್ನೆ ಕೇಳಿದಾಗ ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಸಣ್ಣ ನೀರಾವರಿ ಕಾಮಗಾರಿಗಳು ಬೇಕಾದಷ್ಟು ಆಗಿವೆ, ಮಧ್ಯಮ ನೀರಾವರಿಗಳು ಆಗಿವೆ. ಈಗ ವಿಶ್ವ ಬ್ಯಾಂಕ್ ನೆರವಿನಿಂದ ಒಂದು ಮಿಣ್ಣೆತೊಳೆ, ಯೋಜನೆ ಪೂರ್ಣ ಪ್ರಮಾಣದಲ್ಲಿ ಕೆಲಸ ಆಗಿದೆ, ಬಹುಶಃ ಇನ್ನು ೩-೪ ತಿಂಗಳುಗಳಲ್ಲಿ ನೀರು ಕೊಡಬಹುದು. ಅದನ್ನು ಬಿಟ್ಟು ಉಳಿದ ಕೆಲಸಗಳು ಎಷ್ಟು ಆಗಿವೆ. ಯಾವುದೇ ಒಂದು ಎಕರೆ ಭೂಮಿಗೆ ನೀರು ಕೊಟ್ಟಿಲ್ಲ. ಇಲ್ಲಿಯವರೆಗೆ ೧೭½ ಕೋಟಿ ರೂಪಾಯಿಗಳನ್ನು ನೀರಾವರಿಗೆ ಖರ್ಚು ಮಾಡಿದ್ದೇವೆ, ಕಂಟ್ರಾಕ್ಟರ್ ಮತ್ತು ಅಧಿಕಾರಿಗಳಿಗೆ ಎಲ್ಲಿಯತನಕ ಸಾಮಾನ್ಯವಾಗಿ ದುಡ್ಡು ಸಿಗುತ್ತದೋ ಅಲ್ಲಿಯವರೆಗೆ ಕೆಲಸವನ್ನು ಬಹಳ ಬಿರುಸಿನಿಂದ ಮಾಡುತ್ತಾರೆ. ಆ ಎಲ್ಲೆ ದಾಟಿದ ಮೇಲೆ ಕೆಲಸ ಸ್ಥಗಿತವಾಗುತ್ತದೆ. ರಾಮನ ಗುಹ್ನಾಲ್, ಮಿಹ್ನಾಳ್, ಹಲಗಾಪುರ, ಮಿಂಡಾ ಟ್ಯಾಂಕ್ ಹೀಗೆ ಎಲ್ಲಾ ಕಡೆ ಏತ ನೀರಾವರಿ ಯೋಜನೆಗಳನ್ನು ಕೈಕೊಂಡರೂ ಕೂಡ ಕೆಲಸಗಳು ಸ್ಥಗಿತವಾಗಿದೆ. ಯಾವ ಒಂದು ಎಕರೆ ಕೂಡ ನೀರಾವರಿಗೆ ಒಳಪಟ್ಟಿಲ್ಲ. ಸರ್ಕಾರದ ಬಂಡವಾಳಕ್ಕೆ ಪ್ರತಿಫಲ ಸಿಗುತ್ತಾ ಇಲ್ಲ. ಆದಷ್ಟು ಬೇಗ ಯೋಚನೆ ಮಾಡಿ ರೈತರಿಗೆ ಅನುಕೂಲ ಆಗತಕ್ಕ ರೀತಿಯಲ್ಲಿ ನೀರನ್ನು ಕೊಡಬೇಕು ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಕಂದಾಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯದಲ್ಲಿರತಕ್ಕ ೪ ಕಂದಾಯ ವಿಭಾಗಾಧಿಕಾರಿಗಳ ಹುದ್ದೆಗಳು ಏನಿವೆ, ಆ ವಿಭಾಗಾಧಿಕಾರಿಗಳ ಹುದ್ದೆಯನ್ನು ರದ್ದುಪಡಿಸುವುದು ಒಳ್ಳೆಯದೆಂದು ಹೇಳುತ್ತೇನೆ. ಕಾರಣ ಏನೆಂದರೆ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ವಿಭಾಗಾಧಿಕಾರಿಗಳ ಹುದ್ದೆಗೆ ಸರಿಸಮನಾದ ಜಿಲ್ಲಾ ಪರಿಷತ್ ಕಾರ್ಯದರ್ಶಿಗಳ ಹುದ್ದೆಯನ್ನು ಸೃಷ್ಟಿ ಮಾಡಿದ್ದರಿಂದ ರಾಜ್ಯದಲ್ಲಿ ಒಟ್ಟು ೧೯ ಇಂತಹ ಕಾರ್ಯದರ್ಶಿಗಳ ಹುದ್ದೆಗಳು ಇರುವುದರಿಂದ ದಯವಿಟ್ಟು ವಿಭಾಗಾಧಿಕಾರಿಗಳ ಹುದ್ದೆಗಳನ್ನು ರದ್ದು ಮಾಡಿ ಎಂದು ಹೇಳುತ್ತೇನೆ. ಇಲ್ಲವೇ ಜಿಲ್ಲಾ ಪರಿಷತ್ ಕಛೇರಿಯನ್ನು ವಿಭಾಗಾಧಿಕಾರಿಗಳ ಕಛೇರಿಯನ್ನಾಗಿ ಪರಿವರ್ತನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಅತೀ ಮುಖ್ಯವಾಗಿ ಕೃಷಿಗೆ ಯೋಗ್ಯವಾಗಿರತಕ್ಕ ಸುಮಾರು ೨೦-೨೫ ಲಕ್ಷ ಎಕರೆಗಳಷ್ಟು ಜಮೀನು ೪-೬ ತಿಂಗಳುಗಳಿಂದ ಬಂಜರು ಬಿದ್ದು ಅದರಿಂದ ಉತ್ಪಾದನೆ ಬರತಕ್ಕದ್ದು ಕೂಡ ಕುಂಠಿತವಾಗಿದೆ. ರಾಜ್ಯದಲ್ಲಿ ಬಹುಶಃ ಸರ್ಕಾರದವರೇ ಸುಮಾರು ವರ್ಷಗಳಿಂದ ಕೃಷಿಗೆ ಯೋಗ್ಯವಾಗಿರತಕ್ಕ ಜಮೀನನ್ನು ಬಂಜರು ಬಿಟ್ಟಿದ್ದಾರೆ, ಅಂತಹ ಜಮೀನನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಏನಾದರೂ ಕಾಯಿದೆಗಳು ಇವೆಯೋ ? ಇದ್ದರೆ ಎಷ್ಟು ಪ್ರಕರಣಗಳಲ್ಲಿ ಬಂಜರು ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂಬುದನ್ನು ತಿಳಿಸಬೇಕು. ಅಂತಹ ಕಾಯಿದೆಗಳು ಇಲ್ಲದಿದ್ದರೆ ಅದನ್ನು ಯಾಕೆ ಜಾರಿಗೆ ತರುವುದಕ್ಕೆ ಯೋಚನೆ ಮಾಡಿಲ್ಲವೆಂದು ಕೇಳಲು ಇಚ್ಛೆಪಡುತ್ತೇನೆ. ಯಾಕೆಂದರೆ ಅನೇಕ ಜನ ಶ್ರೀಮಂತರು, ದೊಡ್ಡ ರೈತರು ತಮ್ಮಲ್ಲಿರತಕ್ಕ ಜಮೀನನ್ನು ಬೇರೆಯವರಿಗೂ ಕೊಡುವುದಿಲ್ಲ, ತಾವು ಉತ್ಪಾದನೆ ಮಾಡಲು ಸಹ ಇಚ್ಛೆಪಡುವುದಿಲ್ಲ. ತಾವು ಸುಮ್ಮನೆ ಇಟ್ಟುಕೊಂಡಿರುತ್ತಾರೆ. ಬೇರೆ ಯವರಿಗೂ ಕೊಡದಿರುವುದರಿಂದ ಅದರಿಂದ ಉತ್ಪಾದನೆ ಸಹ ಬರುವುದಿಲ್ಲ. ದಯಮಾಡಿ ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ಅದನ್ನು ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಬಡವರಿಗೆ ಹೆಚ್ಚುವರಿ ಭೂಮಿಯೆಂದು ಪರಿಗಣಿಸಿ ಹಂಚಿಕೆ ಮಾಡುವ ಕೆಲಸ ಮಾಡಿದಾಗ ಮಾತ್ರ ಉತ್ಪಾದನೆ ಕೂಡ ಜಾಸ್ತಿ ಆಗುತ್ತದೆ. ಬಡ ರೈತ ಕೂಡ ಬದುಕುತ್ತಾನೆ. ಈ ಸಲಹೆಯನ್ನು ನಾನು ಸರ್ಕಾರಕ್ಕೆ ಕೊಡಲು ಇಚ್ಛೆ ಪಡುತ್ತೇನೆ. ಇನ್ನು ತಾಲ್ಲೂಕಿಗೆ ಬಂದರೆ......

ಛೇರ್ಮನ್.—೧೫ ನಿಮಿಷ ಆಯಿತು ಮುಗಿಸಿ.

ಶ್ರೀ ಜಿ. ರಾಜುಗೌಡ.—ಇನ್ನು ತಾಲ್ಲೂಕಿನ ವಿಷಯಕ್ಕೆ ಬಂದರೆ ಗ್ರಾಮ ಲೆಕ್ಕಿಗ ಇಲ್ಲಿ ರೈತರ ಮೊದಲ ಅಧಿಕಾರಿ ಗ್ರಾಮ ಲೆಕ್ಕಿಗ ಸರಿಯಾಗಿ ಊರಿನಲ್ಲಿ ಇರುವುದೇ ಇಲ್ಲ. ಆತನಿಗೆ ವಾಸ ಮಾಡುವುದಕ್ಕೆ ಮನೆ ಇಲ್ಲ. ನನ್ನ ತಂದೆ ಹೆಸರಿನಲ್ಲಿ ಇರತಕ್ಕ ಆರ್‌ಟಿಸಿ, ಆರ್‌ಆರ್‌ಪಿ ಖಾತೆಗಳನ್ನು ಇನ್ನೂ ಬದಲಾವಣೆ ಮಾಡಿಲ್ಲ. ಬಹುಶಃ ಇಂತಹ ವ್ಯವಸ್ಥೆ ಆಗಿದೆ. ನಮ್ಮ ಹಿತರಕ್ಷಣೆ ಮಾಡುವುದಕ್ಕೆ, ನಮ್ಮ ಜಮೀನಿನ ಹಿತರಕ್ಷಣೆ ಮಾಡುವ ವಿಷಯದಲ್ಲಿ ಇವರು ವಿಫಲರಾಗಿದ್ದಾರೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೦ ಎಕರೆಗಿಂತ ಕಡಿಮೆ ಜಮೀನು ಇರುವ ಗೇಣಿದಾರರು ಏನು ಇದ್ದಾರೆ ಅವರಿಗೆ ೧೯೭೪ರ ನವೆಂಬರ್ ೧೭ರಿಂದ ಈಚೆಗೆ ಅವರು ಖರ್ಚು ಮಾಡತಕ್ಕಂಥ ಗೇಣಿ ಹಣಕ್ಕೆ ಬಡ್ಡಿಯನ್ನು ಮನ್ನಾ ಮಾಡಿದ್ದೇವೆಂದು ಹೇಳಿದ್ದೀರಿ, ಇದು ಬಹಳ ಸಂತೋಷದ ವಿಷಯ, ಆದರೆ ೧೯೭೪ರ ಹಿಂದೆ ಆತ ಏನು ಜಮೀನಿನ ಹಣ ಕೊಡಬೇಕು, ಆ ಹಣವನ್ನು ೧೯೮೦ರೊಳಗೆ ಬಡ್ಡಿ ರಹಿತ

ಕೊಡಬೇಕೆಂದು ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ದಯವಿಟ್ಟು ಸಾಲದ ಮೇಲೆ ಆಗಿರತಕ್ಕ ಬಡ್ಡಿ, ಚಕ್ರ ಬಡ್ಡಿಯನ್ನು ಮನ್ನಾ ಮಾಡಿದ್ದೀರಿ, ಅದೇ ರೀತಿ ೧೯೯೦ರ ಅವಧಿ ಒಳಗೆ ಅವನು ಸಾಲವನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಿ. ಆಗ ಎಲ್ಲರೂ ಸಾಲವನ್ನು ತೀರಿಸುತ್ತಾರೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಬಗರ್‌ಹುಕುಂ ಸಾಗುವಳಿ ವಿಷಯ ಹೇಳುವುದಾದರೆ, ಇದರ ತೀರ್ಮಾನ ಬಹಳ ನಿಧಾನವಾಗುತ್ತಾ ಇದೆ. ಇದರಿಂದ ಜನಗಳಿಗೆ ಸಂಶಯ ಬಂದಿದೆ. ಈ ಸದನದಲ್ಲಿ ಬೇಡಿಕೆಗಳು ಮುಗಿಯುವುದರೊಳಗೆ ೧೯೭೮ರ ಹಿಂದೆ ಜಮೀನನ್ನು ಯಾರು ಉಳುಮೆ ಮಾಡುತ್ತಿರುತ್ತಾರೆ, ಅವರಿಗೇ ಆ ಜಮೀನನ್ನು ಹಂಚಲಿಕ್ಕೆ ವ್ಯವಸ್ಥೆ ಮಾಡಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ರೈತರಿಗೆ ವ್ಯವಸಾಯದಿಂದ ಮತ್ತು ಇತರೇ ಮೂಲಗಳಿಂದ ೧೨ ಸಾವಿರಕ್ಕಿಂತ ಹೆಚ್ಚು ಆದಾಯ ಬಂದರೆ, ಅಂತಹವರು ಹೊಸದಾಗಿ ಮತ್ತೆ ಕೃಷಿ ಜಮೀನನ್ನು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲವೆಂಬ ಕಾಯಿದೆಯನ್ನು ಮಾಡಿದ್ದೀರಿ. ಇದು ಸರಿಯೇ ಎಂದು ಕೇಳಬೇಕಾಗುತ್ತದೆ? ನನಗೆ ಹತ್ತು ಎಕರೆ ಜಮೀನು ಇರುತ್ತದೆ. ನನಗೆ ಒಬ್ಬ ಮಗ ಇರುತ್ತಾನೆ. ಅವನು ನೌಕರಿಯಲ್ಲಿದ್ದು ಹಣ ಸಂಪಾದನೆ ಮಾಡಿದರೆ ಆತನ ಹೆಸರಿನಲ್ಲಿ ಏತಕ್ಕೆ ಜಮೀನನ್ನು ಕೊಂಡುಕೊಳ್ಳಬಾರದು? ನನ್ನ ಆದಾಯ ೧೨ ಸಾವಿರಕ್ಕಿಂತ ಜಾಸ್ತಿ ಇದೆ ಎಂಬ ಕಾರಣದಿಂದ ಜಮೀನನ್ನು ಕೊಳ್ಳುವುದನ್ನು ನಿಷೇದ ಮಾಡಿರುವುದು ಸರಿಯೇ? ಈ ಕಾನೂನನ್ನು ಕೃಷಿಕರಿಗೆ ಮಾತ್ರ ಅನ್ವಯ ಮಾಡಿರುವುದು ಸರಿಯೇ? ಅದೇ ವ್ಯಾಪಾರಸ್ಥರಿಗೆ ನೀವು ಏತಕ್ಕೆ ಆದಾಯದ ಮಿತಿಯನ್ನು ಗೊತ್ತು ಮಾಡಿಲ್ಲ? ವ್ಯಾಪಾರ ಮಾಡುವವರು ಬೇರೆ ಕಸಬುಗಳನ್ನು ಮಾಡಬಾರದು ಎಂದು ಏತಕ್ಕೆ ಕಾನೂನು ಮಾಡಿಲ್ಲ? ಈಗ ವ್ಯಾಪಾರ ಮಾಡುವವರು ಇತರೇ ವ್ಯವಹಾರಗಳನ್ನು ಸಹ ಮಾಡುತ್ತಾರೆ. ಆದ್ದರಿಂದ ಕೃಷಿಕರಿಗೆ ಮಾತ್ರ ಅನ್ವಯವಾಗುವಂತಹ ಈ ಕಾನೂನನ್ನು ಕೂಡಲೇ ರದ್ದು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತೆ ರೈತರು ತಮ್ಮ ಜಮೀನನ್ನು ಮಾರಾಟ ಮಾಡುವಂತಹ ಸಂದರ್ಭ ಬಂದಾಗ ಅದನ್ನು ಇನ್ನೊಬ್ಬ ಕೃಷಿಕನಿಗೇ ಮಾರಾಟ ಮಾಡಬೇಕೆಂಬ ಕಾನೂನನ್ನು ಮಾಡಿರುವುದು ಸರಿಯಲ್ಲ. ಕೆಲವು ರೈತರು ತಮ್ಮ ಮಕ್ಕಳನ್ನು ಓದಿಸಬೇಕಾಗುತ್ತದೆ ಇಲ್ಲವೇ ತಮ್ಮ ಮಗಳಿಗೆ ಮದುವೆ ಮಾಡಬೇಕಾಗಿರುತ್ತದೆ, ಅಂತಹ ಸಂದರ್ಭದಲ್ಲಿ ತಮ್ಮ ಜಮೀನನ್ನು ಮಾರುಕಟ್ಟೆ ಬೆಲೆಯಲ್ಲಿ ಬೇರೆ ಯಾರಿಗಾದರೂ ಅಂದರೆ ಜಮೀನನ್ನು ಕೊಂಡು ಕೃಷಿಯೇತರ ಬಾಬಿಗೆ ಬಳಕೆ ಮಾಡುವವರಿಗೆ ಮಾರಾಟ ಮಾಡಲು ಅವಕಾಶ ಮಾಡಿಕೊಡಬೇಕು. ಮಾರಾಟ ಮಾಡುವವರು ಕೃಷಿಕರಿಗೇ ಮಾರಾಟ ಮಾಡಬೇಕೆಂದು ಷರತ್ತು ಹಾಕುವುದು ಸರಿಯಲ್ಲ. ಈ ಬಗ್ಗೆ ಕಾನೂನನ್ನು ಸಡಿಲಗೊಳಿಸಬೇಕೆಂದು ಹೇಳುತ್ತೇನೆ. ಮತ್ತೆ ನಮ್ಮ ಪೂರ್ವಿಕರು ಏನೋ ಕಷ್ಟ ಬಂದು ತಮ್ಮ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಈಗ ಅವರ ಮಕ್ಕಳು ಇಲ್ಲವೇ ಮೊಮ್ಮಕ್ಕಳಿಗೆ ಏನಾದರೂ ಲಾಟರಿಯಲ್ಲಿ ಒಂದು ಲಕ್ಷ ರೂಪಾಯಿಗಳ ಬಹುಮಾನ ಬಂದರೆ, ಆ ಹಣದಲ್ಲಿ ಮತ್ತೆ ಜಮೀನನ್ನು ಕೊಂಡುಕೊಳ್ಳಲು ಏತಕ್ಕೆ ಅನುಮತಿ ಕೊಡಬಾರದು? ಲಾಟರಿಯಲ್ಲಿ ಬಹುಮಾನ ಬಂದವರು ಜಮೀನು ಕೊಳ್ಳಲು ಅನುಮತಿ ಕೇಳಿದರೆ, ನೀವು ಕೃಷಿಕರಲ್ಲ, ಆದ್ದರಿಂದ ಅನುಮತಿ ಕೊಡುವುದಕ್ಕಾಗುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಇದು ಸರಿಯಲ್ಲ ಈ ಬಗ್ಗೆ ತಂದೆ ಮಾರಾಟ ಮಾಡಿದ ಜಮೀನನ್ನು ಮಗ ಕೊಂಡುಕೊಳ್ಳಲು ಅನುಕೂಲವಾಗುವಂತೆ ಕಾನೂನನ್ನು ಸಡಿಲಗೊಳಿಸಬೇಕೆಂದು ಹೇಳುತ್ತೇನೆ.

ಇನ್ನು ಆಶಾಕಿರಣ ಯೋಜನೆಯ ಅಡಿಯಲ್ಲಿ ಮನೆಯ ಯಜಮಾನ ಏನಾದರು ದುರ್ಮರಣಕ್ಕಿಡಾದರೆ ಸರ್ಕಾರದಿಂದ ಪರಿಹಾರ ಸಿಗುತ್ತದೆ. ಆದರೆ ಒಂದು ಕುಟುಂಬದಲ್ಲಿರುವಂತಹ ಗಂಡ, ಹೆಂಡತಿ ಮತ್ತು ಮಗ ಹೀಗೆ ಮೂರು ಜನರೂ ಸಹ ಕೃಷಿ ಕ್ಷೇತ್ರದಲ್ಲಿ ದುಡಿಯುವುದರಿಂದ ಇವರಲ್ಲಿ ಯಾರೇ ಆಗಲಿ, ದುರ್ಮರಣಕ್ಕೀಡಾದವರಿಗೆ ಪರಿಹಾರ ಕೊಡುವ ರೀತಿಯಲ್ಲಿ ಕಾನೂನನ್ನು ತಿದ್ದುಪಡಿ ಮಾಡಬೇಕು. ಇಲ್ಲಿ ಯಜಮಾನ ಸತ್ತರೆ ಮಾತ್ರ ಕೊಡುತ್ತೇವೆ, ಕುಟುಂಬದ ಬೇರೆಯವರು ದುರ್ಮರಣಕ್ಕೀಡಾದರೆ ಪರಿಹಾರ ಕೊಡುವುದಿಲ್ಲವೆಂದು ಹೇಳುವುದು ಸರಿಯಲ್ಲ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇನ್ನು ಯಾರಿಗೆ ಹತ್ತು ಎಕರೆಗಳಷ್ಟು ಖುಷ್ಕಿ ಜಮೀನು ಇದೆ, ಅಂತಹವರ ಜಮೀನಿಗೆ ಕಂದಾಯವನ್ನು ಸರ್ಕಾರ ಮಾಫಿ ಮಾಡಿದ್ದರೂ ಸಹ ಕಂದಾಯ ಕೊಡಬೇಕೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಡಿಮ್ಯಾಂಡ್ ನೋಟೀಸ್ ಕೊಡದೆ ಕಂದಾಯ ಕೊಡಬೇಕೆಂದು ಕೇಳುತ್ತಿದ್ದಾರೆ.

ಇದು ಸರಿಯಲ್ಲ. ಡಿಮ್ಯಾಂಡ್ ನೋಟೀಸ್ ಕೊಡದೆ ಕಂದಾಯ ವಸೂಲಿ ಮಾಡಬಾರದೆಂದು ತಾವು ಎಲ್ಲ ಅಧಿಕಾರಿಗಳಿಗೂ ಕಟ್ಟುನಿಟ್ಟಾಗಿ ಹೇಳಬೇಕು. ಮತ್ತೆ ೧೫-೧-೧೯೮೮ ರಂದು ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಕರೆಯಲಾಗಿತ್ತು. ಈಗ ಸಂದರ್ಶನ ಕಾರ್ಯಕ್ರಮವೆಲ್ಲಾ ಮುಗಿದಿದೆ. ಮುಖ್ಯ ಮಂತ್ರಿಗಳು ಹೊಸ ನೇಮಕಾತಿಗೆ ಯಾವ ತೊಂದರೆಯೂ ಇಲ್ಲವೆಂದು ಹೇಳಿರುವುದರಿಂದ ಈಗ ಖಾಲಿಯಿರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಕೂಡಲೇ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ೧೭೯ ನಾಡ ಕಛೇರಿಗಳನ್ನು ತೆರೆಯಲಾಗಿದೆ. ಮತ್ತೆ ೧೭೫ ನಾಡ ಕಛೇರಿಗಳನ್ನು ತೆರೆಯಲಾಗುವುದೆಂದು, ಅದಕ್ಕಾಗಿ ಬಜೆಟ್‌ನಲ್ಲಿ ೫ ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ ಎಂದು ಹೇಳಿದ್ದರೂ ಸಹ ಇನ್ನೂ ಪ್ರಾರಂಭ ಮಾಡಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಕೊಟ್ಟಂತಹ ಆಶ್ವಾಸನೆಯನ್ನು ಕಾರ್ಯಗತಗೊಳಿಸಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ನಮ್ಮ ರಾಜ್ಯದ ಯೋಜನಾ ವೆಚ್ಚದಲ್ಲಿ ಕೊನೆಯ ಪಕ್ಷ ಶೇಕಡಾ ೪೦ರಷ್ಟು ಹಣವನ್ನು ಕೃಷಿ ಅಭಿವೃದ್ಧಿಗೆ, ಪ್ರವಾಹ ನಿಯಂತ್ರಣಕ್ಕೆ ಹಾಗೂ ನೀರಾವರಿ ಕಾಮಗಾರಿಗಳಿಗೆ ಮೀಸಲಿಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೪-೩೦ ಪಿ.ಎಂ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಈ ಸಣ್ಣ ನೀರಾವರಿ ಯೋಜನೆ ಬಗ್ಗೆ ಒಂದು ಮಾತನ್ನು ನಾನು ಹೇಳಬೇಕು ಎಂದು ಇಚ್ಛೆಪಡುತ್ತಿದ್ದೇನೆ. ಇದುವರೆಗೆ ಬಜೆಟ್‌ನಲ್ಲಿ ಅನೇಕ ರೀತಿಯ ಸಣ್ಣ ನೀರಾವರಿ ಯೋಜನೆಗಳನ್ನು ತಾವು ಸೇರಿಸಿದರೂ ಸಹ ಅದನ್ನು ಕಾರ್ಯರೂಪಕ್ಕೆ ತರುವಂಥ ಒಂದು ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ಆಗಿಲ್ಲ. ಉದಾಹರಣೆಗೆ ಶಿಕಾರಿಪುರ ತಾಲ್ಲೂಕಿನಲ್ಲಿ ವರ್ಲ್ಡ್ ಬ್ಯಾಂಕ್ ಸ್ಕೀಂನಲ್ಲಿ ಕಲ್ಲುವಡ್ಡು ಯೋಜನೆ ೪-೫ ವರ್ಷಗಳಿಂದ ಬಜೆಟ್‌ನಲ್ಲಿ ಸೇರುತ್ತಾ ಬರುತ್ತಿದೆ. ಸನ್ಮಾನ್ಯ ಲೋಕೋಪಯೋಗಿ ಸಚಿವರೂ ಸಹ ಅಲ್ಲಿ ಸ್ಥಳ ತನಿಖೆ ಮಾಡಿದ್ದರು. ಸದನದಲ್ಲಿ ಅದನ್ನು ಮಾಡಿಕೊಡುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದರು. ಈಗಾಗಲೇ ಅದಕ್ಕೆ ೧೪-೧೫ ಲಕ್ಷ ರೂಪಾಯಿ ಖರ್ಚು ಮಾಡಿಯಾಗಿದೆ. ಕಳೆದ ಒಂದೂವರೆ ವರ್ಷದಿಂದ ಅಲ್ಲಿ ಫಾರೆಸ್ಟ್ ಎಷ್ಟು ಒತ್ತುವರಿಯಾಗುತ್ತದೆ. ಅಲ್ಲಿರತಕ್ಕಂಥ ಮರಗಳ ಬೆಲೆ ಎಷ್ಟು—ಇದರ ಅಂದಾಜು ಕಳಿಸಿಕೊಡಬೇಕು ಎಂದು ಹೇಳಿದಾಗ, ಅವರು ಕೊಟ್ಟಂಥ ಅಂಕಿಸಂಖ್ಯೆ ಸರಿಯಿಲ್ಲದ ಕಾರಣ ಮತ್ತೊಮ್ಮೆ ಸರ್ವೆ ಮಾಡಿ. ಅರಣ್ಯ ಅಧಿಕಾರಿಗಳಲ್ಲಿ ಅಂಕಿಅಂಶ ಸರಿಯಿದ್ದರೂ ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸುವುದಕ್ಕೆ ಹಿಂದೆ ಮುಂದೆ ನೋಡುತ್ತಾ ಇದ್ದಾರೆ. ಅಂದರೆ ಕಳೆದ ೨ ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ವ್ಯಾಪಕವಾಗಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಅದರ ಬಗ್ಗೆ ಅನೇಕ ಬಾರಿ ನಾನು ಟೀಕೆ ಮಾಡಿದ ಪರಿಣಾಮವಾಗಿಯೋ ಏನೋ ಅಧಿಕಾರಿಗಳು ಪ್ರಾಮಾಣಿಕವಾಗಿ ಆ ವರದಿಯನ್ನು ಏನು ಆ ಇಲಾಖೆಗೆ ಕಳಿಸಿಕೊಡಬೇಕೋ ಅದರ ಕಡೆ ಪ್ರಯತ್ನ ಮಾಡುತ್ತಾ ಇಲ್ಲ, ಅರಣ್ಯ ಅಧಿಕಾರಿಗಳನ್ನು ಇಲ್ಲಿ ನಾನು ಹತ್ತಾರು ಬಾರಿ ಬೇಟಿ ಮಾಡುವಂಥ ಪ್ರಯತ್ನ ಮಾಡಿದೆ. ಲೋಕೋಪಯೋಗಿ ಇಲಾಖೆಯಿಂದ ನನಗೆ ಬರೆದಿದ್ದಾರೆ. ಅವರ ಬಗ್ಗೆ ಎಷ್ಟು ಅಂದಾಜು. ಎಷ್ಟು ಲಾಸ್ ಆಗುತ್ತದೆ ಎನ್ನುವುದನ್ನು ತಿಳಿಸದೇ, ನಮ್ಮ ತಾಲ್ಲೂಕಿನ ೪೦-೫೦ ಹಳ್ಳಿಗಳ ಗ್ರಾಮಕ್ಕೆ ಏನು ಅನುಕೂಲವಾಗುತ್ತಿತ್ತು. ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುವಂಥ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಸರ್ಕಾರ ಮಾಡಲಿಲ್ಲ. ಈಗಲಾದರೂ ಸಂಬಂಧಪಟ್ಟ ಅರಣ್ಯ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಆದಷ್ಟು ಬೇಗ ಈ ವರ್ಷವಾದರೂ ಆ ಕೆಲಸ ಪ್ರಾರಂಭ ಆಗುವುದರ ಕಡೆಗೆ ಗಮನ ಕೊಡಬೇಕು ಎಂದು ವಿನಂತಿ ಮಾಡುತ್ತೇನೆ. ಅದೇ ರೀತಿ ಸನ್ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಶಿಕಾರಿಪುರ ತಾಲ್ಲೂಕಿನಲ್ಲಿರುವ ಸನ್ಯಾಸಿಕೊಪ್ಪ ಲಿಫ್ಟ್ ಇರಿಗೇಷನ್ ಬಗ್ಗೆ ಪ್ರಸ್ತಾಪ ಮಾಡಿದೆ. ೧೯೮೭-೮೮ನೇ ಸಾಲಿನಲ್ಲಿ ನಮ್ಮ ತಾಲ್ಲೂಕಿನಲ್ಲಿ ಬೇರೆ ಯಾವುದೇ ಒಂದು ಯೋಜನೆಯನ್ನು ಕೊಡದೇ ಇದ್ದರೂ ಪರ್ವಾಗಿಲ್ಲ, ಇದನ್ನು ಮಾಡಿದರೆ ಅಲ್ಲಿನ ಸುತ್ತಮುತ್ತಲಿನ ರೈತರಿಗೆ ಅನುಕೂಲವಾಗುತ್ತದೆ ಎಂದು ವಿನಂತಿ ಮಾಡಿದಾಗ ಅವರು ಸ್ಪಷ್ಟವಾಗಿ ಸನ್ಯಾಸಿಕೊಪ್ಪ ಏತ ನೀರಾವರಿ ಯೋಜನೆಯನ್ನು ೧೯೮೭-೮೮ರಲ್ಲಿ ತೆಗೆದುಕೊಳ್ಳಬೇಕು ಎಂದು ಇಲಾಖೆಗೆ ಆದೇಶ ಕೊಟ್ಟರು. ಸಂಬಂಧಪಟ್ಟ ಅಧಿಕಾರಿಗಳಿಂದ ಅದನ್ನು ತೆಗೆದುಕೊಳ್ಳುತ್ತಾ ಇದ್ದೇವೆ ಎಂದು ನನಗೆ ಉತ್ತರ ಬಂತು. ಆದರೆ ಅದು ೧೯೮೭-೮೮ನೇ ಸಾಲಿನ ಬಜೆಟ್‌ನಲ್ಲಿ ಸೇರಿಲ್ಲ, ಈ ವರ್ಷವೂ ಸಹ ಅದನ್ನು ಸೇರಿಸಿಲ್ಲ. ಆ ತಾಲ್ಲೂಕಿನಲ್ಲಿ

ನೀರಾವರಿ ಅನುಕೂಲತೆ ಇರುವಂಥ ಈ ಎರಡು ಪ್ರಮುಖ ಯೋಜನೆಗಳನ್ನು ಕೈಕೊಂಡರೆ ಭೀಕರ ಬರಗಾಲಕ್ಕೆ ತುತ್ತಾದಂಥ ಸುಮಾರು ೫೦-೬೦ ಹಳ್ಳಿಗಳಿಗೆ ಇದು ಅನುಕೂಲವಾಗುತ್ತದೆ. ತಾವು ಇದನ್ನು ಮಾಡದೇ ಇರುವುದಕ್ಕೆ ಕಾರಣವೇನು ಅಥವಾ ಯಾರೋ ಒಬ್ಬ ವಿರೋಧ ಪಕ್ಷದ ಶಾಸಕ ಇದ್ದಾನೆ ಎಂದು ಅದಕ್ಕೋಸ್ಕರ ಅಲಸ್ಯ ಮಾಡುತ್ತಾ ಇದ್ದೀರಾ ಅಥವಾ ಬೇರೆ ಬೇರ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಂಡಾಗ ಶಿಕಾರಿಪುರ ತಾಲ್ಲೂಕನ್ನು ಕೈಬಿಟ್ಟಿದ್ದೀರಾ ? ಈ ಬಗ್ಗೆ ನಿಮ್ಮ ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಇಲ್ಲ. ನೀವೂ ಸಹ ಇದಕ್ಕೆ ಆಗ್ರಹ ಏಕೆ ಮಾಡುತ್ತಿಲ್ಲವೋ ನನಗೆ ಅರ್ಥವಾಗುತ್ತಾ ಇಲ್ಲ. ದಯಮಾಡಿ ಈಗಲಾದರೂ ಈ ಎರಡು ಯೋಜನೆಗಳನ್ನು ಆ ಭಾಗದ ರೈತರಿಗೋಸ್ಕರ ತಾವು ಈ ಕೆಲಸ ತೆಗೆದುಕೊಳ್ಳಬೇಕು ಎಂದು ನಾನು ವಿನಂತಿ ಮಾಡುತ್ತೇನೆ. ಅದೇ ರೀತಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ದಂಡಾವತಿ ನೀರಾವರಿ ಯೋಜನೆ ಬಗ್ಗೆ ಅನೇಕ ವರ್ಷಗಳಿಂದ ಚರ್ಚೆಯಾಗುತ್ತಿದೆ. ಈ ಬಗ್ಗೆ ೧೯೫೭ರಲ್ಲಿ ಸರ್ವೆಯಾಗಿತ್ತು. ಬಹಳ ಬರಗಾಲಕ್ಕೆ ತುತ್ತಾದಂಥ ಸೊರಬ ತಾಲ್ಲೂಕಿನಲ್ಲಿ ಅನವಟ್ಟಿ, ಕುಪ್ಪಗಟ್ಟೆ ಹೋಬಳಿಗಳಿಗೆ ಈ ದಂಡಾವತಿ ನೀರಾವರಿ ಯೋಜನೆ ಮಾಡುವುದರಿಂದ ತುಂಬ ಅನುಕೂಲವಾಗುತ್ತದೆ ಮತ್ತು ಪಕ್ಕದ ಹಾನಗಲ್ ತಾಲ್ಲೂಕಿಗೂ ತುಂಬ ಅನುಕೂಲವಾಗುವುದಿದೆ. ಅದಕ್ಕೋಸ್ಕರವಾಗಿ ನಾನು ಸರ್ಕಾರವನ್ನು ವಿನಂತಿ ಮಾಡುವಂಥಾದ್ದು, ಶಿವಮೊಗ್ಗ ಜಿಲ್ಲೆಯಲ್ಲಿ ಈ ಯೋಜನೆಗಳನ್ನು ಮಾಡುವುದರಿಂದ ಸೊರಬ ತಾಲ್ಲೂಕಿಗೆ ಮತ್ತು ಪಕ್ಕದ ಹಾನಗಲ್ ತಾಲ್ಲೂಕಿಗೆ ತುಂಬ ಅನುಕೂಲವಾಗುತ್ತದೆ. ಆದುದರಿಂದ ಈ ಒಂದು ಕೆಲಸವನ್ನು ಈ ವರ್ಷವಾದರೂ ಪ್ರಾರಂಭ ಮಾಡುವುದಕ್ಕೋಸ್ಕರ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ವಿನಂತಿ ಮಾಡುತ್ತೇನೆ. ಮೊನ್ನೆ ನಾನು ಹೊಸಪೇಟೆ ತಾಲ್ಲೂಕಿನಲ್ಲಿ ಕಮಲಾಪುರ ಎಂಬ ಹಳ್ಳಿಗೆ ಹೋಗಿದ್ದೆ. ಅಲ್ಲಿ ಹಳ್ಳಿಕೆರೆ ಎಂಬ ಒಂದು ಕೆರೆ ಇದೆ. ತುಂಗಭದ್ರ ಕೆಳದಂಡೆ ನಾಲೆಯಿಂದ ಆ ಕೆರೆಗೆ ನೀರು ಸರಬರಾಜು ಆಗುತ್ತದೆ. ಅದಕ್ಕೆ ೬ ಇಂಚು ಕೊಳವೆಯಲ್ಲಿ ಆ ನೀರನ್ನು ಬಿಡುತ್ತಾ ಇದ್ದಾರೆ. ಅಂದರೆ ಅದು ನೆಲಮಟ್ಟದಿಂದ ೩ ಅಡಿ ಎತ್ತರದಲ್ಲಿ ಮೇಲಿರುವುದರಿಂದ ಚಾನಲ್‌ನಲ್ಲಿ ನೀರು ಸರಿಯಾಗಿ ಬರದೆ ಅಲ್ಲಿರುವಂಥ ರೈತರು ಕಂಗಾಲಾಗಿದ್ದಾರೆ. ಅನೇಕ ಸಾರಿ ಸರ್ಕಾರವನ್ನು ವಿನಂತಿ ಮಾಡುತ್ತಾ ಇದ್ದಾರೆ, ಆದುದರಿಂದ ಆ ೬ ಇಂಚು ಕೊಳವೆಗೆ ಬದಲಾಗಿ ಒಂದೂವರೆ ಅಡಿ ಪೈಪನ್ನು ನೆಲಮಟ್ಟಕ್ಕೆ ಹಾಕಿದರೆ ಸುತ್ತಮುತ್ತಲಿರುವಂಥ ರೈತರಿಗೆ ತುಂಬ ಅನುಕೂಲ ಆಗುತ್ತದೆ. ಆದುದರಿಂದ ಈ ಕಡೆ ವಿಶೇಷವಾದಂಥ ಪ್ರಯತ್ನವನ್ನು ಮಾಡಬೇಕು ಎಂದು ಸರ್ಕಾರವನ್ನು ಆಗ್ರಹ ಮಾಡುತ್ತೇನೆ. ೧೯೮೭-೮೮ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಬಡ್ಜೆಟ್‌ನಲ್ಲಿ ನೀವು ಸಣ್ಣ ನೀರಾವರಿ ಯೋಜನೆಯಲ್ಲಿ ಕೆಲವು ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ. ಆದರೆ ಈಗ ೧೯೮೭-೮೮ನೇ ಸಾಲು ಕೊನೆಯಾದರೂ ಸಹ ಇವತ್ತಿನವರೆಗೆ ಆ ಕೆಲಸ ಅಲ್ಲಿ ಪ್ರಾರಂಭವಾಗಿಲ್ಲ. ಟೆಂಡರ್ ಕರೆದಿಲ್ಲ ಎಂದು ಮುಂತಾಗಿ ಬೇರೆ ಬೇರೆ ಕಾರಣಗಳನ್ನು, ನೆಪಗಳನ್ನು ಹೇಳಿಕೊಂಡು ಬರುತ್ತಿದ್ದಾರೆ. ಇವತ್ತು ಇಡೀ ಶಿಕಾರಿಪುರ ತಾಲ್ಲೂಕಿನಲ್ಲಿ ನೀರಾವರಿ ಇಲಾಖೆಯಲ್ಲಿ ಸರ್ಕಾರಿ ನೌಕರರಿಗೆ ಏನು ಸಂಬಳ ಕೊಡುತ್ತಿದ್ದೀರಿ ಆ ಸಂಬಳವನ್ನು ಲೆಕ್ಕ ಹಾಕಿದಾಗ ಅದನ್ನೂ, ಇಡೀ ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಯೋಜನೆಗೆ ಖರ್ಚು ಮಾಡಿರುವಂಥಾದ್ದನ್ನು ಇವೆರಡನ್ನೂ ಕಂಪೇರ್ ಮಾಡಿದರೆ ನೀವು ಸರ್ಕಾರಿ ನೌಕರರಿಗೆ ಕೊಟ್ಟಂಥ ಸಂಬಳವೇ ಜಾಸ್ತಿಯಾಗುತ್ತದೆ. ಗಂಗಾಕಲ್ಯಾಣ ಯೋಜನೆ ಇರಬಹುದು, ಅಥವಾ ದೊಡ್ಡ ದೊಡ್ಡ ಯೋಜನೆಗಳು ಇರಬಹುದು. ಆದರೆ ಇವತ್ತು ಹಳ್ಳಿಯಲ್ಲಿ ವಾಸ ಮಾಡುವಂಥ ರೈತರಿಗೆ ವಿಶೇಷವಾಗಿ ನೀರಾವರಿಯಿಂದ ಎಷ್ಟು ಅನುಕೂಲವಾಗಬೇಕಾಗಿತ್ತೋ ಅದರ ಬಗ್ಗೆ ಯಾವುದೇ ಒಂದು ಪ್ರಾಮಾಣಿಕವಾದ ಪ್ರಯತ್ನ ಸರ್ಕಾರದ ಕಡೆಯಿಂದ ಆಗುತ್ತಾ ಇಲ್ಲ.

ಈಗಾಗಲೇ ನಮ್ಮ ನೀರಾವರಿ ಜಮೀನುಗಳಿಗೆ ತೆರಿಗೆಯನ್ನು ಜಾಸ್ತಿ ಮಾಡುವ ವಿಚಾರ ಸರ್ಕಾರದ ಆಲೋಚನೆಯಲ್ಲಿದೆ ಎಂದು ಕೇಳಿದ್ದೇನೆ. ಮಾಜಿ ಲೋಕೋಪಯೋಗಿ ಸಚಿವರಾದ ದೇವೇಗೌಡರು ಅನೇಕಸಾರಿ ನೀರಾವರಿ ತೆರಿಗೆಯನ್ನು ಏರಿಸದೇ ಇದ್ದರೆ, ಬೇರೆ ಮಾರ್ಗವಿಲ್ಲವೆಂದು ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಆಗ್ರಹ ಪಡಿಸುವುದು ಇಷ್ಟೆ, ಕಳೆದ ೪-೫ ವರ್ಷಗಳಿಂದ ಭೀಕರ ಬರಗಾಲಕ್ಕೆ ತುತ್ತಾಗಿರುವಂತಹ ರೈತರಿಗೆ ಯಾವುದೇ ರೀತಿಯ ಸವಲತ್ತುಗಳು, ಅನುಕೂಲಗಳು, ಇಲ್ಲದೆ ಇರತಕ್ಕ ಸಂದರ್ಭದಲ್ಲಿ ನೀರಾವರಿ ತೆರಿಗೆಯನ್ನು ಹೆಚ್ಚುವರಿ ಮಾಡುವುದು ಸೂಕ್ತವಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬರಗಾಲಕ್ಕೆ ತುತ್ತಾಗಿರುವವರು ಒಣ ಭೂಮಿಯ ಬೇಸಾಯಗಾರರು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕೆರೆ ಕಟ್ಟೆ ಆಶ್ರಯದಲ್ಲಿರುವವರಿಗೂ ತೆರಿಗೆಯ ಹೊರೆ ಬೀಳುತ್ತದೆ, ಇವರ ಬಗ್ಗೆ ಸ್ಪಷ್ಟಪಡಿಸಬೇಕು. ಕೆನಾಲ್ ಅಚ್ಚುಕಟ್ಟುದಾರರಿಗೆ ಜಾಸ್ತಿ ಮಾಡಿ, ಆದರೆ ಕೆರೆ ಕಟ್ಟೆಗಳ ಆಶ್ರಯದಲ್ಲಿರುವವರಿಗೆ, ಮಾಡುವುದಿಲ್ಲವೆಂದು ಹೇಳಿ. ಕೆನಾಲ್ ಅಚ್ಚುಕಟ್ಟುದಾರರು ಕೂಡ, ಇವತ್ತು ಬೆಳೆದು ಹೊಟ್ಟೆ ತುಂಬ ಉಂಡು ಸುಖವಾಗಿಲ್ಲ. ನೀರಾವರಿ ಯೋಜನೆಗಳನ್ನು ತರುವ ಒಂದೇ ಒಂದು ಕಾರಣದಿಂದ ತೆರಿಗೆ ಜಾಸ್ತಿ ಮಾಡುತ್ತೇವೆನ್ನುವುದು ಸರಿಯಲ್ಲ. ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಸ್ಟೇಟ್ ಮೆಂಟ್ ನಂ. ೧೩ರಲ್ಲಿ Financial and Potential Progress World Bank Project ಕೆಳಗೆ ಶಿವಮೊಗ್ಗ ಜಿಲ್ಲೆಯ ಬಗ್ಗೆ ಅಂಕಿ ಸಂಖ್ಯೆ ಕೊಟ್ಟಿದ್ದೀರಿ. ೧೯೮೭-೮೮ರಲ್ಲಿ ೨೭೬ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೀರಿ. ಆದರೆ ಅಚೀವ್‌ಮೆಂಟ್ ತೋರಿಸಿರುವ ಕಲಂನಲ್ಲಿ ೦.೦೮ ಲಕ್ಷ ತೋರಿಸಿದ್ದೀರಿ, ಬಡ್ಜೆಟ್ ಪ್ರಾವಿಜನ್‌ನಲ್ಲಿ ಏನು ಇತ್ತು, ಎಷ್ಟು ಖರ್ಚಾಯಿತು ? ಫಿಜಿಕಲ್ ಆಗಿ ಇದರ ಬಗ್ಗೆ ೨ನೇ ಕಲಂನಲ್ಲಿ ಪ್ರೋಗ್ರೆಸ್ ತೋರಿಸಿಲ್ಲ. ೨೭೬ ಲಕ್ಷ ರೂಪಾಯಿ ತೋರಿಸಿ, ಯಾವ ರೀತಿ ಕೆಲಸ ಕಾರ್ಯಗಳು ಆಗಿಲ್ಲದಿರುವುದು ಕಂಡುಬರುತ್ತದೆ. ೧೯೮೮-೮೯ರಲ್ಲಿ ೩೧೬ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೀರಿ. ಈ ರೀತಿ ಹಣವನ್ನು ಇಟ್ಟು ಖರ್ಚು ಮಾಡದೆ ಇರುವುದಕ್ಕೆ ಕಾರಣ ಏನು ಎನ್ನುವುದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ೧೯೮೮-೮೯ರಲ್ಲಿ ಆಯವ್ಯಯದಲ್ಲಿ ನೀರಾವರಿಗೆ ೨೪೬ ಕೋಟಿ ರೂಪಾಯಿಗಳನ್ನು ನಿಗದಿಮಾಡಿ, ಸಣ್ಣ ನೀರಾವರಿಗೆ ೩೧.೭೦ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೀರಿ, ಬಹುಶಃ ಇದನ್ನು ಕೊಡುತ್ತೀರಿ ಎನ್ನುವ ವಿಶ್ವಾಸ ನಮಗೆ ಇಲ್ಲ. ಬಡ್ಜೆಟ್ಟಿನಲ್ಲಿ ಸಣ್ಣ ನೀರಾವರಿಗೆ ಕಡಿಮೆ ಹಣ ಇಟ್ಟರೆ, ಮುಂದಿನ ದಿವಸಗಳಲ್ಲಿ ನೀರಾವರಿ ಅನುಕೂಲತೆಗಳನ್ನು ರಾಜ್ಯದಲ್ಲಿರತಕ್ಕ ರೈತರಿಗೆ ನಾವು ಮಾಡಿಕೊಡುವುದಕ್ಕಾಗುವುದಿಲ್ಲ, ಮಾಜಿ ಲೋಕೋಪಯೋಗಿ ಸಚಿವರು, ನೀರಾವರಿ ಯೋಜನೆಗೆ ಹೆಚ್ಚು ಹಣವನ್ನು ಕೊಡುತ್ತೇನೆ, ಕೊಡದೇ ಇದ್ದ ಕಾಲಕ್ಕೆ ಈ ಸ್ಥಾನದಲ್ಲಿ ಇರುವುದಿಲ್ಲವೆಂದು ಹೇಳುತ್ತಾ, ಹೇಳುತ್ತಾ, ಆ ಒಂದು ಕಾರಣಕ್ಕಾಗಿ ರಾಜೀನಾಮೆ ಕೊಡಬೇಕಾದ ಸಂದರ್ಭ ಬಂತು. ಇದು ಜನತಾ ಸರ್ಕಾರಕ್ಕೆ ಗೌರವ ತರತಕ್ಕ ಸಂಗತಿ ಅಲ್ಲ. ರಾಜ್ಯದಲ್ಲಿ ಬೇರೆ ಯಾವುದೇ ಕಾರ್ಯಕ್ರಮಕ್ಕೂ ಹಣ ಕಡಿಮೆ ಮಾಡಿದರೂ ಅಡ್ಡಿಯಿಲ್ಲ ಸಣ್ಣ ನೀರಾವರಿಗೆ ಈ ವರ್ಷವಾದರೂ ಹೆಚ್ಚು ಹಣವನ್ನು ತೆಗೆದಿರುವಂತ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗಿತ್ತು. ಅದನ್ನು ಮಾಡಿಲ್ಲದಿರುವುದು ಕಂಡುಬರುತ್ತದೆ. ತೆಗೆದಿಟ್ಟಿರುವಂತಹ ಹಣವನ್ನು ಕೂಡ, ಪ್ರಾಮಾಣಿಕವಾಗಿ ರೈತನ ಅನುಕೂಲಕ್ಕೋಸ್ಕರ ಖರ್ಚುಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಕಳೆದ ೪-೫ ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿರತಕ್ಕ ರೈತ ಸಮುದಾಯವನ್ನು ಬದುಕಿಸುವಂತಹ ಕಳಕಳಿ ಸರ್ಕಾರಕ್ಕೆ ಇದ್ದರೆ ಹೆಚ್ಚು ಹಣವನ್ನು ಸರ್ಕಾರದವರು ತೆಗೆದಿಡಬೇಕು. ಹಾಗೆ ಇಟ್ಟಂತ ಹಣವನ್ನು ಪೂರ್ಣವಾಗಿ ಖರ್ಚು ಮಾಡಬೇಕು. ೪-೫ ವರ್ಷಗಳ ಹಿಂದ ಮಾರ್ಚ್, ಫೆಬ್ರುವರಿ ತಿಂಗಳಿನಲ್ಲಿ ಅಧಿಕಾರಿಗಳು ಹಗಲು ರಾತ್ರಿಯಲ್ಲಿ ಫೀಲ್ಡ್‌ನಲ್ಲಿ ಕೆಲಸ ಮಾಡುತ್ತಿದ್ದರು. ಬಡ್ಜೆಟ್ಟಿನಲ್ಲಿ ಇಟ್ಟಂತ ಹಣವನ್ನು ಖರ್ಚು ಮಾಡಲೇ ಬೇಕೆಂದು ಆಗ್ರಹ ಮಾಡತಕ್ಕ ಕಾಲ ಇತ್ತು. ಆದರೆ ಇವತ್ತು ಅಸಿಸ್ಟೆಂಟ್ ಇಂಜಿನಿಯರ್‌ಗಳು ಹಣವನ್ನು ಖರ್ಚು ಮಾಡಿದರೆ ಏತಕ್ಕೆ ಖರ್ಚು ಮಾಡಿದರು ಎಂದು ಕೇಳತಕ್ಕ ವಿಚಿತ್ರವಾಗಿ ಸನ್ನಿವೇಶಕ್ಕೆ ಸರ್ಕಾರ ಬಂದಿದೆ. ಅಧಿಕಾರಿಗಳಿಗೆ ಕೆಲವು ಸವಲತ್ತುಗಳನ್ನು ಕೊಡುತ್ತಿದ್ದೇವೆ. ಆದ್ದರಿಂದ ಅವರು ಸಿಬ್ಬಂದಿಗಳನ್ನು ಇಟ್ಟುಕೊಂಡು ಕೆಲಸ ಕಾರ್ಯಗಳನ್ನು ಮಾಡದೇ ಹೋದರೆ ನಾವು ಹಣವನ್ನು ಅಪವ್ಯಯ ಮಾಡುತ್ತಿದ್ದೇವೆಂದು ಹೇಳಬೇಕಾಗುತ್ತದೆ.

ಸ್ವಾಮಿ, ಉದಾಹರಣೆಗೆ ಹೇಳುವುದಾದರೆ, ನನ್ನ ಶಿಕಾರಿಪುರ ತಾಲ್ಲೂಕನ್ನೇ ತೆಗೆದುಕೊಳ್ಳಿ. ನೀವು ನೀರಾವರಿ ಇಲಾಖೆಯನ್ನು ಅಲ್ಲಿ ಏತಕ್ಕೆ ಇಟ್ಟುಕೊಂಡಿದ್ದೀರಿ. ಎಂದು ನಾನು ಕೇಳಿದಾಗ ಸನ್ಮಾನ್ಯ ದೇವೇಗೌಡರು ಸ್ಪಷ್ಟವಾಗಿ ಹೇಳಿದರು. ಏನೆಂದರೆ, ಯಾವುದೇ ಕಾರಣಕ್ಕೂ ಸಹ ಈ ಶಿಕಾರಿಪುರ ತಾಲ್ಲೂಕಿನಲ್ಲಿ ಕಲ್ಲುಒಡ್ಡು ಯೋಜನೆಯನ್ನು ಬಿಡುವುದಿಲ್ಲ. ಇದು ವಿಶ್ವಬ್ಯಾಂಕ್ ಯೋಜನೆಯಲ್ಲಿ ಸೇರಿರತಕ್ಕದ್ದು, ಇದು ಅಲ್ಲಿರತಕ್ಕ ಎಲ್ಲಾ ಹಳ್ಳಿಯ ಜನರಿಗೂ ಉಪಯೋಗ ಆಗತಕ್ಕದ್ದು ಅಂತ. ಈ ಮಾತನ್ನು ನಮ್ಮ ಇಡೀ ತಾಲ್ಲೂಕಿನ ಜನರು ನಂಬಿದ್ದರು. ಆದರೆ ಈ ನೀರಾವರಿ ಇಲಾಖೆಯನ್ನು ಅದಕ್ಕೋಸ್ಕರ ಉಳಿಸಿಕೊಂಡಿದ್ದರೂ ಸಹ ಇವತ್ತು ಆ ಬಗ್ಗೆ ಒಂದು

ಯೋಜನೆಯನ್ನು ಜಾರಿಗೆ ತರುವುದಕ್ಕೆ ಯಾವುದೇ ರೀತಿಯ ಒಂದು ಪ್ರಾಮಾಣಿಕ ಪ್ರಯತ್ನವೂ ಇದುವರೆಗೂ ಆಗಿಲ್ಲ. ನಾನು ಕಳೆದ ೫ ವರ್ಷದಿಂದ ಇಲ್ಲಿ ಶಾಸಕನಾಗಿದ್ದೇನೆ. ತಾವು ತಮ್ಮ ಇಲಾಖೆಯ ಬಗ್ಗೆ ವಿವರಣೆಯನ್ನು ಕೊಡತಕ್ಕ ಸಂದರ್ಭದಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ನಾವು ಇಷ್ಟು ಕೋಟಿ ರೂಪಾಯಿಗಳನ್ನು ಇಂಥಿಂಥ ಕಾಮಗಾರಿಗಳಿಗೋಸ್ಕರ ಖರ್ಚು ಮಾಡಿದ್ದೇವೆ ಎಂದು ಹೇಳಬೇಕು. ನಾನು ತಮಗೆ ಹೇಳುತ್ತೇನೆ, ನೀವು ಒಂದೇ ಒಂದು ನೀರಾವರಿ ಯೋಜನೆಯನ್ನೂ ಕೂಡ ಪೂರ್ಣ ಮಾಡುವುದಿಲ್ಲ. ರೈತರು ಉದ್ಧಾರವಾಗಬೇಕೆಂದು ನೀವು ಕೇವಲ ಬಾಯಿಯಿಂದ ಹೇಳುವುದರಿಂದ ಯಾವುದೇ ಸಮಸ್ಯೆಗಳೂ ಪರಿಹಾರವಾಗುವುದಿಲ್ಲ. ರೈತರ ಬಗ್ಗೆ ಈ ಸರ್ಕಾರಕ್ಕೆ ವಿಶೇಷವಾಗಿ ಯಾವುದೇ ಕಾಳಜಿಯೂ ಇಲ್ಲ. ಅವನ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಬಗ್ಗೆ ಒಂದು ಪ್ರಾಮಾಣಿಕ ಪ್ರಯತ್ನ ನಿಮ್ಮಲ್ಲಿಲ್ಲ. ಬೆಳಿಗ್ಗೆ ಸಹ ಆಲಿಕಲ್ಲು ಮಳೆ ಬಿದ್ದ ಸಂದರ್ಭದಲ್ಲಿ ನಾವು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡಿದೆವು. ಇವತ್ತು ಮಾನ್ಯ ಬೊಮ್ಮಾಯಿಯವರು ಎದ್ದು ನಿಂತು ಇದಕ್ಕೆ ಕಾನೂನಿನ ತೊಡಕಿದೆ ಎಂದು ಹೇಳಿದರು. ಯಾವುದೋ ಕಾಲದಲ್ಲಿ ಆದರೆ ಸುಮಾರು ೨೫–೩೦ ವರ್ಷಗಳ ಹಿಂದೆ ನಿಗದಿ ಮಾಡಿದಂಥ ದರದಲ್ಲಿ ಪರಿಹಾರವನ್ನು ಕೊಡತಕ್ಕಂಥ ವಿಚಾರದಲ್ಲಿ ಹೇಳುತ್ತಿದ್ದಾರೆ.

ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇವತ್ತು ನಿಮ್ಮ ಸರ್ಕಾರದ ಬೊಕ್ಕಸದಲ್ಲಿ ಹಣದ ಕೊರತೆ ಇದೆ ಎನ್ನತಕ್ಕ ಒಂದೇ ಒಂದು ಕಾರಣಕ್ಕೋಸ್ಕರ ಈರೀತಿ ಯಾವುದೇ ತಪ್ಪನ್ನೂ ಮಾಡದೇ ಇರತಕ್ಕಂಥ ರೈತ, ಈ ರೀತಿ ಅತಿವೃಷ್ಟಿಗೆ ಒಳಗಾಗಿ ಆಲಿಕಲ್ಲು ಮಳೆ ಬಿದ್ದು ಅವನ ಬೆಳೆಯೆಲ್ಲಾ ಸರ್ವನಾಶವಾದಾಗ ಒಂದೊಂದು ಹಳ್ಳಿಯಲ್ಲಿ ೧೦–೧೨ ಲಕ್ಷ ರೂಪಾಯಿಯ ಬೆಳೆ ಹಾಳಾಗಿರತಕ್ಕ ಕಡೆಗಳಲ್ಲಿ ನೀವು ಹೇಳತಕ್ಕ ರೀತಿಯಲ್ಲಿ ೫೦೦ ರೂಪಾಯಿ, ೧೦೦೦ ರೂಪಾಯಿಯಂತೆ ಪರಿಹಾರವನ್ನು ಕೊಟ್ಟರೆ ಆ ಮನುಷ್ಯ ಬದುಕುವುದಾದರೂ ಹೇಗೆ? ತಮಗೆ ಹಣಕಾಸಿನ ತೊಂದರೆ ಇರಬಹುದು ......

ಶ್ರೀ ಎಸ್. ಆರ್. ಬೊಮ್ಮಾಯಿ.—ಇದಕ್ಕೆ ಒಂದು ರಾಷ್ಟ್ರೀಯ ನೀತಿ ಬೇಕಾಗುತ್ತದೆ. ಏಕೆಂದರೆ ಬೆಂಕಿ ಬಿದ್ದಾಗ, ಅತಿ ವೃಷ್ಟಿ ಆದಾಗ, ಪ್ರವಾಹ ಬಂದಾಗ ಎಷ್ಟೆಷ್ಟು ಕೊಡಬೇಕೆಂಬುದಕ್ಕೆ ಕೆಲವು ನೀತಿ ನಿಯಮಗಳಿವೆ. ಶಿವಮೊಗ್ಗ ಅಥವಾ ಕೋಲಾರ ಜಿಲ್ಲೆಗಳಲ್ಲಿ ಇದು ಮೊದಲನೇ ಸಾರಿ ಏನೂ ಅಲ್ಲ. ಇಂಥಾದು ಇಡೀ ದೇಶದಲ್ಲಿ ಅಥವಾ ಅನೇಕ ಕಡೆಗಳಲ್ಲಿ ಆಗುತ್ತಲೇ ಇರುತ್ತದೆ. ಈಗ ಕೊಡತಕ್ಕ ವ್ಯವಸ್ಥೆ ಇಲ್ಲ. ಆದರೆ ಕೊಡತಕ್ಕ ವ್ಯವಸ್ಥೆ ಬರಬೇಕೆಂದು ನಮ್ಮ ಇಚ್ಛೆ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಮೊದಲು ತಾವು ಒಂದು ಮಾತನ್ನು ಏನು ಹೇಳಿದಿರಿ ಎಂದರೆ ನಮಗೆ ಕಾನೂನಿನ ತೊಡಕಲ್ಲ, ನಮಗೆ ಇರತಕ್ಕದ್ದು ಹಣದ ತೊಡಕು ಅಂತ. ಆದರೆ ಮತ್ತೊಂದುಸಾರಿ ಹೇಳುತ್ತಿದ್ದೀರಿ, ನಮಗೆ ಕಾನೂನಿನ ತೊಡಕಿದೆ ಅಂತ. ಆದರೆ ಈಗ ನಾನು ನಿಮ್ಮ ಕಾನೂನಿನ ತೊಡಕಿನ ಬಗ್ಗೆ ಮಾತನಾಡುತ್ತಿಲ್ಲ. ಇವತ್ತು ತಮಗೆ ಗೊತ್ತಿರುವಂತೆ ಹಿಂದೆ ಎಂದೂ ಕಾಣದೇ ಇದ್ದಂಥ ಆಲಿಕಲ್ಲು ಮಳೆ ಬಿದ್ದು ಬೆಳೆ ಪೂರ್ಣವಾಗಿ ನಷ್ಟವಾಯಿತೋ, ಇಲ್ಲವೋ? ನಾನು ದೊಡ್ಡ ದೊಡ್ಡ ರೈತರ ಪರವಾಗಿ ಮಾತನಾಡುತ್ತಿಲ್ಲ. ನಿಮ್ಮ ನಿಯಮದ ಪ್ರಕಾರ ಯಾರ ವರಮಾನ ೩೫೦೦ ರೂಪಾಯಿಗಳೊಳಗಿದೆ ಅಂಥವರು ಜಾನುವಾರುಗಳನ್ನು ಕಳೆದುಕೊಂಡರು. ಒಂದೆರಡು ಎಕರೆ ಇದ್ದಂಥ ಅಡಿಕೆ ತೋಟ, ತೆಂಗಿನ ತೋಟಗಳು ನಿರ್ನಾಮವಾದವು. ಅಂಥ ಬಡ ರೈತರ ಬಗ್ಗೆ ನಾನು ಹೇಳುತ್ತಿದ್ದೇನೆ. ಇವತ್ತು ತಮಗೂ ಗೊತ್ತಿರಬಹುದು, ಒಂದು ಎಕರೆ ಅಡಿಕೆ ಅಥವಾ ತೆಂಗಿನ ತೋಟವನ್ನು ಮಾಡಬೇಕಾದರೆ ಆ ರೈತ ಮತ್ತು ಅವನ ಹೆಂಡತಿ ಮಕ್ಕಳು ಸುಮಾರು ೧೫–೨೦ ವರ್ಷಕಾಲ ಅದರಲ್ಲಿ ಶ್ರಮವಹಿಸಿ ಕೆಲಸಮಾಡಿರುತ್ತಾರೆ. ಈರೀತಿ ಅತಿವೃಷ್ಟಿ ಆಗಿರತಕ್ಕದ್ದಕ್ಕೂ ಭದ್ರಾವತಿ ತಾಲ್ಲೂಕಿನ ಹೊಳೆ ಹೊನ್ನೂರಿನಲ್ಲಿ ಆಗಿರುವುದಕ್ಕೂ ಬಹಳ ವ್ಯತ್ಯಾಸ ಇದೆ. ಈ ಸರ್ಕಾರ ಇನ್ನೂ ಬದುಕಿದೆ ಎಂದು ಹೇಳುವುದಾದರೆ ಆ ರೈತನ ತೊಂದರೆಯನ್ನು ಬಗೆಹರಿಸತಕ್ಕ ಒಂದು ಪ್ರಾಮಾಣಿಕ ಪ್ರಯತ್ನ ನಿಮ್ಮ ಕಡೆಯಿಂದ ಆಗದಿದ್ದರೆ ಅವನು ಬದುಕುವುದಾದರೂ ಹೇಗೆ? ಅವನು ಯಾರನ್ನು ನಂಬಿ ಬದುಕಬೇಕು? ಇದರ ಬಗ್ಗೆ ಕೂಡ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಈರೀತಿ ಈ ರಾಜ್ಯದಲ್ಲಿ, ರಾಜ್ಯದ ಆಡಳಿತದಲ್ಲಿ ಜನತೆಯು ಒಂದು ಬದಲಾವಣೆಯನ್ನು ತಂದಿರತಕ್ಕ ಸಂದರ್ಭದಲ್ಲಿ ಅಧಿಕಾರದಲ್ಲಿ ಕೂತಿರತಕ್ಕ ನೀವು ಹಿಂದೆ ಕಾಂಗ್ರೆಸ್ ಮುಖಂಡರುಗಳು ಅಲ್ಲಿ ಮಂತ್ರಿಗಳಾಗಿ ಕೂತಿದ್ದಾಗ ಏನು ಉತ್ತರವನ್ನು ಕೊಡುತ್ತಿದ್ದರೋ

ಅದೇರೀತಿ ನೀವೂ ಕೂಡ ಉತ್ತರವನ್ನು ಕೊಡುವುದಾದರೆ ಕೇವಲ ಇದಕ್ಕೋಸ್ಕರ ಈ ರಾಜ್ಯದ ಜನತೆ ಈ ಒಂದು ಬದಲಾವಣೆಯನ್ನು ತರತಕ್ಕ ಅಗತ್ಯತೆ ಇರಲಿಲ್ಲ. ಇವತ್ತು ನೀರಾವರಿ ಯೋಜನೆಯ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಸಮಯದ ಅಭಾವ ಇದೆ. ಒಮ್ಮೆ ಮಾನ್ಯ ದೇವೇಗೌಡರು ಮಾತನಾಡುತ್ತಾ ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ, ಏನಾದರೂ ಹೊಸ ಹೊಸ ಕಾರ್ಯಕ್ರಮಗಳಿಗೆ ನೀವು ಸಲಹೆಯನ್ನು ಕೊಡಿ'' ಎಂದು. ಸ್ವಾಮಿ, ನಾವು ಏನು ಸಲಹೆಗಳನ್ನು ಕೊಡತಕ್ಕದ್ದಿದೆ? ಯಾವ ಸರ್ಕಾರ ಇವತ್ತು ಹಣಕಾಸಿನ ತೊಂದರೆಯಿಂದ ಬಳಲುತ್ತಿದೆ, ಅದು ತನ್ನ ನೌಕರರಿಗೆ ಸಂಬಳ ಕೊಡುವುದಕ್ಕೂ ಹಣವಿಲ್ಲದೆ ಬೇರೆ ಬೇರೆ ಇಲಾಖೆಗಳಲ್ಲಿರತಕ್ಕ ದುಡ್ಡನ್ನೆಲ್ಲಾ ತಂದು ತಿಂಗಳಿಗೊಮ್ಮೆ ನೌಕರರಿಗೆ ಸಂಬಳ ಕೊಡುತ್ತಿದೆ. ಇದರ ಆರ್ಥಿಕ ವ್ಯವಸ್ಥೆ ದುಸ್ಥಿತಿಗೆ ಹೋಗಿದೆ. ನಿಮ್ಮ ಪಿ.ಡಬ್ಲ್ಯೂ.ಡಿ. ಅಧಿಕಾರಿಗಳು ಪೆಟ್ರೋಲ್ ಬಂಕ್‌ನಲ್ಲಿ ಕೈ ಮುಗಿದು ಅವರು ಓಡಾಡುವುದಕ್ಕೆ ಪೆಟ್ರೋಲ್, ಡೀಸೆಲ್ ಹಾಕಿಸಿಕೊಳ್ಳುವುದಕ್ಕೂ ಅವರ ಹತ್ತಿರ ಹಣವಿಲ್ಲ. ಇಂಥ ಒಂದು ಸನ್ನಿವೇಶ ಇದೆ. ಇವತ್ತು ನಿಮ್ಮ ಪಿ.ಡಬ್ಲ್ಯೂ.ಡಿ ಕಂಟ್ರಾಕ್ಟರ್‌ಗಳಾಗಲಿ, ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಕಂಟ್ರಾಕ್ಟರ್‌ಗಳಾಗಲಿ ಯಾರೂ ಕೂಡ ನಿಮ್ಮ ಹತ್ತಿರ ಬರುವುದಕ್ಕೆ ಸಿದ್ಧವಿಲ್ಲ. ಕಾರಣ ಅವರಿಗೆ ನೀವು ಕೊಡಬೇಕಾದ ಬಾಕಿ ದುಡ್ಡನ್ನು ಕೊಟ್ಟಿಲ್ಲ. ಈ ರಾಜ್ಯದ ಮುಖ್ಯ ಮಂತ್ರಿಗಳು ಸಾರ್ವಜನಿಕ ಸಭೆಗಳಲ್ಲಿ ಒಂದು ಮಾತನ್ನು ಹೇಳಬಹುದಿತ್ತು. ಏನೆಂದರೆ, ನಮ್ಮ ಸರ್ಕಾರ ಪಾಪರ್ ಆಗಿಲ್ಲ. ಇವತ್ತಲ್ಲ ನಾಳೆ ನಾವು ದುಡ್ಡನ್ನು ಕೊಡುತ್ತೇವೆ, ಇದಕ್ಕಾಗಿ ಅವರು ಹೆದರಬೇಕಾಗಿಲ್ಲ. ಅವರು ನಮ್ಮ ಬಗ್ಗೆ ಅಪನಂಬಿಕೆ ಪಡುವುದು ಬೇಡ ಎಂದು ಹೇಳಬಹುದಿತ್ತು. ಆದರೆ ಇಂದಿನ ಸ್ಥಿತಿಯಲ್ಲಿ ಯಾವ ರೀತಿ, ಯಾವ ಬಾಬಿನಲ್ಲಿ ಹಣವನ್ನು ಉಳಿಸಬೇಕೆಂಬುದು ನಿಮ್ಮ ಸರ್ಕಾರಕ್ಕೆ ಬಿಟ್ಟಿದ್ದು, ನಿಮಗೇ ಬಿಟ್ಟಿದ್ದು. ಆದರೆ ಶೇಕಡ ೭೫—೮೦ ಜನ ಯಾರು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ ಅವರು ಇವತ್ತು ದಾರಿ ತೋಚದೆ ಕೈ ಕಟ್ಟಿಕೊಂಡು ಕುಳಿತಿದ್ದಾರೆ. ಈ ಎಲ್ಲ ಯೋಜನೆಗಳು ಪೂರ್ಣವಾಗಬೇಕಾದರೆ ಇಷ್ಟು ದುಡ್ಡು ಬೇಕಾಗುತ್ತದೆಂದು ಹಣ ಇಲ್ಲದ ಕಾರಣ ನಮ್ಮ ಕೈಯಿಂದಾಗುತ್ತಿಲ್ಲವೆಂದು ಹೇಳಿದರು. ಇನ್ನು ಲಿಫ್ಟ್ ಇರಿಗೇಷನ್ ಮುಂತಾದವುಗಳಿಗೆ ಕೆಲವು ಬೇರೆ ಬೇರೆ ಬ್ಯಾಂಕ್‌ಗಳವರು ಸಾಲ ಕೊಡುವುದಕ್ಕೆ ಮುಂದೆ ಬರುತ್ತಿದ್ದಾರೆ ಎನ್ನತಕ್ಕ ಮಾತನ್ನೂ ಸಹ ಮಾನ್ಯ ಸಚಿವರು ಹಿಂದೆ ಒಂದು ಕಡೆ ಭಾಷಣ ಮಾಡುತ್ತಾ ಹೇಳಿದ್ದರು. ಆರೀತಿ ಯಾವ ಯಾವ ಬ್ಯಾಂಕ್‌ಗಳವರು ಈ ನೀರಾವರಿ ಯೋಜನೆಗಳಿಗೆ ಎಷ್ಟೆಷ್ಟು ದುಡ್ಡನ್ನು ಕೊಟ್ಟಿದ್ದಾರೆ? ಆ ಹಣದಿಂದ ತಾವು ಎಷ್ಟು ಯೋಜನೆಗಳನ್ನು ಪ್ರಾರಂಭ ಮಾಡಿದ್ದೀರಿ? ಇದರ ಬಗ್ಗೆಯೂ ಸಹ ತಾವು ವಿವರಣೆ ಕೊಡಬೇಕು. ನಾವು ಮೊದಲು ಮಾನ್ಯ ದೇವೇಗೌಡರನ್ನು ನಂಬಿದ್ದೆವು. ಅವರು ಇದ್ದಾಗ ಈ ಕಲ್ಲು ಒಡ್ಡು ಯೋಜನೆ ಮತ್ತು ಸನ್ಯಾಸಿ ಕೊಪ್ಪದ ಯೋಜನೆ ನಮ್ಮ ತಾಲ್ಲೂಕಿನ ಹಿತದೃಷ್ಟಿಯಿಂದ ಖಂಡಿತ ಆಗುತ್ತವೆಂದು ಭರವಸೆಯನ್ನು ಇಟ್ಟುಕೊಂಡಿದ್ದೆವು. ಆದರೆ ಈಗ ಅವರೂ ಕೂಡ ಬಂದು ಹೋದರು.

ಆದರೆ ಇವತ್ತು ಇದರ ಬಗ್ಗೆ ಯಾವುದೇ ಒಂದು ಕೆಲಸ ಮಾಡುತ್ತೀರಿ ಎನ್ನುವ ವಿಶ್ವಾಸ ನಮಗಿಲ್ಲ. ಈ ಬಗ್ಗೆ ತಮ್ಮನ್ನು ವಿನಂತಿ ಮಾಡಿಕೊಳ್ಳುವುದಾದರೂ ಇಷ್ಟೇ, ಎಲ್ಲ ವಿವರಕ್ಕೆ ಹೋಗುವುದಿಲ್ಲ. ನಿಮ್ಮ ಅರಣ್ಯ ಇಲಾಖಾಧಿಕಾರಿಗೆ ಲೋಕೋಪಯೋಗಿ ಇಲಾಖಾಧಿಕಾರಿಯಿಂದ ಹತ್ತು ಸಾರಿ ಪತ್ರಗಳು ಹೋದರೂ ಕೂಡ ಉದ್ದೇಶಪೂರ್ವಕವಾಗಿ ಉತ್ತರವನ್ನು ಕೊಡುತ್ತಿಲ್ಲ, ಅಲ್ಲಿ ಇಷ್ಟು ಮರಗಳು ಲಾಸ್ ಆಗುತ್ತದೆ, ಇಷ್ಟು ಎಕರೆ ಮುಳುಗಡೆಯಾಗುತ್ತದೆಂದು ವಿವರವಾದ ವರದಿಯನ್ನು ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ಆ ಸ್ಕೀಮ್ ಸ್ಯಾಂಕ್ಷನ್ ಆಗುತ್ತಿತ್ತು. ಕೇಂದ್ರ ಸರ್ಕಾರದ ಅನುಮತಿ ದೊರೆಯುವುದಕ್ಕೆ ಸಾಧ್ಯವಾಗುತ್ತಿತ್ತು. ಎಕ್ಸ್‌ಪರ್ಟ್ ಕಮಿಟಿಯವರು ಅನುಮತಿಯನ್ನು ಕೊಡಲು ಸಿದ್ಧರಿದ್ದರು. ಆದರೆ ಈ ರೀತಿ ಆದರೆ ಪ್ರಾಮಾಣಿಕವಾದ ಪ್ರಯತ್ನ ಮಾಡಲಿಲ್ಲ. ಆದ್ದರಿಂದ ತಕ್ಷಣ ಮಾನ್ಯ ಸಚಿವರು ಈ ಎರಡು ಯೋಜನೆಗಳನ್ನು ಶಿಕಾರಿಪುರದ ರೈತರ ಹಿತದೃಷ್ಟಿಯಿಂದ ತೆಗೆದುಕೊಂಡು ಮಂಜೂರಾತಿಯನ್ನು ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೇ, ಬಹುಶಃ ಮೊದಲನೆಯದಾಗಿ ಸಂಪನ್ಮೂಲಗಳನ್ನ ಕ್ರೋಢೀಕರಿಸುವ ಬಗ್ಗೆ ಈ ರಾಜ್ಯದಲ್ಲಿ ಅಡ್ಮಿನಿಸ್ಟ್ರೇಷನ್ ರಿಫಾರಮ್ಸ್ ಕಮಿಟಿಯವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದರು. ಬಹುಶಃ ಈ ಸರ್ಕಾರದವರ ಅದನ್ನು ಒಪ್ಪಿಕೊಂಡಿದರು. ಹಿಂದಿನ ಸರ್ಕಾರದವರು ಕೂಡ ಅದನ್ನು ಒಪ್ಪಿಕೊಂಡಿದ್ದರು.

ಆದರ ಪ್ರಕಾರವಾಗಿ ವೇಸ್ಟ್‌ಫುಲ್ ಎಕ್ಸ್‌ಪೆಂಡೀಚರ್ ಏನು ಮಾಡುತ್ತಿದ್ದಾರೆ ಅದನ್ನು ಕಡಿಮೆ ಮಾಡಿಕೊಳ್ಳಬಹುದು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈ ರಾಜ್ಯಕ್ಕೆ ೨೦ ಜನ ಮಂತ್ರಿಗಳು ಸಾಕಾಗಿತ್ತು. ಇವತ್ತು ಮೂವತ್ತೈದು ಜನ ಮಂತ್ರಿಗಳಾಯಿತು. ಇದರಲ್ಲಿ ೬–೭ ಜನ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಒಟ್ಟಿನಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದಮೇಲೆ ನನ್ನ ಲೆಕ್ಕದಲ್ಲಿ ಕೇವಲ ೧೦ ಜನ ಮಂತ್ರಿಗಳಿದ್ದರೆ ಸಾಕಾಗಿತ್ತು. ಹೀಗಿದ್ದರೂ ನಿಮ್ಮ ಮಂತ್ರಿಮಂಡಲವನ್ನು ಏತಕ್ಕೆ ಇಷ್ಟೊಂದು ಜಾಸ್ತಿ ಮಾಡಿಕೊಂಡಿರಿ ಎಂದು ಕೇಳಬೇಕಾಗಿದೆ ? ಎರಡನೆಯದಾಗಿ ಮಾನ್ಯ ಗುಂಡೂರಾವ್‌ರವರ ಕಾಲದಲ್ಲಿ ಕಾರ್ಪೊರೇಷನ್ಸ್ ನಿಗಮಗಳೆಂದು ೪೦ ಇದ್ದದ್ದನ್ನು ವಜಾ ಮಾಡಿದಿರಿ. ನೀವು ಈ ಕಡೆ ಕುಳಿತಾಗ ಮಾನ್ಯ ಬೊಮ್ಮಾಯಿಯವರು ಮತ್ತು ಮಾನ್ಯ ದೇವೇಗೌಡರೇ ಇದರಿಂದ ಏನಾಗುತ್ತದೆಂದು ಇದ್ದವುಗಳನ್ನು ವಜಾ ಮಾಡಿದಿರಿ. ಈಗ ಮತ್ತೆ ತಾವು ಅಧಿಕಾರಕ್ಕೆ ಬಂದಮೇಲೆ ಅವಕ್ಕೆ ಜೀವದಾನ ಕೊಟ್ಟಿರಿ. ಈಗ ಎಷ್ಟಿದೆ ಎಂದರೆ ಮಾನ್ಯ ಗುಂಡೂರಾಯರ ಕಾಲದಲ್ಲಿ ೪೦–೫೦ ಇದ್ದದ್ದು ಈಗ ೮೫ ನಿಗಮಗಳನ್ನು ಮತ್ತು ಕಾರ್ಪೊರೇಷನ್‌ಗಳನ್ನು ಮಾಡಿಕೊಂಡಿದ್ದೀರಿ. ಅದರ ಜೊತೆಗೆ ಜಿಲ್ಲಾ ಮಟ್ಟದಲ್ಲಿ ಇಬ್ಬಿಬ್ಬರು ಮಂತ್ರಿಗಳು ಸ್ಥಾನದಲ್ಲಿದ್ದಾರೆ, ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎಂದು ಅವರದು ಎಷ್ಟು ಎಸ್ಟಾಬ್ಲಿಷ್‌ಮೆಂಟ್ ಖರ್ಚು ಬರುತ್ತದೆ, ನಿಮ್ಮ ನಿಗಮಗಳದ್ದು ಎಷ್ಟು ಎಸ್ಟಾಬ್ಲಿಷ್‌ಮೆಂಟ್ ಖರ್ಚು ಬರುತ್ತದೆ, ಮಂತ್ರಿಗಳದ್ದು ಎಷ್ಟು ಎಸ್ಟಾಬ್ಲಿಷ್‌ಮೆಂಟ್ ಖರ್ಚು ಬರುತ್ತದೆ ಎಂಬ ಬಗ್ಗೆ ದಯವಿಟ್ಟು ಲೆಕ್ಕ ಕೊಟ್ಟರೆ ಬಹುಶಃ ರಾಜ್ಯದ ಜನತೆಗೆ ತಾವು ಏನು ಮಾಡುತ್ತಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ಖರ್ಚನ್ನು ಕಡಿಮೆ ಮಾಡಿಕೊಳ್ಳಬಹುದಾಗಿತ್ತು. ಜಿಲ್ಲಾಪರಿಷತ್ ಮತ್ತು ಇಲಾಖೆಗಳಿಗೆ ಹೆಚ್ಚು ಹೆಚ್ಚು ಜನ ಬೇಕೆಂದು ತಾವು ತೆಗೆದುಕೊಳ್ಳುತ್ತಿರುವ ಅನೇಕ ಜನ ಅಧಿಕಾರಿಗಳನ್ನು ಕಡಿಮೆ ಮಾಡಿಕೊಳ್ಳಬಹುದಾಗಿತ್ತು. ಜಿಲ್ಲಾಪರಿಷತ್ ಬಂದಮೇಲೆ ಡಿವಿಜನಲ್ ಕಮಿಷನರ್, ಅಸಿಸ್ಟೆಂಟ್ ಕಮಿಷನರ್‌ಗಳ ಅವಶ್ಯಕತೆ ಇರಲಿಲ್ಲ. ಏತಕ್ಕೆ ಅವರು ಬೇಕು? ಅವರು ಕೇವಲ ಪೋಸ್ಟ್ ಆಫೀಸ್ ಇದ್ದಹಾಗೆ ಅಲ್ಲಿಯ ಕಾಗದಗಳನ್ನು ಇಲ್ಲಿಗೆ ಹೊತ್ತುಹಾಕುವುದು, ಇಲ್ಲಿಯ ಕಾಗದಗಳನ್ನು ಜಿಲ್ಲಾ ಪರಿಷತ್ತಿಗೆ ಹೊತ್ತುಹಾಕುವುದು, ಇದಿಷ್ಟು ಕೆಲಸ ಮಾತ್ರ ಆಗುತ್ತಿದೆ. ನೇರವಾಗಿ ಅವರು ಕಾಗದಪತ್ರಗಳನ್ನು ಸರ್ಕಾರಕ್ಕೆ ಏತಕ್ಕೆ ಬರೆಯಬಾರದೆಂದು ನಾನು ತಮ್ಮನ್ನು ಕೇಳುತ್ತೇನೆ.

ಇನ್ನು ಪ್ಲಾನಿಂಗ್‌ನಲ್ಲಿ ವಿವರ ಇಲ್ಲದಿರುವುದು. ಜನರಿಗೆ ಎಷ್ಟೋ ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಬಜೆಟ್‌ನಲ್ಲಿ ತೋರಿಸುವುದು, ನಮ್ಮ ಫರ್‌ಫಾರ್ಮೆನ್ಸ್ ಹೀಗಿದೆ ಎಂದು ಹೇಳುವುದು ನಡೆಯುತ್ತಿದೆ. ಆದರೆ ಕೆಲಸ ನೋಡಿದರೆ ಏನೇನು ಇಲ್ಲ. ಈ ರೀತಿ ಮೋಸ ಏತಕ್ಕೆ ಮಾಡುತ್ತಿದ್ದೀರಿ. ಇಲ್ಲಿ ನಮಗೂ ಮೋಸ ಮಾಡುತ್ತಿದ್ದೀರಿ ಅಲ್ಲಿ ಜನಕ್ಕೂ ಮೋಸ ಮಾಡುತ್ತಿದ್ದೀರಿ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೇಮಾವತಿ ನೀರನ್ನು ನಮ್ಮ ಜಿಲ್ಲೆಗೆ ಕೊಡುತ್ತೇವೆಂದು ಹೇಳಿದ್ದೀರಿ. ಮಾನ್ಯ ದೇವರಾಜ ಅರಸ್‌ರವರೂ ಕೂಡ ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ನೀವು ಕೂಡ ಅಧಿಕಾರಕ್ಕೆ ಬಂದಮೇಲೆ ಎರಡು ವರ್ಷದಲ್ಲಿಯೇ ಕೊಡುತ್ತೇವೆಂದು ಹೇಳಿದ್ದಿರಿ. ಮಾನ್ಯ ದೇವೇಗೌಡರು ಉತ್ಸುಕರಾಗಿ ಊರೂರುಗಳಲ್ಲೆಲ್ಲ ಹೇಳಿಕೊಂಡುಬಂದರು. ಅವರು ನೀರನ್ನು ಕೊಡಲಿಕ್ಕೆ ಆಗಲಿಲ್ಲ, ರಾಜೀನಾಮೆಯನ್ನು ಕೊಟ್ಟಿದ್ದಾರೆ. ರೈತರ ಪರವಾಗಿ ಇರಿಗೇಷನ್ ಬ್ಯಾಂಕ್ ಮಾಡಿ ಜಮೀನು ಆಸ್ತಿ ಮನೆ ಹಾಗೂ ಸಂಪನ್ಮೂಲಗಳನ್ನು ರೈತರು ಕ್ರೋಢೀಕರಿಸಿಕೊಳ್ಳಲು ತುಮಕೂರು ಜಿಲ್ಲೆಗೆ, ತಿಪಟೂರು, ತುರುವೇಕೆರೆ, ಗುಬ್ಬಿಗೆ ನೀರನ್ನು ಕೊಡುವುದಾಗಿ ಹೇಳಿದಿರಿ.

ರೈತರಿಗೆ ಒಂದು ಎಕರೆ ಜಮೀನಿಗೆ ನೀರು ಕೊಟ್ಟರೆ ೨೦ ಜನ ಕೂಲಿಕಾರರು ಅದನ್ನು ಅವಲಂಬಿಸಿಕೊಂಡು ಬದುಕುತ್ತಾರೆ. ಬಡವರಿಗೆ ಕೆಲಸ ಸಿಗುವುದಿಲ್ಲ ಅನ್ನುತ್ತಿರುವಾಗ ಇದು ಏತಕ್ಕೆ ನಿಮ್ಮ ತಲೆಗೆ ಹೋಗಬಾರದು? ನೀವು ಮೊದಲಿಗೆ ವಿಧಾನಸೌಧವನ್ನೇ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೀರಿ. ಅಧಿಕಾರಿಗಳು ಏರ್ ಕಂಡೀಷನ್ ರೂಂನಲ್ಲೇ ಕೂಡಬೇಕು ನಂತರ ಕೆಲಸ ಆಗಬೇಕು. ಇವತ್ತಿಗೂ ಆಂಧ್ರದಲ್ಲಿ ಲೋಕೋಪಯೋಗಿ ಇಲಾಖೆಯ ಕಛೇರಿಗಳು ಗುಡಿಸಲುಗಳಲ್ಲಿವೆ. ನೀವು ಹೋಗಿರಬಹುದು, ಅಥವಾ ನೀವು ಹೋಗುವ ಪ್ರಶ್ನೆಯೇ ಇಲ್ಲವೆಂದು ಕಾಣುತ್ತದೆ. ಬೊಮ್ಮಾಯಿಯವರು ಸುಖಪುರುಷರು ಆದರೂ ಪ್ಲಾನಿಂಗ್ ಮಂತ್ರಿಗಳಾಗಿ ಇದನ್ನೆಲ್ಲ ನೋಡಬೇಕಾಗುತ್ತದೆ. ತಮಗೆ ರೆವಿನ್ಯೂ ಖಾತೆ ಕೂಡ ಇದೆ. ನೀವು ಬರೀ ಬೆಂಗಳೂರು–ಹುಬ್ಬಳ್ಳಿಗೆ ನೇರವಾಗಿ ಓಡಾಡುತ್ತಿದ್ದರೆ

ತುಮಕೂರು ಜನರ ಗತಿ ಹೇಗೆ ತಮಗೆ ಗೊತ್ತಾಗುತ್ತದೆ ? ಆದ್ದರಿಂದ ಈ ಬಗ್ಗೆ ಯೋಚನೆ ಮಾಡಿ ಒಂದು ಸಾರಿಯಾದರೂ ಬಂದು ನಮ್ಮ ಕಷ್ಟಸುಖವನ್ನು ವಿಚಾರ ಮಾಡಬೇಕು. ಪ್ಲಾನಿಂಗ್ ಮಂತ್ರಿಗಳಾಗಿರತಕ್ಕವರು, ರೆವಿನ್ಯೂ ಖಾತೆಯನ್ನು ಇಟ್ಟುಕೊಂಡಿರತಕ್ಕವರು ರೈಲಿನಲ್ಲಿ ಹೋಗುವ ಬದಲು ಕಾರಿನಲ್ಲಿ ಬಂದು ತುಮಕೂರಿನಲ್ಲಿ ವಿಚಾರ ಮಾಡಿಕೊಂಡರೆ ಯಾವುದಕ್ಕೆ ಆದ್ಯತೆ ಕೊಡಬೇಕೆಂಬುದು ಗೊತ್ತಾಗುತ್ತದೆ, ನೀವು ಬರೀ ಅಂಕಿ ಅಂಶಗಳಿಂದ ಜನರನ್ನು ತೃಪ್ತಿ ಮಾಡುತ್ತೇವೆಂದು ತಿಳಿದುಕೊಂಡಿದ್ದರೆ ಖಂಡಿತ ಜನರು ನಿಮ್ಮನ್ನು ಬಿಡುವುದಿಲ್ಲ. ತುಮಕೂರಿಗೆ ಹೇಮಾವತಿ ನೀರನ್ನು ಕೊಡುತ್ತೇವೆಂದು ನೀವು ಟಾಂ ಟಾಂ ಹೊಡೆದಮೇಲೆ ತುಮಕೂರು ಜಿಲ್ಲೆಯ ಹತ್ತು ಮಂದಿ ಶಾಸಕರ ಗತಿ ಏನಾಗಿದೆ ಎಂದು ತಮಗೆ ಗೊತ್ತಿಲ್ಲ. ಈ ರೀತಿ ಜನರಿಗೆ ಮೋಸ ಮಾಡುತ್ತಾ ಕಣ್ಣಿಗೆ ಮಣ್ಣೆರಚತಕ್ಕ ಕೆಲಸವನ್ನು ಬಿಡಬೇಕೆಂದು ಹೇಳುತ್ತೇನೆ. ಹೇಮಾವತಿ ಯೋಜನೆ ಆದಷ್ಟು ಜಾಗ್ರತೆ ಆಗಬೇಕು. ನನ್ನ ಇನ್ನೊಂದು ಕಳಕಳಿಯ ಪ್ರಾರ್ಥನೆ ಏನೆಂದರೆ ನೇತ್ರಾವತಿ ಪ್ರಾಜೆಕ್ಟ್ ಆದಷ್ಟು ಜಾಗ್ರತೆ ಆಗಬೇಕೆಂಬುದು. ತುಮಕೂರು, ಕೋಲಾರ ಮತ್ತು ಚಿತ್ರದುರ್ಗದ ಎಂ.ಪಿ ಗಳು ನೇತ್ರಾವತಿ ಪ್ರಾಜೆಕ್ಟ್ ಮಲ್ಟಿಪರ್ಪಸ್ ಪ್ರಾಜೆಕ್ಟ್ ಆಗುವುದರಿಂದ ಅದನ್ನು ಆದಷ್ಟು ಜಾಗ್ರತೆ ಮಂಜೂರ್ಮಾಡಿಕೊಡಬೇಕೆಂದು ಕೇಂದ್ರ ಸರ್ಕಾರದಲ್ಲಿ ಒತ್ತಾಯ ತಂದಿದ್ದಾರೆ. ಆದರ ನೀರನ್ನು ತುಮಕೂರು, ಕೋಲಾರ ಮತ್ತು ಚಿತ್ರದುರ್ಗದ ಕೆಲವು ಭಾಗಗಳಿಗೆ ತರಬಹುದೆಂದು ಇಂಜಿನಿಯರಿಂದ ಎಸ್ಟಿಮೇಟ್ ಮಾಡಿಸಲಾಗಿದೆ. ಕರ್ನಾಟಕ ಸರ್ಕಾರದವರು ಎಸ್ಟಿಮೇಟ್ ಮಾಡಿಕೊಟ್ಟರೆ ಕೇಂದ್ರ ಸರ್ಕಾರದವರು ದುಡ್ಡು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆ ಎಸ್ಟಿಮೇಟ್ ಮಾಡಿಸಿ ಪ್ಲಾನ್ ಅನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ನಾವು ನಿಮ್ಮ ಸಹಕಾರದಿಂದ ಅಲ್ಲಿನ ಅಧಿಕಾರಿಗಳಿಗೆ ಮತ್ತು ಪ್ರಧಾನ ಮಂತ್ರಿಗಳಿಗೆ ಹೇಳಿ ಪ್ರಾಜೆಕ್ಟನ್ನು ಮಂಜೂರ್ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು. ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ಮೈನರ್ ಇರಿಗೇಷನ್ನಿನ ಮುಖ್ಯ ಇಂಜಿನಿಯರ್‌ರವರು ಇಲ್ಲಿ ಬಂದು ಕುಳಿತಿದ್ದಾರೆ. ಅವರನ್ನು ಕೇಳಿದರೆ ಜಿಲ್ಲಾ ಪರಿಷತ್ತಿಗೆ ಹೋಗಿ ಅನ್ನುತ್ತಾರೆ, ಜಿಲ್ಲಾ ಪರಿಷತ್ತಿನವರನ್ನು ಕೇಳಿದರೆ ಸರ್ಕಾರದವರು ದುಡ್ಡು ಕೊಟ್ಟಿಲ್ಲ ಅನ್ನುತ್ತಾರೆ. ನೀವು ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆಂದು ಹೇಳಿದ್ದೀರಿ. ಮೊನ್ನೆ ಜಿಲ್ಲಾ ಪರಿಷತ್ತಿಗೆ ಹಣ ಬಿಡುಗಡೆ ಮಾಡಿರುವುದನ್ನು ನೋಡಿದರೆ, ಇಲ್ಲಿ ಏನು ಲಕ್ಷ್ಮೀನರಸಿಂಹಯ್ಯನವರು ಶ್ರೀ ವೀರಣ್ಣನವರು ಶ್ರೀ ರಾಮಯ್ಯನವರು ಇದ್ದಾರೆ, ಅವರುಗಳ ತಾಲ್ಲೂಕುಗಳಿಗೆ ಮಾಡಿಕೊಟ್ಟಿದ್ದೀರಿ. ಒಟ್ಟಾಗಿ ಏತಕ್ಕೆ ಕೊಡಲಿಲ್ಲ ? ಮೈನರ್ ಇರಿಗೇಷನ್ನಿಗೆ ಎಂದು ಜಿಲ್ಲಾ ಪರಿಷತ್ತಿಗೆ ಅಷ್ಟು ಹಣವನ್ನು ಕೊಡಬೇಕಾಗಿತ್ತು, ಇಂಥಿಂಥ ಕೆಲಸಗಳಿಗೆ ಎಂದು ಕೊಟ್ಟರೆ ಅಧಿಕಾರ ವಿಕೇಂದ್ರೀಕರಣ ಎಲ್ಲಿ ಬಂತು ? ನಾವು ಅವರಿಂದ ಯಾವ ಕೆಲಸವನ್ನು ಮಂಜೂರ್ಮಾಡಿಸಿಕೊಳ್ಳಬೇಕು ? ಇದು ಸರಿಯಲ್ಲ ತುಮಕೂರಿನಲ್ಲಿ ಮೈನರ್ ಇರಿಗೇಷನ್ ಟ್ಯಾಂಕುಗಳು ಎಷ್ಟಿವೆ? ೩–೪ ಟ್ಯಾಂಕುಗಳನ್ನು ಬಿಟ್ಟರೆ ಮಿಕ್ಕೆಲ್ಲವು ಮೈನರ್ ಇರಿಗೇಷನ್ ಟ್ಯಾಂಕುಗಳೇ ಆಗಿವೆ. ಅವು ವರ್ಷಕ್ಕೆ ೩ ಸಾರಿ ತುಂಬಿದರೆ ಮಳೆಗಾಲದಲ್ಲಿ ಒಂದು ಬೆಳೆ ಆಗುತ್ತದೆ. ಇಂಥ ಕೆರೆಗಳ ಗತಿ ಏನು ? ಇಲಾಖೆಯ ವತಿಯಿಂದ ಬಂದಿರತಕ್ಕ ವರ್ತಮಾನದ ಪ್ರಕಾರ ಪ್ರತಿ ವರ್ಷ ೨–೩ ಇಂಚು ಕೆರೆ ಮುಚ್ಚುತ್ತದೆ. ಪೂರ್ಣವಾಗಿ ಮುಚ್ಚಿದ ಮೇಲೆ ಮಾಡತಕ್ಕ ಕೆಲಸ ಏನು ? ಅದಕ್ಕೋಸ್ಕರ ಪ್ಲಾನಿಂಗ್ ಇಲಾಖೆಯ ವತಿಯಿಂದ, ಮೈನರ್ ಇರಿಗೇಷನ್ ಟ್ಯಾಂಕುಗಳು ಏನಿವೆ ಅವುಗಳ ಹೂಳು ತೆಗೆಯತಕ್ಕ ಯೋಜನೆಯನ್ನು ತಯಾರಿಸಿ ಕಾರ್ಯಗತಿಗೊಳಿಸಬೇಕೆಂದು ಹೇಳುತ್ತೇನೆ, ಬರಗಾಲದಲ್ಲಿ ಒಂದು ಪ್ಲಾನ್ ಮಾಡಿದ್ದರು ಅದೇನೆಂದರೆ ಹೂಳನ್ನು ತೆಗೆದು ಗಾಡಿಗೆ ತುಂಬಿಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ, ಗಾಡಿ ಬಾಡಿಗೆ ಕೊಟ್ಟು ಹೊಡೆದುಕೊಳ್ಳತಕ್ಕದ್ದು ರೈತನದು. ಈ ಪ್ರಕಾರ ತುಮಕೂರು ಜಿಲ್ಲೆಯಲ್ಲಿ ೭–೮ ಕೆರೆಗಳ ಹೂಳನ್ನು ತೆಗೆಯಲಾಗಿದ್ದು ಒಳ್ಳೆಯ ಕಾರ್ಯವಾಗಿದೆ.

ಆದ್ದರಿಂದ ಈ ಕೆಲಸ ಮುಂದುವರೆಸಬೇಕೆಂದು ಕಳಕಳಿಯಿಂದ ನಾನು ಕೇಳಿಕೊಳ್ಳುತ್ತೇನೆ. ಇನ್ನು ಕೆರೆಯ ನೀರು ಬಿಡುವ ವಿಚಾರದಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ಅಲ್ಲಿ ಯಾರಿದ್ದಾರೆ, ಯಾರು ಕೆಲಸ ಮಾಡಬೇಕು, ನೀರುಗಂಟಿ ಯಾರು, ಒಡೆಯ ಯಾರು, ಜವಾಬ್ದಾರರು ಯಾರು, ಇದನ್ನು ಯಾರೂ ಕೇಳುವುದಿಲ್ಲ. ಸವಡಿಗಳನ್ನು ಅಪಾಯಿಂಟ್ ಮಾಡುತ್ತೇವೆಂದು ಹೇಳಿದಿರಿ. ಅವನು ಎಲ್ಲಿರುತ್ತಾನೋ ದೇವರಿಗೇ ಗೊತ್ತು. ಇಂತಿಂಥ ಕೆರೆಗೆ ಇಂಥಿಂಥ ಸವಡಿಗಳು ಎಂದು ಅಪಾಯಿಂಟ್ ಮಾಡಬೇಕಲ್ಲ. ಅದನ್ನು ಮಾಡಿಲ್ಲ. ಮತ್ತೆ ಕ್ರಾಪ್ ಪ್ಯಾಟರ್ನ್ ಪ್ರತಿಯೊಂದು ಕೆರೆಗೂ ಫಿಕ್ಸ್ ಮಾಡಬೇಕಾಗುತ್ತದೆ. ಒಬ್ಬ ಭತ್ತ ಬೆಳೆಯುತ್ತಾನೆ. ಒಬ್ಬ ಕಡಲೆ ಗಿಡ ಹಾಕುತ್ತಾನೆ, ಒಬ್ಬ

ಸೂರ್ಯಕಾಂತಿ ಹಾಕುತ್ತಾನೆ. ಇದರಿಂದ ಯಾವ ಬೆಳೆ ಬರುತ್ತದೆ ? ಎಲ್ಲಾ ಹಾಳಾಗುತ್ತಿದೆ. ಈ ಬಗ್ಗೆ ರೈತರಿಗೆ ಸರಿಯಾದ ತಿಳಿವಳಿಕೆ ಕೊಡುವವರಿಲ್ಲ. ಜಲ ಸಂಪತ್ತನ್ನು ಸಣ್ಣ ನೀರಾವರಿಯಲ್ಲಿ ಸರಿಯಾಗಿ ಉಪಯೋಗಿಸಿಕೊಳ್ಳುವ ವ್ಯವಸ್ಥೆ ಮಾಡಿಲ್ಲ. ಇದನ್ನು ಕೂಡಲೇ ಮಾಡಬೇಕು. ೧೦೦ ವರ್ಷದ ೨೦೦ ವರ್ಷದ ಹಿಂದೆ ಕೆರೆಗಳನ್ನು ಕಟ್ಟಿದ್ದಾರೆ. ಆಗ ೩೦ ಎಕರೆ ೪೦ ಎಕರೆ ಅಚ್ಚುಕಟ್ಟು ಇದ್ದರೆ ಇವತ್ತು ೧೫೦ ಎಕರೆಯಾಗಿದೆ. ಯಾವ ಹಕ್ಕುದಾರರಿಗೆ ನೀರು ಸಿಗಬೇಕೋ ಅದು ಸಿಗುತ್ತಿಲ್ಲ. ಉದಾಹರಣೆಗೆ ಗುಬ್ಬಿ ಟ್ಯಾಂಕ್‌ನಲ್ಲಿ ಟೈಲ್ ಎಂಡ್‌ನವರಿಗೆ ಇವತ್ತೂ ನೀರು ಸಿಗುತ್ತಿಲ್ಲ. ೪೦ ಪಂಪ್‌ಗಳನ್ನು ಕೋಡಿ ಹಳ್ಳಕ್ಕೆ ಹಾಕಿಕೊಂಡಿದ್ದಾರೆ, ಮೂರು ನಾಲ್ಕು ಫರ್ಲಾಂಗ್ ಆಡೆ ಇರುವ ಡ್ರೈಲ್ಯಾಂಡಿಗೆ ನೀರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಹಕ್ಕುದಾರರಿಗೆ ನೀರು ಸಿಗುತ್ತಿಲ್ಲ, ಆದರೂ ಅವರಿಗೆ ಕಂದಾಯ ಕೊಡಿ, ವಾಟರ್ ಟ್ಯಾಕ್ಸ್ ಕೊಡಿ ಎಂದು ಹೇಳುತ್ತಿದ್ದಾರೆ. ಹಿಂದೆ ಜಮಾಬಂದಿ ಎಂದು ಮಾಡುತ್ತಿದ್ದರು. ಪಹಣಿ ಬರೆಯುತ್ತಿದ್ದರು, ಇವತ್ತು ಆ ರೀತಿ ಏನೂ ಇಲ್ಲ. ಬಹಳಷ್ಟು ಜನ ರೈತರು ನೀರು ಉಪಯೋಗಿಸಿಕೊಳ್ಳದೆ ಬೆಳೆ ಬೆಳೆಯದೇ ಇದ್ದರೂ ಅವರಿಂದ ನೀರು ಕಂದಾಯ ವಸೂಲು ಮಾಡುತ್ತಿದ್ದಾರೆ. ಇದರ ಬಗ್ಗೆ ಗಮನ ಕೊಟ್ಟು ವಸೂಲು ಮಾಡದಂತೆ ಸೂಕ್ತ ಇನ್‌ಸ್ಟ್ರಕ್ಷನ್ ಕೊಡಬೇಕೆಂದು ಹೇಳುತ್ತೇನೆ. ಇನ್ನು ಕಂದಾಯ ಇಲಾಖೆ ಬಗ್ಗೆ ಹೇಳುತ್ತೇನೆ. ಈ ಒಂದು ಇಲಾಖೆ ಪುರಾತನವಾದುದು. ಕಂದಾಯ ಇಲಾಖೆ ಯಾವ ರೀತಿ ಕೆಲಸ ಮಾಡುತ್ತದೋ ಅದರ ಪ್ರತಿಬಿಂಬ ಬೇರೆ ಎಲ್ಲಾ ಇಲಾಖೆಗಳ ಮೇಲೂ ಬೀಳುತ್ತದೆ ಇಲ್ಲಿ ಏನಾಗಿದೆ ? ಗ್ರಾಮ ವ್ಯವಸ್ಥೆ ಬಗ್ಗೆ ಲೆಕ್ಕ ಹಾಕೋಣ, ಮೊದಲು ಪಟೇಲರು, ಶಾನಭೋಗರು, ತೋಟಿ, ತಳವಾರರು, ಕೋಲುಕಾರರು ಇದ್ದರು. ಇಷ್ಟು ಜನರು ಗ್ರಾಮದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಈಗ ಅವರಿಲ್ಲ. ಅಬಾಲಿಷನ್ ಆಫ್ ಹೆರಿಡಿಟರಿ ಆಫೀಸರ್ಸ್ ಆಕ್ಟ್ ಪ್ರಕಾರ ಅವರನ್ನು ವಜಾ ಮಾಡಿ ೧೯೬೩ರಲ್ಲಿ ವಿಲೇಜ್ ಅಕೌಂಟೆಂಟ್ಸ್‌ಗಳನ್ನು ನೇಮಕ ಮಾಡಿಕೊಂಡಿರಿ. ಅವರು ಹೇಗೆ ಕೆಲಸ ಮಾಡುತ್ತಿದ್ದಾರೆ ? ನಿಮ್ಮ ಇಲಾಖೆ ಸರಿಯಾಗಿ ಕೆಲಸ ಮಾಡಿದರೆ ಜನತಾ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ನಿಮ್ಮ ಇಲಾಖೆ (ಕಂದಾಯ ಇಲಾಖೆ) ಸರಿಯಾಗಿ ಕೆಲಸ ಮಾಡದೇ ಇದ್ದರೆ ಇಡೀ ಜನತಾ ಸರ್ಕಾರ ಕುಸಿದು ಬೀಳುತ್ತದೆ ಎಂಬ ವಿಚಾರವನ್ನು ಬಹಳ ಎಚ್ಚರಿಕೆಯಿಂದ ನಾನು ಹೇಳಬೇಕಾಗಿದೆ. ಒಬ್ಬ ವಿಲೇಜ್ ಅಕೌಂಟೆಂಟ್ ಅನ್ನು ಅಪಾಯಿಂಟ್ ಮಾಡಿದಿರಿ. ಅವನಿಗೆ ರೈತನನ್ನು ಗುರುತಿಸುವ ಯೋಗ್ಯತೆ ಇಲ್ಲ. ಜಮೀನು ಗುರುತಿಸುವ ಯೋಗ್ಯತೆ ಇಲ್ಲ. ಪಹಣಿ ಬರೆಯತಕ್ಕ ಸಿಸ್ಟಂ ಗೊತ್ತಿಲ್ಲ. ಪಟ್ಟಾ ಯಾರಿಗೆ ಕೊಡಬೇಕೆಂಬುದಿಲ್ಲ. ಹೀಗಾಗಿ ಅಧಿಕಾರಗಳನ್ನು ಕಳೆದುಕೊಂಡ ಶಾನುಭೋಗರ ಪರಿಸ್ಥಿತಿಯಾಗಿದೆ ನಿಮ್ಮ ಇಲಾಖೆ. ಯಾರೂ ಕೇಳುವವರೇ ಇಲ್ಲ. ಗ್ರಾಮ ನೌಕರರು ಸರಿಯಾಗಿ ಕೆಲಸ ಮಾಡದೇ ಹೋದರೆ ಅಲ್ಲಿರತಕ್ಕ ಗ್ರಾಮದ ರೈತರ ಪರಿಸ್ಥಿತಿ ಏನು ? ಅಲ್ಲೂ ಕೂಡ ಭ್ರಷ್ಟಾಚಾರ ಜಾಸ್ತಿಯಾಗಿದೆ. ಮೊದಲು ೫ ರೂಪಾಯಿ ತೆಗೆದುಕೊಳ್ಳುತ್ತಿದ್ದರೆ ಈಗ ೫೦ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕಬ್ಬಿಣ, ಸಿಮೆಂಟು ಜಲ್ಲಿ ಕಲ್ಲುಗಳನ್ನು ತಿನ್ನುತ್ತಾರೆ. ಗುಡ್ಡೆ ಗುಡ್ಡೆಯಾಗಿ ಜಲ್ಲಿ ಕಲ್ಲುಗಳು ಹೋಗುತ್ತವೆ. ಅಲ್ಲಿ ಕಂಟ್ರಾಕ್ಟರುಗಳು ಇಂಜಿನಿಯರುಗಳಿರುತ್ತಾರೆ. ಅದು ಪ್ರಚಾರಕ್ಕೆ ಬರುತ್ತಿಲ್ಲ. ಆದರೆ ಇಲ್ಲಿ ಬಡ ರೈತ ಕಂದಾಯ ಕಟ್ಟುವಾಗ, ಪಹಣಿ ಬೇಕು ಎಂದಾಗ ೫೦ ರೂಪಾಯಿಯನ್ನು ಒಬ್ಬ ವಿಲೇಜ್ ಅಕೌಂಟೆಂಟ್ ತೆಗೆದುಕೊಂಡರೆ ಅವನ ಪರಿಸ್ಥಿತಿ ಏನಾಗುತ್ತದೆ ? ಅದೇ ರೀತಿ ಯಾವುದಾದರೂ ಸಾಲ ತೆಗೆದುಕೊಳ್ಳುವ ಸಲುವಾಗಿ ಬೇರೆ ಬೇರೆ ದಾಖಲೆಗಳು ಬೇಕು ಅಂದರೆ ೫೦ರಿಂದ ೫೦೦ ರೂಪಾಯಿಗಳವರೆಗೆ ಲಂಚ ಕೊಡಬೇಕು. ಖಾತೆ ಮಾಡುವುದಕ್ಕೆ ೫೦೦ ರೂಪಾಯಿ ಎಂದು ಫಿಕ್ಸ್ ಮಾಡಿದ್ದಾರೆ. ಓಪನ್ನಾಗಿ ಕೇಳುತ್ತಾರೆ. ನಿಮ್ಮ ಎಂ.ಎಲ್.ಎ.ಗಾದರೂ ಹೇಳು, ಮಂತ್ರಿಗಾದರೂ ಬರೆದುಕೊ ಎಂದು ವಿಲೇಜ್ ಅಕೌಂಟೆಂಟ್ ಹೇಳುತ್ತಾನೆ ಈ ರೀತಿ ಆದರೆ ಜನಗಳ ಗತಿ ಏನು ? ನಿಮ್ಮ ಅಧಿಕಾರಾವಧಿಯಲ್ಲಿ ಕಂದಾಯ ಇಲಾಖೆಯ ವರಮಾನ...

ಅಧ್ಯಕ್ಷರು.— **ತಾವು ಮುಕ್ತಾಯ ಮಾಡಿ.**

ಶ್ರೀ ಜಿ. ಎಸ್. ಶಿವನಂಜಪ್ಪ.— ಏನು ಅಧ್ಯಕ್ಷರೇ. ನಾನು ಕುಳಿತುಕೊಂಡು ಬಿಡಲಾ ?

ಅಧ್ಯಕ್ಷರು.— ೧೫ ನಿಮಿಷ ಆಯಿತು.

ಶ್ರೀ ಜಿ. ಎಸ್. ಶಿವನಂಜಪ್ಪ.— ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ.

ನಿಮ್ಮ ಇಲಾಖೆಯಿಂದ ಸರ್ಕಾರಕ್ಕೆ ಹಣ ಬರುತ್ತದೆ ಅಂದರೂ ಕೂಡ ನಿಮ್ಮ ಇಲಾಖೆ ಬಹಳ ಮುಖ್ಯವಾದದ್ದು. ನಮ್ಮ ತಾಲ್ಲೂಕು ಆಫೀಸಿನಿಂದ ಹಿಡಿದು ಇಲ್ಲಿಯ ವಿಧಾನ ಸೌಧದವರೆಗೂ ಭ್ರಷ್ಟಾಚಾರ ಇದೆ. ಇದನ್ನು ಸರಿಪಡಿಸುವುದು ಹೇಗೆ ಎಂಬುದನ್ನು ವಿಚಾರ ಮಾಡಬೇಕು. ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ. ಶುದ್ಧವಾದ, ಸ್ವಚ್ಛವಾದ ಹಾಗೂ ದಕ್ಷತೆಯಿಂದ ಕೂಡಿದ ಆಡಳಿತ ವನ್ನು ಕೊಡುತ್ತೇವೆ. ಎಲ್ಲವನ್ನೂ ಸರಿ ಮಾಡುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದಂತಹವರು ಯಾವುದನ್ನು ಸರಿ ಮಾಡಿದ್ದೀರಿ ? ಭ್ರಷ್ಟಾಚಾರ ಹೋಗಬೇಕಾದರೆ ಅದು ಮೊದಲು ವಿಧಾನ ಸೌಧದಿಂದ ಪ್ರಾರಂಭವಾಗಬೇಕು. ಇಲ್ಲಿ ಮೊದಲು ಸರಿ ಹೋದರೆ ತಾಲ್ಲೂಕು ಮಟ್ಟದಲ್ಲಿ ತಾನೇ ತಾನಾಗಿ ಸರಿ ಹೋಗುತ್ತದೆ. ವಿಧಾನ ಸೌಧದಲ್ಲಿ ಲಕ್ಷಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆಯುತ್ತಿರುತ್ತದೆ. ಇಂತಹದ್ದರಲ್ಲಿ ನಾವು ೫ ರೂಪಾಯಿಗಳನ್ನು ತಿಂದರೆ ಏಕೆ ಹಿಡಿಯುತ್ತೀರಿ ಅಂತ ಹೇಳುತ್ತಾರೆ. ವಿಧಾನ ಸೌಧದಲ್ಲಿ ಲಕ್ಷಾಂತರ ರೂಪಾಯಿಗಳ ವ್ಯಾಪಾರ ನಡೆಯುತ್ತಿರುತ್ತದೆ. ನಾವು ೫ ರೂಪಾಯಿಗಳನ್ನು ತೆಗೆದುಕೊಂಡರೆ ನೀವು ಏಕೆ ಇಷ್ಟೊಂದು ಜಗಳ ಮಾಡುತ್ತೀರಿ ? ಎಂಬುದಾಗಿ ಕೇಳುತ್ತಾರೆ. ಮೇಲು ಗಡೆಯಿಂದ ಆನೆಸ್ಟಿ ಬರಬೇಕು. ಕೆಳಗಡೆಯಿಂದ ದಕ್ಷತೆ ಬರಬೇಕು. ಇದರಲ್ಲಿ ಯಾವುದನ್ನು ಒಪ್ಪಿಕೊಳ್ಳು ತ್ತೀರಿ ? ಯಾವುದನ್ನು ಮಾಡುವುದಕ್ಕೆ ಸಾಧ್ಯ ಎಂಬುದನ್ನು ಹೇಳಬೇಕು ಆದರೆ ಕೈಮೀರಿ ಹೋಗಿದೆ. ರೈತನಿಗೆ ಸ್ಥಳೀಯವಾಗಿ ಸಹಾಯ ಮಾಡತಕ್ಕ ಇಲಾಖೆಗಳಲ್ಲಿ ನಿಮ್ಮ ಇಲಾಖೆ ಅತಿ ಮುಖ್ಯವಾದುದು ಎಂಬುದಾಗಿ ಹೇಳಿದರೆ ತಪ್ಪಾಗಲಾರದು. ಅಲಿನೇಷನ್ ಬಗ್ಗೆ ಹೇಳುವುದಾದರೆ, ಅದನ್ನು ಏಕೆ ನಿಲ್ಲಿಸಿದ್ದೀರಿ ? ಇದರಿಂದ ಬಹಳ ತೊಂದರೆಯಾಗಿದೆ. ನೀವು ಹೊರಡಿಸಿರತಕ್ಕ ಆರ್ಡರನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳಿ, ಕಾನೂನಿಗೆ ವಿರೋಧವಾಗಿ ಸುತ್ತೋಲೆಯನ್ನು ಹೊರಡಿಸಿದ್ದೀರಿ. ಇದು ಸರಿಯಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಹೈಕೋರ್ಟ್ ಆಜ್ಞೆಯಿಂದ ಆದಂತಹ ತೊಂದರೆ. ಮುಂದೆ ಅದರ ಬಗ್ಗೆ ಸುಪ್ರೀಂ ಕೋರ್ಟಿಗೆ ಹೋಗಲಾಗಿದ್ದು ಅಲ್ಲಿ ಸೆಟ್ಲ್‌ಮೆಂಟ್ ಆಗಿದೆ. ಅಲಿನೇಷನ್ ಇಷ್ಯೂ ಮಾಡುವುದಕ್ಕೆ ಅಧಿಕಾರವನ್ನು ಕೊಟ್ಟು ಜಿಲ್ಲಾಧಿಕಾರಿ ಯಾರಿಗೆ ಅಧಿಕಾರವನ್ನು ಕೊಟ್ಟು ಆರ್ಡರ್‌ನ್ನು ಇಷ್ಯೂ ಮಾಡಿದ್ದೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ.—ಈಗತಾನೆ ಶ್ರೀಮಾನ್ ಯಡಿಯೂರಪ್ಪನವರು ಹೇಳಿದ್ದು ಸರಿ ಯಾಗಿದೆ. ನ್ಯಾಚುರಲ್ ಕಲಾಮಿಟಿಯ ಬಗ್ಗೆ ೧೦೦ ರೂಪಾಯಿಗಳ ಪರಿಹಾರವನ್ನು ನಿಗದಿ ಮಾಡಿದ್ದು ಯಾವ ಕಾಲದಲ್ಲಿ ? ಇವತ್ತು ದಿಢೀರನೆ ಬಂದಂತಹ ಆಲಿಕಲ್ಲು ಮಳೆಯಿಂದ ಬತ್ತದ ಬೆಳೆ ಪೂರ್ಣವಾಗಿ ನಾಶವಾಗಿದೆ. ಅವರಿಗೆ ಏನು ಪರಿಹಾರವನ್ನು ಕೊಡುತ್ತೀರಿ ? ನಿಮ್ಮ ಕಾನೂನಿನಲ್ಲಿ ೩೦೦ ರೂಪಾಯಿ ಗಳವರೆಗೆ ಪರಿಹಾರವನ್ನು ಕೊಡುತ್ತೀರಿ. ಇವತ್ತಿನ ಹಣದುಬ್ಬರದ ವ್ಯವಸ್ಥೆಯಲ್ಲಿ ಪರಿಹಾರವನ್ನು ೧೫೦೦ ರೂಪಾಯಿಗಳವರೆಗೆ ಕೊಡಬೇಕಾಗುತ್ತದೆ. ಕೊನೆಯ ಪಕ್ಷ ಅಷ್ಟಾನ್ನಾದರೂ ಕೊಡಬೇಕು.

೫-೦೦ ಪಿ.ಎಂ.

ಮೊನ್ನೆ ತಾನೆ ಮಾನ್ಯ ಮುಖ್ಯಮಂತ್ರಿಗಳು ಇನ್ನೊಂದು ವಿಷಯದ ಮೇಲೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ಇವತ್ತಿನ ೧ ರೂಪಾಯಿಯ ಬೆಲೆ ೯.೫ ಪೈಸೆಯಷ್ಟು ಆಗಿದೆ ಎಂಬುದಾಗಿ ಹೇಳಿದರು. ಅಂದ ಮೇಲೆ ಹಿಂದೆ ನಿಗದಿ ಮಾಡಿದಂತಹ ೩೦೦ ರೂಪಾಯಿಗಳ ಪರಿಹಾರಕ್ಕೆ ಇವತ್ತು ೯೦೦ ರೂಪಾಯಿ ಗಳಷ್ಟು ಕೊಡಬೇಕಾಗುತ್ತದೆ. ಆದ್ದರಿಂದ ಈ ಒಂದು ಮಳೆಯಿಂದ ನಷ್ಟ ಹೊಂದಿದಂತಹ ರೈತರಿಗೆ ಮಾನವೀಯತೆಯ ದೃಷ್ಟಿಯಿಂದ ಹೆಚ್ಚು ಪರಿಹಾರವನ್ನು ಕೊಡಬೇಕು.

ಇನ್ನೊಂದು ವರ್ಗಾವಣೆಯ ಬಗ್ಗೆ ಒಂದು ಮಾತನ್ನು ಹೇಳಲೇಬೇಕು. ನಿಮ್ಮ ಕಡೆಯವರು ಹೇಳಿದಂತವರು, ಅವರಿಗೆ ಬೇಕಾದಂತಹ ಅಧಿಕಾರಿಗಳನ್ನು ಹಾಕುತಿದ್ದೀರಿ ಹಾಗಾದರೆ ನಾವು ಏನು ಪಾಪ ಮಾಡಿದ್ದೇವೆ ? ನಮ್ಮ ಗುಬ್ಬಿ ತಾಲ್ಲೂಕಿಗೆ ಕಳೆದ ಚುನಾವಣೆಯಲ್ಲಿ ಸೋತಂತಹ ಅಭ್ಯರ್ಥಿ ನಿಮ್ಮ ಪಕ್ಷದವರು. ಅವರು ಹೇಳಿದಂತ ಅಧಿಕಾರಿಗಳನ್ನೇ ನಮ್ಮ ತಾಲ್ಲೂಕಿಗೆ ಪೋಸ್ಟ್ ಮಾಡಿದ್ದೀರಿ. ಏಕೆ ಆ ರೀತಿ ಹಾಕುತ್ತಿದ್ದೀರಿ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ನೀವು ವರ್ಗಾವಣೆಯ ಬಗ್ಗೆ ಕೊಟ್ಟಿರುವಂತಹ ಲೆಟರ್ ಹೆಡನ್ನೂ ಕೂಡ ಬೇಕಾದರೆ ತೋರಿಸುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ.—ಆಯಾ ಕ್ಷೇತ್ರದ ಶಾಸಕರನ್ನು ಕೇಳಿ ವರ್ಗಾವಣೆ ಮಾಡಲಾಗುವುದೆಂಬುದಾಗಿ ಹಿಂದೆ ತಿಳಿಸಿದ್ದೀರಿ. ಆ ರೀತಿ ಏಕೆ ಮಾಡುತ್ತಿಲ್ಲ ? ನನ್ನ ತಾಲ್ಲೂಕಿನ ಬಗ್ಗೆ ಹೇಳುವುದಾದರೆ ಕಳೆದ ೪ ವರ್ಷಗಳಲ್ಲಿ ೪ ಜನ ತಹಸೀಲ್ದಾರ್‌ರವರು ಬದಲಾವಣೆಯಾಗಿದ್ದಾರೆ. ಈ ರೀತಿಯಾದರೆ ಅವರು ಯಾವ ರೀತಿ ಕೆಲಸ ಮಾಡುವುದಕ್ಕೆ. ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು, ಅವರು ಬಂದು ತಾಲ್ಲೂಕಿನ ಬಗ್ಗೆ ತಿಳಿದುಕೊಳ್ಳಬೇಕಾದರೆ ೬ ತಿಂಗಳಾಗುತ್ತವೆ, ಯಾರ್ಯಾರಿಂದ ಬಾಕಿ ವಸೂಲಿಯನ್ನು ಮಾಡಬೇಕೆಂಬುದನ್ನು ತಿಳಿದುಕೊಳ್ಳಬೇಕಾದರೆ ೬ ತಿಂಗಳಾಗುತ್ತವೆ. ಅಂತಹ ಸಮಯದಲ್ಲಿ ಅವರನ್ನು ಬದಲಾವಣೆ ಮಾಡಿದರೆ ಅವರು ಹೇಗೆ ಕೆಲಸ ಮಾಡಬೇಕು ? ಇದರಿಂದಾಗಿ ನಮ್ಮ ತಾಲ್ಲೂಕಿನಲ್ಲಂತೂ ಬಹಳ ಅನ್ಯಾಯ ಮಾಡಿದ್ದೀರಿ. ಇದನ್ನು ಸರಿ ಮಾಡಬೇಕು. ಒಂದು ವೇಳೆ ಈ ಸಾರಿ ಬದಲಾವಣೆ ಮಾಡಬೇಕೆಂದಾದರೆ ನಮಗೆ ಬೇಕಾದ ೪–೫ ಜನರನ್ನು ಸೂಚನೆ ಮಾಡುತ್ತೇನೆ. ಅವರಲ್ಲಿ ಯಾರನ್ನಾದರೂ ಹಾಕಿ ನಾನು ಬೇಡ ಎನ್ನುವುದಿಲ್ಲ. ಇಲ್ಲದಿದ್ದರೆ ಕೆಲಸ ಮಾಡುವುದಕ್ಕಾಗುವುದಿಲ್ಲ.

ಮತ್ತೆ ಬಗರ್ ಹುಕ್ಕುಂ ಜಮೀನನ್ನು ಖಾಯಂ ಮಾಡಬೇಕೆಂಬುದಾಗಿ ಬೇಡಿಕೆ ಏನು ಇದೆ ಅದನ್ನು ಬೇಗ ಮಾಡಬೇಕು. ಇದರಲ್ಲಿ ತೊಂದರೆ ಇದೆ. ಏಕೆಂದರೆ ಕಾಫಿ ಪ್ಲಾಂಟರ್ ಪ್ರಶ್ನೆ ಕೂಡ ಇದೆ. ಆದ್ದರಿಂದ ಕಾಫಿ ಪ್ಲಾಂಟರ್ಸ್ ಪ್ರಶ್ನೆ ಬಿಟ್ಟು ಆರ್ಡರ್ ಮಾಡಿ ಸಾಗುವಳಿಗಾಗಿ ಯಾರ್ಯಾರು ಒತ್ತುವರಿ ಮಾಡಿದ್ದಾರೆ ಅವರಿಗೆ ಬೇಗ ಖಾಯಂ ಮಾಡಿಕೊಡಬೇಕು ಕಾಫಿ ಪ್ಲಾಂಟರ್ಸ್ ಪ್ರಶ್ನೆಯನ್ನು ಇದರಲ್ಲಿ ಸೇರಿಸಿದ್ದೇ ಆದರೆ ಬೇಗ ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಮತ್ತೆ ಕಾಡಿನ ಒತ್ತುವರಿಯ ಬಗ್ಗೆ ಹೇಳುವುದಾದರೆ ಯಾರ ತೀರ್ಮಾನ ಆಗಿಲ್ಲ ನನ್ನ ಕ್ಷೇತ್ರದಲ್ಲಿ ಎಲ್ಲ ಮಂಡಲ್ ಪಂಚಾಯಿತಿ ಪ್ರಧಾನರು ರೆಸಲ್ಯೂಸನ್ ಅನ್ನು ಮಾಡಿ ತಲಾ ೧೦–೧೦ ಎಕರೆ ಗೋಮಾಳದ ಜಮೀನನ್ನು ಕೊಡಿ, ಅದರಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸಿ ಆದಾಯವನ್ನು ಉತ್ಪಾದನೆ ಮಾಡಿಕೊಳ್ಳುತ್ತೇವೆಂದು ಮೇಲಾಧಿಕಾರಿಗಳಿಗೆ ಕಳುಹಿಸಿ ಸುಮಾರು ೬ ತಿಂಗಳಾಯಿತು ಅದರ ಬಗ್ಗೆ ಜಿಲ್ಲಾಧಿಕಾರಿಗಳಾಗಲಿ ಅಥವಾ ರೆವಿನ್ಯೂ ಇಲಾಖೆಯ ಅಧಿಕಾರಿಗಳಾಗಲಿ ಯಾವ ಪ್ರಯತ್ನವನ್ನೂ ಮಾಡಿಲ್ಲ. ಜಮೀನನ್ನು ಮಂಜೂರು ಮಾಡಿಕೊಡುವ ವಿಚಾರದಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆದಿದೆ,

ಕೊಟಗಾರಹಳ್ಳಿಯಲ್ಲಿ ೬ ಎಕರೆಯನ್ನು ಎಕ್ಸೈಜ್ ಲ್ಯಾಂಡ್ ಒಬ್ಬರಿಗೇ ಮಂಜೂರು ಮಾಡಿರುತ್ತಾರೆ ಇನ್ನೊಂದು ಕಡೆ ೧೫೦ ಜನರಿಗೆ ೧೬೪ ಎಕರೆ ಹಂಚಿದ್ದಾರೆ. ಅಪಾಯ್ಬಲಿಟಿ ಲಿಸ್ಟ್ ಇಲ್ಲ, ಮತ್ತೊಂದಿಲ್ಲ. ಈ ಬಗ್ಗೆ ದೊಡ್ಡ ಪಿಟಿಷನ್ ಮಾಡಿ, ರೆಕಾರ್ಡ್ ಮಾಡಿ ನಿಮಗೆ ಕೊಟ್ಟಿದ್ದೇನೆ. ಈ ಬಗ್ಗೆ ತಾವು ತನಿಖೆ ಮಾಡಿ ಈ ಸದನ ಮುಗಿಯುವುದರೊಳಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಾವು ಹೇಳಬೇಕು. ಅಲ್ಲಿ ರೈತರಿಗೆ ತುಂಬಾ ಅನ್ಯಾಯವಾಗಿದೆ, ಇನ್ನು ಇಷ್ಟು ಹೇಳಿ ಸಬ್ ರಿಜಿಸ್ಟ್ರಾರ್ ಬಗ್ಗೆ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಪ್ರಿವೆನ್‌ಷನ್ ಆಫ್ ಫ್ರಾಗ್ಮೆಂಟೇಷನ್ ಆಫ್ ಹೋಲ್ಡಿಂಗ್ಸ್ ಆಕ್ಟ್ ಇದೆ. ಇದರ ಪ್ರಕಾರ ಫ್ರಾಗ್ಮೆಂಟೇಷನ್ಸ್ ರಿಜಿಸ್ಟರ್ ಮಾಡಬಾರದು ಎಂದು ಕಾಯ್ದೆ ಇದೆ. ಆದರೆ ಗುಬ್ಬಿಯಿಂದ ತಾವು ರಿಜಿಸ್ಟರ್ ತರಿಸಿ ನೋಡಿ. ಅಲ್ಲಿ ಎಷ್ಟು ಫ್ರಾಗ್ಮೆಂಟೇಷನ್ ರಿಜಿಸ್ಟರ್ ಮಾಡಿದ್ದಾರೆ ಎಂಬುದು ನಿಮಗೆ ಗೊತ್ತಾಗುತ್ತದೆ. ಇವತ್ತಿನದಿವಸ ಇಂತಹ ಅಧಿಕಾರಿಯನ್ನು ಏನು ಮಾಡುತ್ತೀರಿ ಎಂಬುದನ್ನು ತಾವು ಹೇಳಬೇಕು, ಇಲ್ಲೂ ಕೂಡಾ ಸಬ್ ರಿಜಿಸ್ಟ್ರಾರ್ ವರ್ಗಾವಣೆಯಲ್ಲಿ ಸರಿಯಾದ ನೀತಿಯನ್ನು ಅನುಸರಿಸಿಲ್ಲ. ಈ ಬಗ್ಗೆ ದಯವಿಟ್ಟು ಬೇಗನೆ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಸರ್ವೇ ಡಿಪಾರ್ಟ್‌ಮೆಂಟಿನಲ್ಲಿ ಎಲ್ಲಾ ಕಡತಗಳು ಗೆದ್ದಿಲು ತಿನ್ನುತ್ತಿವೆ. ಕಳೆದ ೩ ವರ್ಷಗಳಿಂದ ಅಲ್ಲಿ ನಾವು ಕೇಳುವ ಮ್ಯಾಪ್‌ಗಳು ಸಿಗುತ್ತಿಲ್ಲ. ಟಿಪ್ಪಣಿಗಳು ಸಿಗುತ್ತಿಲ್ಲ, ಪಹಣಿಗಳು ಸಿಗುತ್ತಿಲ್ಲ, ಎಲ್ಲವನ್ನೂ ಗೆದ್ದಲು ತಿನ್ನುತ್ತಿವೆ. ಎಲ್ಲ ದಾಖಲೆಗಳು ಹೋದರೆ ರೈತರ ಗತಿ ಏನು ? ಅದೇನೋ ಆರ್ ಆರ್ ಟಿ ಸಿ ಎಂದು ಮಾಡಿದ್ದೀರಿ. ಅದರಲ್ಲಿ ಹೊಸದಾಗಿ ನಮೂದಿಸಿಬಿಟ್ಟರೆ ಆಯಿತು. ಅದರಲ್ಲಿ ನಾಳೆ ದಿವಸ ನಿಮ್ಮ ಹೆಸರನ್ನು ನಮೂದಿಸಿದರೆ ನೀವೇ ಆ ಭೂಮಿಯ ಒಡೆಯರಾಗಬಹುದು. ಆದ್ದರಿಂದ ಮಾನ್ಯ ಮಂತ್ರಿಗಳು ದಯಮಾಡಿ ಲ್ಯಾಂಡ್ ರೆಕಾರ್ಡ್ಸ್‌ನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಬೇಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ೧೯೮೮-೮೯ ನೇ ಸಾಲಿನ ಸಣ್ಣ ನೀರಾವರಿ ಹಾಗೂ ಇತರ ಇಲಾಖೆಗಳ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆ ಸೂಚನೆಗಳನ್ನು ಕೊಡಲು ನಾನು ಇಷ್ಟಪಡುತ್ತೇನೆ. ಕಾಲಾವಕಾಶ ಸಾಕಷ್ಟು ಇಲ್ಲದೇ ಇರುವುದರಿಂದ ನಾನು ವಿವರಕ್ಕೆ ಹೋಗದೇ ಸಂಕ್ಷಿಪ್ತವಾಗಿ ಕೆಲವು ಮಾತುಗಳನಾಡುವುದಕ್ಕೆ ಇಷ್ಟಪಡುತ್ತೇನೆ. ನಮಗೆಲ್ಲರಿಗೂ ಗೊತ್ತಿರುವ ರೀತಿಯಲ್ಲಿ ಯಾವುದೇ ಒಂದು ರಾಷ್ಟ್ರ ತನ್ನ ಆರ್ಥಿಕ ಧೋರಣೆಯನ್ನು ಸರಿಪಡಿಸಿಕೊಳ್ಳಬೇಕಾದರೆ ಅವಶ್ಯಕವಾಗಿ ಬೇಕಾಗಿರತಕ್ಕದ್ದು ನೀರು. ನಾವು ಅನೇಕ ಕಾರ್ಯಕ್ರಮಗಳನ್ನು ಈ ದಿಶೆಯಲ್ಲಿ ತಂದರೂ ಕೂಡಾ ನಮ್ಮ ರಾಷ್ಟ್ರದ ಒಂದು ಆರ್ಥಿಕ ಪರಿಸ್ಥಿತಿ ದಿನೇ ದಿನೇ ಕೆಳಮಟ್ಟಕ್ಕೆ ಹೋಗುತ್ತಿದೆ. ಶ್ರೀಮಂತ ಮತ್ತು ಬಡವ ಎನ್ನುವ ಬೇಧಭಾವ ಏನು ಇದೆ, ಅದನ್ನು ಹೋಗಲಾಡಿಸಬೇಕಾದರೆ ಹೆಚ್ಚಿನ ಆದ್ಯತೆಯನ್ನು ನಾವು ನೀರಿಗೆ ಕೊಡಬೇಕಾಗುತ್ತದೆ. ವ್ಯವಸಾಯವನ್ನು ಸರಿಯಾದ ಕ್ರಮದಲ್ಲಿ ರೂಢಿಸಿಕೊಂಡು ಸರಿಯಾದ ಪ್ಲಾನಿಂಗ್ ಮುಖಾಂತರ ನಡೆಸಿದರೆ ಬಹುಶಃ ನಮ್ಮ ರಾಷ್ಟ್ರದ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸುವುದಕ್ಕೆ ಸಾಧ್ಯವಾಗುತ್ತದೆ. ನಾವು ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಅಳವಡಿಸುವ ಸಂದರ್ಭದಲ್ಲಿ ರೈತರಿಗೆ ಹಿಂದುಳಿದವರು, ದೀನದಲಿತರು ಎಂದು ಗುಂಪುಗಳಾಗಿ ವಿಂಗಡಿಸಿ ಅವರಿಗೆ ಮನೆ ಕಟ್ಟಿಸುತ್ತೇವೆ, ಮನೆ ಕಟ್ಟಲು ಸಾಲ ಕೊಡುತ್ತೇವೆ, ಎಮ್ಮೆ ಸಾಲ ದನದ ಸಾಲ ಕೊಡುತ್ತೇವೆ. ಆ ಹಣವನ್ನು ಯಾವ ರೀತಿ ಖರ್ಚು ಮಾಡಬೇಕು ಎಂದು ಹೇಳುತ್ತೇವೆ. ಆದರೆ ಈ ವರ್ಷ ಸಾಲ ಪಡೆದವರು, ಮನೆ ಎತ್ತು ಎಮ್ಮೆ ಪಡೆದವರು ಮುಂದಿನ ವರ್ಷ ಬೀದಿಪಾಲಾಗಿರುತ್ತಾರೆ. ಇದಕ್ಕೆ ನಾನಾ ಕಾರಣಗಳು ಉಂಟು ಆದರೆ ಯಾರಿಗೆ ನೀರನ್ನು ಒದಗಿಸುತ್ತೇವೆ ಅವರು ಉದ್ಧಾರವಾಗುತ್ತಾರೆ ಎನ್ನುವುದಕ್ಕೆ ಮಂಡ್ಯ ಜಿಲ್ಲೆ ಸಾಕ್ಷಿ. ಕೆ.ಆರ್.ಎಸ್ ನಿಂದ ನೀರು ಪಡೆದ ಜನರು ಅವರು ಹರಿಜನಗಿರಿಜನರಾಗಲೀ ಹಿಂದುಳಿದವರಾಗಲೀ ದೀನದಲಿತರಾಗಲೀ ಆರ್ಥಿಕ ಪರಿಸ್ಥಿತಿಯಲ್ಲಿ ಅವರು ಬೇರೆ ಪ್ರದೇಶದ ಜನರಿಗಿಂತಾ ಚೆನ್ನಾಗಿ ಇದ್ದಾರೆ. ಇದಕ್ಕೆ ಮೂಲ ಕಾರಣ ಅವರಿಗೆ ನೀರಾವರಿ ಸೌಕರ್ಯ ಒದಗಿಸಿಕೊಟ್ಟದ್ದು. ಇವತ್ತು ಅಭಿವೃದ್ಧಿಗೆ ಹಣ ಕೊಡಬಹುದು. ಆದರೆ ನೀರನ್ನು ಕೊಟ್ಟರೆ ಅವರಿಗೆ ಚಿನ್ನ ಕೊಟ್ಟ ಹಾಗೆ ಎಂದು ಹೇಳಿದರೆ ತಪ್ಪಾಗಲಾರದು. ಚಿನ್ನಕ್ಕಿಂತಲೂ ಹೆಚ್ಚಿನ ಬೆಲೆ ನೀರಿಗೆ ಇದೆಯೆಂದರೆ ತಪ್ಪಾಗಲಾರದು. ಇವತ್ತು ರೈತರ ಆರ್ಥಿಕ ಪರಿಸ್ಥಿತಿ ಸುಧಾರಣೆ ಮಾಡುವುದಕ್ಕೆ ನೀರು ಕೊಡಬೇಕೇ ಹೊರತು, ಮನೆ, ಎತ್ತು ಎಮ್ಮೆ ಕೊಟ್ಟು ಸಹಾಯ ಮಾಡಬೇಕಾಗಿಲ್ಲ ತಾಳಿ ಕೊಡಬೇಕಾಗಿಲ್ಲ. ನೀರಾವರಿ ಒಂದರಿಂದ ಮಾತ್ರ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತವೆ. ಅವರೂ ಕೂಡಾ ಸಮಾಜದಲ್ಲಿ ಸಮಾನವಾಗಿ ಬೆಳೆಯುವುದಕ್ಕಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಹರಿಜನ ಗಿರಿಜನರಿಗೆ, ಹಿಂದುಳಿದ ವರ್ಗದವರಿಗೆ ಕೇವಲ ೧ ಎಕರೆ, ೨ ಎಕರೆ ಭೂಮಿ ಇದ್ದರೂ ಕೂಡಾ ನೀರಾವರಿ ಇರುವುದರಿಂದ ಅವರ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡುತ್ತಿದ್ದಾರೆ. ಒಳ್ಳೆಯ ಬಟ್ಟೆಗಳನ್ನು ತೊಡಿಸುತ್ತಿದ್ದಾರೆ. ಅವರ ಮಕ್ಕಳು, ಕಾರು, ಸ್ಕೂಟರುಗಳಲ್ಲಿ ಓಡಾಡುತ್ತಿದ್ದಾರೆ.

ಆದ್ದರಿಂದ ರಸ್ತೆಗಳ ಕೆಲಸವನ್ನು ಬದಿಗೊತ್ತಿ ಹೆಚ್ಚಿನ ಆದ್ಯತೆಯನ್ನು ನೀರಾವರಿಗೆ ಕೊಟ್ಟರೆ ಜನರ ಆರ್ಥಿಕ ಪರಿಸ್ಥಿಯನ್ನು ಹಾಗೂ ಸಾಮಾಜಿ ಸುಧಾರಣೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ನೀರಿನ ಮಹತ್ವದ ಬಗ್ಗೆ ಹೇಳುತ್ತೇನೆ, ಮಹಾರಾಷ್ಟ್ರ, ಆಂಧ್ರಪ್ರದೇಶ, ಕೇರಳ ರಾಜ್ಯಗಳಲ್ಲಿ ಶೇಕಡ ೭೦-೮೦ ರಷ್ಟು ನೀರಿನ ಪೊಟೆನ್ಸಿಯಲ್ ಉಪಯೋಗಿಸಿಕೊಂಡಿದ್ದಾರೆ. ನಮ್ಮ ರಾಜ್ಯದ ದುರ್ದೈವವೆಂದು ಕಾಣುತ್ತದೆ ನಾವು ನೀರಾವರಿಯಲ್ಲಿ ಶೇಕಡ ೨೫-೩೦ ರಷ್ಟು ತಲುಪಬೇಕಾದರೆ ಕಷ್ಟವಾಗಿ ಬಹಳ ಹಿಂದೆ ಇದ್ದೇವೆಂದು ಈ ಮಾತನ್ನು ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ. ಕ್ರಿ.ಶ. ೨೦೦೦ರ ಇಸವಿಯೊಳಗೆ ಬಚಾವತ್ ಕಮಿಟಿ ರಿಪೋರ್ಟ್ ಪ್ರಕಾರ ನಾವು ಯಾವ ಪ್ರಕಾರ ನೀರನ್ನು ಉಪಯೋಗಿಸಿಕೊಳ್ಳಬೇಕೆಂದು ಹೇಳಿದ್ದಾರೆಯೋ ಆ ಪ್ರಕಾರ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಆದ್ಯತೆಯ ಆಧಾರದ ಮೇಲೆ ಇನ್ನಿತರ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೆಲಸ ಮಾಡಬೇಕು. ಮಾನ್ಯ ದೇವೇಗೌಡರು ಲೋಕೋಪಯೋಗಿ ಹಾಗೂ ನೀರಾವರಿ ಸಚಿವರಾಗಿದ್ದಾಗ ಹೆಚ್ಚಿನ ಕಾಳಜಿಯನ್ನು ವಹಿಸಿ ತಮ್ಮ ಕೈಲಾದ ಸೇವೆಯನ್ನು ಮಾಡಿ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಅದೇರೀತಿ ಆ ಖಾತೆಯ ಇನ್‌ಚಾರ್ಜ್ ಇರತಕ್ಕ ಮಾನ್ಯ ಬೊಮ್ಮಾಯಿಯವರು ಮುಂದಿನ ಪ್ಲಾನಿಂಗ್‌ನಲ್ಲಿ ನೀರಾವರಿಗೆ ಹೆಚ್ಚಿನ ಹಣವನ್ನು ಕೊಡಬೇಕೆಂದೇ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಆ ಸಂದರ್ಭದಲ್ಲಿ

ಮಾನ್ಯ ಮೊರಾರ್ಜಿದೇಸಾಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಗಂಗಾ–ಕಾವೇರಿ ಜಂಟಿ ಯೋಜನೆಯ ಮೂಲಕ ನೀರನ್ನು ದಕ್ಷಿಣಕ್ಕೆ ತರಬೇಕೆಂದು ಈ ಬಗ್ಗೆ ಒಂದು ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಿದ್ದರು, ಆ ಕೆಲಸ ಆಗಿದ್ದರೆ ನಮಗೆ ಹೆಚ್ಚಿನ ಪ್ರಯೋಜನವಾಗುತ್ತಿತ್ತು. ದುರ್ದೈವ ಇದುವರೆಗೆ ಅದು ಕಾರ್ಯಗತವಾಗಿಲ್ಲ. ಕರ್ನಾಟಕ ರಾಜ್ಯದ ೨೮ ಲೋಕಸಭಾ ಸದಸ್ಯರುಗಳಲ್ಲಿ ೨೪ ಲೋಕಸಭಾ ಸದಸ್ಯರುಗಳು ಕಾಂಗ್ರೆಸ್(ಐ) ಪಕ್ಷದವರು ಇದ್ದಾರೆ. ಅವರು ಕೇಂದ್ರ ಸರ್ಕಾರದ ಮೇಲೆ ಈ ಬಗ್ಗೆ ಒತ್ತಡ ತಂದು ಗಂಗಾ–ಕಾವೇರಿ ಜಂಟಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಕಷ್ಟು ಒತ್ತಾಯ ಮಾಡಬೇಕೆಂದು ನಾನು ನೀರಾವರಿ ಇಲಾಖೆಯ ಮೇಲಿನ ಬೇಡಿಕೆಗಳ ಮೇಲೆ ಮಾತನಾಡುವಾಗ ಪದೇ ಪದೇ ಹೇಳುತ್ತಿದ್ದೇನೆ. ನಮ್ಮ ಸರ್ಕಾರ ಕೂಡ ಇದರ ಬಗ್ಗೆ ಹೆಚ್ಚಿನ ಒತ್ತಡ ಹಾಕಿ ಗಂಗಾ–ಕಾವೇರಿ ಯೋಜನೆ ಕಾರ್ಯಗತ ವಾಗುವಂತೆ ಮಾಡಬೇಕು. ನೈಲ್ ನದಿ ಈಜಿಪ್ಟ್‌ಗೆ ವರಪ್ರಸಾದವಾಗಿರುವಂತೆ ಗಂಗಾ–ಕಾವೇರಿ ಜಂಟಿ ಯೋಜನೆ ಕಾರ್ಯಗತವಾದರೆ ನಮಗೆ ವರಪ್ರಸಾದವಾಗುತ್ತದೆ ನೀರಾವರಿ ಇಲಾಖೆ ಕಾಮಧೇನು ಇದ್ದಹಾಗೆ, ಇದರಿಂದ ಸರ್ವಾಂಗೀಣವಾದ ಪ್ರಗತಿ ಆಗುತ್ತದೆ. ಗಂಗಾ–ಕಾವೇರಿ ಯೋಜನೆ ಆಗ ಬೇಕಾಗಿರುವುದರಿಂದ ಅದನ್ನು ಮಾಡಲಿಕ್ಕೆ ಪಕ್ಷ ಭೇದವಿಲ್ಲದೆ ಕಾಂಗ್ರೆಸ್ ಪಕ್ಷದ ಸದಸ್ಯರಾಗಲೀ ಜನತಾ ಪಕ್ಷದ ಸದಸ್ಯರಾಗಲೀ ಯಾರೇ ಆಗಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಬಹಳ ಸ್ವಾರಸ್ಯವಾಗಿ ಮಾತನಾಡುತ್ತಿದ್ದಾರೆ ಹಾಗೂ ಅರ್ಥಗರ್ಭಿತವಾಗಿ ಮಾತನಾಡುತ್ತಿದ್ದಾರೆ. ಮೊನ್ನೆ ಪ್ರಧಾನಮಂತ್ರಿಗಳಾದ ರಾಜೀವಗಾಂಧಿ ಯವರು ಒಂದು ಮಾತನ್ನು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ ಇಂಡಿಯಾದೇಶದಲ್ಲಿರತಕ್ಕ ಎಲ್ಲಾ ನದಿಗಳು ಈ ರಾಷ್ಟ್ರದ ನದಿಗಳು ಈ ನದಿಗಳ ನೀರಿನಿಂದ ರಾಷ್ಟ್ರದ ಅಭಿವೃದ್ಧಿಯಾಗಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ಹೇಳುತ್ತಿದ್ದಾರೆ, ಇದು ಕಾರ್ಯರೂಪಕ್ಕೆ ಬಂದರೆ ಬಹಳ ಒಳ್ಳೆಯದು. ದೇಶಕ್ಕೆ ಒಳ್ಳೆಯದು.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಬಸವಲಿಂಗಪ್ಪನವರು ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಪ್ರವಾಹಗಳನ್ನು ತಡೆಗಟ್ಟಲಿಕ್ಕೆ, ದಕ್ಷಿಣ ಭಾರತದ ಬರ ಪರಿಹಾರಕ್ಕೆ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ? ಅಂದಾಜು ಸುಮಾರು ೩೫ ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಖರ್ಚು ಮಾಡಿದ್ದಾರೆ, ಅದೇ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ಗಂಗಾ–ಕಾವೇರಿ ಜಂಟಿ ಯೋಜನೆಗೆ ಅಳವಡಿಸಿ ಕೊಂಡಿದ್ದರೆ ಇಷ್ಟು ಹೊತ್ತಿಗೆ ಅದು ಕಾರ್ಯಗತವಾಗುತ್ತಿತ್ತು. ದಿವಂಗತ ಚರಣಸಿಂಗ್‌ರವರು ಹೇಳುತ್ತಿದ್ದರು ಏನೆಂದರೆ ಲ್ಯಾಂಡ್ ಆರ್ಮಿಯಲ್ಲಿ ರಾಷ್ಟ್ರದಲ್ಲಿರತಕ್ಕ ಎಲ್ಲಾ ನಿರುದ್ಯೋಗಿ ಯುವಕರಿಗೆ ಕೆಲಸ ಒದಗಿಸಿ ಕೊಟ್ಟು ದೊಡ್ಡ ಅಣೆಕಟ್ಟುಗಳನ್ನು ಕಟ್ಟಬೇಕೆನ್ನುವ ಅವರ ಕನಸು ಇತ್ತು, ಅದನ್ನು ಈಡೇರಿಸಲಿಕ್ಕೆ ಪಕ್ಷಾತೀತವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ತರಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೈಸೂರು ಜಿಲ್ಲೆಯಲ್ಲಿ ಕಬಿನಿ ಅಣೆಕಟ್ಟು ತುಂಬುವಹಾಗೆ ಇಡೀ ರಾಜ್ಯದಲ್ಲಿ ಯಾವ ಅಣೆಕಟ್ಟು ತುಂಬುವುದಿಲ್ಲ. ಕಬಿನಿ ಅಣೆಕಟ್ಟು ಕಟ್ಟಿದಾಗಿನಿಂದಲೂ ಯಾವತ್ತೂ ನೀರಿಲ್ಲದೆ ಇಲ್ಲ. ಪ್ರತಿ ಸಾರಿ ನೀರು ತುಂಬಿ ತುಳುಕಿ ಮದ್ರಾಸಿಗೆ ನೀರನ್ನು ಕೊಡಲಾಗುತ್ತಿದೆ. ಮದ್ರಾಸಿಗೆ ನೀರನ್ನು ಕೊಡುವುದಕ್ಕೆ ಬದಲಾಗಿ ನಮ್ಮಲ್ಲಿಯೇ ಅಚ್ಚುಕಟ್ಟು ಪ್ರದೇಶವನ್ನು ಹೆಚ್ಚು ಮಾಡಿ, ನಮ್ಮ ರಾಜ್ಯದ ಜನತೆಗೆ ಹೆಚ್ಚು ಅನುಕೂಲವಾಗುವುದಕ್ಕೆ ಬುದ್ಧಿವಂತಿಕೆಯಿಂದ ಯೋಜನೆಗಳನ್ನು ಮಾಡಿ ನೀರನ್ನು ಉಪಯೋಗಿಸಿಕೊಳ್ಳಬೇಕು. ಕಬಿನಿ ೨ನೇ ಹಂತ ಯೋಜನೆಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ದೇವೇಗೌಡರು ನುಗು ಜಲಾಶಯಕ್ಕೆ ಶಂಕುಸ್ಥಾಪನೆಯನ್ನು ಕಳೆದಬಾರಿ ಮಾಡಿದರು. ಅದು ಗೊತ್ತಾದ ಮೇಲೆ ಅರಣ್ಯ ಇಲಾಖೆಯವರು ಸರ್ವೆ ಮಾಡುವಾಗ ಅಡೆತಡೆ ಮಾಡಿದ್ದಾರೆ. ಈಗ ಅದು ಸರಿಯಾಗಿರುವುದಿಲ್ಲ. ಆ ಯೋಜನೆಗಾಗಿ ಬಜೆಟ್‌ನಲ್ಲಿ ೧೦ ಕೋಟಿ ರೂಪಾಯಿಗಳನ್ನು ತಕ್ಷಣ ಒದಗಿಸಿ ಕೆಲಸವನ್ನು ಮಾಡಲಿಕ್ಕೆ ಮಾನ್ಯ ಸಚಿವರು ಗಮನಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಆಮೇಲೆ ಈ ಕಾಲುವೆಗಳನ್ನು ಮಾಡಿರತಕ್ಕದ್ದು ಮತ್ತು ಡಿಸ್ಟ್ರಿಬ್ಯೂಶನ್ ಆಫ್ ವಾಟರ್ ಏನಿದೆ ದಲ್ಲಿ ನಮ್ಮ ರೈತರೂ ಕೂಡ ತಪ್ಪು ಮಾಡುತ್ತಿದ್ದಾರೆ ಮತ್ತು ಅಧಿಕಾರಿಗಳು ಕೂಡ ತಪ್ಪು ಮಾಡುತ್ತಿದ್ದಾರೆ. ನೀರನ್ನು ದುರುಪಯೋಗ ಮಾಡದೆ ಸಮರ್ಪಕವಾಗಿ ಸರಿಯಾದ

ಮಟ್ಟದಲ್ಲಿ ಕ್ರಮಬದ್ಧವಾಗಿ ಉಪಯೋಗ ಮಾಡುವ ಬಗ್ಗೆ ಕೃಷಿ ಇಲಾಖೆಯ ಅಧಿಕಾರಿಗಳು ಸರಿಯಾದ ಸೂಕ್ತ ಸಲಹೆಗಳನ್ನು ನೀಡಬೇಕು. ನೀರಾವರಿ ಇಲಾಖೆಯಿಂದ ಸರಿಯಾಗಿ, ಕ್ರಮಬದ್ಧವಾಗಿ ನೀರನ್ನು ಉಪಯೋಗಿಸಿ ಕೊಂಡಿದ್ದೇ ಆದರೆ, ಏಕೆಂದರೆ ನನಗೆ ತಿಳಿದವಟ್ಟಿಗೆ ನೀರಾವರಿ ಇಲಾಖೆಯ ಅಂಕಿಸಂಖ್ಯೆಗಳ ಪ್ರಕಾರ ಒಂದು ಟಿ.ಎಂ.ಸಿ. ನೀರಿನಿಂದ ೫ ಸಾವಿರದಿಂದ ೬ ಸಾವಿರ ಎಕರೆಯಲ್ಲಿ ಬೆಳೆಯನ್ನು ಬೆಳೆಯುವ ವ್ಯವಸ್ಥೆ ನಮ್ಮ ರಾಜ್ಯದಲ್ಲಿದೆ. ಈ ಕಾಲುವೆಗಳಿಗೆ ಸರಿಯಾದ ರೀತಿಯಲ್ಲಿ ಸಿಮೆಂಟ್ ಲೈನಿಂಗ್ ಕೊಡಬೇಕು. ಈಗ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನಲ್ಲಿ ವಿಶ್ವ ಬ್ಯಾಂಕ್ ನೆರವಿನ ಯೋಜನೆಯಲ್ಲಿ ಯಾವ ರೀತಿ ಸಿಮೆಂಟ್ ಲೈನಿಂಗ್ ಮಾಡಬೇಕೆಂದು ಇನ್ಸಿಸ್ಟ್ ಮಾಡುತ್ತಾರೆ ಹಾಗೆ ಇಲ್ಲಿಯೂ ಮಾಡಬೇಕು. ಬರೇ ಅಚ್ಚುಕಟ್ಟುದಾರರಿಗೆ ತಲುಪಿದರೂ ಕೂಡ ಈ ಲೈನಿಂಗ್ ಮೂಲಕ ನೀರನ್ನು ಹಾಯಿಸುವುದರಿಂದ ಹೆಚ್ಚು ಪ್ರದೇಶದಲ್ಲಿ ನೀರಾವರಿ ಮಾಡಬಹುದು. ಪಾಶ್ಚಿಮಾತ್ಯ ದೇಶಗಳಲ್ಲಿ ಒಂದು ಟಿ.ಎಂ.ಸಿ.ಗೆ ೮ ರಿಂದ ೧೦ ಸಾವಿರ ಎಕರೆ ಜಮೀನಿನಲ್ಲಿ ಬೆಳೆ ಬೆಳೆಯುವ ವ್ಯವಸ್ಥೆ ಇದೆ. ಅದೇರೀತಿ ಇಲ್ಲಿಯೂ ಕೂಡ ಈ ವ್ಯವಸ್ಥೆಯನ್ನು ಮಾಡುವುದಕ್ಕೆ ನಮ್ಮ ಅಧಿಕಾರಿ ಬಂಧುಗಳು, ನಮ್ಮ ತಜ್ಞರು ದಯವಿಟ್ಟು ಹೆಚ್ಚಿನ ಆಲೋಚನೆ ಮಾಡಿ ಹೆಚ್ಚು ನೀರು ಪೋಲಾಗದ ಹಾಗೆ ಮತ್ತು ದುರುಪಯೋಗವಾಗದ ಹಾಗೆ ಮಾಡಿದರೆ ಬಹುಶಃ ೨೦ ಪರ್ಸೆಂಟ್ ನೀರನ್ನು ಉಪಯೋಗ ಮಾಡಿಕೊಂಡರೂ ಎರಡರಷ್ಟು ಬೆಳೆ ಬೆಳೆಸಲಿಕ್ಕೆ ಸಾಧ್ಯತೆ ಇದೆ. ಇಂತಹ ಕಡೆಗೆ ನಮ್ಮ ನೀರಾವರಿ ತಜ್ಞರು ಗಮನಹರಿಸಬೇಕು. ಈ ಬಗ್ಗೆ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡಿ ಪರಿಣಾಮಕಾರಿಯಾಗಿ ಯೋಜನೆಗಳನ್ನು ಜಾರಿಗೆತರಲು ಸರ್ಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡಬೇಕೆಂದು ನಾನು ಅಧಿಕಾರಿಗಳಿಗೆ ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರೇ ತಮಗೆ ಗೊತ್ತಿರುವ ಹಾಗೆ ನಂಜನಗೂಡಿನಲ್ಲಿ ಹುಲ್ಲಹಳ್ಳಿ ನಾಲೆ ಮತ್ತು ರಾಮಪುರ ನಾಲೆ ಅಂತ ಇದೆ. ಇವೆರಡೂ ೧೦೦-೧೫೦ ವರ್ಷಗಳಷ್ಟು ಪುರಾತನವಾದಂಥ ನಾಲೆಗಳು. ಇಲ್ಲಿ ನೀರು ಬಿಡಬೇಕಾದರೆ ನೀರಾವರಿ ಸಲಹಾಸಮಿತಿಯಲ್ಲಿ ಸದಸ್ಯರು ಅಧಿಕಾರಿಗಳು ಮತ್ತು ರಾಜಕಾರಣಿಗಳು ಭಯಪಡಬೇಕಾಗುತ್ತದೆ. ಈ ಕಾಲುವೆ ಒಡೆದುಹೋಗಬಹುದು ಎಂಬ ಭಾವನೆಯಿಂದ ಹೆದರಿಕೊಂಡೇ ನೀರನ್ನು ಬಿಡತಕ್ಕಂಥ ಪರಿಸ್ಥಿತಿ ಇದೆ. ನಾಳೆ ಸರ್ಕಾರಕ್ಕೆ ಕೂಡ ಇದರಿಂದ ಕೆಟ್ಟ ಹೆಸರು ಬರುತ್ತದೆ. ಈ ಕಾಲುವೆಯನ್ನು ದುರಸ್ತಿ ಪಡಿಸದೇ ಹೋದರೆ ನಮ್ಮಷ್ಟು ಮೂರ್ಖರು ಬೇರೆ ಯಾರೂ ಇರುವುದಿಲ್ಲ. ಕಳೆದ ಸಲ ನಾನು ಇದರ ಬಗ್ಗೆ ಮಾತನಾಡಿದಂಥ ಸಂದರ್ಭದಲ್ಲಿ ಶ್ರೀ ದೇವೇಗೌಡರು ಇದನ್ನು ದುರಸ್ತಿ ಮಾಡಲು ಸಿಕ್ಕಾಪಟ್ಟೆ ಖರ್ಚಾಗುತ್ತದೆ. ಸಧ್ಯಕ್ಕೆ ಇದನ್ನು ೮ ಕೋಟಿ ರೂಪಾಯಿಗಳಲ್ಲಿ ಮಾಡಿಫೈ ಮಾಡಿ ಎಲ್ಲಿ ಅವಶ್ಯಕವಾಗಿ ರಿಪೇರಿ ಮಾಡಬೇಕೋ ಅದನ್ನು ಮಾಡಲಿಕ್ಕೆ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಇದನ್ನು ಮಾಡಿಸಿಕೊಡುತ್ತೇನೆ ಎಂದು ಭರವಸೆಯನ್ನು ನೀಡಿದ್ದರು. ಆದರೆ ಇದುವರೆಗೂ ಅದು ಭರವಸೆ ಯಾಗಿಯೇ ಉಳಿದುಕೊಂಡಿದೆ. ಶ್ರೀ ಬೊಮ್ಮಾಯಿಯವರು ದಕ್ಷ ಮಂತ್ರಿಗಳು. ಈಗಲಾದರೂ ಇವರು ಇದರ ಕಡೆಗೆ ಗಮನಕೊಟ್ಟು ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ರಾಮಪುರ-ಹುಲ್ಲಹಳ್ಳಿ ನಾಲೆಯನ್ನು ರಿಪೇರಿ ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ನಾವು ಕಣ್ಣು ಮುಚ್ಚಿಕೊಂಡು ಕುಳಿತರೆ ನೂರಾರು ಕೋಟಿ ರೂಪಾಯಿಗಳ ನಷ್ಟ ಆಗಬಹುದು. ಕಾಲುವೆ ಒಡೆದು ರೈತರು ಏನು ಬೆಳೆ ಬೆಳೆದಿರುತ್ತಾರೆ, ಅದು ನಾಶವಾಗಬಹುದು. ಎರಡು ಕೋಟಿ ರೂಪಾಯಿ ಖರ್ಚು ಮಾಡುವುದನ್ನು ಉಳಿಸಲಿಕ್ಕೆ ಹೋಗಿ ನಾಳೆ ಹತ್ತಾರು ಕೋಟಿ ರೂಪಾಯಿ ನಷ್ಟ ಆಗುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈಗಲೇ ನಾವು ಎಚ್ಚೆತ್ತುಕೊಳ್ಳಬೇಕು. ಆದ್ದರಿಂದ ಆದ್ಯತೆ ಮೇರೆಗೆ ಈ ರಾಮಪುರ-ಹುಲ್ಲಹಳ್ಳಿ ನಾಲೆಯನ್ನು ರಿಪೇರಿ ಮಾಡಲಿಕ್ಕೆ ಹಣ ಮೀಸಲಿಡಲಿಕ್ಕೆ ಸರ್ಕಾರ ಸೂಕ್ತವಾದಂಥ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ಸಣ್ಣ ನೀರಾವರಿ ಬಗ್ಗೆ ಹೇಳಬೇಕೆಂದರೆ ಕರ್ನಾಟಕ ರಾಜ್ಯದಲ್ಲಿ ಸುಮಾರು ೩೦-೪೦ ಪರ್ಸೆಂಟ್‌ನಷ್ಟು ಜಿಲ್ಲೆಗಳು ಯಾವುದೇ ತರಹದ ನೀರಾವರಿ ಯೋಜನೆಗಳನ್ನು ಹೊಂದಿಲ್ಲ. ಇಂತಹ ಸಣ್ಣ ನೀರಾವರಿಗೆ ಸಣ್ಣ ಸಣ್ಣ ಕೆರೆಕಟ್ಟೆಗಳು ಇದ್ದರೂ ಐನೂರು-ಸಾವಿರ-ಸಾವಿರದೈನೂರು ಎಕರೆ ಜಮೀನುಗಳಿಗೆ ಅನುಕೂಲವಾಗುತ್ತದೆ. ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಮಾಡುವ ಸಂದರ್ಭದಲ್ಲಿ ಮಾಡೋಣ. ಆದರೆ ಬರಗಾಲ ಪೀಡಿತ ಜಿಲ್ಲೆಯ ಹಳ್ಳಿಗಳಲ್ಲಿ ಸಣ್ಣ ಸಣ್ಣ ಕೆರೆಕಟ್ಟೆಗಳು ಇದ್ದರೆ ಒಳ್ಳೆಯದು, ಹಿಂದೆ ಮಳೆಗಾಲದಲ್ಲಿ ಬೀಳತಕ್ಕಂಥ ಮಳೆಯ ನೀರನ್ನು ಶೇಖರಣೆ ಮಾಡುವುದಕ್ಕೆ

ಪ್ರತಿಯೊಂದು ಹಳ್ಳಿಯಲ್ಲಿ ಗೋಕಟ್ಟೆಗಳು ಇದ್ದವು. ದನಕರುಗಳು ಮೈತೊಳೆಯುವುದಕ್ಕೆ, ಬಟ್ಟೆ ಒಗೆಯುವುದಕ್ಕೆ ಇಂತಹ ಅನುಕೂಲತೆಗಳು ಇದ್ದವು. ಇವತ್ತು ಈ ಕಟ್ಟೆಗಳು ಹೂತುಹೋಗತಕ್ಕಂಥ ಪರಿಸ್ಥಿತಿ ಇದೆ. ಎಷ್ಟೋ ಹಳ್ಳಿಗಳಿಗೆ ಕಟ್ಟೆಗಳು ಕೂಡ ಇಲ್ಲ. ಈಗ ಇವುಗಳನ್ನು ಜಿಲ್ಲಾಪರಿಷತ್ತುಗಳಿಗೆ ವಹಿಸಬೇಕೋ ಅಥವಾ ನೀರಾವರಿ ಇಲಾಖೆಗೆ ವಹಿಸಬೇಕೋ ಎಂಬ ಜಿಜ್ಞಾಸೆಗೆ ಒಳಗಾಗಿ ಜಿಲ್ಲಾ ಪರಿಷತ್ತನ್ನು ಕೇಳಿದರೆ ಅವರು ನೀರಾವರಿ ಇಲಾಖೆ ಬಗ್ಗೆ ಹೇಳುತ್ತಾರೆ. ನೀರಾವರಿ ಇಲಾಖೆಗೆ ಹೋಗಿ ಕೇಳಿದರೆ ಅವರು ಜಿಲ್ಲಾ ಪರಿಷತ್ತುಗಳಿಗೆ ಟ್ರಾನ್ಸ್‌ಫರ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ.

ಆದರೆ, ಇದು ಅವಶ್ಯಕ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಎಷ್ಟು ಮುಖ್ಯವೋ ಅದಕ್ಕಿಂತ ಹೆಚ್ಚು ಮುಖ್ಯ ಈ ಸಣ್ಣ ನೀರಾವರಿ ಯೋಜನೆಗಳು. ಇದರಿಂದ ದನಕರುಗಳ ಮೈ ತೊಳೆಯುವುದಕ್ಕೆ ಬಟ್ಟೆ ಒಗೆಯುವುದಕ್ಕೆ ಮುಂತಾದ ಕೆಲಸಗಳಿಗೆ ಹಳ್ಳಿಗಳಲ್ಲಿ ಒಂದು ಕೆರೆ ಇದ್ದರೆ ನೋಡುವುದಕ್ಕೆ ಆನಂದವಾಗುತ್ತದೆ. ಇಲ್ಲದೇ ಹೋದರೆ ಈ ಬರಗಾಲದ ದೃಶ್ಯವನ್ನು ನೋಡಿದರೆ ಕಣ್ಣೀರು ಬರುತ್ತದೆ. ಆದ್ದರಿಂದ ಸಣ್ಣ ನೀರಾವರಿ ಇಲಾಖೆಯವರು ಇತ್ತಕಡೆ ಗಮನಹರಿಸಬೇಕೆಂದು ನಾನಾದರೂ ಕೂಡ ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ನೀರಾವರಿ ಬಗ್ಗೆ ಮಾನ್ಯ ಶಿವನಂಜಪ್ಪನವರು ಮತ್ತು ಮಾನ್ಯ ರಾಜುಗೌಡರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಸ್ವಾಮಿ ಈ ನಗ ನಾಣ್ಯ, ಚಿನ್ನ ಹಾಕಿಕೊಂಡರೆ ನಮ್ಮ ಹೊಟ್ಟೆ ತುಂಬುವುದಿಲ್ಲ. ನಗ ನಾಣ್ಯ ಇರತಕ್ಕ ಜನಗಳ ಹತ್ತಿರ ಸರ್ಕಾರ ಕೇಳಿಕೊಂಡರೆ, ಅವರು ಅದನ್ನು ಕೊಡುವುದು ಕಷ್ಟವಾಗುತ್ತದೆ. ಆಗ ಕ್ರಾಂತಿಕರವಾದ ಬದಲಾವಣೆ ತರುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರ ಒಂದು ಬದಲಾವಣೆಯ ನಿರ್ಧಾರವನ್ನು ತೆಗೆದುಕೊಳ್ಳಬಹುದು. ಏನೆಂದರೆ, ಇವತ್ತು ಗುಡಿ, ದೇವಸ್ಥಾನಗಳಲ್ಲಿ ಅನೇಕ ರೀತಿಯ ಆಭರಣಗಳು ಮತ್ತು ಹಣ ಶೇಖರಣೆಯಾಗಿದೆ. ಮಹದೇಶ್ವರ ಬೆಟ್ಟದ ದೇವಸ್ಥಾನ ಮತ್ತಿತರ ರಾಜ್ಯಾದ್ಯಂತ ಇರತಕ್ಕ ದೇವಸ್ಥಾನಗಳಲ್ಲಿ ಕೋಟ್ಯಾಂತರ ಲಕ್ಷಾಂತರ ರೂಪಾಯಿಗಳ ಚಿನ್ನದ ಆಭರಣಗಳು ಇವೆ. ಈ ಆಭರಣಗಳು ಮತ್ತು ಇರತಕ್ಕ ಹಣವನ್ನು ನಾವು ಈ ನೀರಾವರಿ ಕಾರ್ಯಗಳಿಗೆ ಏಕೆ ಉಪಯೋಗಿಸಿಕೊಳ್ಳಬಾರದು ?...

ಶ್ರೀ ಬಿ. ಲಕ್ಕಪ್ಪ.—ಈಗಾಗಲೇ ದೇವಸ್ಥಾನಗಳಿಗೆಂದು ಇದ್ದ ಆಸ್ತಿಗಳೆಲ್ಲಾ ಹಾಳಾಗಿ ಹೋಗಿವೆ, ಈಗ ಇದನ್ನೂ ಕಿತ್ತುಕೊಂಡರೆ ಅವರು ಏನು ಮಾಡಬೇಕು ?...

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆ ಅತ್ಯುತ್ತಮವಾದುದು; ಸರ್ಕಾರದ ಈಗಿನ ಪರಿಸ್ಥಿತಿಗೆ ಅವರ ಸಲಹೆ ಸಹಾಯಕವಾಗಿದೆ. ದಯಮಾಡಿ ಆ ರೀತಿ ಮಾಡಿ.

ಶ್ರೀ ಬಿ. ಲಕ್ಕಪ್ಪ.—ಲ್ಯಾಂಡ್‌ರಿಫಾರ್ಮ್ಸ್‌ನಲ್ಲಿ ದೇವಸ್ಥಾನಗಳಿಗೆ ರಿಯಾಯಿತಿ ಕೊಡದೇ ಅವುಗಳಿಗೆ ಇದ್ದಂಥ ಆಸ್ತಿ ಗೇಣಿದಾರರ ಪರವಾಗಿ ಹೋಗಿದೆ. ಈಗ ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರಗಳೂ ನಡೆಯುವುದಿಲ್ಲ. ಇನ್ನು ಇರುವಂತಹ ಆಭರಣಗಳು ಮತ್ತೊಂದು ಕಿತ್ತುಕೊಂಡರೆ ಬಹುಶಃ ಇವುಗಳನ್ನು ಹಾಳು ಬಿಡಬೇಕಾಗುತ್ತದೆ. ತಾವು ದಯಮಾಡಿ ಇದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದರ ಅರ್ಥ ಏನೆಂದರೆ, ರಾಜ್ಯದ ನೀರಾವರಿಯನ್ನು ದೇವರೇ ಕಾಪಾಡಬೇಕು....

ಶ್ರೀ ಡಿ. ಟಿ. ಜಯಕುಮಾರ್.—ಇದರ ತಾತ್ಪರ್ಯ ಏನೆಂದರೆ ದೇವಸ್ಥಾನಗಳಲ್ಲಿ ಹಣ ಸುಮ್ಮನೆ ಬಿದ್ದಿರುತ್ತದೆ. ಇದನ್ನು ನೀರಾವರಿ ಯೋಜನೆಗಳಿಗೆ ಉಪಯೋಗ ಮಾಡಿಕೊಂಡರೆ, ಸಾವಿರಾರು ಎಕರೆ ಜಮೀನಿಗೆ ನೀರಾವರಿ ಅನುಕೂಲ ದೊರೆತು, ರೈತರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳಬಹುದು. ದೇವಸ್ಥಾನಗಳಲ್ಲಿ ಹಣ ಸುಮ್ಮನೆ ಇದ್ದರೆ ಏನು ಪ್ರಯೋಜನ ಬರುತ್ತದೆ ? ಏನೋ ದೇವರ ಮೇಲೆ ಒಂದು ಚಿನ್ನದ ಕಿರೀಟ ಇರಬೇಕು ಎಂಬ ಭಾವನೆ ಜನರಲ್ಲಿ ಇದೆ. ಆದರೆ ಇವತ್ತು ದೇವರಿಗೆ ಭಕ್ತಿ ಬೇಕೇ ಹೊರತು ಆಡಂಬರ ಬೇಕಾಗಿಲ್ಲ. ಇಂತಹ ಸಂದರ್ಭದಲ್ಲಿ ಆಡಂಬರ ಬಿಟ್ಟು ಇಂತಹ ಉಪಯುಕ್ತವಾದ ಕೆಲಸಕ್ಕೆ ಹಣ ಅಥವಾ ಚಿನ್ನವನ್ನು ಉಪಯೋಗ ಮಾಡಿಕೊಂಡರೆ ೨೦-೩೦ ವರ್ಷಗಳಿಂದ ನನೆಗುದಿಗೆ ಬಿದ್ದಿರತಕ್ಕಂಥ ನೀರಾವರಿ ಯೋಜನೆಗಳನ್ನು ಪೂರ್ಣಮಾಡಿ,

ನೀರಾವರಿಗೆ ಅನುಕೂಲ ಮಾಡಿಕೊಳ್ಳಬಹುದು ಎಂಬ ಸಲಹೆಯನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟು, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಶ್ರೀ ಎಸ್. ಬಂಗಾರಪ್ಪ ಮತ್ತು ಶ್ರೀ ಪ್ರಭಾಕರ ರಾಣೆ ಅವರು ಹಾಜರಿರಲಿಲ್ಲ).

† ಶ್ರೀ ಡಿ.ಎ. ಚಿನ್ನಪ್ಪ (ಮಡಕೇರಿ) —ಅಧ್ಯಕ್ಷರೇ ನೀರಾವರಿ, ಭೂ ಕಂದಾಯ, ಸಣ್ಣನೀರಾವರಿ ಮುಂತಾದ ಈ ಬೇಡಿಕೆಗಳ ಮೇಲೆ ಎರಡು ಮಾತುಗಳನ್ನಾಡಲು ಇಚ್ಛಿಪಡುತ್ತೇನೆ. ಈ ಸಣ್ಣ ನೀರಾವರಿ ಮೇಲೆ ಈಗಾಗಲೇ ಬಹಳ ಸ್ವಾರಸ್ಯಕರವಾಗಿ ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ನಾನು ಈ ವಿಚಾರದಲ್ಲಿ ಯಾವ ರೀತಿಯಾಗಿ ರಿಸೋರ್ಸಸ್ ಹೆಚ್ಚು ಮಾಡಬೇಕೆಂಬ ಬಗ್ಗೆ ಹಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಪುರಾತನ ಕಾಲದಲ್ಲಿ ಮಾಡಿರತಕ್ಕಂಥ ಲಕ್ಷಗಟ್ಟಲೆ ದೊಡ್ಡದೊಡ್ಡ ನೀರಾವರಿ ಟ್ಯಾಂಕ್‌ಗಳು ಇವತ್ತು ಏನಾಗಿವೆ ಎಂದರೆ, ಹಿಲ್ಟ ಬಿದ್ದು, ಮುಚ್ಚಿಹೋಗುವಂಥ ಪರಿಸ್ಥಿತಿಗೆ ಬಂದಿವೆ. ಇಂತಹ ಟ್ಯಾಂಕ್‌ಗಳ ಹಿಲ್ಟ ತೆಗೆದು, ರಿಪೇರಿ ಮಾಡಿದರೆ ಮಳೆಗಾಲದಲ್ಲಿ ಬೇಕಾದಷ್ಟು ನೀರನ್ನು ಶೇಖರಣೆ ಮಾಡಬಹುದು. ಹಿಂದೆ, ತಾತ ಮುತ್ತಾತನ ಕಾಲದಲ್ಲಿ ಹೆಚ್ಚು ನೀರು ನಿಲ್ಲುತ್ತಿದ್ದುದರಿಂದ, ಆಗಿನ ಕಾಲದಲ್ಲಿ ಸರಿಯಾದ ರೀತಿಯಲ್ಲಿ ವ್ಯವಸಾಯ ಮಾಡುತ್ತಿದ್ದರು. ಆದರೆ ಇವು, ಇಂದು ಹಿಲ್ಟ್ ತುಂಬಿಕೊಂಡು ನೀರು ಹೆಚ್ಚು ನಿಲ್ಲುತ್ತಾ ಇಲ್ಲ. ಆದ್ದರಿಂದ ಇವುಗಳನ್ನು ರಿಪೇರಿ ಮಾಡಿ, ಈ ಹಿಲ್ಟ್ ತೆಗೆದರೆ. ಹೆಚ್ಚು ನೀರು ನಿಲ್ಲುತ್ತದೆ. ಮತ್ತು ಈ ಹಿಲ್ಟ್ ಗೊಬ್ಬರವೂ ಆಗುತ್ತದೆ, ವ್ಯವಸಾಯಕ್ಕೂ ಹೆಚ್ಚು ಪ್ರಯೋಜನವಾಗುತ್ತದೆ. ಈ ರೀತಿಯ ಕೆಲಸವನ್ನು ಮಾಡಿದರೆ, ಬಹಳಷ್ಟು ಭೂಮಿಯಲ್ಲಿ ವ್ಯವಸಾಯ ಮಾಡುವುದರ ಜೊತೆಗೆ, ಎರಡುಮೂರು ಬೆಳೆ ತೆಗೆಯುವಂಥ ಸಂದರ್ಭವೂ ಸಿಗುತ್ತದೆ. ಇನ್ನು ಮೈನರ್ ಇರಿಗೇಷನ್ ಏನಿದೆ, ಇದಕ್ಕೆ ಬೇರೆಯೇ ಒಂದು ಡಿಪಾರ್ಟ್‌ಮೆಂಟ್ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಎಂ.ಐ.ಡಿ ಎಂದು ಪ್ರತ್ಯೇಕವಾಗಿ ಮಾಡಿ, ಇಷ್ಟು ಅಚ್ಚುಕಟ್ಟುದಾರರಿಗೆ ೧೦ ಎಕರೆ, ೨೫ ಎಕರೆ, ೫೦ ಎಕರೆ ಎಂದು ಒಂದು ಹಂತದಲ್ಲಿಟ್ಟು, ಈ ಮೈನರ್ ಇರಿಗೇಷನ್ ಕೆಲಸವನ್ನು ಇಂಪ್ರೂವ್ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು. ಈ ಮೈನರ್ ಇರಿಗೇಷನ್‌ನಲ್ಲಿ ಕೆಲವು ಟ್ಯಾಂಕ್‌ಗಳನ್ನು ಮಾಡುತ್ತಾರೆ, ಎಲ್ಲಿ ನೀರು ಶೇಖರಣೆ ಆಗುವುದಿಲ್ಲ, ಅಂತಹ ಜಾಗದಲ್ಲಿ ಈ ಟ್ಯಾಂಕುಗಳನ್ನು ಮಾಡಿದ್ದಾರೆ ಇದರಿಂದ ಬಹಳಷ್ಟು ಟ್ಯಾಂಕ್‌ಗಳಲ್ಲಿ ನೀರೇ ಇಲ್ಲ. ಮಲೆನಾಡು ಪ್ರದೇಶಗಳಲ್ಲಿ ಲಕ್ಷಗಟ್ಟಲೆ, ಸಾವಿರಗಟ್ಟಲೆ ಸಣ್ಣ ಸಣ್ಣ ಹೊಳೆಗಳು ಹರಿಯುತ್ತವೆ, ಇವುಗಳಿಂದ ಅಲ್ಲಿಯ ಜನರಿಗೆ ಏನೂ ಪ್ರಯೋಜನ ಆಗುತ್ತಾ ಇಲ್ಲ, ಇವುಗಳ ನೀರೆಲ್ಲಾ ದೊಡ್ಡದೊಡ್ಡ ನದಿಗಳಿಗೆ ಸೇರುತ್ತದೆ. ಈ ರೀತಿ ಹರಿಯುತಕ್ಕ ನೀರಿಗೆ ಸಣ್ಣ ಸಣ್ಣ ಕಟ್ಟೆಗಳನ್ನು ಕಟ್ಟಿ, ಮಲೆನಾಡಿನಲ್ಲಿ ಬೆಳೆಯುತಕ್ಕ ಬೆಳೆಗಳಿಗೆ ಆ ನೀರನ್ನು ಉಪಯೋಗ ಮಾಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಈ ಹಿಂದೆ ಕೊಡಗಿನಲ್ಲಿ ಇಂತಹ ಬೇಕಾದಷ್ಟು ಕಟ್ಟೆಗಳನ್ನು ಮಾಡಿ, ಹೆಚ್ಚಿನ ಭೂಮಿಯಲ್ಲಿ ನೀರಾವರಿ ಮಾಡಿರುವುದು ಬಹಳ ಚೆನ್ನಾಗಿ ಇರುತ್ತದೆ.

ಆದರೆ ಇವತ್ತು ಏನಾಗಿದೆ ಎಂದರೆ, ಕರ್ನಾಟಕ ಸರ್ಕಾರದವರು ಅದನ್ನು ನೆಗ್ಲೆಕ್ಟ್ ಮಾಡಿ ಇದ್ದ ಸಣ್ಣ ಸಣ್ಣ ಪಿಕಪ್‌ಗಳೆಲ್ಲಾ ಒಡೆದು ಹೋಗಿ, ಆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ, ಬಹಳಷ್ಟು ನೀರು ವ್ಯರ್ಥವಾಗಿ ಹೋಗುತ್ತಿದೆ. ಇದಕ್ಕೆ ಒಂದು ಯೋಜನೆಯನ್ನು ಕೈಗೊಳ್ಳಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ. ಇದನ್ನು ಹಂತಹಂತದಲ್ಲಿ ಮಾಡಬೇಕು ಹಾಗೂ ಮೈನರ್ ಇರಿಗೇಷನ್‌ಗೆ ಒಂದು ಪ್ರತ್ಯೇಕ ಡಿಪಾರ್ಟ್‌ಮೆಂಟ್ ಮಾಡಬೇಕೆಂದು ಹೇಳುತ್ತೇನೆ. ಮತ್ತು ಅವರನ್ನು ಇದಕ್ಕೆ ರೆಸ್ಪಾನ್ಸಿಬಲ್ ಮಾಡುವ ವ್ಯವಸ್ಥೆಯನ್ನು ಸರಕಾರ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಸರ್ಕಾರದವರು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. ಆ ಕಾರ್ಪೊರೇಷನ್‌ನಿಂದ ಇದುವರೆಗೆ ಯಾವುದೇ ಪ್ರಯೋಜನವಾಗಿಲ್ಲ. ಮತ್ತು, ಅವರಿಂದ ಯಾವುದೇ ಲಿಫ್ಟ್ ಇರಿಗೇಷನ್ ಕೆಲಸಗಳು ಕಾರ್ಯಗತವಾಗಿಲ್ಲ. ಈ ಕಾರ್ಪೊರೇಷನ್ ಆಗುವುದಕ್ಕಿಂತ ಮುಂಚೆಯೇ ಕೆಲವು ಲಿಫ್ಟ್ ಇರಿಗೇಷನ್‌ಗಳನ್ನು ಮಾಡಿರುತ್ತಾರೆ. ಆದರೆ ಅವುಗಳಿಗೆ ವಿದ್ಯುತ್ ಕೊರತೆ ಇದ್ದು ಅಲ್ಲಿಂದ ನೀರು ಲಿಫ್ಟ್ ಆಗುತ್ತಿಲ್ಲ ಆದರಿಂದ ಬಹಳಷ್ಟು ಭೂಮಿ ವ್ಯವಸಾಯಕ್ಕೆ ಬರದೇ ಹಾಳಾಗಿದೆ. ಇದನ್ನು ಸರಿಯಾದ ರೀತಿ ಕಾರ್ಯಗತ ಮಾಡಬೇಕು ಹಾಗೂ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್‌ನವರು ಇವರೊಂದಿಗೆ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಆಮೇಲೆ ನಮ್ಮ ಕೊಡಗಿನಲ್ಲಿ ಹಾರಂಗಿ ಪ್ರಾಜೆಕ್ಟ್ ಇದೆ. ಸುಮಾರು ಇಪ್ಪತ್ತು ವರ್ಷಗಳಾದರೂ ಅದು ಪೂರ್ಣವಾಗಿಲ್ಲ, ಅದರಿಂದ ತುಮಕೂರು ಜಿಲ್ಲೆಗೆ ನೀರು ಬರುತ್ತದೆ, ಮೈಸೂರು ಜಿಲ್ಲೆಗೆ ಅದರಿಂದ ನೀರು ಸಿಗುತ್ತದೆ, ಈಗಾಗಲೇ ಹುಣಸೂರು ತಾಲ್ಲೂಕಿಗೆ ಅದರಿಂದ ಪ್ರಯೋಜನ ಆಗಿದೆ, ಆದಕಾರಣ ಅದನ್ನು ಬೇಗ ಪೂರ್ಣ ಮಾಡುವ ವ್ಯವಸ್ಥೆ ಮಾಡಬೇಕು. ಹಣ ಖರ್ಚು ಮಾಡದೆ ಇಂತಹ ಒಳ್ಳೆಯ ಯೋಜನೆಗಳನ್ನು ಕಾರ್ಯಗತ ಮಾಡದಿದ್ದರೆ ನಮ್ಮ ಇರಿಗೇಷನ್ ಫೆಸಿಲಿಟಿಯನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಕೊಡಗಿನಲ್ಲಿ ಬರಪೊಳೆ ಪ್ರಾಜೆಕ್ಟ್ ಎಂದು ೧೨ ವರ್ಷಗಳ ಹಿಂದೆ ಪ್ರಾರಂಭ ಮಾಡಿದರು. ಅದು ಅರ್ಧಕ್ಕೇ ಬಂದು ಹಾಗೇ ನಿಂತಿದೆ. ಇನ್ನೂ ಪೂರ್ತಿಯಾಗಿಲ್ಲ. ಕೊಡಗಿನಲ್ಲಿ ಹಾರಂಗಿ ಮತ್ತು ಬರಪೊಳೆ ಇವೆರಡೇ ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳಾಗಿದ್ದು ಇವೆರಡೂ ಪೂರ್ಣವಾಗಿಲ್ಲ. ಅದನ್ನು ಪೂರ್ಣ ಮಾಡುವ ವ್ಯವಸ್ಥೆ ಮಾಡಬೇಕು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದನ್ನು ಮಾಡುವಲ್ಲಿ ಒಂದು ವರ್ಷ ಲೇಟ್ ಮಾಡಿದರೂ ಸಹ ಎಸ್ಟಿಮೇಟ್ ಪುನಃ ಬದಲಾವಣೆಯಾಗಿ ವೆಚ್ಚ ಹೆಚ್ಚಾಗುತ್ತದೆ. ಈ ಸಂದರ್ಭದಲ್ಲಿ ಸರ್ಕಾರ ದುಡ್ಡಿಲ್ಲದೆ ಏನೂ ಮಾಡಂತಿಲ್ಲ. ಹೀಗೆ ಅನೇಕ ವರ್ಷಗಳು ಕಳೆಯುತ್ತಾ ಇದ್ದು ಯಾವ ಪ್ರಾಜೆಕ್ಟ್‌ಗಳೂ ಕಾರ್ಯಗತವಾಗುತ್ತಿಲ್ಲ. ಇದರ ಬಗ್ಗೆ ಗಮನಹರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರೇ, ಆಮೇಲೆ ರೆವಿನ್ಯೂ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳಬಯಸುತ್ತೇನೆ. ಕೊಡಗಿನಲ್ಲಿ ಜಮ್ಮಾ ಲ್ಯಾಂಡ್ಸ್ ಎಂದು ಇದೆ. ಇದು ರಾಜರ ಕಾಲದಲ್ಲಿ ಜನತೆಗೆ ಕೊಟ್ಟಿರತಕ್ಕಂಥ ಭೂಮಿ, ಈಗ ಸರ್ಕಾರದವರು ಇದು ನಿಮಗೆ ಕೊಟ್ಟ ಭೂಮಿ ಅಲ್ಲ ಎಂದು ಹೇಳುತ್ತಿದ್ದಾರೆ. ಭೂಮಿ ನಮ್ಮ ಕಡೆ ಇದೆ, ಜಮಾಬಂಧಿ ನಮ್ಮ ಹೆಸರಿನಲ್ಲಿದೆ. ಅದನ್ನು ಮಾರಾಟ ಮಾಡುತ್ತೇವೆ, ನಾವೇ ಕಂದಾಯ ಕಟ್ಟುತ್ತೇವೆ. ಆದರೆ ಸರಕಾರ ಇವತ್ತು ಏನು ಹೇಳುತ್ತಿದೆ ಎಂದರೆ Jamma Lands are vested with Govt. ನೀವು ಮಾರಾಟ ಮಾಡುವ ಹಾಗೆ ಇಲ್ಲ, ಅದರ ಮೇಲೆ ಸಾಲ ತೆಗೆದುಕೊಳ್ಳುವ ಹಾಗೆ ಇಲ್ಲ ಎಂದು ಹೇಳುತ್ತಿದ್ದಾರೆ. ಇದರಿಂದ ಯಾವ ರೀತಿ ಅಭಿವೃದ್ಧಿ ಆಗದೆ ಆ ಭೂಮಿ ಉಳಿದಿದೆ. ಈಗ ೬ ತಿಂಗಳ ಹಿಂದೆ ಸರ್ಕಾರ ಒಂದು ಕಾನೂನನ್ನು ಹೊರಡಿಸಿದೆ. ಅದರ ಪ್ರಕಾರ ಯಾವರೀತಿಯಲ್ಲೂ ಈ ಭೂಮಿಯನ್ನು ರಿಜಿಸ್ಟರ್ ಮಾಡಿಸುವಂತಿಲ್ಲ ಇದರಿಂದ ಜನತೆಗೆ ಬಹಳಷ್ಟು ತೊಂದರೆಯಾಗಿದೆ, ಇದರ ಬಗ್ಗೆ ಒಂದು ವ್ಯವಸ್ಥೆ ಮಾಡಬೇಕು. ಮೂರು ವರ್ಷಗಳ ಹಿಂದೆ ಸರ್ಕಾರದವರು ಇದರ ಬಗ್ಗೆ ಒಂದು ಕಮಿಟಿಯನ್ನು ಮಾಡಿರುತ್ತಾರೆ. ಆ ಕಮಿಟಿಯಲ್ಲಿ ೫-೬ ಜನ ಮಂತ್ರಿಗಳು ಇರುತ್ತಾರೆ. ೫-೬ ಜನ ಸೆಕ್ರೆಟರಿಗಳು ಇರುತ್ತಾರೆ. ಇವತ್ತಿನವರೆಗೂ ಆ ಕಮಿಟಿಯವರು ಸಭೆ ಸೇರಿಲ್ಲ ಹಾಗೂ ಏನನ್ನೂ ಕಾರ್ಯಗತ ಮಾಡಿಲ್ಲ. ಹೋದವರ್ಷ ಮಾನ್ಯ ಮಂತ್ರಿಗಳು ಮಡಿಕೇರಿಗೆ ಬಂದಿದ್ದರು. ಜಮ್ಮಾ ಲ್ಯಾಂಡ್ಸ್ ಬಗ್ಗೆ ತಿಳಿದುಕೊಂಡು ಅದರ ಬಗ್ಗೆ ಒಂದು ರಿಪೋರ್ಟ್ ತೆಗೆದುಕೊಂಡು ಬಂದರು. ಆನಂತರ ಲಾ ಸೆಕ್ರೆಟರಿಯವರು ಬಂದು ಒಂದು ರಿಪೋರ್ಟ್ ತಂದರು. ಆದರೆ ಇದುವರೆಗೆ ಏನೂ ಆಗದೇ ಎಲ್ಲಾ ವ್ಯರ್ಥವಾಗಿ ನಿಂತಿದೆ. ಇದನ್ನು ಕಾರ್ಯಗತ ಮಾಡಬೇಕು. ಇದರಿಂದ ಜನತೆಗೆ ಬಹಳಷ್ಟು ತೊಂದರೆಯಾಗಿದೆ, ಆ ಭೂಮಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಆಗದೇ ಜನತೆ ಬಹಳಷ್ಟು ಕಷ್ಟಪಡುತ್ತಿದ್ದಾರೆ. ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಂಡು ಆ ಕಮಿಟಿ ಮೀಟಿಂಗ್ ಮಾಡಿ ಏನಾದರೂ ಒಂದು ತೀರ್ಮಾನ ಮಾಡಬೇಕು. ಇದು ಜನತೆಯದು ಇಲ್ಲ ಸರ್ಕಾರದ್ದು ಎಂಬ ತೀರ್ಮಾನ ಮಾಡಬೇಕು. ಈ ಭೂಮಿಯನ್ನು ಜನರು ನೂರಾರು ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಇದರ ಬಗ್ಗೆ ಒಂದು ವ್ಯವಸ್ಥೆ ಮಾಡಬೇಕು.

೫-೩೦ ಪಿ. ಎಂ.

ಸರ್ವೆ ಡಿಪಾರ್ಟ್‌ಮೆಂಟ್ ಒಂದು ನಮ್ಮ ರಾಜ್ಯದಲ್ಲಿದೆ. ಈ ಡಿಪಾರ್ಟ್‌ಮೆಂಟ್ ಯಾರ ಅತಾರ್ಟಿಯಲ್ಲಿಯೂ ಇಲ್ಲ. ಸರ್ವೆ ಕೆಲಸ ಇವರು ಯಾವಾಗ ಮಾಡುತ್ತಾರೋ, ಯಾವಾಗ ಕೆಲಸಕ್ಕೆ ಬರುತ್ತಾರೋ ಎಷ್ಟು ಹೊತ್ತಿಗೆ ಹೋಗುತ್ತಾರೋ ಒಂದೂ ಸಹ ಗೊತ್ತಾಗುವುದಿಲ್ಲ. ನಮ್ಮ ಕೊಡಗಿನಲ್ಲಿ ಸ್ಪೆಷಲ್ ಸರ್ವೆ ಮಾಡುತ್ತಿದ್ದಾರೆ. ಇವತ್ತು ನಮ್ಮ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಈ ಸರ್ವೆಗೆ ಸುಮಾರು ೧೫ ಕೋಟಿ ರೂಪಾಯಿಗಳು ಖರ್ಚಾಗಿದೆ. ಆದರೂ ಇನ್ನು ಒಂದು ತಾಲ್ಲೂಕು ಸಮೇತ ಸರ್ವೆ ಪೂರ್ತಿ ಆಗಿಲ್ಲ. ಇವರು ಸರ್ವೆ ಕೆಲಸ ತೆಗೆದುಕೊಂಡು ೭ ವರ್ಷಗಳಾದವು. ಇನ್ನು

ಇಡೀ ಕೊಡಗಿನ ಲ್ಯಾಂಡ್ಸ್‌ನ್ನು ಸರ್ವೆ ಮಾಡಬೇಕಾದರೆ ಎಷ್ಟು ಕೋಟಿ ರೂಪಾಯಿಗಳಾಗುತ್ತದೆ. ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ಸರ್ವೆ ಮಾಡುವ ಅವಶ್ಯಕತೆ ಇಲ್ಲ. ಹಿಂದೆ ಸರ್ವೆ ಮಾಡಿದ್ದಾರೆ, ಈಗ ಸರ್ವೆ ಮಾಡುವಂತಹ ಅವಶ್ಯಕತೆ ಇಲ್ಲ. ಈ ಡಿಪಾರ್ಟ್‌ಮೆಂಟ್‌ನವರು ಏನೂ ಕೆಲಸ ಮಾಡುತ್ತಿಲ್ಲ. ಈ ಡಿಪಾರ್ಟ್‌ಮೆಂಟ್ ಹಿಂದೆ ಯಾವ ರೀತಿಯಲ್ಲಿ ಜಿಲ್ಲಾಧಿಕಾರಿಗಳ ಕೈಕೆಳಗೆ ಇತ್ತೋ ಅದೇ ರೀತಿ ಈಗ ಅವರ ಕೈಕೆಳಗೆ ಕೊಟ್ಟು ಅವರ ಕಂಟ್ರೋಲ್‌ನಲ್ಲಿರುವಂತೆ ಮಾಡಿದರೆ ಕೆಲಸ ಸಲಭವಾಗಿ ಆಗುತ್ತದೆ, ಇಲ್ಲದಿದ್ದರೆ ಸುಲಭವಾಗಿ ಕೆಲಸವಾಗುವುದಿಲ್ಲ. ಈ ಸರ್ವೆ ಡಿಪಾರ್ಟ್‌ಮೆಂಟ್‌ನಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವೇ ವಿನಃ ಪ್ರಯೋಜನವೇನೂ ಆಗುವುದಿಲ್ಲ. ಇನ್ನು ಬಹಳಷ್ಟು ಜನ ಸಣ್ಣ ಸಣ್ಣ ಹಿಡುವಳಿದಾರರು ಸರ್ಕಾರಿ ಜಮೀನನ್ನು ಆಕ್ರಮಿಸಿಕೊಂಡಿದ್ದಾರೆ. ಪಾಪ ಅವರೆಲ್ಲಾ ಬಡವರು. ಆ ಬಡ ಜನರಿಗ ರೆವಿನ್ಯೂ ಇಲಾಖೆಯ ರೆವಿನ್ಯೂ ಇನ್ಸ್‌ಪೆಕ್ಟರ್ಸ್ ಮತ್ತು ವಿಲೇಜ್ ಅಕೌಂಟೆಂಟ್ಸ್ ಹೋಗಿ ಅವರು ವ್ಯವಸಾಯ ಮಾಡಿದ್ದ ಫಸಲನ್ನು ಕಿತ್ತುಕೊಂಡು ಹೋಗತಕ್ಕಂಥಾದ್ದು ಮತ್ತು ಅವರಿಗೆ ನಷ್ಟವನ್ನುಂಟುಮಾಡತಕ್ಕಂಥಾದ್ದು ಮತ್ತು ಆ ಜಮೀನಿನಿಂದ ಅವರನ್ನು ಹೊರಗಡೆ ಕಳುಹಿಸತಕ್ಕಂಥಾ ಕೆಲಸವನ್ನು ಮಾಡುತ್ತಿದ್ದಾರೆ. ಅದೇ ನೂರಾರು ಎಕರೆ, ಸಾವಿರಾರು ಎಕರೆ ಜಮೀನನ್ನು ಆಕ್ರಮಿಸಿ ಕೊಂಡಿರತಕ್ಕಂಥ ಐಶ್ವರ್ಯವಂತರ ಬಗ್ಗೆ ಇವರು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಇನ್ನು ಇವರು ಅವರ ಮನೆಗೆ ಹೋಗಿ ಚೆನ್ನಾಗಿ ಊಟ ಮಾಡಿ ಅವರು ಕೊಟ್ಟಿದ್ದನ್ನು ತೆಗೆದುಕೊಡು ಬರತಕ್ಕಂಥ ಪರಿಸ್ಥಿತಿ ಇದೆ ಯಾರು ೧೦-೧೫ ಎಕರೆಗಳಷ್ಟು ಜಮೀನನ್ನು ಎನ್‌ಕ್ರೋಜ್‌ಮೆಂಟ್ ಮಾಡಿಕೊಂಡಿದ್ದಾರೋ ಅಂತಹ ಬಡ ಜನರಿಗೆ ಸರ್ಕಾರದವರು ಅದನ್ನು ಅವರಿಗೆ ರೆಗ್ಯುಲೈಜ್ ಮಾಡಬೇಕು ಅದಕ್ಕೆ ಒಂದು ಕಾನೂನು ತಂದು ಈ ಮನೆಯಲ್ಲಿ ಸಹ ಮಂಡಿಸಿದ್ದರು ಆದರೂ ಅದರಿಂದ ಆ ಬಡವರ್ಗದ ಜನರಿಗೆ ಯಾವ ಪ್ರಯೋಜನವೂ ಆಗಲಿಲ್ಲ. ಆ ಕಾನೂನಿನಿಂದ ಐಶ್ವರ್ಯವಂತರಿಗೆ ಮಾತ್ರ ಪ್ರಯೋಜನವಾಗಿದೆ. ಈ ಬಡ ಜನರಿಗೆ ಸರ್ಕಾರದವರು ಅನುಕೂಲ ಮಾಡಿಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮತ್ತು ಕೊಡಗಿಗೆ ಸಂಬಂಧಪಟ್ಟಂತೆ ಒಂದು ಕಾನೂನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕಾನೂನು ಬರುವುದು ಇನ್ನು ಒಂದೆರಡು ವರ್ಷಗಳಾದರೂ ಆಗಬಹುದು. ತಕ್ಷಣಕ್ಕೆ ಈ ಸಣ್ಣ ಸಣ್ಣ ಹಿಡುವಳಿದಾರರಿಗೆ ಅನುಕೂಲವಾಗುವಂತೆ ಒಂದು ಕಾನೂನು ಮಾಡಬೇಕು. ಮತ್ತು ಈಗ ಇರತಕ್ಕಂಥ ಹಿಡುವಳಿದಾರರನ್ನು ಅಲ್ಲಿನ ಅಧಿಕಾರಿಗಳು ಎವಿಕ್ಷನ್ ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಕೂಡಲೆ ಒಂದು ಆರ್ಡಿನೆನ್ಸ್ ಅಥವಾ ನೋಟಿಫಿಕೇಶನ್ ಹೊರಡಿಸಿ ಆ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಆ ಬಡಜನರಿಗೆ ತೊಂದರೆಯಾಗುತ್ತದೆ, ಈ ಸಂಬಂಧವಾಗಿ ಈಗಾಗಲೇ ಎರಡು ಮೂರು ಕೇಸ್‌ಗಳು ಕೋರ್ಟಿನಲ್ಲಿ ನಡೆಯುತ್ತಿವೆ ಆದ್ದರಿಂದ ಸರ್ಕಾರದವರು ಬಡವರರಕ್ಷಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಸಬ್ ಡಿವಿಜನ್ ಫ್ರಾಗ್‌ಮೆಂಟೇಶನ್ ಪ್ರಕಾರ ಯಾರು ಪಕ್ಕದಲ್ಲಿ ಕೃಷಿ ಮಾಡುತ್ತಿರುತ್ತಾನೋ ಅವರಿಗೆ ಆ ಜಮೀನು ಮಾರಾಟ ಮಾಡಬೇಕು ಆದರೆ ಸೌತ್ ಕೆನರಾ ಡಿಸ್ಟ್ರಿಕ್ಟ್‌ನಲ್ಲಿ ಈ ಕಾನೂನು ಇಲ್ಲ, ಅವರಿಗೆ ಈ ಕಾನೂನನ್ನು ವಿತ್ ಡ್ರಾ ಮಾಡಿದ್ದೀರಿ ಕಾರಣ ಗೊತ್ತಿಲ್ಲ. ಇದರ ಪ್ರಕಾರ ಸೌತ್ ಕೆನರಾ ಡಿಸ್ಟ್ರಿಕ್ಟ್‌ಗೆ ಅನ್ವಯವಾಗುವುದಿಲ್ಲ. ಆದರೆ ನಾರ್ತ್ ಕೆನರಾ, ಹಾಸನ, ಕೊಡಗು, ಈ ಜಿಲ್ಲೆಗಳು ಸಹ ಮಲೆನಾಡು ಏರಿಯಾದಲ್ಲಿ ಬರುತ್ತವೆ. ಇಲ್ಲಿ ಒಂದು ಎಕರೆ, ಎರಡು ಎಕರೆ ಇನ್ನು ಸಣ್ಣ ಸಣ್ಣ ಜಮೀನುಗಳಲ್ಲಿ ವ್ಯವಸಾಯ ಮಾಡತಕ್ಕಂಥವರು ಇದ್ದರೆ ಅವರು ಪಕ್ಕದ ಜಮೀನುದಾರರಿಗೆ ಮಾರಾಟ ಮಾಡಬೇಕು ಇದರಿಂದ ಬಡ ಜನರಿಗೆ ತೊಂದರೆಯಾಗುತ್ತಿದೆ, ಈ ಒಂದು ಕಾನೂನಿನ ಪ್ರಕಾರ ಪಕ್ಕದ ಕೃಷಿಕನಿಗೆ ಕೊಡುವಂತಹ ಸಂದರ್ಭದಲ್ಲಿ ಬಡವನ ಜಮೀನನ್ನು ನೂರು ರೂಪಾಯಿಗಳ ವ್ಯಾಲ್ಯೂ ಇದ್ದರೆ ಅದನ್ನು ಹತ್ತು ರೂಪಾಯಿಗಳಿಗೆ ಕೇಳುತ್ತಾರೆ. ಇಲ್ಲದಿದ್ದರೆ ಅವನಿಗೆ ಕಿರುಕುಳ ಕೊಡುತ್ತಾರೆ. ಇದನ್ನೆಲ್ಲಾ ತಪ್ಪಿಸುವ ದೃಷ್ಟಿಯಿಂದ ಕೊಡಗು ಮಲೆನಾಡು ಏರಿಯಾದಲ್ಲಿರುವುದರಿಂದ ಸಬ್ ಡಿವಿಜನ್ ಫ್ರಾಗ್‌ಮೆಂಟೇಶನ್ ವಿತ್ ಡ್ರಾ ಮಾಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಿಂದ ಅನೇಕ ಬಡ ಜನರಿಗೆ ಅನುಕೂಲವಾಗುತ್ತದೆ.

ಆಮೇಲೆ ಭೂ ಕಂದಾಯವನ್ನು ವಸೂಲು ಮಾಡತಕ್ಕ ವಿಚಾರದಲ್ಲಿ ಈ ವರ್ಷ ಏನಾಗಿದೆ ಎಂದರೆ, ಬಹಳ ಜನಕ್ಕೆ ಭೂ ಕಂದಾಯವನ್ನು ಕಟ್ಟಲಿಕ್ಕೆ ಬಹಳ ತೊಂದರೆಯಾಗಿದೆ. ಭೂ ಕಂದಾಯವನ್ನು ಕಟ್ಟಲೇಬೇಕೆಂದು ರೆವಿನ್ಯೂ ಅಧಿಕಾರಿಗಳು ರೈತರುಗಳಿಗೆ ಫೋರ್ಸ್ ಮಾಡುತ್ತಿದ್ದಾರೆ. ರೈತರುಗಳು

ಕಂದಾಯವನ್ನು ಕಟ್ಟದಿದ್ದರೆ ಜಮೀನುಗಳಿಗೆ ಸಂಬಂಧಪಟ್ಟಂಥ ಡಾಕ್ಯುಮೆಂಟ್‌ಗಳನ್ನು ನಾವು ಬರೆದು ಕೊಡುವುದಿಲ್ಲವೆಂದು ರೆವಿನ್ಯೂ ಅಧಿಕಾರಿಗಳು ಹೇಳುತ್ತಾರೆ. ಮೊದಲು ಕಂದಾಯ ಕಟ್ಟಿ ಆಮೇಲೆ ಡಾಕ್ಯುಮೆಂಟ್‌ಗಳನ್ನು ತೆಗೆದುಕೊಳ್ಳಿ ಎಂದು ಹೇಳಿದರೆ ಹೇಗೆ ? ಡಾಕ್ಯುಮೆಂಟ್‌ಗಳನ್ನು ರೈತರುಗಳಿಗೆ ಕೊಡದೇ ಇದ್ದರೆ ಬಹಳ ತೊಂದರೆಯಾಗುತ್ತದೆ. ಒಂದು ವರ್ಷ ರೈತರುಗಳು ಕಂದಾಯವನ್ನು ಕಟ್ಟದೇ ಇದ್ದರೆ ಜಮೀನುಗಳನ್ನು ಹರಾಜು ಮಾಡುವ ಹಕ್ಕು ಸರ್ಕಾರಕ್ಕಿದೆ. ಏನೋ ಅಲ್ಪ ಸ್ವಲ್ಪ ಕಂದಾಯವನ್ನು ಕೊಡಬೇಕಾದ ರೈತರುಗಳಿಗೆ ತೊಂದರೆ ಕೊಡುವುದು ಸರಿಯಲ್ಲ. ರೈತರುಗಳು ತಮ್ಮ ಜಮೀನುಗಳನ್ನು ಬ್ಯಾಂಕುಗಳಿಗೆ ಮಾರ್ಟ್‌ಗೇಜ್ ಮಾಡಬೇಕಾದರೆ ಜಮೀನಿಗೆ ಸಂಬಂಧಪಟ್ಟಂತೆ ಡಾಕ್ಯುಮೆಂಟುಗಳು ಬೇಕಾಗುತ್ತದೆ ಡಾಕ್ಯುಮೆಂಟ್‌ಗಳನ್ನೇ ಕೊಡದೇ ಹೋದರೆ ರೈತರುಗಳಿಗೆ ಬಹಳ ತೊಂದರೆಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆಮೇಲೆ ಟ್ರಾನ್ಸ್‌ಫರ್‌ಗಳ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಈ ವಿಷಯವನ್ನು ನಾನು ನೊಂದು ಹೇಳುತ್ತಿದ್ದೇನೆ. ಎಲ್ಲೆಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಗೆದ್ದು ಬಂದಿದ್ದಾರೋ ಅಂಥ ಕಡೆ ಬೇಡವಾದಂಥ ಅಧಿಕಾರಿಗಳನ್ನು ರೆವಿನ್ಯೂ ಇಲಾಖೆಯಲ್ಲಿ ಟ್ರಾನ್ಸ್‌ಫರ್ ಮಾಡುತ್ತಾರೆ. ಒಬ್ಬ ತಹಶೀಲ್ದಾರನನ್ನು ಕೆಲವೇ ದಿನಗಳಲ್ಲಿ ನಾಲ್ಕು ಕಡೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಮೊದಲು ಅವನನ್ನು ವೀರರಾಜಪೇಟೆಗೆ ವರ್ಗ ಮಾಡಿದರು. ಅಲ್ಲಿಂದ ಹುಣಸೂರಿಗೆ ವರ್ಗ ಮಾಡಿದರು, ನಂತರ ಒಂದೇ ವಾರದೊಳಗೆ ಸೋಮವಾರಪೇಟೆಗೆ ವರ್ಗ ಮಾಡಿದರು, ಅಲ್ಲೂ ಬೇಡವೆಂದು ಪುನಃ ಮಡಕೇರಿಗೆ ಕಳುಹಿಸಿದರು. ನಾನು ಹೋಗಲಿ ಇಲ್ಲೇ ಇರಪ್ಪ ಎಂದು ಇರಿಸಿಕೊಂಡೆ. ಅಧಿಕಾರಿಗಳು ಬರುವುದು ಜನರ ಸೇವೆ ಮಾಡುವುದಕ್ಕಾಗಿಯೇ ಹೊರತು ಶಾಸಕರ ಸೇವೆಗಾಗಿ ಅಲ್ಲ ಎಂಬುದನ್ನು ತಿಳಿದುಕೊಳ್ಳಬೇಕು ಯಾವ ಅಧಿಕಾರಿಯನ್ನೇ ಆಗಲೀ ಒಂದು ಸಾರಿ ಪೋಸ್ಟಿಂಗ್ಸ್ ಮಾಡಿದ ಮೇಲೆ ಅವನನ್ನು ಆ ಸ್ಥಳದಲ್ಲಿ ಇಟ್ಟುಕೊಳ್ಳತಕ್ಕ ವ್ಯವಸ್ಥೆ ಮಾಡಬೇಕು. ಈ ರೀತಿ ಟ್ರಾನ್ಸ್‌ಫರ್‌ಗಳನ್ನು ಮಾಡುವುದನ್ನು ಖಂಡಿಸಬೇಕೆಂದು ನಾನು ಹೇಳುತ್ತಾ ಇವತ್ತು ನನಗೆ ಮಾತನಾಡಲಿಕ್ಕೆ ಅವಕಾಶ ಒದಗಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಬಿ. ಆರ್. ನೀಲಕಂಠಪ್ಪ. ಅಬ್ಸೆಂಟ್. ಶ್ರೀ ಗಂಗಣ್ಣ, ಅಬ್ಸೆಂಟ್, ಶ್ರೀ ಐ.ಬಿ. ಶಂಕರಪ್ಪ, ಅಬ್ಸೆಂಟ್, ಶ್ರೀ ಬಿ.ಬಿ. ನಿಂಗಯ್ಯ, ಅಬ್ಸೆಂಟ್. (ಈ ನಾಲ್ಕು ಮಾನ್ಯ ಸದಸ್ಯರುಗಳು ಸಭೆಯಲ್ಲಿ ಹಾಜರಿರಲಿಲ್ಲ.) ಶ್ರೀ ಡಿ.ಜಿ. ಬಸವನ ಗೌಡರು, ಮಾತನಾಡಿ.

ಶ್ರೀ ಡಿ ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಅಧ್ಯಕ್ಷರೇ, ಇಂದು ಸರ್ಕಾರವು ಮಂಡಿಸಿರತಕ್ಕ ಈ ರೆವಿನ್ಯೂ ಮತ್ತು ನೀರಾವರಿ ಇಲಾಖೆಗಳ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸುತ್ತಾ ನೀರಾವರಿ ಬಗ್ಗೆ ಕೆಲವು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷರೇ, ಈಗ ನಮ್ಮ ರಾಜ್ಯದಲ್ಲಿರತಕ್ಕಂಥ ಅನೇಕ ಮೇಜರ್ ಮತ್ತು ಮೀಡಿಯಂ ಇರಿಗೇಷನ್ ಯೋಜನೆಗಳು ಇರತಕ್ಕಂಥ ಪ್ರದೇಶಗಳಲ್ಲಿ ಕ್ರಾಪಿಂಗ್ ಪ್ಯಾಟ್ರನ್ ಅನುಸರಿಸುವುದಕ್ಕೆ ರೈತರುಗಳಿಗೆ ಇನ್‌ಸಿಸ್ಟ್ ಮಾಡಬೇಕು ಹಾಗೂ ಅದನ್ನು ನೋಡಿಕೊಂಡು ನೂರರಷ್ಟು ರೈತರುಗಳು ಪಾಲನೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಈಗ ಏನಾಗುತ್ತಿದೆ ಎಂದರೆ ಕಳೆದ ವರ್ಷ ಬೇಸಿಗೆಯಲ್ಲಿ ಅನೇಕ ರಿಸರ್ವಾಯರುಗಳಲ್ಲಿ ಮತ್ತು ಕೆರೆಕಟ್ಟೆಗಳಲ್ಲಿ ಮತ್ತು ಕೆರೆಕಟ್ಟೆಗಳಲ್ಲಿ ನೀರು ಇಲ್ಲದೆ ಇರುವುದನ್ನು ರೈತರುಗಳು ಕಂಡರೂ ಸಹ ಅನೂಚಾನವಾಗಿ ಬೆಳೆಯನ್ನು ಏನು ಬೆಳೆದುಕೊಂಡು ಬಂದಿದ್ದರೋ ಅದೇ ರೀತಿ ಬೆಳೆಯನ್ನು ಬೆಳೆಯುವುದಕ್ಕೆ ಹೋಗಿ ನೀರು ಸಾಲದೆ, ಹಾಕಿದಂಥ ಬಂಡವಾಳವನ್ನು ರೈತರುಗಳು ಕಳೆದುಕೊಂಡ ನಿದರ್ಶನ ಇದೆ. ಆದ್ದರಿಂದ ಕಾಡಾ ಪ್ರದೇಶಗಳಲ್ಲಾಗಲೀ, ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಾಗಲೀ ರೈತರುಗಳು ಕ್ರಾಪಿಂಗ್ ಪ್ಯಾಟ್ರನ್ ಪ್ರಕಾರ ಬೆಳೆಯಬೇಕೆಂದು ಸರ್ಕಾರ ನಿರ್ದೇಶನ ಕೊಟ್ಟರೆ ಒಳ್ಳೆಯದು. ಆಮೇಲೆ, ಈಗಾಗಲೇ ದೊಡ್ಡ ದೊಡ್ಡ ರಿಸರ್ವಾಯರ್‌ಗಳಲ್ಲಿ ಮತ್ತು ಕೆರೆ ಕಟ್ಟೆಗಳಲ್ಲಿ ಕಾಲಕಾಲಕ್ಕೆ ರಿಪೇರಿ ಕಾಣದೆ ಹೂಳು ತುಂಬಿಕೊಂಡು ನೀರಿನ ಶೇಖರಣೆಯ ಪ್ರಮಾಣ ಕಡಿಮೆಯಾಗುತ್ತಿರುವುದು ಕಂಡು ಬಂದಿದೆ. ಇದರ ಬಗ್ಗೆ ಸರ್ಕಾರ ತೀವ್ರವಾದ ಗಮನವನ್ನು ಹರಿಸಿ ಹೂಳು ತುಂಬಿಕೊಂಡಿರುವ ಕೆರೆಕಟ್ಟೆಗಳನ್ನು ರಿಪೇರಿ ಮಾಡಿಸಬೇಕು. ಆಮೇಲೆ, ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಎಲ್ಲೆಲ್ಲಿ ಅನುಕೂಲವಾಗಿದೆಯೋ ಅಲ್ಲೆಲ್ಲಾ ಮಾಡಿದರೆ ರೈತರುಗಳ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ. ಲಿಫ್ಟ್ ಇರಿಗೇಷನ್ ಮೂಲಕ ಸಣ್ಣ ಸಣ್ಣ ರೈತರುಗಳಿಗೆ ಪ್ರೋತ್ಸಾಹ ಕೊಡಬೇಕು. ದೊಡ್ಡ ರೈತರುಗಳು ಲಿಫ್ಟ್ ಇರಿಗೇಷನ್ ಮಾಡುತ್ತೇವೆಂದು ಮುಂದೆ ಬಂದರೆ ಅವರುಗಳಿಗೂ ಸರ್ಕಾರ

ಅನುಕೂಲ ಮಾಡಿಕೊಡಬೇಕು. ಯಾವ ರೈತರುಗಳು ಆರ್ಥಿಕವಾಗಿ ಹಿಂದುಳಿದಿದ್ದಾರೋ ಅಂಥ ರೈತರುಗಳಿಗೆ ಸಹಕಾರ ಸಂಘಗಳ ಮೂಲಕವಾಗಲೀ ಅಥವಾ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮೂಲಕವಾಗಲೀ ಸಹಾಯ ಮಾಡಿ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯ ಲ್ಲಿ ತುಂಗಾ ಇರಿಗೇಷನ್ ಪ್ರೊಜೆಕ್ಟ್ ಇದೆ. ತುಂಗಾ ನಾಲೆಗೆ ಅಡ್ಡಲಾಗಿ ಈಗಾಗಲೇ ನೀರಾವರಿ ವ್ಯವಸ್ಥೆ ಇದೆ. ಸರ್ಕಾರ ಹಿಂದೆ ಮಾಲತಿ ನದಿಗೆ ಅಣೆಕಟ್ಟನ್ನು ಕಟ್ಟಿ ಅಪ್ಪರ್ ತುಂಗಾ ಪ್ರೊಜೆಕ್ಟ್ ಎಂದು ಕರೆದಿದ್ದು ತಮ್ಮ ಗಮನಕ್ಕೂ ಬಂದಿದೆ. ನೀರಾವರಿ ಹೊಣೆಗಾರಿಕೆ ಹೊತ್ತಿರುವ ಶ್ರೀ ಎಸ್. ಆರ್. ಬೊಮ್ಮಾಯಿ ಮತ್ತು ಈ ಸದನದ ಅಧ್ಯಕ್ಷರು ಇಬ್ಬರೂ ಧಾರವಾಡ ಜಿಲ್ಲೆಯವರು. ಅಪ್ಪರ್ ತುಂಗಾ ಪ್ರೊಜೆಕ್ಟ್‌ನಿಂದ ಧಾರವಾಡದ ರೈತರಿಗೆ ಅನುಕೂಲವಾಗುತ್ತದೆ. ಇದು ಕಡಿಮೆ ವೆಚ್ಚದಲ್ಲಿ ಆಗಬಹುದೆಂದು ನನ್ನ ಬಳಿ ಮಾಹಿತಿ ಇದೆ. ಇದರಲ್ಲಿ ಎರಡು ಸ್ಕೀಮ್‌ಗಳಿವೆ ಅಪ್ಪರ್ ತುಂಗಾದಲ್ಲಿ ಮಾಲತಿ ರಿಸರ್ವಾಯರ್‌ಗೆ ಒಂದು ಅಣೆಕಟ್ಟು ಕಟ್ಟಿ ನೀರು ಬಿಟ್ಟರೆ ೨,೦೬,೬೦೦ ರೂ. ಖರ್ಚಾಗುತ್ತದೆ. ಇದರಿಂದ ೨,೩೪,೦೦೦ ಎಕರೆ ಭೂಮಿ ನೀರಾವರಿಯಾಗುತ್ತದೆ. ಮಾಲತಿ ನದಿಗೆ ಅಣೆಕಟ್ಟು ಕಟ್ಟಿ ಲಿಫ್ಟ್ ಮಾಡಲು ಹೈಲೆವೆಲ್ ಕೆನಲ್ ಮೂಲಕ ತೆಗೆದುಕೊಂಡು ಹೋಗಿ ಹಾವೇರಿಯಿಂದ ಮುಂದಕ್ಕೊಯ್ಯಬಹುದಾಗಿದೆ. ಇದಕ್ಕೆ ಮ್ಯಾಪ್ ಎಲ್ಲ ತಯಾರಾಗಿದೆ. ಇದರಿಂದ ೩,೫೪,೦೦೦ ಎಕರೆಗೆ ನೀರಾವರಿಯಾಗುವುದು. ಇದರಲ್ಲಿ ಹೊನ್ನಾಳಿ ಮತ್ತು ಹರಿಹರ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ನೀರು ಒದಗುವುದು. ಇನ್ನುಳಿದ ೩ ಲಕ್ಷ ಎಕರೆ ಸಂಪೂರ್ಣ ಧಾರವಾಡ ಜಿಲ್ಲೆಯಾದು ಹಿರೇಕೆರೂರಿನಿಂದ ಮುಂಡರಗಿಯವರೆಗೂ ೩,೧೨,೦೦೦ ಎಕರೆಗೆ ನೀರಾವರಿಯಾಗುತ್ತದೆ. ಇದಕ್ಕೆ ತಗಲುವ ಖರ್ಚು ನಾಲ್ಕು ಸಾವಿರದ ಆರು ನೂರ ಇಪ್ಪತ್ತೈದು ಲಕ್ಷ ರೂ.ಗಳು ಇದು ಫೀಸಿಬಲ್ ಯೋಜನೆ. ಇದರಲ್ಲಿ ಒಂದು ಎಕರೆಗೆ ೧೨,೦೦೦ ರೂ. ಖರ್ಚಾಗುತ್ತದೆ.

ಇದನ್ನು ಮಾಡಿದ್ದೇ ಆದರೆ ಎರಡು ಫಸಲನ್ನು ಬೆಳೆದು ಸಮೃದ್ಧವಾಗಿ ಬಾಳುವೆ ಮಾಡಬಹುದು. ಬೇರೆ ಯೋಜನೆಗಳಿಗೆ ಹೋಲಿಸಿದರೆ ಇದು ಎಷ್ಟೋ ಒಳ್ಳೆಯದು. ಬಚಾವತ್ ಅವಾರ್ಡ್ ಪ್ರಕಾರ ೨೦೦೦ದ ಇಸವಿಗೆ ನಮಗಿರುವ ನೀರೆಲ್ಲವನ್ನೂ ಬಳಸಿಕೊಳ್ಳಲೇಬೇಕು. ಇದನ್ನು ವರ್ಲ್ಡ್ ಬ್ಯಾಂಕಿನಿಂದ ಸಾಲವನ್ನು ಪಡೆದು ಪೂರೈಸಿದರೆ ಜಿಲ್ಲೆಯ ನಾವೆಲ್ಲ ಶಾಸಕರೂ ತಮ್ಮಿಬ್ಬರಿಗೆ ಋಣಿಯಾಗಿರುತ್ತೇವೆ. ಹಾಗೆಯೇ ಅಪ್ಪರ್ ಭದ್ರಾ ಪ್ರಾಜೆಕ್ಟ್ ಮಾಡಿದರೆ ಹಾವೇರಿ ಕ್ಷೇತ್ರದ ಕೆಳಗಡೆ ಅದು ಬರುತ್ತದೆ. ಈಗಾಗಲೇ ಪ್ರದೇಶದಲ್ಲಿ ನೀರಿಲ್ಲ. ಈ ಬೆಳೆ ಬೆಳೆದಿಲ್ಲ, ಮೇಲುಗಡೆ ಕುದುರೆಮುಖ ಓರ್ ಇಂಡಸ್ಟ್ರೀ ಬೇರೆ ಇದೆ. ಅದು ವಿದೇಶಕ್ಕೆ ಕಬ್ಬಿಣವನ್ನು ರಫ್ತು ಮಾಡುವ ಕೇಂದ್ರದ ಉದ್ಯಮ, ಆದರಿಂದ ಬರುವ ಮಣ್ಣು ಭದ್ರಾ ಪ್ರಾಜೆಕ್ಟ್‌ಗೆ ಶಿಫ್ಟ್ ಆಗಿ ಪ್ರಾಜೆಕ್ಟೆಲ್ಲ ಮಣ್ಣಿಂದ ತುಂಬಿಕೊಳ್ಳುತ್ತಿದೆ ಎಂಬ ಅಭಿಪ್ರಾಯ ಇದೆ. ಆದ್ದರಿಂದ ಅಪ್ಪರ್ ಭದ್ರಾ ಮಾಡಿದರೆ ಅದರ ಕೆಳಗಡೆ ಬರುವ ಜನರಿಗೆ ನೀರು ಹೆಚ್ಚಿಗೆ ಸಿಗುತ್ತದೆ. ಬೇರೆಯವರಿಗೆ ನೀರು ಕೊಡಬೇಡಿ ಎಂದು ನಾನು ಹೇಳುತ್ತಿಲ್ಲ. ಈಗ ಕೊಡುತ್ತಿರುವ ರೈತರಿಗೆ ಎರಡು ಬೆಳೆಗೆ ಆಗುವಷ್ಟು ನೀರು ಕೊಟ್ಟರೆ ಸಾಕು. ಈ ಅಪ್ಪರ್ ಭದ್ರಾ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಯಾರದೂ ಅಭ್ಯಂತರ ಇಲ್ಲ. ಆದರೆ ಈಗಿರುವ ರೈತರ ಹಿತಾಸಕ್ತಿಯನ್ನು ರಕ್ಷಣೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಶ್ರೀ ಎಸ್. ಆರ್. ಬೊಮ್ಮಾಯಿಯವರು ಈ ಖಾತೆ ವಹಿಸಿಕೊಂಡ ಮೇಲೆ ರಾಜ್ಯಾದ್ಯಂತ ನಾಡ ಕಛೇರಿಗಳನ್ನು ಮಾದರಿಯಾಗಿ ಸ್ಥಾಪಿಸಿದ್ದಾರೆ. ಇದರಿಂದ ದೂರ ದೂರ ಹಳ್ಳಿಗಳಲ್ಲಿದ್ದ ರೈತರಿಗೆ ಅವರಿಗೆ ಬೇಕಾದ ರೆವಿನ್ಯೂ ದಾಖಲೆಗಳನ್ನು ಪಡೆಯುವುದಕ್ಕೆ ಬರಬೇಕಾಗಿದ್ದ ಸಮಸ್ಯೆ ತಪ್ಪಿ ಹತ್ತಿರದಲ್ಲೇ ಅವು ಲಭ್ಯವಾಗುವಂತಾಗಿದೆ. ಇದೇ ಪ್ರಕಾರ ಎಲ್ಲ ಹೋಬಳಿ ಕೇಂದ್ರದಲ್ಲಿ ವ್ಯವಸ್ಥೆಯಾದರೆ ರೈತ ತಾಲ್ಲೂಕು ಆಫೀಸ್‌ಗಳಿಗೆ ಹೋಗಿ ಅಧಿಕಾರಿಗಳಿಗೆ ಮೊರೆಹೊಕ್ಕುವ ಸಂದರ್ಭ ತಪ್ಪುತ್ತದೆ, ಬೇಕಾದರೆ ಇದನ್ನು ಹಂತ ಹಂತವಾಗಿ ಆದರೂ ಮಾಡಲಿ,

ಇನ್ನು ತಾಲ್ಲೂಕು ಕಛೇರಿಗಳ ಕಟ್ಟಡಗಳ ಸ್ಥಿತಿಗತಿಗಳ ಬಗ್ಗೆ ಹೇಳುವುದಾದರೆ ನಾನು ೧೬ ವರ್ಷದ ಹುಡುಗನಿಂದ ನೋಡುತ್ತಿದ್ದೇನೆ. ಆವಾಗ ಯಾವಸ್ಥಿತಿಯಲ್ಲಿ ಆ ಕಟ್ಟಡಗಳು ಕುರ್ಚಿ ಬೆಂಚುಗಳು ಇದ್ದವೋ ಇವತ್ತಿಗೂ ಹಾಗೇ ಇವೆ. ನಾನು ರೆವಿನ್ಯೂ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಬೆಂಗಳೂರಿನಂಥ ನಗರದಲ್ಲಿ ಕಚೇರಿ ಸ್ಥಾಪಿಸಿದರೆ ಅದಕ್ಕೆ ಹೊಸ ಕಟ್ಟಡ, ಕುರ್ಚಿ ಬೆಂಚು ಏರ್ ಕಂಡೀಶ

ನರ್ ಎಲ್ಲ ಒದಗಿಸುತ್ತೀರಿ, ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನೂ ಕೊಡುತ್ತೀರಿ, ಆದರೆ ಬೇರೆ ತಾಲ್ಲೂಕುಗಳಲ್ಲಿ ರೈತ ತನ್ನ ಕೆಲಸಕ್ಕೆ ಹೋದರೆ ಅವರನ್ನು ಕೂರಿಸುವುದಕ್ಕೆ ಜಾಗ ಆಗಲಿ, ಕುರ್ಚಿಯಾಗಲೀ ಇರುವುದಿಲ್ಲ. ಮೊನ್ನೆ ನಮ್ಮ ಹೊನ್ನಾಳಿ ತಾಲ್ಲೂಕಿನಲ್ಲಿ ಇರುವ ತಾಲ್ಲೂಕು ಆಫೀಸನ್ನು ರಿನೋವೇಟ್ ಮಾಡಲು ೫೦ ಸಾವಿರ ಖರ್ಚು ಮಾಡಿದೆವು. ಸಂಬಂಧಪಟ್ಟ ಪಿಡಬ್ಲ್ಯುಡಿ ಮತ್ತು ರೆವಿನ್ಯೂ ಅಧಿಕಾರಿಗಳನ್ನು ರಿಪೇರಿ ಮಾಡಿಸಲು ಕೇಳಿದರೆ ಅವರು ದುಡ್ಡಿಲ್ಲ ಸಾರ್, ಎನ್ನುತ್ತಿದ್ದಾರೆ, ಕೊನೆಗೆ ನಾವೇ ಅಲ್ಲಿನವರು ಮುಂದೆ ನಿಂತು ೬೦ ಸಾವಿರ ಕಾಂಟ್ರಿಬ್ಯೂಷನ್ಸ್ ಕಲೆಕ್ಟ್ ಮಾಡಿ ರಿಪೇರಿ ಮಾಡಿಸಿದೆವು. ರಾಜ್ಯದಲ್ಲಿರುವ ಎಷ್ಟೋ ತಾಲ್ಲೂಕು ಆಫೀಸ್‌ಗಳು ಬಿದ್ದುಹೋಗುವ ಸ್ಥಿತಿಯಲ್ಲಿವೆ, ಆದ್ದರಿಂದ ಅವುಗಳ ರಿಪೇರಿಗೆ ರೆಕರಿಂಗೋ ಅಥವಾ ನಾನ್ ರೆಕರಿಂಗೋ ಎಕ್ಸ್‌ಪೆಂಡಿಚರ್‌ನಿಂದ ಉದಾರತೆಯಿಂದ ಹಣ ಕೊಟ್ಟಿದ್ದೇ ಆದರೆ ಅನುಕೂಲವಾಗುತ್ತದೆ.

ಇನ್ನು ಸರ್ವೆ ಇಲಾಖೆಯ ಬಗ್ಗೆ ನಮ್ಮ ಭದ್ರಾ ಪ್ರಾಜೆಕ್ಟ್ ಕೆಳಗಡೆ ಇರುವ ಜಮೀನುಗಳ ಬಗ್ಗೆ ಹೇಳಬೇಕಾದರೆ ನಾವು ಅದನ್ನು ನೀರಾವರಿ ಮಾಡಿದ ಮೇಲೆ ಕೆಲವುಗಳ ಬಗ್ಗೆ ಅಳತೆ ತಕರಾರು ಬಾತು, ಒಂದಕ್ಕೂ ಈಗಿರುವ ಜಮೀನಿಗೆ ಸರ್ವೆ ದಾಖಲೆಗಳು ಸ್ಪಷ್ಟವಾಗಿಲ್ಲ, ಬಹು ಹಿಂದೆ ಮಾಡಿದ್ದು, ಆದ್ದರಿಂದ ಈಗ ಮತ್ತೆ ರೀಸರ್ವೆ ಮಾಡಿಸಿ ಹದ್ದುಬಸ್ತು ಫಿಕ್ಸ್ ಮಾಡಿ ಪಟ್ಟೆ, ನಕಾಶೆ ಎಲ್ಲ ನವೀನವಾಗಿ ಸಿಗುವ ವ್ಯವಸ್ಥೆ ಮಾಡಿಸಬೇಕಾಗಿದೆ. ಇಷ್ಟು ಮಾತನಾಡಲು ನನಗೆ ಸಮಯ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ಅಪ್ಪರ್ ತುಂಗಾ ಯೋಜನೆಯನ್ನು ತಮ್ಮಿಬ್ಬರ ಕಾಲದಲ್ಲಿ ಮಾಡಿದ್ದೇ ಆದರೆ ಧಾರವಾಡ ಮತ್ತು ಸುತ್ತಲಿನ ಸಮಸ್ತ ಜನಗಳೂ ತಮಗೆ ಋಣಿಯಾಗಿರುತ್ತಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).---ಮಾನ್ಯ ಅಧ್ಯಕ್ಷರೆ, ನೀರಾವರಿ ಹಾಗೂ ಕಂದಾಯ ಇಲಾಖಾ ಬೇಡಿಕೆಗಳನ್ನು ವಿರೋಧಿಸಿ ಕೆಲವು ವಿಚಾರಗಳನ್ನು ಮಾತ್ರ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಯಾವುದು ಮಾತನಾಡಬೇಕಾದರೂ ಯಾವುದನ್ನು ಇಲ್ಲಿ ಹೇಳಬೇಕೆಂದರೂ ಕೂಡ ಅದಕ್ಕೆಲ್ಲಾ ಮೂಲಭೂತವಾದಂತಹ ಮಂತ್ರ ಯಾವುದೆಂದರೆ ಸಂಪನ್ಮೂಲ ಆ ಹಣ, ಸಂಪನ್ಮೂಲವಿಲ್ಲದಿದ್ದರೆ ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ. ನೀರಾವರಿ ಬಗ್ಗೆ, ಕಂದಾಯದ ಬಗ್ಗೆ ಮಾತನಾಡಲೇ ಯಾವುದರ ಬಗ್ಗೆಯೂ ಪ್ರಯೋಜನವಾಗುವುದಿಲ್ಲ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಹೇಳುವುದಾದರೆ ಅಲ್ಲಿ ನೀರಾವರಿ ಪ್ರಶ್ನೆಯೇ ಇಲ್ಲ. ಎಲ್ಲಾ ನೀರಾವರಿ ಯೋಜನೆಗಳು ೧೮ ಜಿಲ್ಲೆಗಳಿಗೆ ಹೋಗಿ ನಮ್ಮದು ತಟಸ್ಥವಾಗಿರತಕ್ಕಂತಹ ಒಂದು ಜಿಲ್ಲೆಯಾಗಿದೆ. ನಾವು ತಮ್ಮ ಹತ್ತಿರ ಕೇಳುತ್ತಿರತಕ್ಕಂಥಾದ್ದು ಏನೆಂದರೆ ನಮ್ಮ ಜಿಲ್ಲೆಗೆ ವೆಂಟೆಡ್ ಡ್ಯಾಮ್‌ಗಳನ್ನಾದರೂ ಮಾಡಿಕೊಡಿ, ಅಷ್ಟನ್ನು ಕೊಟ್ಟರೆ ರೈತರಿಗೆ ಕೃಷಿ ಮಾಡಲಿಕ್ಕೆ ಉಪಕಾರವಾಗುತ್ತದೆ. ಎಲ್ಲೆಲ್ಲಿ ಸಾಧ್ಯವುಂಟು ಅಲ್ಲಲ್ಲಿ ವೆಂಟೆಡ್ ಡ್ಯಾಂಗಳನ್ನು ಮಾಡಿಕೊಡಬೇಕು, ಇದಕ್ಕೆ ಮಾನ್ಯ ಮಂತ್ರಿಗಳು ಇದಕ್ಕೆ ಮನಸ್ಸು ಮಾಡಬೇಕು. ಇನ್ನು ನಮ್ಮಲ್ಲಿ ಮೂರು ತಿಂಗಳು ಮಳೆ ಬರುತ್ತದೆ, ಆದರೆ ಮಳೆಯ ನೀರೆಲ್ಲಾ ಸೋರಿ ಹೋಗಿ ಸಮುದ್ರಕ್ಕೆ ಸೇರುತ್ತದೆ. ನಮಗೆ ಉಪಯೋಗಕ್ಕೆ ಬರುವುದಿಲ್ಲ ಅದು ಒಂದು ದೊಡ್ಡ ದುರಂತ. ಕೃಷಿಗೆ ಅನುಕೂಲವಾಗುವಂತೆ ಮತ್ತು ಕುಡಿಯುವ ನೀರು ದೊರೆಯುವ ಹಾಗೆ ಅನುಕೂಲ ಮಾಡಿಕೊಡಿ. ನಮ್ಮಲ್ಲಿ ಕುಡಿಯುವ ನೀರಿಗೆ ಮತ್ತು ಕೃಷಿಗೆ ನೀರು ಇಲ್ಲ ಬಹಳ ತಾಪತ್ರಯ ಉಂಟು. ನಮಗೆ ನೀರಾವರಿ ರೂಪದಲ್ಲಿ ಹಣ ಕೊಡದಿದ್ದರೂ ವೆಂಟೆಡ್ ಡ್ಯಾಂ ಅನ್ನಾದರೂ ಮಾಡಿಕೊಡಿ. ಕುಡಿಯುವ ನೀರಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟರೆ ಅದರಲ್ಲಿ ಹೆಚ್ಚಿನ ತೆರೆದ ಬಾವಿಗಳನ್ನು ತೋಡಲಿಕ್ಕೆ ಸಾಧ್ಯವಾಗುತ್ತದೆ. ನಮ್ಮ ಕರಾವಳಿಯ ಮಟ್ಟಿಗೆ ಮಾಡಿದರೆ ಬಹಳ ಸಹಾಯವಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ನೆರೆ ಹಾವಳಿ ಬರುವಂಥಾದ್ದು ಕೂಡ ಇದೆ. ನೇತ್ರಾವತಿ, ಗುರುಪುರ ನದಿಯ ಬದಿಯಲ್ಲಿ ಬೇಕಾದಷ್ಟು ಸಣ್ಣ ಸಣ್ಣ ರೈತರು ಬಡವರು ಕೃಷಿ ಮಾಡಿಕೊಂಡಿದ್ದಾರೆ, ಅಲ್ಲಿ ನೆರೆ ಬಂದರೆ ಅವರೆಲ್ಲಾ ದಿಕ್ಕಾಪಾಲಾಗಿ ಹೋಗುತ್ತಾರೆ. ಅವರ ಮನೆ ಆಸ್ತಿ ಪಾಸ್ತಿಯೆಲ್ಲಾ ನೆರೆ ಬಂದು ದೋಚಿಕೊಂಡು ಹೋಗುವಂತಹ ಪರಿಸ್ಥಿತಿಯಿದೆ. ನೇತ್ರಾವತಿ, ಗುರುಪುರ ನದಿಗಳ ಬದಿಯಲ್ಲಿ ನೆರೆ ಹಾವಳಿಗೆ ಸಿಕ್ಕಿ ಯಾರು ತೊಂದರೆ ಅನುಭವಿಸುತ್ತಾರೆ ಅವರಿಗೆ ಸರಕಾರ ಸಹಾಯ ಮಾಡತಕ್ಕಂತಹ ವ್ಯವಸ್ಥೆ ಮಾಡಬೇಕು. ಮತ್ತು ಪ್ರವಾಹದ ತಡೆಗೆ ಬೇಕಾದಂತಹ ಸನ್ನಾಹಗಳನ್ನು ಮಾಡಬೇಕು. ನೀರಾವರಿ ಬಗ್ಗೆ ಹೆಚ್ಚು ಮಾತನಾಡದೇ ಕಂದಾಯ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ಮನಸ್ಸಿನಲ್ಲಿರತಕ್ಕಂತಹ ಒಂದೆರಡು ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸರಕಾರ ಬಂದ ಮೇಲೆ ಮಾನ್ಯ ಕಂದಾಯ ಮಂತ್ರಿಗಳು ಅನೇಕ ಸಭೆಗಳಲ್ಲಿ ಜನ ಸಂಪರ್ಕ ಸಭೆ ಬಹಳ ಪ್ರಾಮುಖ್ಯವಾದುದು. ಇದನ್ನು ತಿಂಗಳಿಗೊಮ್ಮೆ ಮಾಡಬೇಕು

ಎಂದು ಹೇಳಿದ್ದಾರೆ. ಬಡವರಿಗೆ ಕೊಡತಕ್ಕ ವೃದ್ಧಾಪ್ಯ ವೇತನ ಅಂಗವಿಕಲರ ವೇತನ, ವಿಧವಾ ಮಾಸಾಶನ ಇನ್ನೂ ಇತರ ಬೇರೆ ಬೇರೆ ವಿಚಾರಗಳು ಏನು ಇವೆ ಅದನ್ನು ಬಿಚ್ಚಿಡುವಂತಹ ಒಂದು ವೇದಿಕೆ, ಇದು ಬಡವರ ಸಭೆ ಎಂದು ಹೇಳಿದ್ದಾರೆ. ಆದರೆ ನಮ್ಮ ಮಂಗಳೂರಿನ ತಾಲ್ಲೂಕಿನಲ್ಲಿ 6 ತಿಂಗಳಿನಿಂದ ಜನ ಸಂಪರ್ಕ ಸಭೆ ನಡೆಯಲಿಲ್ಲ. ನಾನೂ ಕೂಡ ಪ್ರತಿ ತಿಂಗಳು ಹೋಗಿ ಹೇಳುತ್ತೇನೆ ಇದು ಬಹಳ ಪ್ರಮುಖವಾದ ಸಭೆ ಎಂದು ಮಾನ್ಯ ಕಂದಾಯ ಮಂತ್ರಿಗಳು ಹೇಳಿದ್ದಾರೆ, ಇದನ್ನು ಏಕೆ ಮಾಡುವುದಿಲ್ಲವೆಂದು ಹೇಳಿದರೆ ಅಲ್ಲಿನ ತಹಸೀಲ್ದಾರರ ಕೈಕೆಳಗೆ ಏನು ಇದ್ದಾರೆ ಅವರು ಹೆದರುತ್ತಾರೆ. ತಹಸೀಲ್ದಾರರೇನೋ ಒಳ್ಳೆಯವರೇ ಆದರೆ ಅವರ ಕೈಕೆಳಗಿರುವ ಮಣಿಗಾರರು ಏನು ಇದ್ದಾರೆ ಅವರು ಇವರಿಗೆ ಹೇಳುತ್ತಾರೆ ಇಂತಹ ಕಷ್ಟ ಬರುತ್ತದೆ ಎಂಬ ಭಯವನ್ನು ಹುಟ್ಟಿಸುತ್ತಾರೆ. ತಹಶೀಲ್ದಾರರನ್ನು ಕೇಳಿದರೆ ಮಣಿಗಾರರು ಒಪ್ಪುವುದಿಲ್ಲ ಎಂದು ಹೇಳುತ್ತಾರೆ. ಈ ಸಭೆಯನ್ನು ಕಡ್ಡಾಯವಾಗಿ ಮಾಡಬೇಕೆಂದು ಮಾಡಿದರೆ ಇದರಿಂದ ತುಂಬಾ ಜನರಿಗೆ ಉಪಕಾರ ವಾಗುತ್ತದೆ. ವಿಧವಾ ಮಾಸಾಶನ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ ಮತ್ತು ಇತರೇ ವಿಚಾರಗಳಿಗೆ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಳ್ಳತಕ್ಕಂತಹವರು ಯಾರು ಇದ್ದಾರೆ ಅವರಿಗೆ ಬಹಳ ಉಪಕಾರವಾಗುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಷಯ ಇದನ್ನು ತಾವು ಮಾಡಬೇಕು. ಇನ್ನು ಭೂ ನ್ಯಾಯ ಮಂಡಲಿಯಲ್ಲಿ ಏನು ತೀರ್ಮಾನವಾಗುತ್ತದೆ ಅಲ್ಲಿ ತೀರ್ಮಾನವಾಗಿ ಸ್ಪೆಷಲ್ ತಹಶೀಲ್ದಾರ್‌ಗೆ ಹೋಗಿ ಒಂದು ತಿಂಗಳಾದರೂ ಕೂಡ ಕಕ್ಷಿಗಳಿಗೆ ತೀರ್ಪು ಸಿಗುವುದಿಲ್ಲ. ಅವರು ದಿನವೂ ಬರುವುದು ಹೋಗುವುದು ಈ ರೀತಿಯಾಗುತ್ತಿದೆ, ಇವತ್ತು ಬಂದರೆ ನಾಳೆ ಬನ್ನಿ ಎಂದು ಹೇಳುತ್ತಾರೆ, ನಾಳೆ ಬಂದರೆ ನಾಡಿದ್ದು ಬನ್ನಿ ಎಂದು ಹೇಳುತ್ತಾರೆ. ಇಲ್ಲಿಂದ ಹೋದ ಮೇಲೆ ಬರೀ ಸಹಿ ಮಾಡಿಕೊಡುವುದು ಮಾತ್ರ ಅವರ ಕೆಲಸ. ಇಲ್ಲಿಗೆ ಅದಕ್ಕೆಂದೇ ಬೇರೆ ಬೇರೆ ದೂರದ ಊರುಗಳಿಂದ ಬರುತ್ತಾರೆ. ಭೂ ನ್ಯಾಯ ಮಂಡಲಿಯಲ್ಲಿ ತೀರ್ಮಾನವಾಗಿ ಸ್ಪೆಷಲ್ ತಹಶೀಲ್ದಾರರ ಹತ್ತಿರ ಹೋದರೆ ಅಲ್ಲಿ ಬಹಳ ಉದಾಸೀನವನ್ನು ತೋರಿಸುತ್ತಾರೆ ಈ ರೀತಿಯಾದರೆ ಅವರ ಗತಿ ಏನು ಎಂಬುದನ್ನು ಯೋಚನೆ ಮಾಡಬೇಕು. ಮಂಗಳೂರು ಭೂ ನ್ಯಾಯ ಮಂಡಲಿಯಲ್ಲಿ ಬಹಳ ಕೆಲಸ ವಾಗಿದೆ. ತುಂಬಾ ಕೇಸುಗಳು ನಿರ್ಣಯವಾಗಿದೆ ಅಲ್ಲಿ ಬಹಳ ದೂರುಗಳು ಉಂಟು ಅದರ ಬಗ್ಗೆ ಯೋಚನೆ ಮಾಡಬೇಕು. ಬಿರುಸಾಗಿ ಕೆಲಸವಾಗಬೇಕೆಂದು ಜಿಲ್ಲಾ ಅಪೀಲೇಟ್ ಎಂದು ಮಾಡಿದ್ದೀರಿ ಆದರೆ ಇಷ್ಟರವರೆಗೆ ಅಲ್ಲಿ ಬಿರುಸಿನ ಕೆಲಸವಾದದ್ದು ನಮಗೆ ಕಾಣಲಿಲ್ಲ.

ಇವತ್ತು ಹೆಚ್ಚು ದಣಿಗಳಿಗೆ ಉಪಕಾರ ಆದದ್ದನ್ನು ನಾನು ಕಂಡಿದ್ದೇನೆ, ಇದರಲ್ಲಿ ದಣಿಗಳ ಪಾಲಿಗೆ ಹೆಚ್ಚಿನ ಉಪಕಾರವಾಗಿದೆ. ಅವರು ಏನು ಹೇಳುತ್ತಾರೆಂದರೆ, ಕಾಗದಪತ್ರ ಯಾರದು ಕರೆಕ್ಟ್ ಉಂಟೋ ಅವರಿಗೆ ಆಗುತ್ತದೆ ಎಂದು ಹೇಳುತ್ತಾರೆ. ಈ ಭೂ ನ್ಯಾಯ ಮಂಡಳಿಯಲ್ಲಾದರೆ ನಾಲ್ಕು ಜನ ಅಧಿಕಾರೇತರ ಸದಸ್ಯರು ಇರುವಾಗ ಒಬ್ಬ ಮನುಷ್ಯ ಇಪ್ಪತ್ತು ವರ್ಷ ಒಂದು ಕಡೆಯಲ್ಲಿ ವಾಸವಾಗಿದ್ದರೆ ಅಥವಾ ಅವನು ಪೊಜಿಷನ್‌ನಲ್ಲಿದ್ದರೆ ಅದನ್ನು ಕೊಡತಕ್ಕಂಥ ವಿವಾದವನ್ನು ಮಾಡುತ್ತಾರೆ. ಆದರೆ ಕಾಗದ ಪತ್ರ ಕರೆಕ್ಟ್ ಯಾರ ಹತ್ತಿರ ಉಂಟೋ ಅವರು ಬಚಾವ್ ಆಗುತ್ತಾರೆ. ಆದ್ದರಿಂದ ಹೆಚ್ಚು ದಣಿಗಳಿಗೆ ಸಹಾಯ ಆಗುತ್ತದೆ ಮಾತ್ರವಲ್ಲ ಬಹಳ ನಿಧಾನಗತಿಯಿಂದ ಈ ಕೆಲಸ ಕಾರ್ಯಗಳು ನಡೆಯುತ್ತಿವೆ. ನೀವು ಮಾಡಿದ ಉದ್ದೇಶವೇನೋ ಒಳ್ಳೆಯದು. ಬೇಗ ಬೇಗ ಆಗಬೇಕು, ಆದರೆ ಇಲ್ಲಿ ಬೇಗ ಬೇಗ ಆಗುತ್ತಿಲ್ಲ. ಆದ್ದರಿಂದ ಇದರ ಮಟ್ಟಿಗೆ ಕೂಡ ಕಂದಾಯ ಮಂತ್ರಿಗಳು ಗಮನವನ್ನು ಹರಿಸಬೇಕು.

ಇನ್ನು ಜಾತಿಯ ಸರ್ಟಿಫಿಕೇಟ್‌ನ್ನು ತೆಗೆದುಕೊಳ್ಳಲಿಕ್ಕೆ ಬಂದರೆ ನಾಳೆ ಬಾ, ನಾಡಿದ್ದು ಬಾ ಈ ರೀತಿ ಹೇಳುತ್ತಾರೆ. ಪರಿಶಿಷ್ಟ ವರ್ಗದವರು, ಪರಿಶಿಷ್ಟ ಜನಾಂಗದವರು ನಾಳೆ ಬರಲಿಕ್ಕೆ ಹೇಳಿದ್ದಾರೆ ಎಂದು ಹೇಳುತ್ತಾರೆ. ಅವರ ಹತ್ತಿರ ಹೋದರೆ ಈ ರೀತಿ ಸಬೂಬು ಹೇಳುತ್ತಾರೆ. ಅವರ ಹತ್ತಿರ ಯಾರು ಜಗಳ ಕಾಯುವುದು ಎಂದು ವಾಪಸ್ ಬರುತ್ತೇವೆ. ನಾಳೆ ಬಾ, ನಾಡಿದ್ದು ಬಾ ಎಂದು ಈ ರೀತಿ ಅಧಿಕಾರಿಗಳ ಬಾಯಲ್ಲಿ ಬರುವಂಥದ್ದನ್ನು ತಪ್ಪಿಸಲಿಕ್ಕೆ ಏನಾದರೂ ಚಿಕಿತ್ಸೆ ತಮ್ಮಲ್ಲಿ ಇದ್ದರೆ ಅವರಿಗೆ ಬಹಳ ಪರಿಣಾಮ ಆಗುತ್ತದೆ. ನಿಮ್ಮ ಉದ್ದೇಶವೇನೋ ಕೆಲವೊಂದು ಒಳ್ಳೆಯದು ಉಂಟು. ಆದರೆ ಕೆಳಗೆ ಬರುವಾಗ ಅದು ಸರಿಯಾಗಿ ಮುಟ್ಟುವುದಿಲ್ಲ. ದೇವರು ಕೊಟ್ಟರೂ ಪೂಜಾರಿ ಬಿಡ ಎನ್ನುವ ಗಾದೆಯ ಹಾಗೆ ಆಗಿದೆ. ನಿಮ್ಮ ಉದ್ದೇಶ ಒಳ್ಳೆಯದು ಇದ್ದರೂ ಅದು ಕೆಳಗೆ ಬರುವಾಗ ಸರಿಯಾಗಿ ಅದು ಮುಟ್ಟುವುದಿಲ್ಲ. ಆದರೆ ಒಳ್ಳೆಯ ಅಧಿಕಾರಿಗಳೇ ಇಲ್ಲ ಎಂದು ನಾನು ಹೇಳುವುದಿಲ್ಲ. ಒಳ್ಳೆಯವರು

ಇದ್ದಾರೆ. ಆದರೆ ಅಷ್ಟೇ ಕೆಟ್ಟವರು ಇದ್ದಾರೆ, ಮತ್ತು ಅಷ್ಟೇ ಭ್ರಷ್ಟಾಚಾರಿಗಳೂ ಕೂಡಾ ಇದ್ದಾರೆ, ಆದರೆ ಇದರಿಂದ ನಿಜವಾಗಿಯೂ ಕೂಡಾ ಬಡವರಿಗೆ ಪೆಟ್ಟು ಬೀಳುತ್ತದೆ, ಅಲ್ಪ ಸಂಖ್ಯಾತರಿಗೆ ಮುಸಲ್ಮಾನರಿಗೆ, ಪರಿಶಿಷ್ಟ ಜನಾಂಗದವರಿಗೆ ಇದರಿಂದ ಪೆಟ್ಟು ಬೀಳುತ್ತದೆ. ಇವರು ತೀರಾ ಬಡವರಾಗಿರತಕ್ಕಂಥ ಜನ. ಆದ್ದರಿಂದ ಇವರ ಮಟ್ಟಿಗೆ ಕಂದಾಯ ಮಂತ್ರಿಗಳು ಸರಿಯಾದಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ರಿಜಿಸ್ಟ್ರಾರ್ ಆಫೀಸ್ ಬಗ್ಗೆ ಹೇಳುವುದಾದರೆ ಇದು ಒಂದು ಬಕಪಕ್ಷಿ ವ್ಯವಸ್ಥೆಯನ್ನು ಇಲ್ಲಿ ಕಾಣುತ್ತೇವೆ. ಇಲ್ಲಿ ಬಹಳ ಭ್ರಷ್ಟಾಚಾರ ನಡೆಯುತ್ತಿದೆ ಎಂದು ನಮ್ಮ ಹತ್ತಿರ ಹೇಳುತ್ತಾರೆ, ನಮ್ಮ ಹತ್ತಿರ ಹೇಳಿದರೆ ನಾವು ಏನು ಮಾಡುವುದಕ್ಕೆ ಬರುತ್ತದೆ, ದೊಡ್ಡವರ ಹತ್ತಿರ ಹೋಗಿ ಹೇಳಿ ಎಂದು ನಾವು ಅವರಿಗೆ ಹೇಳುತ್ತೇವೆ. ಆದ್ದರಿಂದ ಈ ವಿಷಯದಲ್ಲಿ ಒಂದು ಕಿವಿ ಮಾತು ತಮಗೆ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ತಾವು ದಕ್ಷಿಣ ಕನ್ನಡ ಜಿಲ್ಲೆಗೆ ಬರುವುದೇ ಕಡಿಮೆ. ಹಾಗೇ ಮಾಡಬೇಡಿ. ನೀವು ಹೇಳದೆ ಅನಿರೀಕ್ಷಿತವಾಗಿ ಒಂದು ರಿಜಿಸ್ಟ್ರಾರ್ ಆಫೀಸಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅದೇ ರೀತಿಯಲ್ಲಿ ತಹಶೀಲ್ದಾರ್ ಆಫೀಸ್, ಕಮೀಷನರ್ ಆಫೀಸ್‌ಗಳಿಗೆ ಅನಿರೀಕ್ಷಿತವಾಗಿ ಹೊಕ್ಕಿ ನೋಡಿದರೆ ಗೊತ್ತಾಗುತ್ತದೆ. ನಾವು ಬರುತ್ತೇವೆ ಎಂದು ಹೇಳಿ ಬಂದರೆ ಎಲ್ಲಾ ಸನ್ನಾಹ ಮಾಡಿ ಒಳ್ಳೆಯ ರೀತಿಯಲ್ಲಿರುತ್ತಾರೆ. ನೀವು ಎರಡು ಸಾರಿ ಹೋಗಿ ಬಂದರೆ ನಿಜವಾಗಿಯೂ ಕಂದಾಯ ಇಲಾಖೆ ಪರಿವರ್ತನೆಯಾಗುತ್ತದೆಂದು ನನ್ನ ಅಭಿಪ್ರಾಯ.

ಶ್ರೀ ಕೆ, ಬಿ. ಶಾಣಪ್ಪ —ಹಾಗೆ ಬಂದರೆ ಅಲ್ಲಿ ಆಫೀಸರ್ಸ್ ಇವರನ್ನು ಒಳಗಡೆ ಬಿಡಲಿಲ್ಲ ಎಂದರೆ ಏನು ಮಾಡುವುದು ?

ಶ್ರೀ ಬಿ. ಎಂ. ಇದಿನಬ್ಬ. —ಇನ್ನು ನಮ್ಮಲ್ಲಿ ಕನ್‌ವರ್ಷನ್ ಭೂಮಿ ಎಂದು ಮಾಡಿದ್ದೀರಿ. ಬಂಡೆಕಲ್ಲು ಕೂಡಾ ಕೃಷಿ ಭೂಮಿ, ಮರಳು ಭೂಮಿ ಕೂಡಾ ಕೃಷಿ ಭೂಮಿ, ಕಣಿವೆ ಕೂಡಾ ಕೃಷಿಭೂಮಿ, ತೋಡು ಸಹಾ ಕೃಷಿ ಭೂಮಿ ಎಲ್ಲಾ ಕೃಷಿ ಭೂಮಿ ಎಂದು ಮಾಡಿರುವುದರಿಂದ ಬಹಳ ಅನ್ಯಾಯವಾಗಿದೆ. ನಮ್ಮಲ್ಲಿ ಎಲ್ಲವೂ ಕೂಡಾ ಕೃಷಿ ಭೂಮಿ ಅಲ್ಲ. ಆದ್ದರಿಂದ ಕನ್‌ವರ್ಷನ್‌ನಿಂದ ಬಹಳ ತೊಂದರೆಯಾಗಿದೆ. ನಮ್ಮ ಜಿಲ್ಲೆಯ ಮಟ್ಟಿಗೆ ಅಥವಾ ಕೊಡಗಿನ ಮಟ್ಟಿಗೆ ಏನು ಮಾಡಿದ್ದೀರೋ ಗೊತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಬೆಂಕಿ ಬಿದ್ದರೆ ಮೂರು ನೂರು ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಬಡವರು ಕೂಲಿಕಾರರಿಗೆ ಕಷ್ಟ ಜೀವಿಗಳ ಮನೆಗೆ ಬೆಂಕಿ ಬಿದ್ದರೆ ಮೂರು ನೂರು ರೂಪಾಯಿ ಕೊಡಬೇಕು ಎಂದು ನಿಘಂಟಿನಲ್ಲಿ ಏನೋ ಇದೆ, ಆದರೆ ಅದನ್ನು ಕಾಲ ಸ್ಥಿತಿಗೆ ಅನುಗುಣವಾಗಿ ಈಗಿನ ವೆಚ್ಚದ ಅತಿರೇಕಕ್ಕೆ ಅನುಗುಣವಾಗಿ ಮನೆ ಕಟ್ಟಬೇಕಾದರೆ ಇರತಕ್ಕಂಥ ತೊಂದರೆಗೆ ಅನುಗುಣವಾಗಿ ಹೆಚ್ಚು ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಿದರೆ ಬಹಳ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇನ್ನು ಬಗರ್‌ಹುಕುಂ ಬಗ್ಗೆ ಹೇಳುವುದಾದರೆ ಅದರ ಬಗ್ಗೆ ಅಸೆಂಬ್ಲಿಯಲ್ಲಿ ಬಿಲ್ ಬರುತ್ತದೆ, ಅದು ಪಾಸಾದ ಕೂಡಲೇ ಅದು ಇಲ್ಲರಿಗೂ ಅನುಕೂಲವಾಗುತ್ತದೆ ಎಂದು ಹೇಳಿದ್ದೀರಿ. ಕಾಫಿ ಪ್ಲಾಂಟರುಗಳಿಗೆಲ್ಲಾ ೧೦೦ ಎಕರೆ ಬಿಡಬೇಕು, ಎರಡು ನೂರು ಎಕರೆ ಅಲ್ಲಿ ಬಿಡಬೇಕು ಎಂದು ಹೇಳಿರುವುದನ್ನು ನೋಡಿದರೆ, ಅಲ್ಲಿ ೫ ಸೆಂಟ್ಸ್ ಬಡವರಿಗೆ ತೊಂದರೆಯಾಗುತ್ತದೆ. ನಾನು ಹೇಳುವುದೇನೆಂದರೆ ದೊಡ್ಡವರನ್ನು ನಾವು ರಕ್ಷಿಸುವುದು ಬೇಡ, ಬಡವರನ್ನು ಎಷ್ಟು ಕಾಲ ರಕ್ಷಿಸುತ್ತೇವೆ ಅಷ್ಟು ಕಾಲವೂ ನಮಗೂ ಕ್ಷೇಮ, ನಿಮಗೂ ಕ್ಷೇಮ ಎಂಬ ಮಾತನ್ನು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಆದ್ದರಿಂದ ಈ ಬಡವರ ಬಗ್ಗೆ ಈ ಒಂದು ದೊಡ್ಡ ಜಗತ್ತಿನಲ್ಲಿ, ಭೂಮಿಯಲ್ಲಿ, ನೆಲದಲ್ಲಿ, ಗಾಳಿಯೆಲ್ಲಾ ಬೆಳಕು ಎಲ್ಲಾ ದೇವರದ್ದು ಎಂದು ಹೇಳುವಂಥ ಸ್ಥಿತಿಯಲ್ಲೂ ಈ ಐದು ಸೆಂಟ್ಸ್ ಬಡವರೇ ಇರಲಿಕ್ಕೆ ಸಾಧ್ಯ ಇಲ್ಲ ಎಂದು ಹೇಳಿದರೆ ಹೇಗೆ ಎಂದು ಹೇಳತಕ್ಕಂಥ ಭಾವನೆ ಉಂಟು. ಆದ್ದರಿಂದ ಆ ಬಡ ಜನರಿಗೆ ಪಟ್ಟೆ ಸಿಕ್ಕುವ ಹಾಗೆ ಈ ಜನರಿಗೆ ಹುಕುಂ ಪತ್ರ ಸಿಕ್ಕುವ ಹಾಗೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿ ಕೊಳ್ಳುತ್ತೇನೆ.

೬-೦೦ ಪಿ.ಎಂ,

ಇನ್ನು ಸರ್ವೆ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ ಸರ್ವೆ ಅಧಿಕಾರಿಗಳ ದರ್ಬಾರು ಏನು ಅವರು ಒಳ್ಳೆಯ ಸುಲ್ತಾನ್ ರೀತಿಯಲ್ಲಿ ಇದ್ದಾರೆ. ಏನಾದರೂ ಕೆಲಸ ಕಾರ್ಯದ ಬಗ್ಗೆ ಅವರನ್ನು ಕೇಳಲು ಹೋದರೆ ೭ ದಿವಸದ ನಂತರ ಬನ್ನಿ ಹಾಗೆ, ಹೀಗೆ ಎಂದು ಏನೇನು ಕಾನೂನುಗಳ ಬಗೆ ಹೇಳುತ್ತಾರೆ. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುವುದು ಏನೆಂದರೆ ನೀವು ಸರ್ವೆ ಇಲಾಖೆಗೂ ಸಹ ಅನಿರೀಕ್ಷಿತ ಭೇಟಿ ಕೊಟ್ಟು ಒಂದು ಸಲ ಅಲ್ಲಿನ ಕೆಲಸ ಕಾರ್ಯಗಳನ್ನು ವೀಕ್ಷಿಸಿದರೆ ಕೆಲಸದ ಗುಟ್ಟು ಗೊತ್ತಾಗುತ್ತದೆ. ಇದಿನಬ್ಬ ಹೇಳಿದ್ದುದು ನಿಜವೆಂದು ನಿಮಗನ್ನಿಸುತ್ತದೆ. ಮಾನ್ಯ ಶಿವನಂಜಪ್ಪನವರು ಹಾಗೂ ಇನ್ನಿತರರು ಹೇಳಿದರು, ಏನೆಂದರೆ, ಇಡೀ ಹಳ್ಳಿ ಶಕ್ತಿ ಒಬ ವಿಲೇಜ್ ಅಕೌಂಟೆಂಟ್‌ನದು ಎಂದು ಆ ಹಳ್ಳಿಗೆ ಆತನೇ ಮುಖ್ಯಮಂತ್ರಿ, ಮುಖಂಡ ಎಂದು. ಆ ಹಳ್ಳಿಗೆ ಅವನೇ ಮಹಾ ಘಟ್ಟಿಗ, ಆತನೇ ಗ್ರಾಮದ ಮಹಾ ಶಕ್ತಿ ಎಂದು. ಈ ಮಟ್ಟಿಗೆ ಎಲ್ಲರೂ ಈ ತರಹ ಎಂದು ನಾನು ಹೇಳುವುದಿಲ್ಲ. ಅನೇಕರು ಬಡವರಿಗೆ ಹಕ್ಕು ಪತ್ರ ಕೊಡುತ್ತಾರೆ, ಪಹಣಿ ಕೊಡುತ್ತಾರೆ, ಇನ್ನೂ ಒಂದು ಕೊಡುತ್ತಾರೆ. ಹೀಗೆ ಪ್ರತಿಯೊಂದನ್ನು ಕೊಡುವಾಗ ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ನಾನು ಹೇಳುವುದೇನೆಂದರೆ, ಭ್ರಷ್ಟಾಚಾರ ಒಂದು ರೂಢಿ ಆಗಿರಬಹುದು. ಅದನ್ನು ನಿಲ್ಲಿಸಲು ಪೂರ್ತಿಯಾಗಿ ಸಾಧ್ಯವಿಲ್ಲ. ಅರ್ಧಂಬರ್ಧ ಆದರೂ ನೀವು ಇದನ್ನು ತಡೆಯಬಹುದು. ಅವರುಗಳಿಗೆ ನೀವು ಒಂದು ಭಯ ಬರುವ ರೀತಿಯಲ್ಲಿ ಮಾಡದೇ ಹೋದರೆ ಅಲ್ಲಿ ಅಂಧರ್ ದರ್ಬಾರು ಆಗುತ್ತದೆ ಮಣಿಗಾರರಿಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆ. ಎಷ್ಟೋ ಸರ್ತಿ ನಾನು ಹೇಳಿದ್ದೇನೆ. ಜನಸಂಪರ್ಕ ಸಭೆಗೂ ಅಲ್ಲಿ ಅಡ್ಡಿ ಮಾಡುತ್ತಾರೆ. ಅಲ್ಲಿ ಯಾರಿಗಾದರೂ ಆಕ್ರಮಣ ಮಾಡುತ್ತಿದ್ದಾರೆ, ನೀವು ಹೋಗಿ ನೋಡಿ ಎಂದರೆ ಹೋಗಿ ನೋಡುವುದಿಲ್ಲ. ತಹಶೀಲ್ದಾರ್ ಅಡ್ಡಿ ಹಾಕುತ್ತಾರೆ. ಈ ರೀತಿಯ ವ್ಯವಸ್ಥೆ ಆಗುತ್ತದೆ. ನಾನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರ ಹೇಳಬೇಕಾಗಿದೆ. ನಾನು ಇಡೀ ರಾಜ್ಯದ ವಿಷಯವನ್ನು ಹೇಳುವುದಕ್ಕೆ ಸಮಯಾವಕಾಶ ಇಲ್ಲ. ಅದನ್ನು ನಮ್ಮ ಮುಖಂಡರು ಮಾತನಾಡುವಾಗ ಹೇಳಿದ್ದಾರೆ, ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ವೆಂಟೆಡ್ ಡ್ಯಾಮ್‌ಗಳನ್ನು ಕಟ್ಟಿಸಿ ಕೊಡಬೇಕು. ಅದೇ ರೀತಿ ಜನ ಸಂಪರ್ಕ ಸಭೆ ಕಡ್ಡಾಯ ಆಗುವ ಹಾಗೆ ಮಾಡಬೇಕು. ಭೂ ನ್ಯಾಯ ಮಂಡಲಿಗಳು ಆದಷ್ಟು ಬೇಗ ತೀರ್ಪು ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕು. ಈಗ ಧನಿಕರ ಕಡೆಗೆ ತೀರ್ಪುಗಳು ಆಗುತ್ತಿವೆ. ಅದನ್ನು ತಾವು ಏನೆಂದು ನೋಡಬೇಕು, ಇದನ್ನು ಅಧಿಕಾರಿಗಳಿಗೆ ತಿಳಿಸಿ ಈ ರೀತಿ ಗೇಣಿದಾರರಿಗೆ, ಬಡವರಿಗೆ ಆದಷ್ಟು ಬೇಗ ಅನುಕೂಲವಾಗಿ, ಬಡವರಿಗೆ ಭೂಮಿ ಸಿಗಬೇಕೆಂದು ಇದನ್ನು ಮಾಡಿರುವ ಉದ್ದೇಶ ಆದುದರಿಂದ ಇದರ ಬಗ್ಗೆ ಕೂಡ ಆದೇಶ ಕೊಡಬೇಕೆಂದು ಹೇಳಿ ಮಾನ್ಯ ಸಭಾಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.